,, ಬಿಡುಗಡೆ ಅಥವಾ ಮೋಕ್ಷ ವಾಯುವ್ಯದಿಂದ ,, ೧೧ ,, ೪೮

ಗ್ರಹಣ ವ್ಯಾಪ್ತಿಯು $\frac{೨೯}{೪೦}$ ಆಗಿದ್ದು, $\frac{೧೧}{೪೦}$ ಭಾಗ ಮಾತ್ರವೇ ಉಳಿಯುವದು. ಸ್ಪರ್ಶವು ಚಂದ್ರದ ಪೂರ್ವ ಬಿಂದುವಿನಿಂದ ೨೯ ಭಾಗ ಉತ್ತರಕ್ಕೆ ಆಗುವದು. ಮೋಕ್ಷವು ಪಶ್ಚಿಮ ಬಿಂದುವಿನಿಂದ ೨೭ ಭಾಗಕ್ಕೆಂದು ತಿಳಿಯ ಬೇಕು.

ವರ್ತಮಾನಸಂಗ್ರಹ.

ಹಿಂದುಸ್ಥಾನ.—ಹಿಂದುಸ್ಥಾನದಲ್ಲಿ ಕೆಲ ಸ್ಥಾನಾಂತರಗಳಾದವು. ವೈಸರಾಯ್ ಅಂದರೆ ಸರ್ವಾಧಿಪತಿಯಾದ ಲೋರ್ಡ್ ಲಿಟ್ಟನ್ ಧೊರೆಗಳು ತಮ್ಮ ಸ್ಥಾನಕ್ಕೆ ರಾಜಿನಾಮೆ ಕೊಟ್ಟು ಊರಿಗೆ ತೆರಳಿದರು. ರುಸ್ಯರು ಮಧ್ಯಾಸ್ಯದಲ್ಲಿ ಮುಂದರಿಸ ಬಾರದಂತೆ ತಡಿಯುವದಕ್ಕೆ ಅಫಘಾನಿಸ್ಥಾನದಲ್ಲಿ ಏನಾದರೂ ವ್ಯವಸ್ಥೆ ಮಾಡ ಬೇಕೆಂದು ೧೮೭೬ನೇ ಇಸವಿಯಲ್ಲಿ ಇಂಗ್ಲಾಂಡಿನ ಸರಕಾರದವರು ಆಗ ಸರ್ವಾಧಿಪತಿಯಾಗಿದ್ದ ಲೋರ್ಡ್ ನೊರ್ತ್‌ಬ್ರೂಕ್ ಧೊರೆಗಳಿಗೆ ಹೇಳಿದ್ದಲ್ಲಿ, ಅವರು, ಅಂಥಾ ವ್ಯವಸ್ಥೆಗೆ ಕೈ ರೆ ಯುದ್ಧ ಉಂಟಾಗುವದು ನಿಜವೇ ಎಂದು ತಿಳಿದು, ರಾಜಿನಾಮೆ ಕೊಟ್ಟು ಬಿಟ್ಟಿದ್ದರು. ಆಗ ತಮ್ಮ ಉದ್ದಿಶ್ಯ ಸಾಧಿಸುವದಕ್ಕೆ ಇಂಗ್ಲಾಂಡಿನ ಸರಕಾರದವರು ಲೋರ್ಡ ಲಿಟ್ಟನ್ ಧೊರೆಗಳನ್ನು ಕಳುಹಿಸಿ ಕೊಟ್ಟರು. ಆವರು ಅಪ್ಪಣೆಯ ಪ್ರಕಾರ ನಡಕೊಳ್ಳುವವರಾಗಿ, ಅಫಘಾನಿಸ್ಥಾನದ ರಾಜಕೀಯ ಕಾರ್ಯಗಳಲ್ಲಿ ಪ್ರವೇಶವಾದ್ದರಿಂದ ಈ ವರೆಗೆ ಏನೇನು ಸಂಭವಿಸಿತೆಂದು ಸರ್ವರಿಗೆ ತಿಳಿದು ಅದೆ. ಲೋರ್ಡ್ ಲೋರೆನ್ಸ ಧೊರೆಗಳು ಸಹ ಆ ಶೀಮೆಯು ತಳ್ಳಿಗೆ ಹೋಗ ಬಾರದೆಂದೂ, ಹೋದರೆ ಬಹಳ ತೊಂದರೆ ಬಂದಾವೆಂದೂ ಮುಂದಾಗಿಯೇ ಹೇಳಿದ್ದರು. ಲೋರ್ಡ್ ಲಿಟ್ಟನ್ ಧೊರೆಗಳು ಜನರಂಜನೆಯನ್ನು ಬಹುಶಾ ಸಂಪಾದಿಸಲಿಲ್ಲಾ; ಆದರೆ ಅವರು ನಡಿಸಿದ ರಾಜ್ಯದಾಡಳಿತೆಗೆ ಅವರನ್ನು ಆ ಸ್ಥಾನಕ್ಕೆ ನೇಮಿಸಿದ್ದ ಮೊದಲಿನ ಮಂತ್ರಿಗಳು ಮುಖ್ಯವಾಗಿ ಉತ್ತರವಾದಿಗಳೆಂಬದು ನಾವು ಮರೆಯ ಬಾರದು; ಮತ್ತು ಅವರು ತಮ್ಮ ದೊಡ್ಡ ಕೆಲಸವನ್ನು ಯಾವತ್ಸಾಮರ್ಥ್ಯದಿಂದಲೂ ಬುದ್ಧಿಯಿಂದಲೂ ನಡಿಸಿ, ತಮ್ಮ ಮೇಲಿನ ಅಧಿಕಾರಸ್ಥರ ಮೆಚ್ಚಿಕೆಗೆ ಪಾತ್ರರಾಗುವದಕ್ಕೆ ಸಾಹಸ ಪಟ್ಟದ್ದು ವಿಹಿತವೇ. ಮೊದಲಿನ ಪ್ರಧಾನಿಗಳು ರಾಜ್ಯಭಾರ ನಡಿಸಿದ ವಿಧವು ಬ್ರಿತಿಷ ಜನಾಂಗದವರಲ್ಲಿ ಹೆಚ್ಚಾದವರಿಗೆ ಮೆಚ್ಚಲಿಲ್ಲವೆಂಬದು ಇಂಗ್ಲಾಂಡಿನ ವರ್ತಮಾಸದಲ್ಲಿ ಕಾಣುವದು. ಲೋರ್ಡ್ ಲಿಟ್ಟನ್ ಧೊರೆಗಳವರ ಬದಲಿಗೆ ಮಾರ್ಕ್ವಿಸ್ ಒಫ್ ರಿಪನ್ ಧೊರೆಗಳು ಸರ್ವಾಧಿಪತಿಯಾಗಿ ಬಂದಿದ್ದಾರೆ.

ಮುಂಬಾಯಿಯ ಗವರ್ನರ್ ಸರ್ ರಿಚಾರ್ಡ್ ಟೆಂಪಲ್ ಧೊರೆಗಳು ಉದ್ಯೋಗಕ್ಕೆ ರಾಜಿನಾಮೆ ಕೊಟ್ಟು ಇಂಗ್ಲಾಂಡಿಗೆ ಹೋದವರಾದ್ದರಿಂದ ಅವರ ಬದಲಿಗೆ ಸರ್ ಜೇಮ್ಸ್ ಫೆರ್ಗುಸನ್ ಧೊರೆಗಳು ಬಂದಿದ್ದಾರೆ. ಮದ್ರಾಸ್ ಗವರ್ನರ್ ಡ್ಯೂಕ್ ಒಫ್ ಬಕ್ಕಿಂಘಮ್ ಧೊರೆಗಳೂ ಉದ್ಯೋಗ ನಡಿಸ ತಕ್ಕ ವರ್ಷಗಳು ಮುಗಿದದರಿಂದ ಈ ವರ್ಷ ವಿಲಾಯತಿಗೆ ಹೋಗುತ್ತಾರೆ. ಅವರ ಬದಲಿಗೆ ಆನರಬ್ಲ್ ಇ. ಪಿ. ಎಚೆಮ್ ಧೊರೆ ಆ ಸ್ಥಾನಕ್ಕೆ ನೇಮಕ ಪಟ್ಟಿದ್ದಾರೆ.

7-**EARL OF LYTTON**
Lately Viceroy and Governor-General of India
ಸದ್ಯಾ ಸರ್ವಾಧಿಪತಿಗಳಾಗಿದ್ದ ಅರ್ಲ್ ಲಿಟ್ಟನ್ ದೊರೆಗಳು.

ದಕ್ಷಿಣ ಹಿಂದುಸ್ಥಾನದಲ್ಲಿ ತಿರುವಾಂಕೋಡಿನ ಮಹಾರಾಜರಿಗೆ ದೇವಾಜ್ಞೆಯಾಗಿ, ಅವರ ಬದಲಿಗೆ ಅವರ ತಮ್ಮನವರು ಸಿಂಹಾಸನಾರೂಢರಾದರು.

ನಮ್ಮ ಕನ್ನಡ ಜಿಲ್ಲೆಯಲ್ಲಿ ಮಳೆಯ ಸ್ಥಿತಿ ಬೆಳೆಯ ಸ್ಥಿತಿ ಹ್ಯಾಗೆಂಬದು ಓದುವವರಿಗೆ ಗೊತ್ತೇ ಇರುವದರಿಂದ ಪ್ರಸ್ತಾಪಿಸುವದು ಅಗತ್ಯವಿಲ್ಲ. ದಕ್ಷಿಣದಲ್ಲಿ ಮಧುರೆ, ತಿನ್ನೆವೆಲ್ಲಿ ಮುಂತಾದ ಜಿಲ್ಲೆಗಳಲ್ಲಿ ಮಳೆ ಬಂದು, ಉಳುವದೂ ಬಿತ್ತುವದೂ ಪ್ರಾರಂಭವಾಗಿದೆ. ಆದರೆ ದಖ್ಖಣದಲ್ಲಿ ಕೆಲವು ಜಿಲ್ಲೆಗಳಲ್ಲಿ ಮಳೆಯಾಗಲಿಲ್ಲವಂತೆ. ಆದರೆ ಇನ್ನೂ ಅಲ್ಲಿ ಮಳೆಯಾಗಿ ಬೆಳೆ ಪೈರು ಆಗುವಂತೆ ದೇವರು ದಯೆ ಪಾಲಿಸುವನೆಂಬದಾಗಿ ಹಾರೈಸುತ್ತೇವೆ. ಉತ್ತರ ಹಿಂದುಸ್ಥಾನದಲ್ಲಿ ಚಲೋ ಮಳೆಯಾಗಿ, ಪೈರು ಚನ್ನಾಗಿದೆಯಂತ ವರ್ತಮಾನವದೆ.

ಬಂಗಾಳದ ಪೂರ್ವ ಕಡೆಯಲ್ಲಿ ಪರ್ವತವಾಸಿಗಳಾದ ನಾಗ ಎಂಬ ಜಾತಿಯವರು ಯುದ್ಧಸಾಮಗ್ರಿ ಸಂಗ್ರಹ ಮಾಡಿ ಕೊಂಡು, ದಂಗೆ ಮಾಡಲೆಸಗಿದ್ದಲ್ಲಿ ಅಲ್ಲಿಗೆ ಸೈನ್ಯ ಕಳುಹಿಸಿ, ದಂಗೆಗಾರರನ್ನು ಅಣಗಿಸಿ, ಆ ಊರಿನಲ್ಲಿ ವ್ಯವಸ್ಥೆ ಪುನಃಸ್ಥಾಪಿಸಲಾಯಿತು.

ಅಪಘಾನಿಸ್ಥಾನ.—ಕಳದ ವರ್ಷಧ ಪಂಚಾಂಗದಲ್ಲಿ ಅಫಘಾನಿಸ್ಥಾನದ ಯುದ್ಧವು ಮುಗಿದು, ಮಾಜಿ ಅಮೀರ ಶೇರ ಅಲಿಯ ಬದಲಾಗಿ ಅವನ ಮಗ ಯಾಕೂಬ್‌ಖಾನನು ಪಟ್ಟಕ್ಕೆ ಬಂದು, ಕಾಬೂಲಿನಲ್ಲಿ ಇಂಗ್ಲಿಷ ಸರಕಾರದ ಕಡೆಯಿಂದ ರಾಯಭಾರಿಯನ್ನು ಇಡಲಾಯಿತೆಂದು ಹೇಳಲಾಯಿತು. ಸಮಾಧಾನದ ಸ್ಥಿತಿಯು ಅಲ್ಪ ಕಾಲ ಮಾತ್ರವೇ ಉಳಿದು, ಪುನಶ್ಚ ಯುದ್ಧಕ್ಕೆ ಕಾರಣಗಳು ತಲೆದೋರಿ ಬಂದವು. ಹ್ಯಾಗಂದರೆ: ಯುದ್ಧ ಸಮಾಪ್ತವಾದ ಒಂದೇ ತಿಂಗಳಲ್ಲಿ ಯಾಕೂಬ್‌ಖಾನನ ಸೈನ್ಯದವರು ಕಾಬೂಲಿನಲ್ಲಿ ಏಕಾಏಕಿ ಕಾಟಕಾಯಿ ಎಬ್ಬಿಸಿ, ಇಂಗ್ಲಿಷ ರಾಯಭಾರಿಯೂ ಅವನ ಕಡೇ ಪರಿವಾರದವರೂ ವಸ್ತಿಯಾಗಿದ್ದ ಬಾಲಾಹಿಸ್ಸಾರ ಎಂಬ ಕೋಟೆಗೆ ಮುತ್ತಿಗೆ ಹಾಕಿ, ರಾಯಭಾರಿಯ ಸಮೇತವಾಗಿ ಸಮಸ್ತರನ್ನೂ ಹತ ಮಾಡಿ ಬಿಟ್ಟು, ಅಮೀರನನ್ನು ಸಹ ಹಿಡಿದು ಶೆರೆಯಲ್ಲಿಟ್ಟರು. ಈ ಭಯಂಕರ ವರ್ತಮಾನ ಇಲ್ಲಿಗೆ ತಲಪಿದಾಗಲೇ ಪುನಹಾ ಅಲ್ಲಿಗೆ ಸೈನ್ಯ ಕಳುಹಿಸಿ ಕೊಡುವದು ಅವಶ್ಯ ಬಿತ್ತು. ಇಂಗ್ಲಿಷ ಸೈನ್ಯ ಅಫಘಾನಿಸ್ಥಾನಕ್ಕೆ ಮುಟ್ಟಿದಾಗಲೇ ಯಾಕೂಬ್‌ಖಾನನು ಕಾಬೂಲನ್ನು ಬಿಟ್ಟು, ಇಂಗ್ಲಿಷ ದಂಡಿಗೆ ಬಂದನು; ಇಂಗ್ಲಿಷ ದಳವಾಯಿ ಸೈನ್ಯ ತೆಕ್ಕೊಂಡು, ಕಾಬೂಲಿನ ಪಾರ್ಶ್ವಾಂತರದಲ್ಲಿ ನೆರದುಕೊಂಡಿದ್ದ ದಂಗೆಗಾರರ ಗುಂಪನ್ನು ಪರಾಜಯ ಮಾಡಿ ಕಾಬೂಲನ್ನು ಕೈವಶ ಮಾಡಿ ಕೊಂಡು, ಅಲ್ಲಿ ಧೊರೆತನ ನಡಿಸಿ, ಕೈಗೆ ಶಿಕ್ಕಿದ ದಂಗೆಗಾರರಿಗೆಲ್ಲಾ ದೇಹಾಂತ ಶಿಕ್ಷೆ ಕೊಟ್ಟು, ಸುತ್ತಲಿರುವವರಿಗೆಲ್ಲಾ ಭಯ ಉಂಟಾಗುವಂತೆ ಮಾಡಿದನು. ಅನಂತರ ಕಾಬೂಲಿನಲ್ಲಿ ರಾಯಭಾರಿಯನ್ನು ವಧೆ ಮಾಡಿದ ಸಂಗತಿಯ ವಿಚಾರಣೆ ಪ್ರಾರಂಭವಾಗಿ, ಅದರಲ್ಲಿ ಯಾಕೂಬ್‌ಖಾನನು ಶೇರಿದ್ದನೆಂಬದೂ ತಿಳಿದು ಬಂದಲ್ಲಿ, ಅವನನ್ನು ಶೆರೆಯವನು ಮಾಡಿ ಹಿಂದುಸ್ಥಾನಕ್ಕೆ ಕಳುಹಿಸಿ ಕೊಡಲಾಯಿತು. ಅಫ

ಘಾನಿಸ್ಥಾನದಲ್ಲಿ ಸೈನ್ಯವು ಮತ್ತೂ ಮತ್ತೂ ಗುಂಪು ಕೂಡಿಕೊಂಡು ಬರುತ್ತಿದ್ದ ದಂಗೆಗಾರರ ಸಂಗಡ ಯುದ್ಧ ಮಾಡುತ್ತಾ ಬಹು ಕಷ್ಟದಿಂದ ದೇಶದಲ್ಲಿ ಸಮಾಧಾನವನ್ನೂ ಕ್ರಮವನ್ನೂ ಕಾಪಾಡ ಬೇಕಾಯಿತು. ಆ ಅಫಘಾನಿಸ್ಥಾನದಲ್ಲಿ ಅನೇಕ ಗೋತ್ರಗಳಿದ್ಧಾವೆ, ಆಯಾ ಗೋತ್ರಗಳಿಗೆ ಸರದಾರರೆಂಬ ಗುರಿಕಾರರಿದ್ಧಾರೆ. ಇವರೂ ಇಂಗ್ಲಿಷ ಸೈನ್ಯದೊಂದಿಗೆ ಬಹಳಾವರ್ತಿ ಕಾಳಗ ಮಾಡಿದರು. ಹೀಗೆಯೇ ಅನೇಕ ತಿಂಗಳುಗಳು ನಡಿಯಿತು; ಒಮ್ಮೆ ಹಿಡಿದ ದೇಶವನ್ನು ಏನಾದರೂ ವ್ಯವಸ್ಥೆ ಮಾಡದೆ ಒಬ್ಬನನ್ನು ಅರಸನಾಗ ಮಾಡಿ ಅವನ ವಶಕ್ಕೆ ಶೀಮೆಯನ್ನು ಒಪ್ಪಿಸದೆ, ಹಾಗೆಯೇ ಬಿಟ್ಟು ಸೈನ್ಯವನ್ನು ಹಿಂದಕ್ಕೆ ಕರೆಸಿಕೊಳ್ಳುವದು ಆಗದೆ ಹೋಯಿತು. ಮಾಜಿ ಅಮೀರನಾದ ಶೇರ ಅಲಿಗೆ ದಾಯಾದಿಯಾಗ ಬೇಕಾದ ಅಬ್ದುಲ್ ರಹಮಾನನೆಂಬವನೊಬ್ಬನು ಮೊದಲು ಪಟ್ಟಕ್ಕೋಸ್ಕರ ಶೇರ ಅಲಿಯ ಸಂಗಡ ಕಡದಾಡಿ ನಿಸ್ತರಿಸಲಾರದೆ, ರುಸ್ಯರ ಶೀಮೆಗೆ ಓಡಿ ಹೋಗಿದ್ದನು. ಅಲ್ಲಿ ರುಸ್ಯರು ಅವನನ್ನು ಉದರಪೋಷಣೆಗೆ ಕೊಟ್ಟು ಇಟ್ಟುಕೊಂಡಿದ್ದರು. ಇವನು ತಾನು ಪಟ್ಟಕ್ಕೆ ಬಾಧ್ಯನೆಂದು ನ್ಯಾಯವಾಗಿ ಹೇಳುತ್ತಾ, ಈಗ ಅದು ತನಗೆ ಶಿಕ್ಕುವ ಮಾರ್ಗವಾದ್ದರಿಂದ ಮೆಲ್ಲಗೆ ಆ ಶೀಮೆ ಬಿಟ್ಟು ಇತ್ತಕಡೆ ಬರುತ್ತಿದ್ದನು; ಅವನ ಸಂಗಡ ಬ್ರಿತಿಷ ಸೈನ್ಯಾಧಿಪತಿ ಪತ್ರವ್ಯವಹಾರ ನಡಿಸುತ್ತಿದ್ದು, ಕಾಬೂಲ್ ಶೀಮೆ ನಿಮಗೆ ಕೊಡುತ್ತೇವೆಂದು ವಚನ ಕೊಟ್ಟು, ಅವನಿನ್ನು ಕಾಬೂಲಿಗೆ ದೂರವಿರುವಾಗಲೇ ಜೂಲಾಯಿ ತಿಂಗಳಲ್ಲಿ ಕಾಬೂಲಿನಲ್ಲಿ ದರಬಾರು ಮಾಡಿ, ಅಬ್ದುಲ್ ರಹಮಾನನು ಕಾಬೂಲಿನ ಅಮೀರನೆಂದು ಸಾರಿ, ಪಟ್ಣವನ್ನು ಅವನಿಗೆ ಬಿಟ್ಟು ಕೊಟ್ಟು ಹೊರಡೋಣವಾಯಿತು; ಅವನು ಪಟ್ಣಕ್ಕೆ ಬಂದು ಧೊರೆತನ ನಡಿಸುತ್ತಿದ್ಧಾನೆ. ಇದಕ್ಕೆ ಮೊದಲು ಕಂದಹಾರನ್ನು ಪ್ರತ್ಯೇಕ ಸಂಸ್ಥಾನ ಮಾಡಿ, ವಲೀ ಶೇರ ಅಲಿ ಎಂಬವನನ್ನು ಧೊರೆಯಾಗಿ ನೇಮಿಸೋಣಾಗಿತ್ತು; ಹೀಗೆ ಅಫಘಾನಿ

ಸ್ಥಾನದ ಗೊಂದಳವೆಲ್ಲಾ ಮುಗಿದು, ಇಂಗ್ಲಿಷ ಸೈನ್ಯವೆಲ್ಲಾ ಹಿಂದಕ್ಕೆ ಬರುವದೆಂದು ನೆನಸುವಾಗಲೇ ಇನ್ನೊಂದು ಮಹಾ ಭಯಂಕರ ಸಂಗತಿ ಅಲ್ಲಿ ನಡಿಯಿತು. ಏನಂದರೆ: ಮಾಜಿ ಅಮೀರನಾದ ಯಾಕೂಬ್‌ಖಾನನ ತಮ್ಮ ಅಯೂಬ್‌ಖಾನನು ಆ ವರೆಗೆ ಹೇರಾತಿನಲ್ಲಿದ್ದವನಾಗಿ ಕಂದಹಾರವನ್ನು ಹಿಡಿಯುವ ಬಗ್ಗೆ ಮಹಾ ದಳವನ್ನು ಕೂಡಿಕೊಂಡು ಬರುತ್ತಿರಲು, ಅವನನ್ನೆದುರಿಸುವದಕ್ಕೆ ವಲೀ ಶೀರ ಅಲಿಯ ಸೈನ್ಯ ಹೋಗಿ, ಹಿಮ್ಮೆಟ್ಟಿ ಚಲ್ಲಾಪಿಲ್ಲಿಯಾಗಿ ಹೋಯಿತು; ಈ ಪಲಾಯನ ಮಾಡಿದ ಸೈನ್ಯವನ್ನು ಹಿಂದಟ್ಟುವದಕ್ಕೆ ಕಳುಹಿಸಿ ಕೊಂಡು ಹೋದ ಇಂಗ್ಲಿಷ ಸೈನ್ಯದ ಒಂದು ಭಾಗ ಏಕಾಏಕಿ ಅಯೂಬ್‌ಖಾನನ ಹನ್ನೆರಡು ಸಾವಿರ ದಳಕ್ಕೆ ಭೇಟಿಯಾದ್ದಲ್ಲಿ, ಉಗ್ರ ಯುದ್ಧವಾಗಿ, ಇಂಗ್ಲಿಷರ ಕಡೆಯಲ್ಲಿ ಹೆಚ್ಚು ಕಡಿಮೆ ಸಾವಿರ ಜನರು ಹತವಾದರು. ಅಲ್ಲಿಂದ ಅಯೂಬ್‌ಖಾನನು ಬಂದು, ಕಂದಹಾರಿಗೆ ಮುತ್ತಿಗೆ ಹಾಕಿದನು; ಒಳಗಿದ್ದ ಇಂಗ್ಲಿಷ

ಸಾಕಷ್ಟು ಆಹಾರವಿದ್ದದರಿಂದ ಬಹಳ ಕಷ್ಟವಾಗಲಿಲ್ಲಾ; ಅಯೂಬ್‌ಖಾನನನ್ನು ಎದುರಿಸುವದಕ್ಕೆ ಕಾಬೂಲಿನ ಕಡೆಯಿಂದ ಒಂದು ದೊಡ್ಡ ಸೈನ್ಯವೂ ಮತ್ತೊಂದು ಕಡೆಯಿಂದ ಇನ್ನೊಂದು ಸೈನ್ಯವೂ ಬರುವದನ್ನು ಅಯೂಬ್‌ಖಾನನು ತಿಳಿದಾಗಲೇ ಮುತ್ತಿಗೆ ತೆಗದು, ಆ ಸೈನ್ಯದೊಂದಿಗೆ ಸ್ವಲ್ಪ ಯುದ್ಧ ಮಾಡಿದ್ದಲ್ಲಿ ಅವನ ಸೈನ್ಯ ಚದರಿ ಹೋಯಿತು. ಹೀಗೆ ಆ ಯುದ್ಧವು ಮುಗಿದು ಅಫಘಾನಿಸ್ಥಾನದ ಗೊಂದಳ ಮುಗಿದ ಹಾಗಾಯಿತು.

ಪರ್ಶಿಸ್ಥಾನದಲ್ಲಿಯೂ ಅದರ ನೆರೆಶೀಮೆಗಳಲ್ಲಿಯೂ ಪುನಹಾ ದುಷ್ಕಾಲ ಪ್ರಾರಂಭವಾಗಿ, ಬಡ ಜನರು ಬಹಳ ಧಾವತಿ ಪಡುವವರಾಗಿದ್ದಾರೆ; ಅಲ್ಲಿಗೂ ವಿಲಾಯತಿಯಿಂದಲೂ ಅಮೇರಿಕದಿಂದಲೂ ಪರೋಪಕಾರಿಗಳಾದ ಗೃಹಸ್ಥರು ಹಣದ ಸಹಾಯ ಕಳುಹಿಸಿ ಕೊಡುತ್ತಿದ್ದಾರೆ.

ಯೂರೋಪು.—ಇಂಗ್ಲಾಂಡಿನಲ್ಲಿ ಪಾರ್ಲಿಮೆಂಟ ಎಂಬ, ಪ್ರಜೆಗಳು ಕಳುಹಿಸಿ ಕೊಡುವ ಪ್ರತಿನಿಧಿಗಳ ಸಭೆಯಲ್ಲಿಯೂ ಪಲ್ಲಟ ಆಯಿತು. ಸರಕಾರದವರು ಆ ವರೆಗೆ ಇದ್ದ ಪ್ರತಿನಿಧಿಗಳಿಗೆ ನಿರೂಪ ಕೊಟ್ಟು, ಪ್ರಜೆಗಳು ಹೊಸಬರನ್ನು ಆದುಕೊಳ್ಳಬೇಕೆಂತ ಅಪ್ಪಣೆ ಕೊಟ್ಟರು. ಜನರು ರಾಜಸಭೆಗೆ ಕಳುಹಿಸಿ ಕೊಟ್ಟ ಹೊಸ ಪ್ರತಿನಿಧಿಗಳು ಮೊದಲಿನವರು ರಾಜ್ಯದಾಡಳಿತೆ ನಡಿಸುವ ವಿಧಕ್ಕೆ ಅಷ್ಟು ಒಪ್ಪದವರೂ ಬೇರೆ ಅಭಿಪ್ರಾಯವುಳ್ಳವರೂ ಆಗಿದ್ದ ಕಾರಣ ಚಕ್ರವರ್ತಿನಿಯವರ ಹತ್ತರವಿರುವ ಪ್ರಧಾನ ಮಂತ್ರಿ ಲಾರ್ಡ್ ಬೀಕನ್ಸ್‌ಫೀಲ್ಡ್ ಇವರೂ ಬೇರೆ ಮಂತ್ರಿಗಳೂ ತಮ್ಮ ಸ್ಥಾನ ಬಿಟ್ಟು ಬಿಟ್ಟರು. ಈಗ ಗ್ಲಾಡ್‌ಸ್ಟನ್ ಧೊರೆಗಳು ಪ್ರಧಾನ ಮಂತ್ರಿಯಾಗಿದ್ದಾರೆ. ಇವರು ಮೊದಲು ೧೮೬೮ನೇ ಇಸವಿಯಲ್ಲಿ ಮಂತ್ರಿಸ್ಥಾನದಲ್ಲಿದ್ದು, ೧೮೭೪ನೆಯಲ್ಲಿ ರಾಜಿನಾಮೆ ಕೊಟ್ಟಿದ್ದರು. ಅವರು ಎಪ್ಪತ್ತು ವರ್ಷ ಪ್ರಾಯದವರಾಗಿದ್ದಾರೆ. ಅವರ ಚಿತ್ರವು ಈ ಪಂಚಾಂಗದ ಆರಂಭದಲ್ಲಿ ಕೊಟ್ಟಿರುತ್ತದೆ.

ಐರ್ಲಾಂಡಿನಲ್ಲಿ ಬೆಳೆ ಕಡಿಮೆಯಾಗಿ ದುಷ್ಕಾಲ ಬಿದ್ದು, ಜನರಿಗೆ ಬಹಳ ಕಷ್ಟವಾಗುವ ಹಾಗಿತ್ತು; ಆದರೆ ಬೇರೆ ಬೇರೆ ಶೀಮೆಗಳವರು ಯಥೇಷ್ಟ ಹಣ ಕೂಡಿಸಿ ಅಲ್ಲಿಗೆ ಕಳುಹಿಸಿ ಕೊಟ್ಟದ್ದರಿಂದ ಕಷ್ಟಗಳು ಪರಿಹಾರವಾಗುವದಾಯಿತು.

ಜರ್ಮನಿ ದೇಶದ ದಕ್ಷಿಣದಲ್ಲಿ ಅಲ್ಪ್ಸ್ ಎಂಬ ಪರ್ವತಶ್ರೇಣಿಯ ಸಂತಗೊತಾರ್ಡ್ ಎಂಬ ಪರ್ವತದಲ್ಲಿ ಸುರಂಗ ತೋಡಿ ಲೋಹಮಾರ್ಗವು ಹೋಗುವಂತೆ ಮಾಡಿದ್ದು, ಈ ಕಾಲದ ಸಾಹಸ ಕಾರ್ಯಗಳಲ್ಲಿ ಪ್ರಾಮುಖ್ಯವೆಂಧೇಳ ತಕ್ಕದ್ದು. ಈ ಕೆಲಸವು ೮ ವರ್ಷಗಳಲ್ಲಿ ಮುಗಿಯಿತು. ನವೀನ ಯಂತ್ರಗಳ ಸಹಾಯದಿಂದ ಇಷ್ಟು ಬೇಗ ಅದು ಸಾಗಿತು; ಹಳೇ ವಿಧದಲ್ಲಿ ಮಾಡುವದಾದರೆ, ೫೦ ವರ್ಷಗಳಲ್ಲಿಯಾದರೂ ಮುಗಿಯುವದು ಅಸದಳವಾಗಿತ್ತು. ಇದೇ ತರದ ಕೆಲಸ ಮತ್ತೊಂದು ಕಡೆಯಲ್ಲಿಯೂ ಪ್ರಾರಂಭವಾಗಿದೆ. ಇಂಗ್ಲಾಂಡಿಗೂ ಫ್ರಾನ್ಸಿಗೂ ನಡುವೆ ಇರುವ ಸಮುದ್ರ ೨೨ ಮೈಲು ಅಗಲವಿರುತ್ತದೆ; ಇದರ ಕೆಳಗೆ ನೀರಿನ ಆಧಾರಕ್ಕೆ ಬೇಕಾ[illegible]ಲ ಬಿಟ್ಟು ಸುರಂಗಾ ತೋಡಿ, ಇಂಗ್ಲಾಂಡಿಗೂ ಫ್ರಾನ್ಸಿಗೂ ಹೊಗೆಭಂಡಿಗಳು ಹೋಗುವ ಮಾರ್ಗ ಮಾಡುವದಕ್ಕೆ ಪ್ರಾರಂಭಿಸಿದ್ದಾರೆ. ಸಮುದ್ರದ ಕೆಳಗೆ ಘಟ್ಟಿಯಾದ ಬಂಡೆಗಳು ಶಿಕ್ಕಿದರೆ, ಈ ಕೆಲಸವೂ ಸಾಧ್ಯವೇ.

ಬೆಲ್ಗಿಯ ರಾಜ್ಯವು ಮೊದಲು ಹೊಲ್ಲಾಂಡ ರಾಜ್ಯಕ್ಕೆ ಅಧೀನವಾದ ರಾಜ್ಯವಾಗಿತ್ತು; ಆದರೆ ೧೮೩೦ನೇ ವರ್ಷದಲ್ಲಿ ಆ ರಾಜ್ಯದವರು ಸ್ವತಂತ್ರಕ್ಕಾಗಿ ಹೋರಾಡಿದ ಮೇಲೆ ಲಂಡನಿನಲ್ಲಿ ಆದ ಪಂಚಾಯತರ ಸಭೆಯಲ್ಲಿ ಬೆಲ್ಗಿಯವು ಸ್ವತಂತ್ರರಾಜ್ಯವೆಂದು ತೀರ್ಪಾಗಿ, ಅವರು ತಮಗೆ ಅರಸನನ್ನು ಆದುಕೊಂಡರು; ಆ ಕಾರ್ಯವಾಗಿ ಈ ವರ್ಷಕ್ಕೆ ೫೦ ವರ್ಷಗಳಾದದರಿಂದ ಆ ಶೀಮೆಯವರು ಮಹಾ ಉತ್ಸವ ಆಡಂಬರದಿಂದ ಆದನ್ನು ಆಚರಿಸುತ್ತಾರೆ.

ಫ್ರೆಂಚ ದೇಶದಲ್ಲಿ ಯೇಸುವಿತರು ಇನ್ನು ಮುಂದೆ ಇರ ಬಾರದೆಂದು ಫ್ರೆಂಚ ಸರಕಾರದವರು ನಿರ್ಣೈಸಿ, ಅವರನ್ನು ದೇಶದೊಳಗಿಂದ ಹೊರಗೆ ಕಳುಹಿಸಿ ಬಿಟ್ಟರು. ಇವರು ಇನ್ನು ಪ್ರೊತಸ್ತಂತ ರಾಜ್ಯಗಳಲ್ಲಿ ಆಶ್ರಯ ಹುಡುಕುವರು.

ಗ್ರೀಕ ರಾಜ್ಯದವರೂ ಮೊಂತೆನಿಗ್ರೋ ಎಂಬ ಚಿಕ್ಕ ಸಂಸ್ಥಾನದವರು ತಂತಮ್ಮ ಸರಹದ್ದಿನ ವಿಷಯದಲ್ಲಿ ತುರ್ಕಿ ಸುಲ್ತಾನನ ಸಂಗಡ ಮಾತು ತೆಗದಾಗ ವಿಲಾಯತಿಯ ಪ್ರಾಮುಖ್ಯ ರಾಜ್ಯಗಳ ಪ್ರತಿನಿಧಿಗಳು ಬೆರ್ಲಿನ ಪಟ್ಣದಲ್ಲಿ ಕೂಡಿ ಪಂಚಾಯತಿಗೆ ಮಾಡಿ, ಮೊಂತೆನಿಗ್ರೋ ಶೀಮೆಗೆ ಫಲಾನಿ ಸರಹದ್ದು ಬಿಡ ಬೇಕೆಂದು ತುರ್ಕಿ ಸುಲ್ತಾನನಿಗೆ ಹೇಳಿದ್ದಲ್ಲಿ ಒಪ್ಪಿಕೊಂಡನು. ಹಾಗೆಯೇ ಗ್ರೀಕ ರಾಜ್ಯದ ಸರಹದ್ದಿನ ವಿಷಯವಾಗಿ ಪಂಚಾಯತರು ಹೇಳಿದ ಮಾತಿಗೆ ಸುಲ್ತಾನನು ಎದುರಿಸುವಂತೆ ತೋರಿಸಿದಾಗ್ಯೂ, ಹ್ಯಾಗೂ ಒಪ್ಪ ಬೇಕಾದೀತು. ಆದರೆ ಆ ಎರಡು ರಾಜ್ಯಗಳಿಗೆ ಬಿಟ್ಟು ಕೊಡ ಬೇಕಾದ ಅಲ್ಬಾನಿಯ ಶೀಮೆಯವರು ತಮ್ಮ ಊರು ಪಾಲಾಗುವಾಗ್ಯೆ ತಂಟೆ ಮಾಡುವರೋ ಎಂತ ಭಯವದೆ.

ರುಸ್ಯ ಮಹಾರಾಜರನ್ನು ನಿಹಿಲಿಸ್ತರೆಂಬ ರಾಜವೈರಿಗಳು ಕೊಲ್ಲುವದಕ್ಕೆ ಮತ್ತೂ ಎತ್ತುಗಡೆ ಮಾಡಿದರು; ಆದರೆ ಅವರ ಮೇಲೆ ಬಂದ ಸಕಲ ಅವಘಡಗಳಿಂದ ಪಾರಾದರು; ತನ್ಮಧ್ಯೆ ಅವರ ರಾಣಿಯವರು ಮೃತ ಪಟ್ಟದ್ದರಿಂದ ಮಹಾರಾಜರು ಮತ್ತೂ ದುಃಖದಲ್ಲಿ ಮುಣುಗಿ ಹೋದರು. ರುಸ್ಯ ರಾಜ್ಯದ ದಕ್ಷಿಣ ಭಾಗದಲ್ಲಿ ಮಿಡಿತೆಗಳು ರಾಶಿ ಬೆಳೆಯನ್ನು ಹಾಳು ಮಾಡಿದವು; ಅವುಗಳನ್ನು ಕೊಂದು ನಾಶನ ಮಾಡುವದಕ್ಕೆ ೫ ಸಾವಿರ ಜನರನ್ನು ಇಡೋಣಾಗಿದೆ.—ರುಸ್ಯರು ಮಧ್ಯಾಸ್ಯದಲ್ಲಿರುವ ತೆಕ್ಕೆತುರ್ಕೊಮನ್ ಎಂಬ ಜಾತಿಯವರನ್ನು ಜಯಿಸಿ ವಶ ಮಾಡುವದಕ್ಕೆ ಸಾಹಸದಿಂದ ಯುದ್ಧ ನಡಿಸುತ್ತಿದ್ದಾರೆ.

ರುಸ್ಯರಿಗೂ ಚೀನಿಯವರಿಗೂ ಆಸ್ಯ ಖಂಡದ ಉತ್ತರದಲ್ಲಿರುವ ಕುಲ್‌ಜಾ ಶೀಮೆಯನ್ನು ಕುರಿತು ಯುದ್ಧವಾಗಲಿಕ್ಕಿತ್ತು; ಆದರೆ ಎರಡು ಸಾಮ್ರಾಜ್ಯಗಳವರು ಕಟ್ಟು ಕರಾರು ಮಾಡಿಕೊಂಡು, ವ್ಯಾಜ್ಯ ತೀರಿಸಿಕೊಂಡದ್ದರಿಂದ ಯುದ್ಧವು ನಿಲ್ಲುವಂಥಾದ್ದಾಯಿತು.

ಜಾಪಾನ ದೇಶದವರು ಹೆಚ್ಚೆಚ್ಚು ಸುಕೃತಕ್ಕೂ ನಾಗರಿಕತನಕ್ಕೂ ಬರುತ್ತಾ ಇದ್ದಾರೆ; ಅಮೇರಿಕದಿಂದಲೂ ವಿಲಾಯುತಿಯಿಂದಲೂ ವಿದ್ವಾಂಸರನ್ನು ತರಿಸಿ, ವಿದ್ಯೆಯನ್ನು ವೃದ್ಧಿಂಗತ ಮಾಡುತ್ತಿರುವದಲ್ಲದೆ ಧರ್ಮಕಾರ್ಯಗಳಲ್ಲಿಯೂ ತಿದ್ದುಪಾಟಾಗಿ, ವಿಗ್ರಹಾರಾಧನೆಗೆ ಸಂಬಂಧವಾದ ತಸ್ಥಿಗೆ ಮುಂತಾದ್ದು ನಿಲ್ಲಿಸಿ ಬಿಟ್ಟು, ಮತಸಂಬಂಧದ ಇಲಾಖೆಯನ್ನೇ ತೆಗಧಾಕಿದರು. ಈ ಕಳದ ಎರಡು ಮೂರು ವರ್ಷಗಳಿಂದ ಅಲ್ಲಿ ಕ್ರೈಸ್ತರ ಸಂಖ್ಯೆ ಅತ್ಯಧಿಕವಾಗಿ ಹೆಚ್ಚಿತು.

ಚೀನಿ ಸರಕಾರದವರು ತಮ್ಮ ರಾಜ್ಯದಲ್ಲಿ ಅಫೀಮು ಉತ್ಪತ್ತಿ ಮಾಡಲೂ ಮಾರಲೂ ಬಾರದೆಂದು ಕಠಿಣ ಅಪ್ಪಣೆ ಮಾಡಿದ್ದಾರೆ.—ಆ ರಾಜ್ಯದ ತೆಂಕಣ ಭಾಗದಲ್ಲಿ ಕಿಯಂಗ್ ಹೊಳೆ ತುಂಬಿ ಹೊರಳಿ, ಅನೇಕ ಊರುಗಳಲ್ಲಿ ಜಲಪ್ರಳಯವಾಗಿ, ಪೈರೆಲ್ಲಾ ಹಾಳಾಗಿ, ಒಂದೇ ಕಡೆಯಲ್ಲಿ ಒಂದು ದಿನದಲ್ಲಿ ೫,೦೦೦ಕ್ಕಿಂತ ಹೆಚ್ಚು ಜನರು ಸತ್ತು ಹೋದರು. ಬಹಳ ವರ್ಷ ಮೊದಲು ಅಲ್ಲಿ ಇದೇ ರೀತಿ ಜಲಪ್ರಳಯವಾಗಿತ್ತಂತೆ.

ಅಮೇರಿಕದಲ್ಲಿ ಯುನೈಟೆಡ್ ಸ್ಟೇಟ್ಸ್ ಎಂಬ ಪ್ರಜಾಧಿಪತ್ಯದ ಶೀಮೆಯ ಮೇಲೆ ಆಳುತ್ತಿದ್ದ ಪ್ರೆಸಿಡೆಂಟ್ ಹೇನ್ಸ್ ಎಂಬವರ ಅವಧಿ ಈ ವರ್ಷ ಮುಗಿಯುವದರಿಂದ ಆ ಶೀಮೆಯ ಪ್ರೆಸಿಡೆಂಟ ಎಂಬ ಅಧಿಪತಿಸ್ಥಾನಕ್ಕೆ ಹೊಸಬನು ನೇಮಕವಾಗುವನು.

ಇನ್ನು ಬೇರೆ ರಾಜ್ಯಗಳಲ್ಲಿ ವಿಶೇಷವಾದ ಕಾರ್ಯಗಳು ನಡದಂಥಾದ್ದು ಇಲ್ಲಾ. ಕಡೆಗೆ ಈ ವಿಶ್ವವನ್ನು ಆಳುವವನಾದಂಥಾ ಮಹಾದೇವರು ಈ ವರ್ಷದಲ್ಲಿ ಸರ್ವ ದೇಶಗಳಲ್ಲಿ ಯುದ್ಧ ಕ್ಷಾಮ ರೋಗ ಮುಂತಾದ ಕ್ಷೋಭೆಗಳನ್ನು ದೂರ ಮಾಡಿ, ಶಾಂತಿ ಸಮಾಧಾನ ಕೊಟ್ಟು, ತನ್ನ ನಾಮಕ್ಕೆ ಮಹಿಮೆ ಉಂಟಾಗುವಂತೆ ನಡಿಸುವವನಾಗಲಿ!

* * *

ದೇವರು ಸರ್ವರನ್ನು ಪರಿಪಾಲನೆ ಮಾಡುತ್ತಾನೆ.

ದೇವರೇ, ನಿನ್ನ ಕೃಪೆ ಎಷ್ಟೋ ಅಮೂಲ್ಯವಾದದ್ದು! ಮನುಷ್ಯರ ಮಕ್ಕಳು ನಿನ್ನನ್ನು ಆಶ್ರಯಿಸಿಕೊಳ್ಳುತ್ತಾರೆ, ನಿನ್ನ ಪರಿಪೂರ್ಣತೆಯಿಂದ ತೃಪ್ತಿಯಾಗುವರು, ಎಂಬಂತೆ ನಾವು ಸಹ ದೇವರ ಸಹಾಯ ಕೃಪೆಗಳಿಂದ ತಿರಿಗಿ ಒಂದು ವರ್ಷ ದಾಟಿ ಬಂದಿರುತ್ತೇವೆ. ಹೋದ ವರುಷದಲ್ಲಿ ನಾವು ಅನುಭವಿಸ ಬೇಕಾಗಿದ್ದಂಥಾದ್ದೆಲ್ಲಾ ಈಗ ನೆಸಪಿಗೆ ತರ ಬಹುದು; ಆದರೂ ನಮ್ಮ ಮುಂದಿರುವ ವರ್ಷದಲ್ಲಿ ಏನಾಗುತ್ತದೆಂದು ನಮಗೆ ಒಂದಿಷ್ಟಾದರೂ ಗೊತ್ತಿಲ್ಲ. ಹ್ಯಾಗೂ ದೇವರು ನಮಗೆ ಮುನಿಯುವವನಲ್ಲ; ಆತನು ದಯವುಳ್ಳವನಾಗಿ ನಮ್ಮ ಸಂಗಡ ಇದ್ದು, ನಮ್ಮನ್ನು ನಡಿಸಿ ಕಾಪಾಡುತ್ತಾ ಇದ್ದರೆ, ನಾವು ಹೆದರದೆ ಮುಂದೆ ಹೋಗ ಬಹುದು; ಮುಂದೆ ಬರುವಂಥ[illegible] ತಿಳುಕೊಳ್ಳುವ ಬಗ್ಗೆ ಅನೇಕರು ಶಕುನ ಲಕ್ಷಣಗಳನ್ನು ನೋಡಿ, ಬಲ್ಮೆ ನಿಮಿತ್ಯಗಳನ್ನು ಕೇಳುತ್ತಾ, ಒಂದಾವರ್ತಿ ಏನಾದರೂ ವಿಶೇಷ ಅಪರೂಪ ಕಾರ್ಯಗಳ ವಿಷಯ, ಅದು ದೇವರಚಿತ್ತ, ನಾವು ಏನು ಮಾಡಲಿ? ಎಂದ್ಹೇಳುತ್ತಾ ಬದುಕುತ್ತಾರೆ. ಹೀಗೆ ದೇವರ ವಿಷಯ ಸ್ವಲ್ಪ ಗೋಚರವಿದ್ದರೂ, ಆತನ ಭಯಭಕ್ತಿಗನುಸಾರವಾಗಿ ನಡಕೊಳ್ಳದೆ ಆತನನ್ನು ಆಶ್ರಯ ಮಾಡಲಿಕ್ಕೆ ಧೈರ್ಯ ಬರುವದಿಲ್ಲ. ಬ್ರಾಹ್ಮಣರು ದಿನಾಲು "ಪಾಪೋಹಂ ಪಾಪಕರ್ಮಾಹಂ ಪಾಪಾತ್ಮಾ ಪಾಪಸಂಭವಃ | ತ್ರಾಹಿಮಾಂ ಪುಂಡರೀಕಾಕ್ಷ ಸರ್ವಪಾಪಹರೋ ಹರಿಃ" ಎಂಬ ಮಂತ್ರ ಹೇಳುತ್ತಾ ಇದ್ದರೂ, ಅದರ ಸತ್ಯಕ್ಕೆ ಒಪ್ಪದೆ, ಪಶ್ಚಾತ್ತಾಪ ಪಡದೆ, ಪಾಪಾನ್ಯಾಯಗಳ ಮೇಲೆ ಪಾತಕಾಕರ್ಮಗಳನ್ನು ನಡಿಸುವ ಹಾಗೆ ಅಂಥಾದ್ದನ್ನು ಮಾಡುವದರಿಂದ ದೇವರ ಮೇಲೆ ಧೈರ್ಯ ಭರವಸ ಇಡ ಕೂಡದೆ, ದೇವರೇ ಎಂದ್ಹೇಳಿ, ಆತನನ್ನು ಆಶ್ರಯಿಸಿಕೊಳ್ಳುತ್ತಾರೆಂದು ಭಕ್ತಿವೇಷ ತೆಗೆದರೂ, ಅದು ಕೆಸರಿನಲ್ಲಿ ನೆಟ್ಟ ಕಂಭದಂತೆ, ಕಾಲಿಗೆ ವೈದರೂ ತಲೆಗೆ ಬರುವದಿಲ್ಲ, ತಲೆಗೆ ವೈದರೂ ಕಾಲಿಗೆ ಬರುವದಿಲ್ಲ. ಕೆಲವರು ಬಾಯಿಯಿಂದ ಮಾತ್ರವಲ್ಲ, ತಮ್ಮ ಕ್ರಿಯೆಗಳಿಂದಲೂ ಭಕ್ತಿ ಕಾಣಿಸ ಮನಸ್ಸು ಮಾಡುತ್ತಾರೆ. ಆದರೆ ದೇವರ ಚಿತ್ತಕ್ಕೆ ವಿರೋಧವಾಗಿ ಸ್ವಂತ ಮನಸ್ಸಿನ ಆಲೋಚನೆಗಳಿಂದ ಅದನ್ನು ನಡಿಸುವದರಿಂದ, ಹಾವು ಕೊಂದು ಹದ್ದಿಗೆ ಹಾಕಿದಂತೆ ಆಯಿತು. "ಕಷ್ಟ ಪಟ್ಟು ಭಾರ ಹೊರುವವರೆಲ್ಲರೇ, ನನ್ನ ಬಳಿಗೆ ಬನ್ನಿರಿ, ನಾನು ನಿಮಗೆ ವಿಶ್ರಾಂತಿ ಕೊಡುವೆನು; ನನ್ನ ನೊಗವನ್ನು ನಿಮ್ಮ ಮೇಲೆ ತಕ್ಕೊಂಡು, ನನ್ನಿಂದ ಕಲಿತು ಕೊಳ್ಳಿರಿ; ಆಗ ನಿಮ್ಮ ಪ್ರಾಣಗಳಿಗೆ ವಿಶ್ರಾಂತಿ ಹೊಂದುವಿರಿ. ನೀತಿ ಬಲ್ಲವರೇ, ನನಗೆ ಕಿವಿ ಕೊಡಿರಿ; ಮನುಷ್ಯರ ನಿಂದೆಗೆ ಭಯ ಪಡ ಬೇಡಿರಿ, ಅವರ ದೂಷಣೆಗಳಿಗೆ ದಿಗುಲು ಪಡ ಬೇಡಿರಿ; ಯಾಕಂದರೆ ವಸ್ತ್ರದಂತೆ ನುಸಿಯು ಅಂಥವರನ್ನು ತಿನ್ನುವದು; ಉಣ್ಣೆಯಂತೆ ಹುಳವು ಅವರನ್ನು ತಿನ್ನುವದು. ಆದರೆ ನನ್ನ ನೀತಿ ನಿತ್ಯವಾಗಿಯೂ, ನನ್ನ ರಕ್ಷಣೆ

ಯು ತಲತಲಾಂತರದ ವರೆಗೂ ಇರುವದು” ಎಂಬೀ ನಮ್ಮ ಸತ್ಯ ದೇವರ ಆಜ್ಞೇ ಪ್ರಕಾರ ಯಾರು ನಡಕೊಳ್ಳುತ್ತಾರೋ ಅಂಥವನಿಗೆ ಚಿಂತೆ ಕಷ್ಟ ದುಃಖಾಂಧಕಾರಗಳಲ್ಲಿ ಒಂದು ನಿತ್ಯ ಗತಿಯುಂಟು. ದಿವಸ ಬೆಳಗುವ ಪರ್ಯಂತರಕ್ಕೂ, ಸೂರ್ಯೋದಯ ಆಗುವ ಪರ್ಯಂತರಕ್ಕೂ, ಇಂಥಾ ಕತ್ತಲೆಗಳಲ್ಲಿ ಪ್ರಕಾಶಿಸುವ ಬೆಳಕು ನಿತ್ಯತ್ವದಿಂದ ಆತನಿಗೆ ಉಂಟು. ಅದು ಸ್ವಪ್ನದಲ್ಲಿ ಬಾಳೆಹಣ್ಣು ತಿಂದ ಹಾಗಲ್ಲ, ಅದು ಪದಾರ್ಥಕ್ಕೆ ಒಳ್ಳೇ ರುಚಿ ಕೊಡುವಂಥಾ ಉಪ್ಪಿನ ಕಾಯಿ ಎಂಬಂತೆಯೂ, ಹಾಲಿಗೆ ಸಕ್ಕರೆ ಕೂಡಿಸಿದ ಹಾಗೆಯೂ, ನಮ್ಮಲ್ಲಿ ಧೈರ್ಯ ತ್ರಾಣ ಸಂತೋಷ ಕೊಡಿಸುತ್ತದೆ. ಹೀಗೆ ಕಾಲಕಾಲಕ್ಕೂ ದೇವರು ಸಂಸಾರ ನಡಿಸುವದಕ್ಕೆ ಬೇಕಾದಷ್ಟು ಲೌಕೀಕ ಶರೀರಭಾವದ ವರಗಳನ್ನು ನಮಗೆ ದಯ ಪಾಲಿಸಿ, ಅನೇಕ ಉಪಕಾರ ಮಾಡುವದಲ್ಲದೆ. ಆತ್ಮೀಕ ಆಧಾರಕ್ಕೆ ಬೇಕಾದಷ್ಟು ಪ್ರಸಾದದಾನಗಳನ್ನು ಐಶ್ವರ್ಯವಾಗಿ ಕೊಟ್ಟು ನಮ್ಮನ್ನು ಪರಿಪಾಲನೆ ಮಾಡಿ, ಅಭಿವೃದ್ಧಿ ಕೊಟ್ಟು, ಸಂವರ್ಧಿಸುತ್ತಾನೆ. ಆತನ ಉಪಕಾರಗಳು ಎಷ್ಟೋ! ಆದರೆ ತಾನು ಮಾಡಿದ ರೊಟ್ಟಿ ತನ್ನ ತಲೆಗೆ ಬಡಿದ ಹಾಗೆ ಎಂಬಂತೆ ಆ ದೇವರ ಉಪಕಾರಗಳನ್ನು ಅನೇಕರು ಆತನ ಚಿತ್ತಕ್ಕೆ ವಿರೋಧವಾಗಿ ಪ್ರಯೋಗಿಸಿ ಕೊಂಡು, ದೇವರು ಇಂಥಾ ಒಳ್ಮೆಯಿಂದ ಮಾನಸಾಂತರಕ್ಕೆ ಕರೆಯುತ್ತಾನೆಂದು ತಿಳಕೊಳ್ಳದೆ, ತಮ್ಮ ದುಷ್ಕ್ರಿಯೆಗಳನ್ನು ಹೆಚ್ಚಿಸುತ್ತಾರಕಟಾ! ನಾವೆಲ್ಲರು ಪಾಪಿಗಳು ಸರಿ, ಅದಕೋಸ್ಕರ ಮರಣವು ಎಲ್ಲರಿಗೆ ಪ್ರಾಪ್ತಿಯಾಯಿತು. ಆದರೆ ನಮ್ಮ ಆಯುಷ್ಯಕಾಲ ಮುಗಿಯುವದಕ್ಕೆ ಮುಂಚೆ ಪೂರ್ಣ ಮನಸ್ಸಿನಿಂದ ಪಶ್ಚಾತ್ತಾಪ ಪಟ್ಟು, ಸತ್ತ ಮೇಲೆ ನ್ಯಾಯತೀರ್ಪು ಆಗುತ್ತದೆಂದು ನೆನಸಿ, ವಿಮೋಚನೆಯಾಗುವ ಹಾಗೆ ಪ್ರಯತ್ನ ಮಾಡದೆ ಹೋದರೂ, ತೀರಿಕೊಂಡ ಮೇಲೆ ನಮಗೆ ಗತಿ ಶಿಕ್ಕೀತೇ? ಪರಿಶುದ್ಧ ನೀತಿಯುಳ್ಳ ದೇವರು ನಮ್ಮ ಅಕ್ರಮಗಳನ್ನು ತನ್ನ ಮುಂದೆಯೂ, ಮರೆಯಾದ ನಮ್ಮ ಪಾಪಗಳನ್ನು ತನ್ನ ಮುಖದ ಬೆಳಕಿನಲ್ಲಿಯೂ ಇಡುವಾಗ ಆತನ ಕೋಪದಿಂದ ಕಳೆದು ಹೋಗಿ, ಆತನ ಉರಿಯಿಂದ ತಲ್ಲಣಿಸ ಬೇಕು. ಆದರೆ ಈಗ ಈ ದಿವ್ಯ ಕೋಪದ ಬಲವನ್ನು ತಿಳಿದವನ್ಯಾರು? ಆತನ ಭಕ್ತರಿಗೆ ಅದು ಗೊತ್ತಿರುವದರಿಂದ ಅವರು ಆತನ ಮಾತು ಕೇಳಿ, ಜಗದ್ರಕ್ಷಕ ಯೇಸು ಕ್ರಿಸ್ತನನ್ನು ಆಶ್ರಯಿಸಿಕೊಂಡು, ಆತನ ಆಜ್ಞೆಗಳ ಪ್ರಕಾರ ಆತನ ಸತ್ಯ ಸೇವೆ ಮಾಡ ಬೇಕೆಂದು ಪೂರ್ಣ ಮನಸ್ಸು ಮಾಡುವದರಿಂದ, ಅವರ ಕೈಕೆಲಸವನ್ನು ಆತನು ಸ್ಥಿರ ಪಡಿಸುತ್ತಾನೆ; ಆತನ ಅಂತಃಕರಣೆ ಕೃಪೆಗಳಿಂದ ಇಹಪರದಲ್ಲಿಯೂ ಅವರನ್ನು ತೃಪ್ತಿ ಮಾಡುತ್ತಾನೆ; ಹೀಗೆ ದೇವರ ದಯದಿಂದ ಆತನ ಭಕ್ತರಿಗೆ ಒಳ್ಳೇ ಸ್ಥಿತಿಗತಿಯುಂಟು; ಇಹಪರದಲ್ಲಿಯೂ ಸುಭದ್ರ ಕ್ಷೇಮವಾಗಿ ಬಾಳುತ್ತಾ ಇರುತ್ತಾರೆ.

ಶರೀರಚಿಕಿತ್ಸೆ

(೧೮೮೦ನೇ ವರ್ಷದ ಪಂಚಾಂಗದಲ್ಲಿರುವ ವಿವರದಿಂದ ಮುಂದೆ.)

ರೋಗಗಳೂ ಇವುಗಳಲ್ಲಿ ಪ್ರಯೋಗವಾಗುವ ಊರೌಷಧಗಳೂ ಇವುಗಳನ್ನು ಕುರಿತು ನಿಘಂಟುರೂಪವಾದ ಸೂಚನಾಸಾರವು.

ಎದೆಗುಂಡಿಗೆ ಬಡಿಯೋಣ, ಗುಂಡಿಗೆ ಅಡಲಪಡುವದು

Palpitation of the Heart, Nervous.

ಸಹಜ ಸ್ಥಿತಿಯಲ್ಲಿ ಗುಂಡಿಗೆ ಬಡದಾಟವಾಗುವದೇ ತಿಳಿಯುವದಿಲ್ಲ. ಆದರೆ ಅದರ ಜೋರೂ ಆವರ್ತಿಯೂ ಹೆಚ್ಚಿತಂದರೆ, ಗುಂಡಿಗೆ ಬಡಿಯೋಣವೆಂಬ ಉಪದ್ರವ ಅನುಭವವಾಗುತ್ತದೆ: ವಿಶೇಷವಾಗಿ ಸ್ತ್ರೀಯರಿಗೂ ತೆಳು ಮೈಯವರಿಗೂ ಉಂಟಾಗುವದು.

ಕಾರಣಗಳು: ಅತಿರೇಕ ಸಂತೋಷ, ದುಃಖ, ಭಯ ಮುಂತಾದ ಮಾನಸಿಕ ಉತ್ತೇಜನ; ಕಠಿಣ ಇಲ್ಲವೆ ದೀರ್ಘಕಾಲದ ಮೈಸಾಧನ; ಸೂತಿಕ ಉಪದ್ರವ; ಅಜೀರ್ಣಾಂಶ. ಚಾ, ಕಾಪಿ ಯಾನೆ ಬುನ್ನಿನ ನೀರು ಬಹಳ ಕುಡಿಯುವದರಿಂದಲೂ, ಅಶಕ್ತ ಸ್ತ್ರೀಯರಿಗೂ ಗುಂಡಿಗೆ ಅಡಲಾಗುವದುಂಟು; ಹೊಗೆಸೊಪ್ಪು, ಭಂಗಿ, ಅಫೀಮು ಇತ್ಯಾದಿ ಶೇದುವದರಿಂದಲೂ ಕೆಲವರಿಗೆ ಉಂಟಾಗುತ್ತದೆ. ಇಂಥಾ ಸಂಗತಿಯಲ್ಲಿ

☞ ಮೇಲಿನ ಸೂಚನಾಸಾರದಲ್ಲಿ ಔಷಧಗಳ ತೂಕವಾಗಲಿ ಅಳತೆಯಾಗಲಿ ಇಂಗ್ಲಿಷ ಹೆಸರಿನಿಂದ ಕೊಟ್ಟಿರುವಲ್ಲಿ ಅವುಗಳಲ್ಲಿ ಒಂದೊಂದು ಈ ಊರಿನ ಯಾವ ತೂಕಕ್ಕೂ ಅಳತೆಗೂ ಸರಿ ಬೀಳುತ್ತದೆಂಬದು ಮುಂದಿನ ಪಟ್ಟಿಯಿಂದ ಗೊತ್ತು ಮಾಡ ಬಹುದು. ಔಷಧಗಳನ್ನು ತಯಾರು ಮಾಡುವಾಗ ಇದನ್ನು ಸಲ ನೋಡಿಕೊಳ್ಳ ಬೇಕು.

ತೂಕ:

೧ ಗ್ರೇನ್ = ೧ ಗುಲ್ಗಂಜಿ = $\frac{೧}{೪}$ ಮಂಜೂಟಿತೂಕ
೩೦ ” = $\frac{೧}{೨}$ ಡ್ರಮ್ = ೭$\frac{೧}{೨}$ ”
೪೮ ” = $\frac{೪}{೫}$ ” = ೧ ಪಾವಲಿತೂಕ
೬೦ ” = ೧ ” = ೧$\frac{೧}{೪}$ ”
೯೬ ” = ೧$\frac{೩}{೫}$ ” = $\frac{೧}{೨}$ ರೂ. ತೂಕ(ತೊಲೆ)
೧೯೨ ” = ೩$\frac{೧}{೫}$ ” = ೧ ರೂ. ತೂಕ(ತೊಲೆ)
೧ ಔನ್ಸ್ = ೮ ” = ೨$\frac{೧}{೨}$ ” ”
೨ ” = ೧೬ ” = ೫ ” ”

ಅಳತೆ:

೧ ಮಿನಿಮ್ = ೧ ಸಾಧಾರಣ ತಟುಕು *
೬೦ ” = ೧ ಡ್ರಮ್ = ೧ ಚಾಸೌಟು
೪ ಡ್ರಮ್ = $\frac{೧}{೨}$ ಔನ್ಸ್ = ೧ ಮೇಜಿನಸೌಟು
೮ ” = ೧ ” = ೨ ”
೧ ಔನ್ಸ್ = ಸುಮಾರು $\frac{೧}{೨}$ ಕುಡುತೆ
೪ ” = ” ೧ ” = $\frac{೧}{೨}$ ಸೇರು
೨೦ ” = $\frac{೧}{೨}$ ಶೀಸೆ = ೧ ಪ್ಯಾಂಟ್
೪೦ ” = ೧ ” = ೨ ”

*ತಟುಕು ವಿದ್ಯಮಾನಾನುಸಾರವಾಗಿ ಚಿಕ್ಕದು ದೊಡ್ಡದು ಆಗುವದುಂಟು.

ಯಾವ ಹೇತುವೆಯಿಂದ ಗುಂಡಿಗೆ ಬಡದಾಟವಾಯಿತೋ ಅದನ್ನೆ ಬಿಟ್ಟು ಬಿಡಲಾಗಿ ಗುಣವಾದೀತು[1].

ಚಿಕಿತ್ಸೆ: ಇದಕ್ಕೆ ಹಿಂಗು (೧೨೪), ಕರ್ಪೂರ (೧೧೦)[2], ಇಲ್ಲವೆ ಜಟಾಮಾಂಸೀ ಕಲ್ಕ (೧೨೫) ಸಹ, ಇವುಗಳಲ್ಲಿ ಒಂದಾಗಲಿ ಇಲ್ಲವೆ ಮಿಶ್ರ ಮಾಡಿ ಆಗಲಿ, ಕೊಟ್ಟಲ್ಲಿ ಅಡಲುಪಡುವದು ಉತಾರವಾಗುವದು. ನಿಶ್ಚೇತನ, ದುರ್ಬಲತೆ ಇಲ್ಲವೆ ಮೂರ್ಛೆಯುಳ್ಳವರಿಗೆ ಗುಂಡಿಗೆಯಲ್ಲಿ ಬಡದಾಟವಾಗಲಿ, ಅಡಲಪಡುವದಾಗಲಿ ಉಂಟಾದರೆ, "ಬ್ರೊಮೈಡ್ ಒಫ್ ಪೊಟಾಸಿಯುಮ್" (Bromide of Potassium) ಎಂಬ ಲವಣ ಐದರಿಂದ ಹತ್ತು ಗ್ರೇನ್ ವರೆಗೆ ನೀರಿನಲ್ಲಿ ಕಲಕಿಸಿ, ದಿನಕ್ಕೆ ಎರಡು ಯಾ ಮೂರು ಸಾರಿ ಕೊಡ ಬಹುದು.

೧೨೪.[3] ಸೂತಿಕಾವಾಯು (hysteria), ಬವಳಿ, ಅದರಿಂದಾಗುವ ನರಗಳ ಸಂ[illegible]ರಾದ ಗುಂಡಿಗೆಬಡದಾಟ ಮುಂತಾದ ಉಪದ್ರವಗಳಲ್ಲಿ ಹಿಂಗು ಬಹಳ ಗುಣವುಳ್ಳದ್ದು. ಮೂರ್ಛೆ ಬಿದ್ದಾಗ ಇರುವಂತೆ ಕಠಿಣವಾದ ಚಿನ್ಹೆಗಳು ತೋರಿದರೆ, ಅದನ್ನು ನೀರಿನಲ್ಲಿ ಕಲಕಿಸಿ ಕೊಡುವದು (೧೦[illegible]ನೇ ಅಂಕೆಯ ಟಿಪ್ಪಣಿಯಲ್ಲಿ ಹೇಳಿದ ಮೇರೆಗೆ). ಪರಂತು ಅಂಥಾ ರೋಗ ಬಾರದಂತೆ ಅಭ್ಯಂತರಿಸುವದು ಮುಖ್ಯವಾಗಿದ್ದರೆ, ಇಲ್ಲವೆ ಔಷಧ ದೇಹಕ್ಕೆ ಚನ್ನಾಗಿ ಹತ್ತುವಂತೆ, ಘಟ್ಟಿಯಾದ ಪರಿಮಾಣದಲ್ಲಿ ಕೊಡುವದು.

೧೨೫. ಊರಿನ ಜನರು ಜಟಾಮಾಂಸಿಯು[4] ಶಳವಿನ ರೋಗಕ್ಕೆ ಪ್ರಶಸ್ತ ಔಷಧವೆಂದು ಹೇಳುತ್ತಾರೆ. ವಿಲಾಯತಿಯವರು ಪರೀಕ್ಷಿಸಿ ನೋಡಿದ್ದಲ್ಲಿ ಅದು ಆ ಗುಣವುಳ್ಳ (Officinal Valerin ಎಂಬದಕ್ಕೆ ಬದಲಾದ) ಉತ್ತಮ ಔಷಧವೆಂದು ಕಂಡು ಬಂದದೆ. ಆದದರಿಂದ ಸೂತಿಕಾವಾಯುವಿನ ಉಪದ್ರವದಲ್ಲಿ, ಮುಖ್ಯವಾಗಿ ಗುಂಡಿಗೆ ಬಡದಾಟ, ಧನುರ್ವಾತ, ವಾಯು ಮುಂತಾದದರಲ್ಲಿ ಪರೀಕ್ಷಿಸಿ ಗುಣ ನೋಡ ತಕ್ಕದ್ದಾಗಿರುತ್ತದೆ. ೨ ದ್ರಮ್ ಈ ಬೇರುಗಳ ತುಂಡುಗಳನ್ನು ಜಜ್ಜಿ, ಅರ್ಧ ಪ್ಯಾಂಟ್

---

[1] ರಷ್ಡಕ್ಕ್ ರಚಿಸಿದ „ವೇದ್‌ಮೇಕಮ್” ಎಂಬ ಪುಸ್ತಕದಿಂದ ತೆಗದದ್ದು.

[2] ೧೮೮೦ನೇ ಇಸವಿಯ ಪಂಚಾಂಗದ ೪೧ನೇ ಪಾನಿನಲ್ಲಿ ನೋಡು.

[3] ಅದೇ ಪಂಚಾಂಗದ ೪೮ನೇ ಪಾನಿನಲ್ಲಿ ತೀರಿದ ೧೨೩ನೇ ಅಂಕೆಯಿಂದ ಮುಂದೆ.

[4] *Engl:* Jatamansi or Indian Spikenard; ಹಿಂದು: ಜಟಾಮಾಸಿ, ಬಾಲ್‌ಚರ್; ದಖ: ಜಟಾಮಾಂಸಿ; ಬಂಗಾ: ಜಟಾಮಾಷ್ಸಿ; ತಮ: ತೆಲು: ಜಟಾಮಾಷಿ; ಮಲ: ಜಟಾಮಾಂಚಿ.—ಈ ಬೇರುಗಳು ಗಂಧಸರಕಿನ ಅಂಗಡಿಗಳಲ್ಲಿ ಸಿಕ್ಕುವ ಸುಮಾರು ಪೇನಿನ ಗರಿಯಷ್ಟು ಸಪೂರ ಚಿಕ್ಕ ತುಂಡುಗಳಾಗಿದ್ದು, (ಅದರ ಮೇಲೆ) ತುದಿಯಲ್ಲಾಗಲಿ ಇಡೀ ಮೈಯಲ್ಲಿ ಆಗಲಿ ಕಪ್ಪು, ದೊರಗಾದ, ಉಣ್ಣೆಯಂಥಾ ನಾರುಳ್ಳದ್ದಾಗಿವೆ. ಅವಕ್ಕೆ ವಿಶೇಷ ತರದ ಪರಿಮಳವದೆ. ಮತ್ತು ರುಚಿಗೆ ಕಹಿಯಾಗಿ, ಸುಗಂಧವಾಗಿ ಇರುತ್ತವೆ. ಔಷಧಕ್ಕಾಗಿ ಈ ಬೇರುಗಳು ಹಸಿಯಾಗಿಯೂ ಒಳ್ಳೇ ತರದ್ದಾಗಿಯೂ ತೆಗಿಯುವಲ್ಲಿ ಜಾಗ್ರತೆಯಿಂದ ತೆಗಿಯ ಬೇಕು. ಅಂಗಡಿಗಳಲ್ಲಿ ಮಾರುವಂಥಾದ್ದು ವಾಡಿಕೆಯಾಗಿ ಹಳತಾಗಿಯೂ ಹುಳ ತಿಂದಂಥಾದ್ದಾಗಿಯೂ ಇರುವದರಿಂದ ಪ್ರಯೋಜನದ್ದಲ್ಲ.

ಕುದಿಯುವ ನೀರಿನಲ್ಲಿ ಹಾಕಿ, ಒಂದು ತಾಸಿನ ವರೆಗೆ ಮುಚ್ಚಿಟ್ಟು, ಗಾಳಿಸಿ ತೆಗದ ಕಲ್ಕವನ್ನು ಒಂದೊಂದು ವಾಯ್ನ್ ಗ್ಲಾಸ್ (=೧½ ಔನ್ಸ್) ದಿವಸಕ್ಕೆ ಎರಡು ಮೂರು ಸಾರಿ ಕೊಡುವದು. ಬಂಗಾಳದ ಔಷಧನಿದಾನ ಗ್ರಂಥದಲ್ಲಿ ಇದರ ಧೃತಿ ಮಾಡುವ ಕ್ರಮ ಹೇಳಿಯದೆ. ಐದು ಔನ್ಸ್ ಜಟಾಮಾಂಸಿಯನ್ನು ತಂದು, ಜಜ್ಜಿ, ಎರಡು ಪ್ಯೆಂಟ್ "ಪ್ರೂಫ್‌ಸ್ಪಿರಿಟ್" (Proof-spirit) ಎಂಬ ದ್ರಾವಕದಲ್ಲಿ ನೆನೆ ಹಾಕಿಟ್ಟು, ತೆಗಿಯುವದು. ಇದನ್ನು ಒಂದು ಸಾರಿಗೆ ಒಂದೆರಡು ದ್ರಮ್ ವರೆಗೆ ಕೊಡುವದು. ಯಾವ ಸಂಗತಿಯಲ್ಲಾದರೂ ಇದರೊಡನೆ ಕರ್ಪೂರವಾಗಲಿ, "ಎಮ್ಮೋನಿಯ" (Ammonia) ಎಂಬ ನವಸಾಗರವಾಗಲೀ, ಅದೇ ಗುಣವುಳ್ಳ ಇತರ ಔಷಧವಾಗಲಿ ಕಲಸಿ ಕೊಡುವದರಿಂದ ಬಹಳ ಗುಣ ಉಂಟು.

ಎದೆವುರಿ, (ನಿಚ್ಚು), ಆಮ್ಲಪೈತ್ಯ Heartburn.

ಇದು ಗುಂಡಿಗೆ ಸಂಬಂಧವಾದ ರೋಗವಾಗಿರದೆ, ಅನ್ನಕೋಶದ ಅಕ್ರಮವನ್ನು ಕುರಿತದ್ದಾಗಿರುತ್ತದೆ. ವೇದನೆ, ಅನ್ನಕೋಶದ ಬುಡದಿಂದ ಗಂಟ್ಲು ವರೆಗೆ ತೀಕ್ಷ್ಣ ಇಲ್ಲವೆ ಉಷ್ಣವಾದಂತೆ ಅರಿವಾಗುವದು; ಇದರ ಸಂಗಡ ವ್ಯಾಕುಲ, ಹ್ಯಾವರಿಕೆ, ವಾಂತಿ, ಇಲ್ಲವೆ ಅನ್ನಕೋಶದ ಸ್ಥಾನದಲ್ಲಿ ಕಠಿಣ ಉರಿಯಾಗುವದು; ಈ ಉರಿ, ತೆಳುವಾದಂಥಾದ್ದು ಕಾರಿ ಹೋದ ಹೊರ್ತು ಶಮನವಾಗುವದಿಲ್ಲ.

ಚಿಕಿತ್ಸೆ: ಸುಣ್ಣದ ತಿಳಿನೀರನ್ನು[1] ಹಾಲಿನ ಸಂಗಡವಾಗಲೀ ಓಮಗ ನೀರಿನ[2] ಸಂಗಡವಾಗಲೀ ಕೊಟ್ಟರೆ, ಎದೆವುರಿಯು ನಿವಾರಣೆ ಆಗುವದು. ಆದರೆ ಇದರ ಸಂಗಡ ಅಜೀರ್ಣ ಸಹ ಇದ್ದರೆ, ಸದರಿ ಸುಣ್ಣದ ತಿಳಿನೀರನ್ನು ಕಿರಿಯಾತು ಯಾನೆ ನೆಲಬೇವಿನ ನೀರಿನ (೧೦, ೧೧)[3] ಸಂಗಡ ಕೊಡುವದು.

ಎಲುಬುಗಳ ರೋಗ, ಎಬುವಡಿ (ಗಂಡಮಾಲೆ ಸಂಬಂಧವಾದ್ದು)

Scrofulous Affections of Bones.

೧೨೬. ಈ ರೋಗವು ಗಂಡಮಾಲೆ ಸಂಬಂಧವಾಗಿ ಹುಟ್ಟುವದು. ಇದು ವಿಶೇಷವಾಗಿ ಪಿತ್ರಾರ್ಜಿತವಾಗಿ ಬರುವದುಂಟು. ಇದಕ್ಕೆ ಮಿಾನಿನ ಎಣ್ಣೆ ಕೊಡುವದು. ಈ ಮಿಾನಿನ ಎಣ್ಣೆಯ[4] ಗುಣವು ವಿಶೇಷವಾಗಿ ಕ್ಷಯರೋಗದಲ್ಲಿ ಕಾಣುವದಲ್ಲದೆ,

---

[1] ಇದನ್ನು ಮಾಡುವ ಕ್ರಮವನ್ನು ಕುರಿತು ೧೮೭೭ನೇ ಇಸವಿಯ ಪಂಚಾಂಗದ ೭೦ನೇ ಪಾನಿನಲ್ಲಿರುವ ೧೮, ೧೯ನೇ ಅಂಕೆಗಳಲ್ಲಿ ನೋಡು.

[2] ಅದೇ ಪಂಚಾಂಗದ ೨೯ನೇ ಪಾನಿನಲ್ಲಿರುವ ೧೫ನೇ ಅಂಕೆಯಲ್ಲಿ ನೋಡು.

[3] ಅದೇ ಪಂಚಾಂಗದ ೨೮ನೇ ಪಾನಿನಲ್ಲಿ ನೋಡು.

[4] ಈ ಮಿಾನಿನ ಎಣ್ಣೆ ತಯಾರು ಮಾಡುವ, ತೆಗದು ಕೊಳ್ಳುವ ಮುಂತಾದ ವಿವರವನ್ನು ಕುರಿತು ೧೮೭೭ನೇ ಇಸವಿಯ ಪಂಚಾಂಗದ ೨೭ನೇ ಪಾನಿನಲ್ಲಿರುವ ೭ನೇ ಅಂಕೆಯಲ್ಲಿಯೂ ಅದರ ಕೆಳಗಣ ಟಿಪ್ಪಣಿಯಲ್ಲಿಯೂ ನೋಡು.

ಬಹುಶಾ ಸಂಜು ಸ್ವಭಾವದ ದೇಹಿಗಳಿಗೂ ಫಲಕರವಾಗಿ ವರ್ತಿಸುತ್ತದೆ. ಗಂಡಮಾಲೆ ತರದ ಬಾವುಗಳು, ಕೀವುಗಟ್ಟಿದ ಮಾಂಸಗ್ರಂಥಿಗಳು, ಸೋರುವ ಹುಣ್ಣುಗಳು, ಮೂಗಿನಿಂದಾಗಲಿ ಕಿವಿಗಳಿಂದಾಗಲಿ ಸೋರೋಣ, ಮತ್ತು ಚರ್ಮವ್ಯಾಧಿಗಳು, ಇಂಥಾದ್ದುಳ್ಳ ರೋಗಿಗೆ, ಮುಖ್ಯವಾಗಿ ಅಶಕ್ತಿಯೂ ನಿಶ್ಚೇತನವೂ ಇದ್ದಲ್ಲಿ, ಈ ಎಣ್ಣೆ ಕೊಡುವದು ಬಹಳ ಗುಣ. ಅದೇ ಪ್ರಕಾರ ಗಂಟುಗಳಿಗೂ ಎಲುಬುಗಳಿಗೂ ಹಿಡಿದಿರುವ ರೋಗಗಳಲ್ಲಿ, ಮುಖ್ಯವಾಗಿ ಗ್ರಹಣಿಯಲ್ಲಿ, ಮತ್ತು ಗಂಡಮಾಲೆ ಸಂಬಂಧವಾದ ಕಣ್ಣುರೋಗಗಳಲ್ಲಿ ಮೀನಿನೆಣ್ಣೆಯು ಒಳ್ಳೇ ಗುಣ ಕಾಣ ಬರುತ್ತದೆ.

ಎಳವು ಮತ್ತು ಇತರ ನೋವುಳ್ಳ ಕರುಳು (ಅಂದರೆ ಮಲಾಶಯದ) ವ್ಯಾಧಿ

Spasmodic and other painful Affection of Bowels.

ಕರುಳುಗಳು ಅಂದರೆ ಮಲಾಶಯ. ಇದರಲ್ಲಿ ಅಜೀರ್ಣ ಮುಂತಾದ ಆಹಾರ ದೋಷದಿಂದ ನೋವೂ ಎಳವೂ ಉಂಟಾಗುವದು.

ಸಾಧಾರಣ ಸಂಗತಿಗಳಲ್ಲಿ ಓಮದ ನೀರು (೧೫)[1] ಕೊಟ್ಟು ಗುಣವಾಗುವದು. ಅದಲ್ಲದೆ ಮಜ್ಜಿಗೆಹುಲ್ಲಿನ ಎಣ್ಣೆ[2] (೧೨೭), ಇಲ್ಲವೆ ಶುಂಠೀ ಕಲ್ಕ (೧೨೮), ಸಬ್ಬಸಿಗೆ ಬೀಜದ ಬಟ್ಟಿ ಇಳಿಸಿ ತೆಗೆದ ನೀರು (೧೨೯), ಇಲ್ಲವೆ ಲವಂಗದ ಕಲ್ಕ[3] (೧೩೦), ಅದಕ್ಕೆ ಬಹಳ ಸ್ವಲ್ಪ ಅಫೀಮು (೧೩೧)[4] ಕೂಡಿಸಿ ಆಗಲಿ, ಕೂಡಿಸದೆ ಆಗಲಿ, ಕೊಡುವದು. ಕಠಿಣ ಸಂಗತಿಗಳಲ್ಲಾದರೆ, ಅಫೀಮು (೧೩೧) ಓಮದ ನೀರು ಮುಂತಾದದರಲ್ಲಿ ಪದೇ ಪದೇ ಕೊಡುವದಲ್ಲದೆ, ಬಾಹ್ಯಚಿಕಿತ್ಸೆಯಾಗಿ ಕಿರಿಹೊಟ್ಟೆಗೆ ಬಿಸಿ ನೀರಿನ ಶೇಕ (೧೦೯)[5], ಸಾಸಿವೆಯ ಒತ್ತಡ (೬೨, ೧೩೨), ಇಲ್ಲವೆ ಟರ್ಪೆಂಟೈನ್ ಎಂಬ ಕರ್ಪೂರತೈಲದ ನೀರ್ಗಾವು (೨೪)[6], ಸಹ ಕೊಡುವದು. ಅದಲ್ಲದೆ ರೋಗ ದೀರ್ಘ ಕಾಲ ನಡದ್ದಾಗಿ

---

[1] ಈ ಅಂಕೆಯನ್ನು ೧೮೭೭ನೇ ಇಸವಿಯ ಪಂಚಾಂಗದ ೨೯ನೇ ಪಾನಿನಲ್ಲಿ ನೋಡು. ಈ ಪ್ರಕಾರ ದಪ್ಪ ಅಂಕೆಯಿಂದ ಸೂಚಿಸಿರುವ ಔಷಧಗಳು ವಿಶೇಷ ಗುಣವುಳ್ಳವುಗಳೆಂದು ಎಣಿಸ ಬೇಕು.

[2] ಕಳೆದ ೧೮೮೦ನೇ ವರ್ಷದ ಪಂಚಾಂಗದ ೪೮ನೇ ಪಾನಿನ ಕೆಳಗಿರುವ ಟಿಪ್ಪಣಿಯನ್ನು ಸರಿ ನೋಡು.

[3] ಲವಂಗದ ವಿಷಯವಾಗಿ ಹಿಂದೆ ಕೆಲವು ಸ್ಥಳಗಳಲ್ಲಿ (೧೮೭೭ನೇ ಇಸವಿಯ ಪಂಚಾಂಗದ ೧೯ನೇ ಪಾನಿನಲ್ಲಿ ಇತ್ಯಾದಿ) ಹೇಳಿದ್ದಾಗ್ಯೂ, ಅದರ ಹೆಸರು, ಜಾತಿ ಮುಂತಾದ್ದನ್ನು ಕುರಿತು ಹಿಂದೆ ಎಲ್ಲ್ಯಾದರೂ ವಿವರಿಸಲಿಲ್ಲವಾದ್ದರಿಂದ ಇಲ್ಲಿ ಹೇಳೋಣ:—*Engl*: Cloves; ಹಿಂದು: ಬಂಗಾ: ಲೋಂಗ್; ದಖ: ಲವಂಗ್; ತಮ: ಕಿರಾಂಬು, ಇಲವಂಗಪ್ಪೂ; ತೆಲು: ಲವಂಗೊಪ್ಪೂ, ಲವಂಗಾಲು; ಮಲ: ಕರಾಂಪು; ಮಹಾ: ಲವಂಗಾ; ಗುಜ: ಲವಂಗ್.—ಅಂಗಡಿಗಳಲ್ಲಿ ಸಿಕ್ಕುವ ಲವಂಗಗಳು ಬಹುಶಾ ಹಳತಾಗಿರುವದರಿಂದ ಅಂಥಾದ್ದು ಪ್ರಯೋಜನವಿಲ್ಲ. ಔಷಧಕ್ಕೆ ಬೀಳುವಂಥಾವು ಕಠೋರ ವಾಸನೆಯೂ, ತೀವ್ರವೂ ಸಂಬಾರದಂಥಾ ತೀಕ್ಷ್ಣವೂ ಹಿತಕರವೂ ಉಳ್ಳ ರುಚಿ ಇದ್ದು, ನಖದಿಂದ ಒತ್ತಿದ್ದಾದರೆ, ಸ್ವಲ್ಪ ತೈಲ ಪಸೆ ಇರ ಬೇಕು.

[4] ೧೮೭೮ನೇ ಇಸವಿಯ ಪಂಚಾಂಗದ ೫೦, ೫೧ನೇ ಪಾನುಗಳಲ್ಲಿರುವ ಟಿಪ್ಪಣಿಯನ್ನು ನೋಡು.

[5] ೧೮೮೦ನೇ ಇಸವಿಯ ಪಂಚಾಂಗದ ೪೧ನೇ ಪಾನಿನಲ್ಲಿ ನೋಡು.

[6] ೧೮೭೭ನೇ ಇಸವಿಯ ಪಂಚಾಂಗದ ೭೨ನೇ ಪಾನಿನಲಿ ನೋಡು.

ದ್ದರೆ, ಕರ್ಪೂರತೈಲದ ಪಿಚಿಕಾರಿ (೧೩೩), ಇಲ್ಲವೆ ಹಿಂಗಿನ ನೀರು[1], ಸಹ ಕೊಡುವದು. ಯಾವ ಸಂಗತಿಯಲ್ಲಾದರೂ, ನೋವು ಸ್ವಲ್ಪ ನಿಧಾನವಾಗುತ್ತಲೇ ಒಂದಿಷ್ಟು ಹರಳೆಣ್ಣೆ ಕೊಡುವದು.—[ಮಕ್ಕಳ ಉದರಶೂಲೆಯನ್ನು ಕುರಿತು ಕಳೆದ ವರ್ಷದ ಪಂಚಾಂಗದ ೩೯-೪೦ನೇ ಪಾನುಗಳಲ್ಲಿ ನೋಡು.]—ಕರುಳುಗಳ ಅಕ್ರಮದ ಬಗ್ಗೆ ಬೇಲದ ಹಣ್ಣಿನ ಪಾನಕ[2] (೧೩೪), ಮಕ್ಕಳಿಗೆ ಆದರೆ ಕಿರಿಯಾತಿನ[3] ಎಲೆಯ ಕಷಾಯ (೧೩೫) ಕೊಡುವದು.—[ಕರುಳುಗಳ ಸ್ತಬ್ಧತೆಯನ್ನು ಕುರಿತು "ಮಲಬದ್ಧ" ಎಂಬ ಹೆಸರಿನ ಕೆಳಗೆ ಮುಂದೆ ಬರುವದು.—ಕರುಳುಗಳಿಂದ ರಕ್ತ ಹರಿಯೋಣವನ್ನು ಕುರಿತು "ಅನ್ನಕೋಶ ಮುಂತಾದ ಅಂತರಕೋಶಗಳಿಂದ ನೆತ್ತರ ಹರಿಯೋಣ"[4] ಎಂಬದರಲ್ಲಿ ಸಹ ನೋಡುವದು.]

೧೨೭. ವಾಯುಸಂಬಂಧವಾದ (ಅಂತರ್ವಮಿ) ನೋವು ಮುಂತಾದ ಕರುಳು ವ್ಯಾಧಿಗೆ ಮಜ್ಜಿಗೆಹುಲ್ಲಿನ ಎಣ್ಣೆಯ (೩ರಿಂದ ೬ರ ವರೆಗೆ) ತಟಕುಗಳನ್ನು ಒಂದಿಷ್ಟು ಸಕ್ಕರೆ ಮೇಲಾಗಲಿ ರವೇ ಮೇಲಾಗಲಿ ಬಿಟ್ಟು ತೆಕ್ಕೊಂಡರೆ, ಬೇಗ ನೋವು ಉಪಶಮನವಾಗಿ ಗುಣ ಬರುವದು. ಈ ಪ್ರಕಾರ ಕೊಟ್ಟಲ್ಲಿ ಕಠಿಣ ವಾಂತಿ ಸಹ ಪೂರ್ಣವಾಗಿ ನಿಂತು ಹೋಗುತ್ತದೆ.

೧೨೮. ಶುಂಠಿ[5] ಉದರಶೂಲೆಯಲ್ಲಿಯೂ, ವಾಯುವಿನ ಉಪದ್ರವ (ಅಂತರ್ವಮಿ), ವಾಂತಿ, ಎಳವುನೋವುಳ್ಳ ಕರುಳುವ್ಯಾಧಿಯಲ್ಲಿಯೂ ಕಲ್ಕ ಮಾಡಿ ಕೊಡುತ್ತಾರೆ. ಹ್ಯಾಗಂದರೆ: ಒಂದು ಔನ್ಸ್ ಶುಂಠಿಯನ್ನು ಒಂದು ಪ್ಯಾಂಟ್ ಕುದಿಯುವ ನೀರಿನಲ್ಲಿ ಹಾಕಿ, ಒಂದು ತಾಸಿನ ವರೆಗೆ ಮುಚ್ಚಿಟ್ಟು, ತರುವಾಯ ತೆಗದು ಗಾಳಿಸುವದು. ಇದನ್ನು ಸ್ವಲ್ಪ ಬೆಚ್ಚಗೆ ಇರುವಾಗ ಸರ್ತಿಗೆ ಎರಡು ಔನ್ಸ್ ಪ್ರಕಾರ, ತಾಸಿಗೆ ಒಂದೆರಡಾವರ್ತಿ ತೆಕ್ಕೊಂಡರೆ, ಬಹುಶಾ ತಕ್ಕಷ್ಟು ಗುಣಕರ. "ಕಾರ್ಬೊನೆಟ್ ಒಫ್ ಸೋಡಾ" (Carbonate of Soda) ಎಂಬ ಪಪ್ಪಡಖಾರದ ಲವಣ ಕೈಹತ್ತರವಿದ್ದರೆ, ಅದರ ೨೦-೩೦ ಗ್ರೇನ್ ಸದರಿ ಕಲ್ಕದಲ್ಲಿ ಹಾಕಿ ತೆಕ್ಕೊಂಡರೆ, ಅದರ ಗುಣ ಇನ್ನಷ್ಟು ಹೆಚ್ಚುವದು. ಮಕ್ಕಳಿಗೆ ಆದರೆ, ಸದರಿ ಕಲ್ಕ ಒಂದು ಮೇಜಿನ ಸೌಟಿನಷ್ಟು ಕೊಟ್ಟರೆ ಸಾಕಾದೀತು.

---

[1] ಇದನ್ನು ಕುರಿತು ೧೮೮೦ನೇ ಇಸವಿಯ ಪಂಚಾಂಗದ ೯ನೇ ಪಾನಿನಲ್ಲಿರುವ ೧೦೬ನೇ ಅಂಕೆಯಲ್ಲಿಯೂ ಅದರ ಟಿಪ್ಪಣಿಯಲ್ಲಿಯೂ ನೋಡು.

[2] ೧೮೭೭ನೇ ಇಸವಿಯ ಪಂಚಾಂಗದ ೩೫ನೇ ಪಾನಿನಲ್ಲಿರುವ ೩೨ನೇ ಅಂಕೆಯನ್ನೂ ಅದರ ಕೆಳಗಿರುವ ಟಿಪ್ಪಣಿಯನ್ನೂ ಸರಿ ನೋಡು.

[3] ೧೮೭೯ನೇ ವರ್ಷದ ಪಂಚಾಂಗದ ೪೮ನೇ ಪಾನಿನಲ್ಲಿರುವ ೯೪ನೇ ಅಂಕೆಯನ್ನೂ ಅದರ ಟಿಪ್ಪಣಿಯನ್ನೂ ಸರಿ ನೋಡು.

[4] ೧೮೭೭ನೇ ಇಸವಿಯ ಪಂಚಾಂಗದ ೨೧-೨೨ನೇ ಪಾನುಗಳಲ್ಲಿ ನೋಡು.

[5] *Engl:* Ginger; ಹಿಂದು: ಸೋಂಠ್, ಸಿಂಧಿ; ತಮ: ಶುಕ್ಕು; ತೆಲು: ಸೊಂಟಿ; ಮಲ: ಚುಕ್ಕ.—ಔಷಧಕ್ಕೆ ಹಸಿ ಶುಂಠಿಗಿಂತ ಒಣ ಶುಂಠಿ ಒಳ್ಳೇದು; ಒಣ ಶುಂಠಿ ಶಿಕ್ಕದ ಪಕ್ಷಕ್ಕೆ ಹಸಿ ಶುಂಠಿ ಆದರೂ ಪ್ರಯೋಗಿಸ ಬಹುದು.

೧೨೯. ಸಬ್ಬಸಿಗೆ ಬೀಜದ[1] ಬಟ್ಟಿ ಇಳಿಸಿ ತೆಗದ ನೀರಿಗೆ ವಿಶೇಷ ಗುಣ ಇರುತ್ತದೆ. ಅದು ಶಿಕ್ಕದಿದ್ದರೆ, ಬೀಜಗಳ ಕಲ್ಕ ಮಾಡಿ ಕೊಡ ಬಹುದು. ಹ್ಯಾಗಂದರೆ: ೨ ದ್ರಮ್ ಬೀಜವನ್ನು ಜಜ್ಜಿ ಅರ್ಧ ಪ್ಯಾಂಟ್ ಬಿಸಿ ನೀರಿನಲ್ಲಿ ಹಾಕಿ ಮುಚ್ಚಿಟ್ಟು, ತಣ್ಣಗಾದ ಮೇಲೆ ಗಾಳಿಸಿ ತೆಗದು, ರುಚಿಗೆ ಬೇಕಾದರೆ, ಸ್ವಲ್ಪ ಸಕ್ಕರೆ ಸಹ ಹಾಕಿ, ಕೊಡುವದು. ಮಕ್ಕಳಿಗಾದರೆ ಎರಡು ಚಾಸೌಟು ಒಂದು ಸಾರಿಗೆ ಕೊಡ ಬಹುದು. ಇದು ಕಿರಿಹೊಟ್ಟೆಯ ನೋವು, ವಾಯು, ಮತ್ತು ಮಕ್ಕಳ ಉದರಶೂಲೆ ಸಹ ಚನ್ನಾಗಿ ಗುಣಮಾಡುವದು. ಇದಕ್ಕೆ ಒಂದು ಚಾಸೌಟಿನಷ್ಟು ಸುಣ್ಣದ ತಿಳಿನೀರು ಸಹ ಕೂಡಿಸಿದ್ದಾದರೆ, ಅದರ ಗುಣ ಮತ್ತೂ ಹೆಚ್ಚುವದು.

೧೩೦. ಲವಂಗವು ಒಳ್ಳೇ ಉತ್ತೇಜಕವೂ ಚೇತನಕವೂ ಆಗಿದ್ದು, ದಾಲ್‌ಚಿನ್ನಿಗಿಂತ ತೀಕ್ಷ್ಣವಾಗಿರುತ್ತದೆ. ಆದರೆ ಒಳ್ಳೇ ತರದ ಲವಂಗ ಶಿಕ್ಕದ ಪಕ್ಷಕ್ಕೆ, ಗುಣದಲ್ಲಿ ಸರಿಸಮಾನವಿರುವ ಅವನ್ನಾದರೂ ಇದರ ಬದಲಾಗಿ ಪ್ರಯೋಗಿಸ ಬಹುದು. ಶರೀರಕ್ಕೆ ಹಿತವೂ ಉಪಯುಕ್ತವೂ ಆದ ಇದರ ಕಲ್ಕವನ್ನು ಮಾಡುವದು ಹ್ಯಾಗಂದರೆ: ೩ ದ್ರಮ್ ಲವಂಗ ತೆಗದು, ಒಂದು ಪ್ಯಾಂಟ್ ಕುದಿಯುವ ನೀರಿನಲ್ಲಿ ಹಾಕಿ, ಗಾಳಿಸಿ ತಣಿಸುವದು. ಅಜೀರ್ಣ, ಅಂತರ್ವಮಿ ಎಂಬ ವಾಯುರೋಗ, ಎಳವುನೋವುಳ್ಳ ಕರಳುವ್ಯಾಧಿಯಲ್ಲಿ ಈ ಕಲ್ಕದ ಒಂದೆರಡು ಔನ್ಸ್ ಕೊಡುವದು. ಇದರಿಂದ ಕೆಲವು ಸಾರಿ ಗರ್ಭಿಣಿಯರಿಗೆ ಶುರು ಆಗುವ ವಾಂತಿ ಸಹ ಗುಣವಾಗುವದು. ಈ ಲವಂಗದ ಕಲ್ಕವನ್ನು ಅಷ್ಟೇ ಕಿರಿಯಾತಿನ ಕಲ್ಕದ (೧೦ನೇ ಅಂಕೆಯನ್ನು ನೋಡು)[2] ಸಂಗಡ ಕೂಡಿಸಿ ಕೊಟ್ಟಲ್ಲಿ ಅಶಕ್ತಿಗೂ ಅರುಚಿಗೂ ಜ್ವರ ವಾಶಿಯಾದನಂತರವೂ (ಅಂದರೆ ತಾವಳಿಯಾದಾಗ) ಉತ್ತಮ ಫಲ ಕೊಡುವದು.

೧೩೧. ಎಳವುನೋವುಳ್ಳ ಕರುಳುವ್ಯಾಧಿ, ಕಠಿಣ ಉದರಶೂಲೆ, ಅಶ್ಮರಿ ಎಂಬ ಕಲ್ಲುವ್ಯಾಧಿ, ಇವುಗಳಲ್ಲಿ ನೋವು ವಿಶೇಷವಿದ್ದರೆ, ಅಫೀಮು ಕೊಟ್ಟು ಶಮನವಾಗುವದು; ಹ್ಯಾಗಂದರೆ: ಲೋಡೆನಮ್ (Laudanum) ಎಂಬ ಅಫೀಮುಸತ್ವದ ೨೦ರ ಮೇಲೆ ೨೫ ತಟುಕುಗಳ ವರೆಗೆ ಒಂದುವರೆ ಔನ್ಸಿನಷ್ಟು ಓಮದ ನೀರಿನಲ್ಲಿ (೧೫)[3] ಇಲ್ಲವೆ ಬಜೇ ಕಲ್ಕದಲ್ಲಿ (೧೨)[4] ಹಾಕಿ ಕೊಡುವದು. ಅರ್ಧ ತಾಸಿನೊಳಗೆ ಕಿಂಚಿತ್ತಾದರೂ ಗುಣ ತೋರದ ಪಕ್ಷಕ್ಕೆ, ಎರಡನೇ ಸರ್ತಿ ಅದೇ ಪ್ರಕಾರ ಕೊಡು

---

[1] *Engl*: Dill Seeds; ಹಿಂದು: ಸೊಯಾ, ಸೂವಾ; ದಖ: ಸೋಯಿ; ತಮ: ಶತಕುಪ್ಪಿವಿರೈ; ತೆಲು: ಶತಕುಪ್ಪಿವಿತ್ತುಲು; ಮಲ: ಶತಕುಫ್ಪಾ.—ಹಿಂದುಸ್ಥಾನದಲ್ಲಿ ಶಿಕ್ಕುವ ಸಬ್ಬಸಿಗೆ ಬೀಜಗಳು ವಿಲಾಯತೀ ಬೀಜಗಳಿಗಿಂತ ವಿಶೇಷ ಗುಣವುಳ್ಳದ್ದಲ್ಲ. ಆದ್ದರಿಂದ ಎರಡರಲ್ಲಿ ಯಾವದನ್ನಾದರೂ ಉಪಯೋಗಿಸ ಬಹುದು.

[2] ಈ ಅಂಕೆಯು ೧೮೭೭ನೇ ಇಸವಿಯ ಪಂಚಾಂಗದ ೨೮ನೇ ಪಾನಿನಲ್ಲಿ ಉಂಟು.

[3] ೧೮೭೭ನೇ ಇಸವಿಯ ಪಂಚಾಂಗದ ೨೯ನೇ ಪಾನಿನಲ್ಲಿ ನೋಡು.

[4] ಅದೇ ಪಂಚಾಂಗದ ೨೮ನೇ ಪಾನಿನಲ್ಲಿ ನೋಡು.

ವದು. ನೋವು ಮತ್ತೂ ಉಳದರೆ, ಮೂರನೇ ಸರ್ತಿಗೂ ಕೊಡ ಬಹುದು. ಇದಲ್ಲದೆ ನೋವಿರುವ ಜಾಗದಲ್ಲಿ ಬಾಹ್ಯಚಿಕಿತ್ಸೆಯಾಗಿ ಬಿಸಿ ನೀರಿನ ಶೇಕ (೧೦೯) ಆಗಲಿ, ಟರ್ಪೆಂಟೈನ್ ಎಣ್ಣೆಯ ನೀರ್ಗಾವು (೨೪) ಆಗಲಿ ಕೊಟ್ಟು, ಸಾಲದಿದ್ದರೆ ಸಾಸಿವೆಯ ಪ್ರೋಲ್ಟಿಸು (೬೨) ಸಹ ಹಾಕ ಬಹುದು. ನೋವು ಸ್ವಲ್ಪ ಶಾಂತವಾಗುತ್ತಲೆ ಒಂದಿಷ್ಟು ಹರಳೆಣ್ಣೆ ಕೊಡುವದು ಒಳ್ಳೇದು: ಮುಖ್ಯವಾಗಿ ತಿಂದ ಆಹಾರದಲ್ಲಿ ಹಸಿಯಾದ ಇಲ್ಲವೆ ಅಜೀರ್ಣಕರವಾದ ಪದಾರ್ಥವೇನಾದರೂ ಉಂಟೆಂಬ ಶಂಕೆಗೆ ಕಾರಣವಿದ್ದರೆ, ಈ ಪ್ರಕಾರ ಭೇದಿ ಕೊಡುವದು ತಕ್ಕದ್ದು.

೧೩೨. ವಾಂತಿಭೇದಿ, ಉದರಶೂಲೆ, ಕರಳುಗಳ ಶಳವು, ಇಂಥಾದ್ದರಲ್ಲಿ ಕಿರಿಹೊಟ್ಟೆಗೆ ಸಾಸಿವೆಯ ಒತ್ತಡ ಹಾಕಿದರೆ, ಬೇಗ ತಕ್ಕಷ್ಟು ಉಪಶಮನವಾಗುತ್ತದೆ. ವಾಂತಿಯನ್ನೂ ನಿಲ್ಲಿಸುವ ಗುಣ ಅದಕ್ಕೆ ಉಂಟು. ವಾಂತಿಭೇದಿಯಲ್ಲಿ ಗುಂಡಿಗೆ ಮೇಲಾಗಲಿ, ಎದೆಯ ಎಡ ಭಾಗದ ಮೇಲಾಗಲಿ ಇದರ ಒತ್ತಡವನ್ನು ಹಾಕ ....

೧೩೩. ಕರ್ಪೂರತೈಲದಿಂದ (ಅಂದರೆ ಟರ್ಪೆಂಟೈನ್ ಎಣ್ಣೆಯು) ಒಂದು ಔನ್ಸಿಗೆ ೧೫ ಔನ್ಸ್ ಗಂಜಿ ನೀರು ಕೂಡಿಸಿ, ಈ ಮಿಶ್ರದಿಂದ ಪಿಚಿಕಾರಿ ಹೊಡಿಯುವದು ಅನೇಕ ರೋಗಗಳಲ್ಲಿ, ಮುಖ್ಯವಾಗಿ ಅನಾರ್ರಿಬೇನೆ[1], ಮರವು, ಕಂಪನ (ಅಂದರೆ ವಿಶೇಷವಾಗಿ ಬಾಳಂತಿಗಳದು), ಹಲವಿಳಿದು ಉಂಟಾದ ದೀರ್ಘ ಕಾಲದ ರಕ್ತಸ್ರಾವ, ಸೂತಿಕಸನ್ನಿ, ಎಳವುನೋವುಳ್ಳ ಕರಳುವ್ಯಾಧಿ, ಅಂತರ್ವಮಿ, ಅಜೀರ್ಣಸಂಬಂಧ ಉದರಶೂಲೆ ಮುಂತಾದ್ದರಲ್ಲಿ ಬಹಳ ಗುಣವುಳ್ಳದ್ದು. ಕರ್ಪೂರತೈಲದ ಪಿಚಿಕಾರಿಯೂ ನೀರ್ಗಾವೂ ಕೂಡಾ ಶರೀರಕ್ಕೆ ಉತ್ತೇಜನ ಕೊಡುವದಲ್ಲದೆ ಅಡಲಭ್ರಮಣೆಯಲ್ಲಿಯೂ, ಜ್ವರದಿಂದಾದ ಅಶಕ್ತಿಯಲ್ಲಿಯೂ ಚೇತನ ಕೊಡುವಂಥಾದ್ದಾಗಿರುತ್ತದೆ.

೧೩೪. ಕರುಳುಗಳ ಅಕ್ರಮದ ದೆಶೆಯಿಂದ ಮಲಬದ್ಧತೆ ಆಗಲಿ ಭೇದಿ ಆಗಲಿ, ಒಂದರ ಮೇಲೊಂದು ಉಂಟಾದರೆ, ಬೇಲದ ಹಣ್ಣಿನ ಪಾನಕವನ್ನು (೧೨ನೇ ಅಂಕೆಯಲ್ಲಿ ಹೇಳಿದ ಪ್ರಕಾರ) ಮಾಡಿ ಕೊಟ್ಟಲ್ಲಿ ಕರುಳುಗಳ ವೃತ್ತಿಗಳನ್ನು ಕ್ರಮ ಪಡಿಸುವದು. ಪರಂತು ವಿಶೇಷ ಅಶಕ್ತಿ ಇದ್ದು, ಜೀರ್ಣಬಲ ಕುಂದಿ, ಹೊಟ್ಟೆಯಲ್ಲಿ ಕಲಕಲು ಸಹ ಇದ್ದರೆ, ಈ ಪಾನಕ ಹಿತವಾಗಲಿಕ್ಕಿಲ್ಲ; ತೇಗು, ಬಿಕ್ಕು ಮುಂತಾದ್ದು ಬರುತ್ತಿರುವದಕ್ಕೆ ಕಾರಣವಾದೀತು. ಹೀಗಾಗುವ ಪಕ್ಷಕ್ಕೆ, ಪಾನಕವನ್ನು ಕಡಿಮೆ ಪರಿಮಾಣದಲ್ಲಿ ತೆಗದು ಕೊಂಡು, ಇಲ್ಲವೆ ಬೆಳಿಗಿನ ಬದಲಾಗಿ ರಾತ್ರೆ ಮಲಗುವಾಗ ತೆಕ್ಕೊಂಡು ನೋಡ ಬಹುದು.

೧೩೫. ಮಕ್ಕಳ ಕರುಳುಗಳ ಅಕ್ರಮದಿಂದ ಮಲಶೋಧನೆ ಸಮ ಇಲ್ಲದಿದ್ದರೆ, ಕಿರಿಯಾತಿನ ಹಸಿ ಎಲೆಗಳನ್ನು ಗಿಡದಿಂದ ಆಗಲೇ ತೆಗದು ಕಷಾಯ ಮಾಡಿ ಕೊಡುವದು ಒಳ್ಳೇದಂತೆ. ಹ್ಯಾಗಂದರೆ: ೨½ ಔನ್ಸ್ ಎಲೆಗಳನ್ನು ಒಂದುವರೆ ಪ್ಯಾಂಟ್ ನೀ

---

[1] ಇದರ ಚಿಕಿತ್ಸೆಯ ವಿವರ ೧೮೭೭ನೇ ಇಸವಿಯ ಪಂಚಾಂಗದ ೨೨-೨೫ನೇ ಪಾನುಗಳಲ್ಲಿ ನೋಡು.

ರಿನಲ್ಲಿ ಬೇಯಿಸಲಿಕ್ಕೆ ಇಟ್ಟು, ೬ ಔನ್ಸ್‌ಗಳು ಆಗುವ ವರೆಗೆ ಬತ್ತಿಸುವದು. ಇದರಿಂದ ೨ ಯಾ ೩ ತಾಸಿಗೆ ಒಮ್ಮೆ ಒಂದು ಔನ್ಸ್ ಪ್ರಕಾರ ಕೊಡುವದು. ಬೇಕಾದರೆ, ಈ ಕಷಾಯವನ್ನು ಬೇರೆ ಸಮಾನ ಗುಣವುಳ್ಳ ಔಷಧಗಳ ಸಂಗಡಲೂ ಕೊಡ ಬಹುದು.

ಕಟಿಶೂಲೆ, ಕಟಿಸ್ತಂಭವಾತ, (ನಡುವಾಯು, ಸೊಂಟವಾತ)

Lumbago, Pain in the Loins.

ಅಂದರೆ ಸೊಂಟದ ಒಂದು ಯಾ ಉಭಯ ಕಡೆಯಲ್ಲಿ ಬೆನ್ನಿನ ನರಗಳಿಗೆ (ಸ್ನಾಯುವಿಗೆ) ವಾತ (ಕಟಿವಾತ) ಹಿಡಿದು, ಸಿಡಿದು, ನೋಯುವದು. ಈ ನೋವು ಬೆನ್ನಿನ ಚಲನೆಯಿಂದ ಹೆಚ್ಚಾಗುತ್ತದೆ.

ಚಿಕಿತ್ಸೆ: ನವಸಾಗರ[1] (೧೩೬) ಹೊಟ್ಟೆಯಲ್ಲಿ ಕೊಟ್ಟು, ಹೊರಗೆ ಕರ್ಪೂರದ ಮುಲಾಮು (೧೧೯)[2], ಮಜ್ಜಿಗೆಹುಲ್ಲಿನ ಎಣ್ಣೆ (೧೨೧)[3], ಅಫೀಮು (೫, ೧೨೦)[4], ಉಮ್ಮತ್ತದ ಮುಲಾಮು (೧೩೭) ಇಲ್ಲವೆ ಒತ್ತಡ, ಇಲ್ಲವೆ ಟರ್ಪೆಂಟೈನ್ ತೈಲದ ಲೇಪ (೧೨೨)[5] ಸಹ ಹಚ್ಚಿ ಗುಣವಾಗುವದು. ಆದರೆ ನೋವು ಬಿಡದೆ ಕಠಿಣವಾಗಿ ಇದ್ದ ಪಕ್ಷಕ್ಕೆ, (೨೪ನೇ[6] ಅಂಕೆಯಲ್ಲಿ ಹೇಳಿದ ಪ್ರಕಾರ) ಟರ್ಪೆಂಟೈನ್ ತೈಲದ ನೀರ್ಗಾವು ಕೊಟ್ಟು ನೋಡ ಬಹುದು.

೧೩೬. ಹರಿವಾತ, ಶ್ರೋಣಿತವಾತ, ಮುಖವಾತ, ಇವುಗಳಲ್ಲಿ ನವಸಾಗರವು ಪ್ರಯೋಗವಾಗುವದುಂಟು. ೨ ದ್ರಮ್ ನವಸಾಗರವನ್ನು ೬ ಔನ್ಸ್ ನೀರಿನಲ್ಲಿ ಹಾಕಿ ಕಲಕಿಸಿ, ಸಾರಿಗೆ ೧½ ಔನ್ಸ್ ಪ್ರಕಾರ ೪ ತಾಸಿಗೆ ಒಮ್ಮೆ, ಗುಣ ತೋರುವ ವರೆಗೆ, ತೆಗದು ಕೊಳ್ಳುವದು. ಈ ಪ್ರಕಾರ ೪ ಸಾರಿ ತೆಕ್ಕೊಳ್ಳುವಷ್ಟರಲ್ಲಿ ಗುಣ ಕಾಣದಿದ್ದರೆ, ಆ ಮೇಲೆ ತೆಕ್ಕೊಂಡು ಪ್ರಯೋಜನವಿಲ್ಲ. ಬೇರೆ ವಿಧದ ಹರಿವಾತಕ್ಕೂ ಸೊಂಟನೋವಿಗೂ ಪ್ರಾರಂಭದಲ್ಲಿ ನವಸಾಗರ ಕೊಟ್ಟು ಗುಣವಾದದ್ದು ಉಂಟು.

೧೩೭. ಉಮ್ಮತ್ತವನ್ನು ಬಾಹ್ಯಚಿಕಿತ್ಸೆಯಾಗಿ ವಾತ, ಗಂಟುಬಾವು, ಕಟಿವಾತ, ನೋವುಳ್ಳ ಬಾವು ಮುಂತಾದ್ದಕ್ಕೆ ನೋವು ನಿವಾರಕ ಔಷಧವಾಗಿ ಪ್ರಯೋಗಿಸುತ್ತಾರೆ. ಈ ಪ್ರಯೋಗವು ೪ ವಿಧ ಉಂಟು: ಒಂದನೇದು ಪೋಲ್ಟಿಸು ಯಾನೆ ಒತ್ತಡ (ಇದು ೬ನೇ ಅಂಕೆಯಲ್ಲಿ ವಿವರಿಸಿ ಅದೆ). ೨ನೇ ಲೇಪ: ಕೆಲವು ಉಮ್ಮತ್ತ

---

[1] ೧೮೭೬ನೇ ಇಸವಿಯ ಪಂಚಾಂಗದ ೨೧ನೇ ಪಾನಿನಲ್ಲಿರುವ ೫೩ನೇ ಅಂಕೆಯ ಟಿಪ್ಪಣಿಯನ್ನು ನೋಡು.

[2] ಕಳೆದ ವರ್ಷದ ಪಂಚಾಂಗದ ೪೬ನೇ ಪಾನಿನಲ್ಲಿ ನೋಡು.

[3] ಅದೇ ಪಂಚಾಂಗದ ೪೮ನೇ ಪಾನಿನಲ್ಲಿರುವ ಟಿಪ್ಪಣಿಯನ್ನು ನೋಡು.

[4] ೧೨೦ನೇ ಅಂಕೆಯನ್ನು ಕಳೆದ ವರ್ಷದ ಪಂಚಾಂಗದ ೪೬ನೇ ಪಾನಿನಲ್ಲಿಯೂ, ೫ನೇ ಅಂಕೆಯನ್ನು ೧೮೭೬ನೇ ವರ್ಷದ ೨೫ನೇ ಪಾನಿನಲ್ಲಿಯೂ ನೋಡು.

[5] ಕಳೆದ ವರ್ಷದ ಪಂಚಾಂಗದ ೪೮ನೇ ಪಾನಿನಲ್ಲಿ ನೋಡು.

[6] ೧೮೭೬ನೇ ಇಸವಿಯ ಪಂಚಾಂಗದ ೩೨ನೇ ಪಾನಿನಲ್ಲಿ ನೋಡು.

ದ ಹಸಿ ಎಲೆಗಳನ್ನು ಸಾರಾಯಿಯಲ್ಲಿ ಇಲ್ಲವೆ ಇತರ ದ್ರಾವಕದಲ್ಲಿ ತೋಯಿಸ ಹಾಕಿ, ಚನ್ನಾಗಿ ನೆನೆದ ಮೇಲೆ ನೋವುಳ್ಳ ಜಾಗಕ್ಕೆ ಹಚ್ಚಿ, ಒಂದು ವಸ್ತ್ರದಿಂದ ಬಿಗಿಯಾಗಿ ಕಟ್ಟುವದು. ೩ನೇ ಶೇಕ: ಒಂದು ಔನ್ಸ್ ಉನ್ಮತ್ತದ ಎಲೆಗಳನ್ನು ಒಂದು ಪ್ಯಾಂಟ್ ಕುದಿಯುವ ನೀರಿನಲ್ಲಿ ಹಾಕಿಟ್ಟು ತೆಗೆದ ಕಲ್ಕದಿಂದ (೧೦೯ನೇ ಅಂಕೆಯಲ್ಲಿ ಹೇಳಿದ ಪ್ರಕಾರ) ಶೇಕ ಕೊಡುವದು. ೪ನೇ ತೈಲ: ಗುದ್ದಿ ಹುಡಿ ಮಾಡಿದ ಒಂದು ಔನ್ಸ್ ಉನ್ಮತ್ತದ ಬೀಜಗಳನ್ನು ಒಂದು ಪ್ಯಾಂಟ್ ಎಳ್ಳೆಣ್ಣೆ ಇಲ್ಲವೆ ಬೇರೆ ಒಳ್ಳೇ ಎಣ್ಣೆಯಲ್ಲಿ ಹಾಕಿ, ೭ ದಿವಸಗಳ ವರೆಗೆ ಮುಚ್ಚಿಟ್ಟು, ಅನಂತರ ಗಾಳಿಸಿ ತೆಗದು, ಆ ಎಣ್ಣೆಯನ್ನು ನೋವುಳ್ಳ ಜಾಗಕ್ಕೆ ಹಚ್ಚುವದು. ಇವುಗಳಲ್ಲಿ ಯಾವದಾದರೂ ಪ್ರಯೋಗಿಸಿದರಿಂದ ಹರಿವಾತದ ಸಂಬಂಧವಾದ ಮುಖವೇದನೆ ಸಹ ನಿವಾರಣೆಯಾಗುವದು. ಮೇಲೆ ಹೇಳಿದ ತೈಲವಾದರೆ, ಅದನ್ನು ನೋವುಳ್ಳ ಜಾಗಕ್ಕೆ ಹಚ್ಚಿ ಚನ್ನಾಗಿ ತಿಕ್ಕ ಬೇಕು.

ಕಟ್ಯಧೋಭಾಗದ ವಾತ (ತೊಡೆಸಂದಿನ ನೋವು, ಸೊಂಟದ ಹಿಂಭಾಗದ ನೋವು) Sciatica

ಅಂದರೆ ಟೊಂಕದ ಸಂದಿನ ಹಿಂಭಾಗದಲ್ಲಿ ನೋವು ಉಂಟಾಗಿ, ಬಹುಶಾ ಕುಂಡೆಯಿಂದ ಮೊಣಕಾಲು ವರೆಗೂ, ಪಾದದ ಅಡಿ ವರೆಗೂ, ನೋವು ಇಳಿದು ಬರುವದು. ಇದರಿಂದ ಜೋಮಿನಂತಾಗಿ, ಆ ಅಂಗದ ಚಲನೆಯು ಅಭ್ಯಂತರವಾಗಿ, ಶಟಕೊಂಡು, ಬಿರುಸಾಗಿ, ಒಂದೊಂದು ಸಾರಿ ಆ ಅಂಗವೇ ಕ್ಷೀಣವಾಗಿ ಬರುವದು. ಈ ರೋಗವು ಅನ್ನಕೋಶದ ಅಕ್ರಮದ ದೆಶೆಯಿಂದ ತೊಡಗುವದು; ಉದ್ವೇಗ ಅಥವಾ ದಣು ಆಗಲಾಗಿಯೂ ಬರುತ್ತದೆ. ಇದು ಉಂಟಾಗಲಿಕ್ಕೆ ಹರಿವಾತ (neuralgia) ಇಲ್ಲವೆ ಶ್ರೋಣಿತವಾತ (rheumatism) ಕಾರಣವಾಗಿರುವದು. ನೋವು ಬಹುಶಾ ಕಠಿಣವೂ ಅಸಹನವೂ ಆಗಿ, ದೀರ್ಘ ಕಾಲದ ವರೆಗೆ ಇರುತ್ತದೆ.

ಚಿಕಿತ್ಸೆ: ನೋವುಳ್ಳ ಇಡೀ ಮೈಭಾಗವನ್ನು ನೆನೆವಸ್ತ್ರದಿಂದ ಸುತ್ತುವದು (೧೩೮) ಬೇರೆ ಚಿಕಿತ್ಸೆ ನಡಿಯದೆ ಹೋದರೂ, ಒಳ್ಳೇ ಫಲಕರವಾಗಿರುವದು. ಇದಲ್ಲದೆ ದಿನಕ್ಕೆ ಮೂರಾವರ್ತಿ ೫ರಿಂದ ೮ ಗ್ರೇನ್ ವರೆಗೆ "ಕೊಯ್ನಿನ್" (Quinine) ಎಂಬ ಶಿಂಕೋನದ ಹುಡಿ ಹೊಟ್ಟೆಯಲ್ಲಿ ಕೊಡುವದು.

೧೩೮. ಒದ್ದೆ ವಸ್ತ್ರ ಕಟ್ಟುವ ಕ್ರಮ ಹ್ಯಾಗಂದರೆ: ರೋಗಿಗೆ ನೋವು ಇರುವ ಭಾಗವನ್ನು ವಸ್ತ್ರ ತೆಗದು ಬರಿದು ಮಾಡಿ, ಅದಕ್ಕೆ ಒದ್ದೆ ಮಾಡಿದ ಒಂದು ದಪ್ಪ ವಸ್ತ್ರವನ್ನು ಸುತ್ತಿ, ಅದರ ಮೇಲೆ ಒಂದು ಕಂಬಳಿ ಮುಚ್ಚ ಬೇಕು.

ಕಣಗಲಗಡ್ಡೆಯ ವಿಷಕ್ಕೆ Poisoning by Cassava Root.

೧೩೯. ಇದಕ್ಕೆ ನಿಂಬೆ ರಸ ಕೊಡ ಬೇಕು. ಜಾಫಲದ ಬೀಜ, ಹರಳ ಬೀಜ, ಬೆಟ್ಟದ ಹರಳು, ಹಸಿ ಕಣಗಲಗಡ್ಡೆ, ಇಂಥಾದ್ದನ್ನು ತಿಂದದರಿಂದ ವಿಷವೇರಿ ಉಂಟಾ

ಗುವ ವಾಂತಿಯನ್ನೂ ಬೇದಿಯನ್ನೂ ಕ್ಷಣದಲ್ಲಿ ನಿಲ್ಲಿಸುವದಕ್ಕೆ, ೪ ಯಾ ೫ ಔನ್ಸ್ ನಿಂಬೆ ರಸ ತೆಗದು, ಅದಕ್ಕೆ ಅಷ್ಟೇ ಗಂಜಿ ನೀರಾಗಲಿ, ಬರೇ ನೀರಾಗಲಿ ಕೂಡಿಸಿ ಕುಡಿಸುವದು. ಇದು ಸುಲಭವಾಗಿ ಒದಗುವಂಥಾದ್ದಾಗಿ, ವಿಷಹರವಾಗಿರುವದರಿಂದ ಇಂಥಾ ಸಂಗತಿಯಲ್ಲಿ ತಟ್ಟನೆ ಕೊಡಲಾಗಿ ತತ್ಕಾಲ ಗುಣ ಬರುವದು. ಆದರೆ ನಿಂಬೆ ರಸ ಕೊಟ್ಟ ತರುವಾಯ ಜುಲಾಬಿನ ಎಣ್ಣೆ ಕೊಡ ಬೇಕು.

ಕಣಜಹುಳ ಚುಚ್ಚಿದ್ದಕ್ಕೆ Stings of Wasps.

ಕಿವಿಹಾವು (ಶತಪದಿ), ಕಣಜಹುಳ ಮುಂತಾದ ವಿಷಜಂತುಗಳ ಕಡಿತಕ್ಕೆ ಇಲ್ಲವೆ ಚುಚ್ಚಿದಕ್ಕೆ ಸಾಧಾರಣ ಸಂಗತಿಯಲ್ಲಿ ಕೂಡಲೇ ಚುಚ್ಚಿದ ಘಾಯವನ್ನು ಬಾಯಿಯಿಂದ್ರ ಹೀರಿ ತೆಗದು, ಶಿರ್ಕವನ್ನಾಗಲಿ (೧೪೦), ಹೆಚ್ಚು ಉಪ್ಪು ಬೆರಸಿದ ನೀರನ್ನಾಗಲಿ ಹಚ್ಚುವದು. ಬಿಸಿ ಎಣ್ಣೆ ಹಚ್ಚುವದು ಬಹಳ ಒಳ್ಳೇದಂತೆ. (Ipecacuanha ಎಂಬ) ಕಿರುಮಂಜಿ ಸಮೀಪ ಇದ್ದರೆ, ಅದಕ್ಕೆ ಸ್ವಲ್ಪ ನೀರು ಕೂಡಿಸಿ, ದಪ್ಪ ಮಸಾಲೆಯಂತೆ ಮಾಡಿ, ಘಾಯಕ್ಕೆ ಹಚ್ಚುವದರಿಂದ ಕೂಡಲೇ ಬಹಳ ಉಪಶಮನವಾಗುವದಂತೆ. ಒಂದಿಷ್ಟು ಸಕ್ಕರೆಯಾಗಲಿ, ಬೆಲ್ಲವಾಗಲಿ, ಕಣಜಹುಳ ಚುಚ್ಚಿದ ಘಾಯಕ್ಕೆ ಗುಣಕರವಾಗಿ ಹಚ್ಚುತ್ತಾರೆ. ವಿಷದ ಕುರುಹುಗಳು ಅತಿಶಯವಿದ್ದರೆ, (ಇನ್ನು ಮುಂದೆ ಬರುವಂಥಾ ಸರ್ಪವಿಷದ ಚಿಕಿತ್ಸೆಯಲ್ಲಿ ಹೇಳಲಿರುವ) ನವಸಾಗರದ ದ್ರವ (Liquor Ammoniac) ವನ್ನು ಹಚ್ಚುವದು.

೧೪೦. ಚೇಳು, ಕಿವಿಹಾವು, ಕಣಜಹುಳ, ಸೊಳ್ಳೆ ಮುಂತಾದ ಜಂತುಗಳ ಕಡಿತದಿಂದ ಯಾ ಚುಚ್ಚಿದರಿಂದ ಉಂಟಾಗುವ ನೋವು, ಶಿರ್ಕದಲ್ಲಿ ಒಂದು ವಸ್ತ್ರದ ಚಿಂದಿ ಮುಳುಗಿಸಿ ಘಾಯಕ್ಕೆ ಹಚ್ಚುತ್ತಾ ಇದ್ದದರಿಂದ, ಬೇಗ ಶಾಂತವಾಗುತ್ತದೆ.

ಕಣ್ಣುಕತ್ತಲೆ ಬರುವದು, ಬವಳಿ ಬರುವದು, ಮೈಸೊಕ್ಕು Fainting.

ಮೂರ್ಛೆಯು ಅರೆಮರವಾಗಿ ಆದರೂ, ಪೂರಾ ಬೋಧ ತಪ್ಪಿ ಆದರೂ, ಕರಣಗಳ ಇಲ್ಲವೆ ನರಗಳ ಸಂಬಂಧವಾದ ಕ್ರಮಭಂಗವನ್ನು ಸೂಚಿಸುತ್ತದಲ್ಲದೆ, ಅದು ತಾನೇ ಒಂದು ರೋಗವಲ್ಲ; ಆದರೆ ರಕ್ತಚಲನೆ ಸುಸ್ತಿಯಾದ್ದಾಗಲಿ, ಮನಸ್ಸು ಇಲ್ಲವೆ ಕಲ್ಪನಾಶಕ್ತಿ ವಿಶೇಷ ಮೃದುತ್ವ (sensitiveness) ವಾದ್ದಾಗಲಿ, ತೋರಿಸುತ್ತದೆ.

ಲಕ್ಷಣಗಳು: ಬವಳಿಯು ಬಹು ಸಂಕಟದೊಡನೆ ತೊಡಗುತ್ತದೆ; ದೃಷ್ಟಿಮಾಂದ್ಯ, ಕಿವಿಗೆ ಝೋಂಕಾರ ಕೇಳಿಸೋಣ, ಮುಖವೂ ತುಟಿಗಳೂ ನೀಲ ಛಾಯವಾಗೋಣ, ಮೈಯೆಲ್ಲಾ ತಣಿದು ಬೆವರುವದು; ಸ್ಮರಣ ತಪ್ಪಿ, ಕೈಕಾಲುಗಳು ಶಿಥಿಲವಾಗಿ ಸಡ್ಲಿಸಿ, ರೋಗಿಯು ಪರವಶನಾಗಿ ಬೀಳುತ್ತಾನೆ.

ಚಿಕಿತ್ಸೆ: ಸ್ಮೃತಿ ಬರುವ ಹಾಗೆ ಮುಖಕ್ಕೂ ಕಣ್ಣಿಗೂ ತಣ್ಣೀರು (೧೪೧) ಹೊಡಿಯ ಬೇಕು. ಮತ್ತು ಮೂಗಿಗೆ ತೀವ್ರ ಲವಣ ಮೂಸಿಸ ಬೇಕು. ಸುಮಾರು ಎಚ್ಚರ

ವಾಗುತ್ತಲೇ ಓಮದ ನೀರು (೧೫) ಇಲ್ಲವೆ ಹಿಂಗು (೧೨೪) ಕೊಡುವದು; ಅಥವಾ ಬಹಳ ನಿತ್ರಾಣವಿದ್ದ ಪಕ್ಷಕ್ಕೆ “ಬ್ರೇಂಡಿ ಮಿಶ್ರ”[1] ಮಾಡಿ ಕೊಡುವದು.

೧೪೧. ಪೂರ್ಣ ಸ್ವಯ ತಪ್ಪಿದ್ದಕ್ಕೆ ತಣ್ಣೀರು ಎರೆಯುವ ಕ್ರಮ ಹಿಂದೆ ೫೮ನೇ ಅಂಕೆಯಲ್ಲಿ ಹೇಳಿರುತ್ತದೆ. ಆದರೆ ಸಾಧಾರಣ ಮೂರ್ಛೆಯಲ್ಲಿ, ಅಥವಾ ಅನ್ಯಥಾ ಕಾರಣವಿಲ್ಲದೆ ಪ್ರಾಯಪ್ರಬುದ್ಧರಿಗೆ ಉಂಟಾಗುವ ಬವಳಿ, ಸ್ತ್ರೀಯರ ಸೂತಿಕಾವಾಯು, ಇಂಥಾದರಲ್ಲಿ ತಣ್ಣೀರು ಮುಖಕ್ಕೂ ಎದೆಗೂ ಬೀಸಿ ಹೊಯಿದರೆ ಸಾಕು, ಉತಾರಾಗಿ ಸ್ಮೃತಿ ಬರುವದು.

ಕಣ್ಣಿನ ವ್ಯಾಧಿ (ಉರಿಗಣ್ಣು, ಕಣ್ಣುಬೇನೆ) Affections of Eyes.

ಕಣ್ಣುರೆಪ್ಪೆಗೂ ಕಣ್ಣುಗುಡ್ಡಿಗೂ ಆಗುವ ರೋಗ ಹಲವು ವಿಧ ಉಂಟು. ಉರಿಗಣ್ಣು, ಕೆಂಕಣ್ಣು, ಪಿರಿಗಣ್ಣು ಮುಂತಾದವುಗಳವೆ. ಸಾಮಾನ್ಯವಾಗಿ ಕಣ್ಣುರೋಗದ ಲಕ್ಷಣವು: ಪ್ರಥಮತಃ ಕಣ್ಣಿನಲ್ಲಿ ಹೊಯಿಗೆ ಬಿದ್ದಂತಾಗಿ, ಕಣ್ಣುಗುಡ್ಡಿನಲ್ಲಿ ಉರಿಯಾಗಿ ಕೆಂಪಗಾಗಿ ಸುತ್ತು ಬೀಗುವದು; ಅದಲ್ಲದೆ ಚುಚ್ಚುವ ನೋವು, ಬೆಳಕು ನೋಡಲಿಕ್ಕಾಗದ ದೃಷ್ಟಿಮಾಂದ್ಯ, ಕಣ್ಣುಕುರು (ಕಣ್ಣುಕುಟಿ) ಅಂದರೆ ರೆಪ್ಪೆಗಳ ಮೇಲೆ ಗುಳ್ಳೆಯಾಗಲೀ ಪರೆಯಾಗಲೀ ಏಳುವದು; ಕಣ್ಣು ಘಾಳಿಗೆ ತೆರದರೆ, ಇಲ್ಲವೆ ಸಂಜೆಯಾಗುತ್ತಾ ವೇದನೆ ಹೆಚ್ಚುವದು; ಮಲಗಿದಾಗ ರೆಪ್ಪೆಗಳಿಗೆ ಪಿಸರು (ಪಿಚ್ಚು) ಹಿಡಿದು, ಬೆಳಿಗ್ಯೆ ಏಳುವಾಗ ತೆರಿಯಲಿಕ್ಕಾಗದೆ ಮೆತ್ತಿಕೊಳ್ಳುವದು.

ಚಿಕಿತ್ಸೆ: ಈ ಊರಿನವರಿಗಾಗುವ ಅರಿಗಣ್ಣಿಗೆ (ಕಣ್ಣುಬೇನೆಗೆ) ಪಟಿಕಾರದ ನೀರು (೧೪೨) ಹಾಕುವದು, ಮತ್ತು ಅರಶಿನದ ಕಷಾಯದಿಂದ (೧೪೩) ತೊಳಿಯುವದು, ಇವೆರಡರಿಂದ ಗುಣವಾಗುವದು.—ಕಣ್ಣುಪಿಸರು ಹೋಗುವ ಇತರ ಕಣ್ಣುವ್ಯಾಧಿಗಾದರೆ, ಮೈಲತುತ್ತು (೧೪೪) ಪ್ರಯೋಗಿಸಿ ನೋಡ ಬಹುದು. ಕಣ್ಣೊಳಗಿನ ಉರಿ ಶಮನವಾದಾಗ್ಯೂ, ಕಣ್ಣುರೆಪ್ಪೆ ಕೆಂಪಾಗಿ, ಅದಕ್ಕೆ ಬೀಗೂ ನೋವೂ ಇದ್ದರೆ, ಕೆಲೊಮೆಲ್[2] (Calomel Ointment) ಎಂಬ ರಸಕರ್ಪೂರದ ಮುಲಾಮು (೧೪೫) ಬಹಳ ಗುಣ ಕೊಡುವದು. ಗರಿತುದಿಯಿಂದ ಸ್ವಲ್ಪ ಮುಲಾಮು ತೆಗದು, ಮಲಗುವಾಗ ಕಣ್ಣುರೆಪ್ಪೆಗೆ ಹಚ್ಚುವದು. ವಿಶೇಷ ಕಣ್ಣೊತ್ತು ಇದ್ದು, ಬೆಳಕಿಗೆ ಕಣ್ಣು ಬಿಡಲಾರದಿದ್ದರೆ, ಅಫೀಮಿನ ನೀರಿನ (೧೪೬) ಹೊಗೆ ಕೊಟ್ಟರೆ ಶಮನವಾಗುವದು.—ಕಣ್ಣಿಗೆ ಪೆಟ್ಟು ತಾಗಿ ಬಾತು ಹೋದರೆ, ಪಟಿಕಾರದ (ಪೋಲ್ಟಿಸು) ಒತ್ತಡ (೧೪೭) ಹಾಕಿ, ನವಸಾಗರದ ನೀರಿನಿಂದ (೧೧೭) ತೊಳಿಯುವದರಿಂದ ಪೆಟ್ಟಿನ ತಗಲು ಕಳೆಯುವದು.—ಸುಣ್ಣದ ರವೆಗಳು ಕಣ್ಣಿನೊಳಗೆ ಬಿದ್ದವಾದರೆ, ಶಿರ್ಕದ ನೀರು (೧೪೮)

---

[1] ಇದು ಮಾಡುವ ಕ್ರಮವು ೧೮೭೭ನೇ ಪಂಚಾಂಗದ ೧೭ನೇ ಪಾನಿನಲ್ಲಿ ಕೊಟ್ಟಿರುತ್ತದೆ.

[2] ಕೆಲೊಮೆಲ್ (Calomol) ಎಂಬದು ವಿಲಾಯಿತೀ ಔಷಧ ಮಾರುವ ಅಂಗಡಿಯಲ್ಲಿ ಸಿಗುತ್ತದೆ. ಇದೂ, ಗಂಧಸರಕಿನ ಅಂಗಡಿಯಲ್ಲಿ ಮಾರುವ ರಸಕರ್ಪೂರವೂ ಒಂದೇ ಧಾತುವಿನಿಂದ ಉಂಟಾಗಿರುವದರಿಂದ ಔಷಧಪ್ರಯೋಗದಲ್ಲಿ ಅವೆರಡಕ್ಕೂ ವಿಶೇಷ ಹೆಚ್ಚುಕಡಿಮೆ ಇರಲಿಕ್ಕಿಲ್ಲ.

ಹಾಕಿ, ಅವನ್ನು ಹೊರ ಹಾಕ ಬಹುದು.—ಕಣ್ಣಿನೊಳಗೆ ಬೇರೆ ಕಸ ಮುಂತಾದ್ದೇನಾದರೂ ಬಿದ್ದರೆ, ಅದನ್ನು ತೆಗಿಯುವದಕ್ಕೆ ಸುಲಭ ಉಪಾಯವೇನಂದರೆ: ಮೇಲಿನ ರೆಪ್ಪೆಯನ್ನು ಕೆಳಗಿನದರಲ್ಲಿ ಬೀಳುವಂತೆ ಕೂಡುವಷ್ಟು ಅಗಲ ತೆರೆದು, ಒಂದೆರಡು ಸಲ ಬೆರಳಿನಿಂದ ಸ್ವಲ್ಪ ಮಿಸುಗುವದರಿಂದ ಅದು ಹೊರ ಬೀಳುವದು. ಬೇರೇನು ನಡಿಯದ್ದಲ್ಲಿ ಈ ಉಪಾಯ ಬಹುಶಾ ಕೈಗೂಡಿಯದೆ.—ಸೂಚನೆ: ಈ ನೇತ್ರೇಂದ್ರಿಯದ ಯಾವ ಉಪದ್ರವದಲ್ಲಾದರೂ, ಬಾಳೆಯ ಎಳತೆಲೆಯನ್ನು (೧೪೯) ಕಣ್ಣಿಗೆ ಶೀತಳವಾದ ಮರೆಯಾಗಿ ಪ್ರಯೋಗಿಸ ಬಹುದು.

೧೪೨. ಹಿಂದುಸ್ಥಾನದಲ್ಲಿ ಜನರಿಗಾಗುವ ಕಣ್ಣುವ್ಯಾಧಿಗಳೊಳಗೆ ಅರಿಗಣ್ಣು (sore eyes) ಇಲ್ಲವೆ ಕೆಂಗಣ್ಣು ಎಂಬ ರೋಗವು, ವಿಶೇಷವಾಗಿ ಮಕ್ಕಳಿಗೆ ಉಂಟಾದಲ್ಲಿ ಪಟಿಕಾರದ ನೀರು ಪ್ರಯೋಜಕವಾಗಿರುವದು. ಮಕ್ಕಳಿಗಾದರೆ, ಒಂದು ಔನ್ಸ್ ನೀರಿನಲ್ಲಿ ೩ ಗ್ರೇನ್ ಪಟಿಕಾರ ಹಾಕಿ ಕಲಕಿಸಿದರೆ ಸಾಕು; ದೊಡ್ಡವರಿಗಾದರೆ, ಅದರ ಎರಡಷ್ಟು ಹಾಕಿ ಮಾಡುವದು. ಈ ನೀರಿನಿಂದ ಕಣ್ಣುಗಳನ್ನು ದಿನಕ್ಕೆ ನಾಲ್ಕುಯಿದಾವರ್ತಿ ಸಾಫಾಗಿ ತೊಳಿಯ ಬೇಕು; ಇಲ್ಲವೆ ಆ ನೀರಲ್ಲಿ ನೆನಿಸಿದ ಒಂದು ಮಡಿ ವಸ್ತ್ರದ ಚಿಂದಿಯನ್ನು ಕಣ್ಣುಗಳ ಮೇಲೆ ಯಾವಾಗಲೂ ಇಟ್ಟಿರ ಬೇಕು. ರೆಪ್ಪೆಗಳು ಬಹಳ ಉಬ್ಬಿದ್ದರೆ, ಮುಖ್ಯವಾಗಿ ಬೆಳಿಗಿನ ಹೊತ್ತಿನಲ್ಲಿ, ಬಿಸಿ ಹಾಲಿನಿಂದ ಕಣ್ಣುಗಳನ್ನು ತೊಳದು, ರೆಪ್ಪೆಗಳನ್ನು ಮೆಲ್ಲಗೆ ಬಿಡಿಸಿ, ಪಟಿಕಾರದ ನೀರನ್ನು ಅದರೊಳಗೆ ಬಿಡ ಬೇಕು. ಈ ಚಿಕಿತ್ಸೆಯಲ್ಲಿ ಊರಿನವರು ಮಾಡುವದಿನ್ನೊಂದು ಕ್ರಮ ಬಹಳ ಸಂಗತಿಗಳಲ್ಲಿ ಸಫಲವಾಗಿದೆ. ಆದರೆ ಅದರಿಂದ ಕಣ್ಣಿಗೆ ಸ್ವಲ್ಪ ಹೊತ್ತು ನೋವು ಉಂಟಾಗುತ್ತದೆ ಎಂಬದೊಂದೇ ಕೊರತೆ ಅದಕ್ಕಿರುತ್ತದಷ್ಟೆ. ಆ ಕ್ರಮ ಹ್ಯಾಗಂದರೆ:—ಕಾದು ಬಿಸಿ ಮಾಡಿದ ಒಂದು ಕಬ್ಬಿಣದ ತವೇ ಮೇಲೆ ಒಂದಿಷ್ಟು ಪಟಿಕಾರದ ಹುಡಿ ಹಾಕು; ಅದು ದ್ರವಿಸಿ ಕರಗುತ್ತಿರುವಷ್ಟರಲ್ಲಿ ಅದಕ್ಕೆ ಸ್ವಲ್ಪ ನಿಂಬೇ ರಸ ಕೂಡಿಸಿ, ಅವೆರಡನ್ನೂ ಕೂಡ ಮೆತ್ತಗಾದ ಕರಿಮುದ್ದೆ ಮಾಡ ಬೇಕು. ಕಾಡಿಗೆಯಂತಾಗುವ ಇದನ್ನು ಬಿಸಿ ಇರುವಾಗಲೇ ಕಣ್ಣಿಗೆ ಸುತ್ತಲೂ ಹಚ್ಚ ಬೇಕು, ಮಾತ್ರ ಅದು ರೆಪ್ಪೆಯೊಳಗೆ ಹೋಗದಂತೆ ಜಾಗ್ರತೆ ತೆಕ್ಕೊಳ್ಳ ಬೇಕು; ಯಾಕಂದರೆ ಅದು ಕಣ್ಣೊಳಗೆ ಶೇರಿದ್ದಾದರೆ, ಕಠಿಣ ಉರಿಯುವದು. ಹಚ್ಚಿದ್ದು ಒಂದೆರಡು ತಾಸು ವರೆಗೆ ಇರ ಬೇಕು. ಈ ಪ್ರಕಾರ ಒಂದೆರಡು ಸಲ ಹಚ್ಚುವಷ್ಟರಲ್ಲಿ ಸಾಧಾರಣ ಕೆಂಗಣ್ಣು ವಾಸಿಯಾಗಲಿಕ್ಕೆ ಸಾಕು.

೧೪೩. ನೆಗಡಿಯ ದೆಶೆಯಿಂದ ಇಲ್ಲವೆ ಪಿಸರು(ಕೀವು)ಳ್ಳ ಕಣ್ಣುವ್ಯಾಧಿಯಲ್ಲಿ ಮುಖ್ಯವಾಗಿ ಕೆಂಗಣ್ಣಿಗೆ ಅರಿಶಿನ ಗಡ್ಡೆ[1] ಕಷಾಯದಿಂದ ತೊಳಿಯುವದು. ಹ್ಯಾಗಂ

---

[1] *Engl:* Turmeric; ಹಿಂದು: ದಖ: ಹಲದಿ, ಹಲ್ದೀ; ಬಂಗಾಲಿ: ಹೋಲೋದೀ; ತಮ: ಮಂಜಲ್; ತೆಲು: ಪಸುಪು; ಮಲ: ಮಂಞಲ್, ಮರಿಞಲ್; ಮಹಾ: ಹಲದೀ; ಗುಜ: ಹಲದ್.—ಹುಳ ಹಿಡಿಯದಂಥಾ, ಗಟ್ಟಿಯಾದ ಗಡ್ಡೆಗಳನ್ನು ಔಷಧಕ್ಕೆ ಪ್ರಯೋಗಿಸ ಬೇಕು. ಕಷಾಯಕ್ಕಾದರೆ, ಬೇರೆ ನೀರಿನಿಂದ ಅದನ್ನು ಚನ್ನಾಗಿ ತೊಳದು, ಹಾಕ ಬೇಕು.

ದರೆ: ೨$\frac{೧}{೨}$ ತೊಲೆ ಅರಶಿನ ಗಡ್ಡೆಯನ್ನು ಜಜ್ಜಿ, ೨$\frac{೧}{೨}$ ಶೇರು ನೀರಿನಲ್ಲಿ ಹಾಕಿ ಕಷಾಯ ತೆಗಿಯುವದು. ಈ ಕಷಾಯದಿಂದ ಚನ್ನಾಗಿ ತೊಳದ್ದಾದರೆ, ಉರಿಯನ್ನೂ ಬೇರೆ ಚಿನ್ಹೆಗಳನ್ನೂ ನಿವಾರಿಸುವದು. ಅದಲ್ಲದೆ, ಒಂದು ಮಡಿ ವಸ್ತ್ರದ ಚಿಂದಿಯನ್ನು ಆ ಕಷಾಯದಲ್ಲಿ ನೆನಿಸಿ, ಕಣ್ಣಿನ ಮೇಲೆ ಯಾವಾಗಲೂ ಇಟ್ಟಿರ ಬೇಕು.

೧೪೪. ಮಕ್ಕಳ ಕಣ್ಣುವ್ಯಾಧಿಯಲ್ಲಿ, ಮುಖ್ಯವಾಗಿ ಬಹಳ ಪಿಸರು ನೀರು ಸುರಿಯುವಲ್ಲಿ, ೧ ಗ್ರೇನ್ ಮೈಲತುತ್ತನ್ನು ೧ ಔನ್ಸ್ ನೀರಿನಲ್ಲಿ ಕರಗಿಸಿ, ದಿನಕ್ಕೆ ಕೆಲವು ಸಾರಿ ಕಣ್ಣಿಗೆ ಹಾಕುವದು ಬಹುಶಾ ಪ್ರಯೋಜನಕರವಾಗಿರುವದು. ಕಠಿಣ ಸಂಗತಿಗಳಲ್ಲಿ ಅದರ ಪರಿಮಾಣ ದುಬಾರಿ ಮಾಡ ಬಹುದು; ಆದರೆ ವಿಶೇಷ ವೇದನೆಯಾಗುವಷ್ಟು ತೀವ್ರ ಮಾಡ ಬಾರದು.

೧೪೫. ಚರ್ಮವ್ಯಾಧಿಗಳಿಗೆ ಬಹಳ ಗುಣಕರವಾಗಿರುವಂಥಾ “ಕೆಲೊಮೆಲ್” (Calomel Ointment) ಎಂಬ ರಸಕರ್ಪೂರದ ಮುಲಾಮಿನ ವಿಷಯದಲ್ಲಿ ಪೆರಾಯ್ರ (Pereira) ಎಂಬ ಒಬ್ಬ ವೈದ್ಯಪಂಡಿತನು ಹೇಳುವದೇನಂದರೆ: ಚರ್ಮದ ಮೇಲೆ ಆಗುವ ರೋಗಗಳಿಗೆ ಅತ್ಯುಪಯೋಗವಾಗಿರುವಂಥಾ ಬಾಹ್ಯ ಔಷಧ ಯಾವದೆಂದು ಕೇಳಿದ್ದಾದರೆ, ತನಗೆ ಅನುಭವಸಿದ್ಧಾಂತವಾದದ್ದು ಇದೇ ಮುಲಾಮು ಎಂದು ಅನ್ನ ಬೇಕಾಗುತ್ತದೆ: ೧ ದ್ರಮ್ (=ಸುಮಾರು ೧$\frac{೧}{೪}$ ಪಾವಲಿತೂಕ) ಕೆಲೊಮೆಲ್ ಎಂಬ ರಸಕರ್ಪೂರವನ್ನು ಒಂದು ಔನ್ಸ್ ಹಂದಿ ತುಪ್ಪದ (lard) ಇಲ್ಲವೆ ತೆಂಗಿನ ಎಣ್ಣೆ ಸಂಗಡ ಚನ್ನಾಗಿ ಮರ್ಧಿಸಿ ಮುಲಾಮು ಮಾಡುವದು. ಈ ಮುಲಾಮು ಕಜ್ಜಿ ಮುಂತಾದ್ದಕ್ಕೂ ಮೇಹ ಸಂಬಂಧವಾದ ಕುರುಗಳಿಗೂ ಬಹಳ ಗುಣಕರವಾಗಿ ಹಚ್ಚ ಬಹುದು.

೧೪೬. ಕಣ್ಣುವ್ಯಾಧಿಯಲ್ಲಿ ಮುಖ್ಯವಾಗಿ, ಬೆಳಕು ನೋಡಲಿಕ್ಕೆ ಆಗದಿದ್ದರೆ, ಕಣ್ಣಿಗೆ ಅಫೀಮಿನ ನೀರಿನ ಹೊಗೆ ಕೊಡ ಬಹುದು. ಹ್ಯಾಗಂದರೆ, ಒಂದು ಕವಳಿಗೆಯಲ್ಲಿ ಕುದಿಯುವ ನೀರು ಹಾಕಿ, ಅದಕ್ಕೆ ಒಂದೆರಡು ಗ್ರೇನ್ ಅಫೀಮು ಆಗಲಿ, ಒಂದು ಚಾಸೌಟಿನಷ್ಟು ಲೊಡೆನಮ್ (Laudanum) ಎಂಬ ಅಫೀಮಿನ ಸತ್ವವಾಗಲಿ ಹಾಕಿ ಕಲಕಿಸಿ, ಕಣ್ಣಿಗೆ ಅದರ ಹೊಗೆ ಕೊಟ್ಟಲ್ಲಿ ವಿಶೇಷ ಗುಣ ಕಂಡು ಬಂದೀತು. ಅದಲ್ಲದೆ ಸದರಿ ಅಫೀಮಿನ ಸತ್ವ, ಶಿರ್ಕ, ಮತ್ತು ಬ್ರೇಂಡಿ (Brandy) ಎಂಬ ಸಾರಾಯಿ ಈ ಮೂರು ಸಮಾಂಶ ತೆಗದು, ಅದಕ್ಕೆ ನಾಲ್ಕು ಪಾಲು ನೀರು ಕೂಡಿಸಿ, ಆ ಮಿಶ್ರದಿಂದ ಕಣ್ಣು ತೊಳಿಯುವದು ಬಹಳ ಒಳ್ಳೇದು.

೧೪೭. ಕಣ್ಣಿಗೆ ಪೆಟ್ಟು ಬಿದ್ದು, ನೋವೂ ಉಷ್ಣತೆಯೂ ಉಂಟಾಗಿ, ಛಾಯಾ ಭೇದವೂ ಬೀಗೂ ಆದರೆ, ಪಟಿಕಾರದ ಪೋಲ್ಟಿಸು ಕಟ್ಟುವದರಿಂದ ಅವೆಲ್ಲಾ ಶಮನವಾಗುವವು. ಹ್ಯಾಗಂದರೆ: ೩೦ ಗ್ರೇನ್ (=ಸುಮಾರು ೭$\frac{೧}{೨}$ ಮಂಜೂಟಿ ತೂಕ) ಪಟಿಕಾರದ ಹುಡಿ ಒಂದು ಕೋಳಿಮೊಟ್ಟೆಯ ಬಿಳುಪಿನ ಸಂಗಡ ಹಾಕಿ ಚನ್ನಾಗಿ ಅರದು ಜಿಗಟಿನಂತೆ ಮಾಡುವದು. ಇದನ್ನು ತೆಳುವಾದ ಅರಿವೆ ತುಂಡಿಗೆ ಹಚ್ಚಿ ಕಣ್ಣಿಗೆ ಕಟ್ಟಿ, ಕೆಲವು ತಾಸುಗಳ ವರೆಗೆ ಇರಿಸುವದು.

೧೪೮. ಸುಣ್ಣದ ರವೆ ಕಣ್ಣಿನೊಳಗೆ ಬಿದ್ದು ಉರಿ ಉಂಟಾದರೆ, ಆದಕ್ಕೆ ನೀರು ಬೆರಸಿದ ಶಿರ್ಕವನ್ನು ಕಣ್ಣಿನ ರೆಪ್ಪೆಯೊಳಗೆ ಬಿಟ್ಟು ತೊಳಿಯುವದರಿಂದ ಸುಣ್ಣದ ರವೆ ಹೊರಡಿಸುವದಲ್ಲದೆ ಆದರ ದೆಸೆಯಿಂದ ಉಂಟಾದ ನೋವು ಸಹ ಶಮನವಾಗುವದು; ಮಾತ್ರ ಕಣ್ಣಿಗೆ ತೀವ್ರವಾಗಿ ಉರಿಯಾಗುವಷ್ಟು ಶಿರ್ಕ ಹಾಕ ಬಾರದು.

೧೪೯. ಹಸಿಯಾಗಿಯೂ ಎಳತಾಗಿಯೂ ಇರುವ ಬಾಳೆ ಎಲೆಯನ್ನು[1] ಉರಿಗಣ್ಣು ಮುಂತಾದ ಕಣ್ಣುವ್ಯಾಧಿಯಲ್ಲಿ ಕಣ್ಣಿಗೆ ತಂಪಾಗುವಂತೆ ಆಸರೆಯಾಗಿ ಪ್ರಯೋಗಿಸ ಬಹುದು. ಕೈಗಾರಿಕೆಯಿಂದ ಇದರಷ್ಟು ಉತ್ತಮ ಬೇರೆ ಮರೆ ಮಾಡಲಾಗುವದಿಲ್ಲ. ಇದಕ್ಕಾಗಿ ಎಳೆತೂ ಹಸಿಯೂ ಆದ ಎಲೆ ಶಿಕ್ಕಿದರೆ ಉತ್ತಮ.

ಕಪ್ಪೆಕೆಮ್ಮು, ನಾಯಿಕೆಮ್ಮು Hooping Cough.

ಇದು ವಿಶೇಷವಾಗಿ ಮಕ್ಕಳಿಗೆ ಬರುವ ಸೋಂಕುರೋಗವಾಗಿರುತ್ತದೆ. ಆದರೆ ಈ ಕೆಮ್ಮುವ್ಯಾಧಿ ಒಮ್ಮೆ ಉಂಟಾದರೆ, ಪುನಹಾ ಆಗಲಿಕ್ಕಿಲ್ಲಾ. ನಾಯಿಕೆಮ್ಮು ಮೊದಲು ಸಾಧಾರಣ ನೆಗಡಿ ಇಲ್ಲವೆ ಶೀತದಿಂದ ಶುರುವಾಗಿ, ಮೈಕಾದು, ಗಂಟ್ಲೊಡೆದು, ಕೆಮ್ಮು ಆಗ್ಯಾಗ್ಯೆ ಬರುವದಾಗುತ್ತದೆ. ಒಂದು ವಾರದೊಳಗೆ ಶೀತದ ಲಕ್ಷಣಗಳೂ ಜ್ವರವೂ ಕಾಣದೆ ಹೋಗಿ, ಕೆಮ್ಮು ಮಾತ್ರ ಪದೇ ಪದೇ ಬಂದು, ಅತಿ ದೀರ್ಘವೂ ಕಠಿಣವೂ ಆಗುತ್ತಾ, ಗಂಟ್ಲೊಳಗೂ ಎದೆಯೊಳಗೂ ಕಫ ವೃದ್ಧಿಯಾಗುವದು. ಒಂದೊಂದು ಸಾರಿ ಕೆಮ್ಮು ಬಂತಂದರೆ, ಮುಖ ಕೆಂಪಾಗಿ, ಉಸುರು ಕಟ್ಟಿ, ಶ್ವಾಸಕೋಶದೊಳಗಣ ಘಾಳಿ ಎಲ್ಲಾ ಊದಿ ಹೋಗಿ (ಅಂದರೆ ನಿಶ್ವಾಸವಾಗಿ), ಪುನಹಾ ಶ್ವಾಸ ತುಂಬುವಾಗ ಧ್ವನಿ ಆಗುವದು. ಈ ಪ್ರಕಾರ ಎರಡು ಮೂರು ತಾಸಿಗೊಮ್ಮೆ ಆಗುವದುಂಟು. ಕಠಿಣ ಸಂಗತಿಗಳಲ್ಲಿ ವಿಶೇಷವಾಗಿ ರಾತ್ರಿಕಾಲದಲ್ಲಿ, ಕೆಮ್ಮು ಹೆಚ್ಚುವದು; ಊಟವಾದ ಮೇಲೆ ಬಂದರೆ, ಉಂಡದ್ದೆಲ್ಲ ವಾಂತಿ ಮಾಡಿಸದ ಹೊರ್ತು ನಿಲ್ಲುವದಿಲ್ಲ. ಇಲ್ಲವಾದರೆ ಗಾಜಿನಂಥಾ ತೆಳುವಾದ ನೂಲು ತರದ ಕಫ ಎದ್ದು, ಕೆಮ್ಮು ತೀರುವದು. ಒಂದೊಂದು ಸಾರಿ ಒಂದು ಕಠಿಣ ಕೆಮ್ಮು ಬಂದರೆ, ಮೂಗಿನಿಂದಾಗಲಿ ಕಿವಿಯಿಂದಾಗಲಿ ಬಾಯಿಂದಾಗಲಿ ರಕ್ತ ಬರುವದು. ಮಕ್ಕಳಿಗೆ ಹಲ್ಲು ಬರುವ ವೇಳ್ಯದಲ್ಲಿ ಈ ಕೆಮ್ಮು ತೊಡಗಿದರೆ, ಬಾಲಗ್ರಹದ ಪೀಡೆ ಬಹುಶಾ ಉಂಟಾಗುವದು. ನಾಯಿ

---

[1] *Engl:* **Plantain or Banana tree**; ಹಿಂದು: ಕೇಲಕಾ ಪೇರ್; ದಖ; ಮೌಜಕಾ ಜಾಡ್; ಬಂಗಾ: ಕೇಲಗಾಛ್; ತಮು: ಕದಲಿ; ತೆಲು: ಕದಲಿ, ಅರತಿಚೆಟ್ಟು; ಮಲ: ವಾಟಿಮರಂ; ಮಹಾ: ಕೇಲಝಾಡ್; ಗುಜ: ಕೇಲನುಝಾಡ್.—ಬಾಳೆಗಿಡವು ಹಿಂದುಸ್ಥಾನದಲ್ಲೆಲ್ಲಾ ನಟ್ಟು, ಅದರ ಕಾಯಿಯೂ ಹಣ್ಣೂ ತಿನ್ನುವದಕ್ಕೂ, ಅದರ ಸಹಮೂಲವು ಬೇರೆ ಬೇರೆ ಪ್ರಯೋಜನಗಳಿಗೂ ಬರುವಂಥಾದ್ದಾಗಿರುತ್ತದೆ. ಇದರ ಎಲೆಯ ಪ್ರಯೋಜನವನ್ನು ಸೂಚಿಸುವದಕ್ಕೆ ಮಾತ್ರ ಇಲ್ಲಿ ಅದನ್ನು ಕುರಿತು ಬರದಿರುತ್ತದಷ್ಟೆ. ಎಲೆ ಎಳತಾಗಿರುವಾಗ ತಣುವಾಗಿಯೂ ನಯವಾಗಿಯೂ ಮೆತ್ತಗಾಗಿಯೂ ಇರುವದರಿಂದ ಆದನ್ನು ಚಿಕಿತ್ಸೆಯಲ್ಲಿ ಬಹಳ ಕೆಲಸಕ್ಕೆ ಆಗುತ್ತದೆ.

ಕೆಮ್ಮು ಕೆಲವು ಸಂಗತಿಗಳಲ್ಲಿ ಕೋರ, ಶಿಡುಬು, ಶ್ಲೇಷ್ಮ ಉಪದ್ರವ ಮುಂತಾದದರ ಸಂಗಡ ಶೇರಿಕೊಂಡು, ಚಿಕಿತ್ಸೆ ಪ್ರಯಾಸವಾಗುವದು.

ಚಿಕಿತ್ಸೆ: ಪ್ರಥಮ ಸ್ಥಿತಿಯಲ್ಲಿ ಹರಳೆಣ್ಣೆ (೧೫೦) ಕೊಟ್ಟು, ಮಲಶೋಧನೆ ಮಾಡಿಸುವದು. ಆ ಮೇಲೆ ಊರ ಕಿರುಮಂಜಿ[1] (Country Ipecacuanha)ಯನ್ನು (೧೫೧), ನವಸಾಗರವನ್ನು (೧೫೨), ಕೊಡುವದು. ರೋಗಿಯು ಪುಷ್ಟ ಶರೀರದ ಮಗುವಾಗಿದ್ದರೆ, ಕಠಿಣ ಸಂಗತಿಗಳಲ್ಲಿ ಜಿಗಳೆ ಕಚ್ಚಿಸುವದು[2] ಒಳ್ಳೇದು. ಜ್ವರವು ಶಾಂತವಾಗುತ್ತಲೆ ಪಟಿಕಾರ (೧೫೩) ಕೊಡುವದು. ಇದು ಮೈಕೊಳ್ಳದಿದ್ದರೆ, ಅನ್ನಭೇಧಿ (೧೫೪), ಹಿಂಗಿನ ಸಂಗಡವಾಗಲಿ ಬರೇ ಹಿಂಗು ಆಗಲಿ[3] ಕೊಟ್ಟು ನೋಡುವದು. ಅಶಕ್ತಿಯೂ ಸೊರಗೋಣವೂ ಇದ್ದರೆ, ಮೀನಿನ ಎಣ್ಣೆ[4] ಕೊಡುವದು. ರೋಗವು ದೀರ್ಘಕಾಲದ್ದಾಗಿದ್ದರೆ, ಎದೆಗೆ ಸಾಸಿವೆಯ ಒತ್ತಡ (೧೫೫) ಕಟಿ. ತರುವಾಯ ಬೆನ್ನೆಲುಬಿಗೆ ಅಫೀಮಿನ ಮುಲಾಮು (೫೫)[5] ಹಚ್ಚಿ ತಿಕ್ಕ ಬೇಕು.

೧೫೦. ಹರಳೆಣ್ಣೆಯು[6] ಮಲಶೋಧನೆ ಮಾಡುವದಕ್ಕೆ ಒಳ್ಳೇ ಔಷಧ. ಇದು ಮಕ್ಕಳಿಗೂ ಹೆತ್ತ ಸ್ತ್ರೀಯರಿಗೂ ವಿಶೇಷವಾಗಿ ತಕ್ಕದ್ದು. ಸಾಧಾರಣವಾಗಿ ಮಗುವಿಗೆ ಒಂದು ಚಾಸೌಟಿನಷ್ಟು ಕೊಡ ಬಹುದು; ಮತ್ತು ಪ್ರಾಯಕ್ಕೆ ತಕ್ಕದಾಗಿ ಎರಡು ಮೇಜಿನ ಸೌಟು (=ಒಂದು ಔನ್ಸ್) ವರೆಗೆ ಕೊಡ ಬಹುದು; ಇದು ಪ್ರಾಯಸ್ಥರಿಗೆ ಕೊಡ ತಕ್ಕ ಪರಿಮಾಣವಾಗಿರುತ್ತದೆ. ಹರಳೆಣ್ಣೆಯನ್ನು ಕೊಡುವಾಗ ಹಾಲು, ಬುನ್ನಿನ ಕಷಾಯ, ಇಲ್ಲವೆ ಓಮದ ನೀರಿನಲ್ಲಿ ಹಾಕಿ ಕೊಡುವದು ಉತ್ತಮ.

೧೫೧. ದೀರ್ಘಕಾಲದ ಶ್ಲೇಷ್ಮ ಉಪದ್ರವ, ಕೆಮ್ಮು, ನೆಗಡಿ ಮತ್ತು ನಾಯಿ ಕೆಮ್ಮು ಪ್ರಾರಂಭವಾದಲ್ಲಿ ಕಿರುಮಂಜಿ ಕಫೋದ್ರೇಕ ಮತ್ತು ಬೆವರು ಹುಟ್ಟಿಸುವ ಬಗ್ಗೆ ಕೊಡೋಣಾಗುತ್ತದೆ. ಒಣ ಎಲೆಗಳ ಹುಡಿ ೫ ಗ್ರೇನ್ ಪ್ರಕಾರ ದಿನಕ್ಕೆ ಮೂ

---

[1] ೧೮೭೭ನೇ ಇಸವಿಯ ಪಂಚಾಂಗದ ೭೭ನೇ ಪಾನಿನಲ್ಲಿರುವ ಟಿಪ್ಪಣಿ ಸಹ ನೋಡು.

[2] ಈ ವಿಷಯವನ್ನು ಕುರಿತು ಕಳೆದ ವರ್ಷದ ಪಂಚಾಂಗದ ೭೭-೭೫ನೇ ಪಾನುಗಳಲ್ಲಿ ನೋಡು.

[3] ಈ ಅಂಕೆಯನ್ನು ೧೮೮೦ನೇ ಇಸವಿಯ ಪಂಚಾಂಗದ ೪೧ನೇ ಪಾನಿನಲ್ಲಿ ನೋಡು.

[4] ಇದರ ವಿಷಯವಾಗಿ ೧೮೭೭ನೇ ಇಸವಿಯ ಪಂಚಾಂಗದ ೨೭ನೇ ಪಾನನ್ನೂ ಅದರ ಟಿಪ್ಪಣಿಯನ್ನೂ ನೋಡು.

[5] ಇದನ್ನು ಮಾಡುವ ಕ್ರಮ ೧೮೭೭ನೇ ಇಸವಿ ಪಂಚಾಂಗದ ೭೫ನೇ ಪಾನಿನ ೫೭ನೇ ಅಂಕೆಯಲ್ಲಿ ನೋಡು.

[6] *Engl:* Castor oil; ಹಿಂದು: ಅರಂಡಿಕಾ ತೇಲ್; ದಖ: ಯರಂಡೀಕಾ ತೇಲ್; ತಮ: ಆಮಣಕ್ಕೆಣ್ಣೆ; ತೆಲು: ಆಮುದಂ; ಮಲ: ಕೊತ್ತೆನ್ನಾ, ಆಮಣಕ್ಕೆಣ್ಣಾ; ಮಹಾ: ಎರೆಂಡೇಲ್; ಗುಜ: ದೀವಾಸ್, ಯೆರಂಡಿನು ತೇಲ್.—ಹರಳೆಣ್ಣೆಯು ವಿವಿಧ ತರದ್ದು ಅಂಗಡಿಗಳಲ್ಲಿ ಶಿಕ್ಕುತ್ತದೆ. ಇವುಗಳಲ್ಲಿ ಹರಳ ಬೀಜ ಬೇಯಿಸಿ, ಹಿಂಡಿ ತೆಗದ ಎಣ್ಣೆ ಕಂದು ಬಣ್ಣದ್ದಾಗಿ ಜಿಗಟಾಗಿದ್ದು ತೀವ್ರವಾಗಿರುವದರಿಂದ, ಅದನ್ನು ಬಿಟ್ಟು ಬಿಡ ಬೇಕು. ಪ್ರಯೋಗಕ್ಕೆ ಒಳ್ಳೇದಾದ ಎಣ್ಣೆಯು ಸ್ವಚ್ಛವೂ ಬಿಳಿತರವೂ ಇದ್ದು, ರುಚಿಗೆ ಸ್ವಲ್ಪ ವಾಕರಿಕೆ ಹುಟ್ಟಿಸುವಂಥಾದ್ದಾಗಿರುತ್ತದೆ. „ತಣ್ಣಗಾಗಿ ತೆಗದ (cold-drawn) ಎಣ್ಣೆಯು" ಸಹ ದೊರಕಿದರೆ, ಉಪಯೋಗಿಸಲಿಕ್ಕೆ ತಕ್ಕದ್ದು.

ರಾವರ್ತಿ ಇಲ್ಲವೆ ಹೆಚ್ಚು ಸಾರಿಯೂ ಕೊಡ ಬಹುದು. ಬರೇ ಹುಡಿ ಮಾತ್ರವಾಗಲಿ ಜೇಷ್ಠಮಧು (ಗುಲಗುಂಜಿ ಬೇರಿನ) ಲೇಹ್ಯದ ಸಂಗಡವಾಗಲಿ ಕೊಡ ಬಹುದು. (ಈ ಲೇಹ್ಯ ಮಾಡುವ ಕ್ರಮವು ಮುಂದೆ ಬರುವದು.)

೧೫೨. ದೀರ್ಘಕಾಲದ ಕೆಮ್ಮುಳ್ಳವರಿಗೆ, ಮುಖ್ಯವಾಗಿ ವಯಸ್ಸಂದವರಿಗೆ, ಒಂದು ದ್ರಮ್ ನವಸಾಗರ, ಎರಡು ಔನ್ಸ್ ಜೇಷ್ಠಮಧುವಿನ ಲೇಹ್ಯ, ನಾಲ್ಕು ಔನ್ಸ್ ನೀರು, ಈ ಮೂರನ್ನು ಕೂಡಿಸಿ, ಸಾರಿಗೆ ಒಂದು ಔನ್ಸ್ ಮೇರೆಗೆ ದಿನಕ್ಕೆ ಐದಾರು ಸರ್ತಿ ಕೊಡುವದು ಆಗ್ಯಾಗ್ಯೆ ಗುಣಕರವಾಗುತ್ತದೆ. ಮಕ್ಕಳಿಗಾದರೆ, ನವಸಾಗರ ಒಂದರಿಂದ ಐದು ಗ್ರೇನ್ ವರೆಗೆ (ಪ್ರಾಯಕ್ಕನುಸಾರವಾಗಿ) ಕೆಲವು ಗ್ರೇನ್ ದಾಲ್ಚಿನಿ ಹುಡಿಯ ಸಂಗಡ ಬೆರಿಸಿ ಕೊಟ್ಟಲ್ಲಿ ನಾಯಿಕೆಮ್ಮು ಗುಣವಾಗಿ ಅದೆ. ಇದು ಪಟಿಕಾರದಷ್ಟು ಒಳ್ಳೇದಲ್ಲದಿದ್ದರೂ, ರೋಗದ ಪ್ರಾರಂಭಸ್ಥಿತಿಯಲ್ಲಿ ಏನೂ ಬಾಧಕವಿಲ್ಲದೆ ಕೊಟ್ಟು ನೋಡ ಬಹುದು.

೧೫೩. ಪಟಿಕಾರವು ನಾಯಿಕೆಮ್ಮು ಉಂಟಾದ ಪ್ರಾರಂಭದಲ್ಲಿ ಬೇರೆ ಯಾವ ಔಷಧಕ್ಕಿಂತಲೂ ಅತ್ಯುತ್ತಮವಾದ್ದೆಂದು ಹೆಸರುಗೊಂಡದೆ. ಎರಡು ಮೂರು ವರ್ಷದ ಮಗುವಿಗೆ, ೩-೪ ಗ್ರೇನ್ ಪಟಿಕಾರ, ನಾಲ್ಕು ಯಾ ಆರು ತಾಸಿಗೊಮ್ಮೆ ಕೊಡುವದು. ಇದನ್ನು ಬರೇ ಹುಡಿಯಾಗಿ ಆಗಲೀ, ನೀರು ಮಾಡಿ ಆಗಲೀ, ಕೊಡ ಬಹುದು. ನೀರು ಮಾಡಿ ಕೊಡುವದು ಹ್ಯಾಗಂದರೆ: ೨೫ ಗ್ರೇನ್ ಪಟಿಕಾರವನ್ನು ೩ ಔನ್ಸ್ ಓಮದ ನೀರಿನಲ್ಲಿ ಹಾಕಿ ಕರಗಿಸುವದು. ಇದನ್ನು ೨-೪ ವರ್ಷದ ಮಗುವಿಗೆ ಸಾರಿಗೆ ೨ ಚಾಸೌಟಿನ ಮೇರೆಗೆ ನಾಲ್ಕು ಯಾ ಆರು ತಾಸಿಗೊಮ್ಮೆ ಕೊಡುವದು.

೧೫೪. ಕಠಿಣ ನಾಯಿಕೆಮ್ಮು ಪಟಿಕಾರದಿಂದಾದರೂ ಬೇರೆ ಔಷಧದಿಂದಾದರೂ ಗುಣವಾಗದೆ ಇರುವಲ್ಲಿ ಅನ್ನಭೇದಿ (ಹಿರಾಕಸು) ಚಿಕ್ಕ ಪರಿಮಾಣದಲ್ಲಿ ತೆರಪಾಗದೆ ಕೊಟ್ಟಲ್ಲಿ ಗುಣವಾದ್ದುಂಟು.

೧೫೫. ಉಸರುತಿಕ್ಕು ಉಳ್ಳ ಕೆಮ್ಮು ಸಾಸಿವೆಯ[1] ಒತ್ತಡ ಎದೆಗೆ ಹಚ್ಚಿ ಶಮನವಾಗುವದು. ಅದನ್ನು ಬೆನ್ನಿಗೆ ಹೆಗಲೆಲುಬುಗಳ ನಡುವೆ ಸಹ ಹಚ್ಚುವದು ಗುಣಕರವೇ; ಮತ್ತು ದೊಡ್ಡವರಿಗೂ ಮಕ್ಕಳಿಗೂ ದೋಷವಿಲ್ಲದೆ ಹಚ್ಚ ಬಹುದು. ಬೆನ್ನೆಲುಬಿಗೆ ಸಾಸಿವೆ ಒತ್ತಡ ಹಚ್ಚಿ ನಾಯಿಕೆಮ್ಮು ಬಹುಶಾ ಶಮನವಾಗುವದು.

(ಮುಂದಿನ ಪಂಚಾಂಗದಲ್ಲಿ ಸಾಗಿಸಲ್ಪಡುವದು.)

---

[1] ಸಾಸಿವೆಯ ಒತ್ತಡ ಹಾಕುವ ವಿಷಯದಲ್ಲಿ ಹಿಂದೆ ೧೮೭೭ನೇ ಇಸವಿ ಪಂಚಾಂಗದ ೨೫ನೇ ಪಾನಿನಲ್ಲಿರುವ ೬೨ನೇ ಅಂಕೆ ನೋಡು.

ಪಾಪಕ್ಕೀವಿಸನು.

ಉತ್ತರ ಅಮೇರಿಕದಲ್ಲಿ ಅನೇಕ ಕಾಡ ಜಾತಿಗಳವರಿದ್ದಾರೆ; ಅವರು ಅನೇಕ ಚಮತ್ಕಾರವಾದ ಕಥೆಗಳನ್ನು ಹೇಳುತ್ತಾರೆ; ಒಂದು ಕಥೆ ಏನಂದರೆ: ಹಿವಾಯಾಥಾ ಎಂಬ ಹೆಸರುಳ್ಳ ಒಬ್ಬ ಮನುಷ್ಯನಿದ್ದನು. ಅವನು ತನ್ನ ಊರಿನ ಜನರಿಗೆ ಪ್ರಯೋಜನಕರವಾಗಿರುವ ಸಂಗತಿಗಳನ್ನು ಬಲ್ಲವನಾಗಿ, ಅವುಗಳನ್ನು ಅವರಿಗೆ ಕಲಿಸುತ್ತಿದ್ದನು. ಪಾಪಕ್ಕಿವಿಸ್ ಎಂಬ ಇನ್ನೊಬ್ಬ ಆಲಸ್ಯಗಾರನಾದ ಮನುಷ್ಯನಿದ್ದನು. ಅವನು ಒಮ್ಮೆ ಹಿವಾಯಾಥಾ ಎಂಬವನ ಊರಿಗೆ ಬಂದು, ಅವನ ಜನರಿಗೆ ಬಹಳ ಕಷ್ಟನಷ್ಟ ಪಡಿಸಿ, ಅಲ್ಲಿಂದ ಓಡಿ ಹೋದನು. ಇದರಿಂದ ಹಿವಾಯಾಥನು ಬ[illegible] ಶಟಗೊಂಡು ತನ್ನವರನ್ನು ಕರಕೊಂಡು ಪಾಪಕ್ಕೀವಿಸನನ್ನು ಹಿಡಿದು ಕೊಲ್ಲ ಬೇಕೆಂದು ಬೆನ್ನುಹತ್ತಿದನು. ಆದರೆ ಪಾಪಕ್ಕೀವಿಸನು ಬಹಳ ತ್ವರೆಯಿಂದ ಓಡುತ್ತಾ, ಬಿವರ ಎಂಬ ಮೃಗಗಳು ತಮಗಾಗಿ ಹೊಳೆಯ ಬಳಿಯು ಕಟ್ಟಿದ ಮನೆಗಳನ್ನು ನೋಡಿ, ಅಲ್ಲಿಗೆ ಹೋಗಿ, ನನ್ನನ್ನು ಬಿವರ ಮೃಗ ಮಾಡಿ, ನಿಮ್ಮ ಮನೆಗಳಲ್ಲಿ ನನ್ನನ್ನು ಅಡಗಿಸಿರಿ ಎಂದು ಹೇಳಿದನು. ಹಾಗೆ ಅವುಗಳು ಅವನನ್ನು ಬಿವರ ಮಾಡಿ, ಮನೆಗಳಲ್ಲಿ ಬಚ್ಚಿಟ್ಟವು. ಹಿವಾಯಾಥನಿಗೆ ಇದು ತಿಳಿದು ಬಂದಾಗಲೇ ತನ್ನ ಜನರನ್ನು ಕರಕೊಂಡು ಅಲ್ಲಿಗೆ ಬಂದು, ಬಿವರ ಮೃಗಗಳ ಮನೆಗಳನ್ನೆಲ್ಲಾ ಹಾಳು ಮಾಡಿ ಬಿಟ್ಟನು. ಪಾಪಕ್ಕೀವಿಸನು ಅಲ್ಲಿ ರೂಪ ಬದಲಿಸಿಕೊಂಡಿದ್ದರೂ, ಅವರು ಅವನ ಗುರುತು ಹಿಡಿದು, ಟೊಣಪೆಯಿಂದ ಹೊಡದರು. ಆದರೆ ಆ ಪೆಟ್ಟಿನಿಂದ ಅವನು ಹೊಕ್ಕ ಮೃಗ ಸತ್ತಿತಲ್ಲದೆ ಅವನ ಆತ್ಮ ಸಾಯದೆ, ಅಲ್ಲಿಂದ ಓಡಿ ಹೋಗುತ್ತಿರುವಾಗ, ಹಿವಾಯಾಥನು ಮತ್ತೂ ಬೆನ್ನಟ್ಟಲಾಗಿ ಆ ಆತ್ಮನು ಬಾತುಗಳಿದ್ದ ಒಂದು ಜಾಗಕ್ಕೆ ಬಂದು, ಆ ಬಾತುಗಳಿಗೆ, ನನ್ನನ್ನು ಬಾತು ಮಾಡಿರಿ, ಅಂದನು. ಆಗ ಅವನ ಆತ್ಮವು ಬಾತು ಆಯಿತು. ಆ ಮೇಲೆ ಆ ಬಾತುಗಳೆಲ್ಲಾ ರೆಕ್ಕೆ ಬಿಡಿಸಿ ಹಾರಿ ಹೋಗುತ್ತಿರುವಾಗ ಪಾಪಕ್ಕೀವಿಸನಿಗೆ—ಕೆಳಗೆ ನೋಡ ಬೇಡ, ನೋಡಿದರೆ, ಮುಣುಗಿ ಹೋದೀ ಎಂದು ಎಚ್ಚರಿಸಿದವು. ಆದರೆ ಪಾಪಕ್ಕೀವಿಸನು ಏಕಾಏಕಿ ಕೆಳಗೆ ಮನುಷ್ಯರ ಗದ್ದಲ ಕೇಳಿ, ಮೈಮರತು ಕೆಳಗೆ ನೋಡಲಾಗಿ, ಸಂಗಡಲೇ ಕೆಳಗೆ ಬಿದ್ದು ಹೋದನು; ಅದರಿಂದ ಬಾತು ಸತ್ತಿತು. ಆಗ ಅವನ ಆತ್ಮ ಮೊದಲಿನಂತೆ ಬಾತಿನೊಳಗಿಂದ ಹೊರಟು ಓಡಿ ಹೋಗುತ್ತಿದ್ದಲ್ಲಿ ಹಿವಾಯಾಥನು ಪುನಹಾ ಬೆನ್ನಟ್ಟಿ ಬಂದನು. ಅವನನ್ನು ನೋಡಿ, ಪಾಪಕ್ಕೀವಿಸನು ದೊಡ್ಡದೊಂದು ಸರ್ಪದ ರೂಪ ತಕ್ಕೊಂಡು, ದೊಡ್ಡ ಮರವನ್ನೇರಿ ಅಡಗಿಕೊಂಡನು. ಹಿವಾಯಾಥನ ಜನರು ಬಂದು, ಆ ಮರವನ್ನು ಕಡಿದು, ಸರ್ಪವನ್ನು ಕೊಂದು ಹಾಕಿದರೂ, ಪಾಪಕ್ಕೀವಿಸನನ್ನು ಕೊಲ್ಲಲಿಕ್ಕಾಗಲಿಲ್ಲಾ. ಆಗ ಆ ಆತ್ಮವು

ಓಡುತ್ತಾ ಗುಡ್ಡದಲ್ಲಿದ್ದ ಒಂದು ಗುಹೆಯೊಳಗೆ ಅಡಗಿಕೊಂಡಿತು. ಆ ಗುಡ್ಡದಲ್ಲಿದ್ದ ಭೂತಗಳು ಅವನನ್ನು ಹಿಮಾಯಾಥನ ಜನರು ಕಂಡು ಹಿಡಿಯ ಕೂಡದ ಒಂದು ಜಾಗದಲ್ಲಿ ಬಚ್ಚಿಟ್ಟವು. ಆ ಮೇಲೆ ಹಿಮಾಯಾಥನು ಮಿಂಚನ್ನೂ ಶಿಡಿಲನ್ನೂ ಕರೆಯಲಾಗಿ, ಮಿಂಚು ಬಂದು ಬಂಡೆಗೆ ಬಡಿಯಿತು. ಗುಡುಗು ಮಹಾ ಘರ್ಜನೆಯಿಂದ—ಪಾಪಕ್ವೀವಿಸ್, ಎಲ್ಲಿದ್ಧೀ? ಎಂದು ಕರೆಯಿತು. ಮತ್ತು ಮಿಂಚು ಪಾಪಕ್ವೀವಿಸನ ಮೈಗೆ ಬಹಳ ಕಲ್ಲುಗಳನ್ನು ಎಸದು, ಪುನಹಾ ಮನುಷ್ಯರೂಪಕ್ಕೆ ತಂದು, ಅವನನ್ನು ಪ್ರಾಣಮುಕ್ತನಾಗಿ ಮಾಡಿತು.

ಇದರಿಂದ ಏನು ಕಾಣುತ್ತದೆ? ಅಪರಾಧಿ ಶಿಕ್ಷೆ ತಪ್ಪಿಸಲಾರನು; ಎಲ್ಲಿಗೆ ಓಡಿದರೂ, ಎಲ್ಲೆಲ್ಲಿ ಅಡಗಿದರೂ, ನಾನಾ ಸೋಗು ಹಾಕಿಕೊಂಡು ತನ್ನ ಜೀವ ಉಳಿಸಿಕೊಂಡರೂ, ಕಡೆಗೆ ಹ್ಯಾಗೂ ಶಿಕ್ಷೆ ಅನುಭವಿಸುತ್ತಾನೆ. ಶಿಕ್ಷೆಗೆ ತಪ್ಪಿಸಿಕೊಳ್ಳುವ ಮಾರ್ಗವು ಯಾವದಂದರೆ: ಕೆಟ್ಟ ಕೆಲಸಕ್ಕೆ ಹೋಗದಿರುವದೇ.

ಕಳ್ಳನಾಗಿ ಹೋದ ಮಗನು.

ಹಲವು ವರ್ಷಗಳ ಮೊದಲು ಇಂಗ್ಲಾಂಡಿನ ಉತ್ತರ ಭಾಗದಲ್ಲಿ ಒಬ್ಬ ಒಳ್ಳೇ ಕಷ್ಟಗಾರನಾದ ಒಕ್ಕಲಿಗನಿದ್ದನು. ಅವನು ಕೈಕಷ್ಟದಿಂದ ಬಹಳ ರೊಕ್ಕ ಗಳಿಸಿಟ್ಟು, ಮನೆಖರ್ಚಿನಲ್ಲಿ ಬಹಳ ಲೋಭ ಮಾಡುತ್ತಿದ್ದನು. ಅವನಿಗೆ ಒಬ್ಬನೇ ಮಗ, ಅವನ ಮೇಲೆ ಅತಿ ಪ್ರೀತಿ ಇಟ್ಟಿದ್ದನು; ಹೆರರ ಸಂಗಡ ಕಠಿಣವಾಗಿ ನಡದರೂ, ಮಗನನ್ನು ಬಹಳ ಮಮತೆಯಿಂದ ಸಾಕುತ್ತಿದ್ದನು. ಮಗನು ತನ್ನ ಮಾತು ಕೇಳದಿದ್ದರೆ, ಅವನಿಗೆ ಶಿಕ್ಷೆ ಮಾಡುವದಕ್ಕೆ ಕೈ ಎತ್ತಲೊಲ್ಲದೆ, ಅವನು ಹೇಳಿದ ಹಾಗೆ ಕೇಳುತ್ತಿರುವನು. ಯೋಹಾನನೆಂಬ ಈ ಹುಡುಗನು ಸಹ ಒಳ್ಳೇ ಸ್ವಭಾವದವನೂ ಪ್ರೀತಿವಂತನೂ ಆಗಿದ್ದನು. ತಂದೆ ಅವನ ಮೇಲೆ ಅತಿರೇಕ ಪ್ರೀತಿಯುಳ್ಳವನಾದ್ದರಿಂದ ಮಗನ ದುರ್ಗುಣಗಳ್ಯಾವವಾದರೂ ಅವನಿಗೆ ಕಾಣುತ್ತಿದ್ದಿಲ್ಲಾ; ಅವನನ್ನು ಬೇಸಾಯದ ಕೆಲಸಕ್ಕೂ ಹಚ್ಚಲಿಲ್ಲಾ. ಆದ ಕಾರಣ ಹುಡುಗನು ಮನೆಯೊಳಗೆ ಸಂಗಡಿಗರ್ಯಾರೂ ಇಲ್ಲದ್ದರಿಂದ ಹೊರಗೆ ಬೀದಿಯಲ್ಲಿ ಹುಡುಗರ ಗೆಳೆತನ ಮಾಡಿ, ಆಡಲಿಕ್ಕೆ ಹೋಗುತ್ತಿದ್ದನು. ಹೀಗೆ ಕಾಕಪೋಕ ಪೋರಗಳ ಒಡನಾಟದಿಂದ ಕೆಟ್ಟ ಚಾಲಿ ಕಲಿತುಕೊಂಡು, ಅವರ ಸಂಗಡ ಅಚೆ ಇಚೆ ಏನಾದರೂ ಕೆಡಕತನ ಮಾಡುವದಕ್ಕೆ ಹೋಗುವವನಾದನು. ಪಕ್ಷಿಗಳ ಗೂಡು ಹುಡುಕಿ ಮರಿಗಳನ್ನು ಕೊಲ್ಲುವದು, ಬೇರೊಬ್ಬರ ಹಿತ್ತಲಲ್ಲಿ ಹೋಗಿ ಏನಾದರೂ ನಷ್ಟ ಮಾಡುವದು, ಅಥವಾ ಹಣ್ಣುಕಾಯಿ ಕದಿಯುವದು, ಮುಂತಾದದ್ದು ಇದೇ ಅವನ ಉದ್ಯೋಗ; ಇದರಿಂದ ಅವನು ಇನ್ನು ಹೆಚ್ಚು ಕೆಟ್ಟತನ ಕಲಿತುಕೊಂಡು, ಬಹಳ ದುಷ್ಟನಾದನು. ತಂದೆಯ ಪ್ರೀತಿ ಒಮ್ಮೊಮ್ಮೆ ನೆನ

ಪಾದಾಗ ಅವನು ಸ್ವಲ್ಪ ಅಂಥಾ ಪೋಕವಿದ್ಯೆ ಬಿಟ್ಟು ಒಳ್ಳೇ ಮಾರ್ಗಕ್ಕೆ ಬರುವವನಾದಾಗ್ಯೂ, ಮತ್ತೂ ಮುಂಚಿನ ಹಾದಿಗೆ ಹೋಗುತ್ತಿದ್ದನು. ಕಡೆಗೆ ತಂದೆ ಕಾಣದಂಥಾ ದೂರ ಊರಿಗೆ ಹೋಗಿ ಮನಸೋಯಿಚ್ಛೆ ನಡಿಯ ಬೇಕು ಎಂದು ನೆನಸಿ—ತಂದೆಯೇ, ನಾನು ಪಟ್ಣಕ್ಕೆ ಹೋಗಿ, ಏನಾದರೂ ಕೆಲಸ ಕಲಿಯ ಬೇಕೆಂದಿದ್ಧೇನೆ, ಅಪ್ಪಣೆ ಕೊಡು ಅಂದನು; ಆದರೆ ತಂದೆ ಇಂಥಾ ಮಾತು ಕೇಳಲೊಲ್ಲದೆ ಅವನಿಗೆ—ನನ್ನನ್ನು ಬಿಟ್ಟು ಹೋಗುವದಕ್ಕೆ ನಾನೆಂದಿಗೂ ನಿನಗೆ ಅಪ್ಪಣೆ ಕೊಡೆ ಎಂದು ಹೇಳಿದನು. ತಂದೆಯು ಮನಸ್ಸು ತಿಳಿದ ಮೇಲೆ ಮಗನು ಇನ್ನು ಮನೆಯಿಂದ ಓಡಿ ಹೋಗುವದೇ ಉತ್ತಮವೆಂದು ನೆನಸಿ, ಸಮಯ ಸಾಧಿಸಿ, ಒಂದು ರಾತ್ರಿ ಓಡಿ ಹೋದನು. ತಂದೆಗೆ ಅದು ತಿಳಿದು ಬಂದಾಗಲೇ ದುಃಖಸಾಗರದಲ್ಲಿ ಮುಳುಗಿ, ನಾನಾ ಕಡೆಗಳಲ್ಲಿ ಜನರನ್ನು ಕಳುಹಿಸಿ, ವರ್ತಮಾನಪತ್ರಗಳಲ್ಲಿ ಪ್ರಕಟಿಸಿದರೂ, ಎಲ್ಲಾ ವ್ಯರ್ಥವಾಗಿ, ಮಗನ ಸುಳುವು ಶಿಕ್ಕಲೇ ಇಲ್ಲಾ. ಆಗ ತಂದೆ ತಾನು ಮ[illegible]ನನ್ನು ಹ್ಯಾಗೆ ನಡಿಸಿದೆನೆಂದು ಮನಸ್ಸಿನಲ್ಲೇ ಆಲೋಚಿಸುವಾಗ ತಪ್ಪು ತನ್ನದೇ ಎಂದು ತಿಳಿದು, ಮತ್ತಷ್ಟೂ ದುಃಖಸ್ಥನಾದನು.

ಬಹಳ ವರ್ಷಗಳು ಹೋದವು; ಮಗನನ್ನು ಕುರಿತು ಜೀವದಿಂದಿದ್ಧಾನೋ ಸತ್ತನೋ ಎಂತ ಒಂದು ಸುದ್ದಿಯಾದರೂ ಅವನ ಕಿವಿಗೆ ಬೀಳಲಿಲ್ಲಾ. ಹೀಗಿರುತ್ತಾ ಒಂದು ಸಾರಿ ಆ ಮನುಷ್ಯನಿಗೆ ಪರವೂರಿನಿಂದ ಮನೆಗೆ ಬರುವ ಪ್ರಸಂಗ ಬಿತ್ತು; ಆಗಲೇ ರಾತ್ರಿಯಾಗಿತ್ತು, ಮತ್ತು ಕಾಡು ದಾಟಿ ಹೋಗ ಬೇಕಿತ್ತು. ಹೋಗುತ್ತಿರುವಾಗ ಮಗನನ್ನು ನೆನಪು ಮಾಡುತ್ತಾ, ತಾನು ಅವನನ್ನು ತೊಡೇ ಮೇಲೆ ಕುಂಡ್ರಿಸಿಕೊಂಡದ್ದು, ತನ್ನ ಸಂಗಡ ಆಡುತ್ತಾ ನಗುತ್ತಾ ಇದ್ದದ್ದು, ಎಲ್ಲಾ ಜ್ಞಾಪಕಕ್ಕೆ ಬರಲು, ಅವನು ಘಟ್ಟಿಯಾಗಿ ಅಳುವವನಾದನು. ಈ ಶಬ್ದ ಕೇಳುತ್ತಲೇ ಕಾಡಿನೊಳಗಿಂದ ಯಾರೋ ಒಬ್ಬನು ಫಕ್ಕನೆ ಬಂದು, ಅವನು ಹತ್ತಿದ ಕುದುರೆ ನಿಲ್ಲಿಸಿ, ದುಡ್ಡು ಬೇಡಿದನು. ಬೇರೆ ಸಮಯದಲ್ಲಾದರೆ, ಅವನು ಆ ಬೇಡಿದವನ ಸಂಗಡ ಜಗಳ ಮಾಡುತ್ತಿದ್ದನು; ಆದರೆ ಆವಾಗ, ನನ್ನ ಮಗನೂ ಕಳ್ಳನಾಗಿ ಹೋಗಿದ್ಧಾನೋ ಯಾರು ಬಲ್ಲ? ಎಂಬದಾಗಿ ಅವನೊಳಗೆ ಭಯವಿದ್ದದರಿಂದ ಅವನು ಸುಮ್ಮನಿದ್ದು, ಕಿಶೆಯಿಂದ ಚೀಲ ತೆಗದು, ಅವನಿಗೆ ಕೊಟ್ಟು—ಅಯ್ಯೋ ದೇವರೇ! ನನ್ನ ಮಗನು ಎಂದೂ ಕಳ್ಳನಾಗಿ ಹೋಗದೆ ಇರಲಿ! ಎಂದು ಹೇಳಿದನು. ಕಳ್ಳನು ಈ ಮಾತು ಕೇಳುತ್ತಲೇ ಹಣದ ಚೀಲ ತಿರಿಗಿ ಬಿಸಾಡಿ, ಹೇಳಿದ್ದು—ಅಪ್ಪಾ, ನಾನು ಹುಡುಗನಾಗಿದ್ದಾಗ ನೀನು ನನ್ನನ್ನು ಶಿಕ್ಷಿಸಿ ತಿದ್ದಿದ್ದಾದರೆ, ನಾನು ದೊಡ್ಡವನಾದ ಮೇಲೆ ನಿನ್ನನ್ನು ಸುಲುಕೊಳ್ಳುವದಕ್ಕೆ ಬರುತ್ತಿದ್ದಿಲ್ಲವೆಂದು ಇಷ್ಟೇ ಹೇಳಿ, ಪುನಹಾ ಕಾಡಿನೊಳಗೆ ಹೋದನು. ಈ ಸಂಗತಿಯಿಂದ ತಂದೆ ಬಹಳ ಘಾಬ್ರಿಯಾಗಿ, ಸ್ಮೃತಿ ತಪ್ಪಿದವನಾಗಿ, ಸ್ವಲ್ಪ ಹೊತ್ತಿನ ಮೇಲೆ ಅವನ ದುಃಖವು ಮೊದಲಿಗಿಂತಲೂ ಹೆಚ್ಚಾಯಿತು. ನನ್ನ ಮಗನು ಕಳ್ಳನಾಗಿ ನನ್ನನ್ನೇ ಸುಲಿಯುವದಕ್ಕೆ ಬಂದಿದ್ದ, ನನಗೆ ಹೀಗೆ ಹೀಗೆ ಹೇಳಿದ ಎಂಬೀ ಆಲೋ

ಚನೆ ಮತ್ತೂ ಮತ್ತೂ ಅವನೊಳಗೆ ಹೊರಳುತ್ತಾ ಆ ದಿವಸದ ನೆನವು ಅವನಿಂದ ಹೋಗದೆ, ಅವನು ಆ ದುಃಖದಿಂದಲೇ ರೋಗಗ್ರಸ್ತನಾಗಿ ಮರಣ ಪಟ್ಟನು.

ತಾಯಿತಂದೆಗಳೇ, ಇದರಿಂದ ಬೋಧನೆ ತಕ್ಕೊಳ್ಳಿರಿ. ನಿಮ್ಮ ಮಕ್ಕಳಿಗೆ ವಿಧೇಯತ್ವ ಕಲಿಸಿರಿ. ನಿಮ್ಮ ಮಕ್ಕಳು ನಿಮ್ಮ ಮಾತು ಕೇಳದಿದ್ದರೆ, ಮತ್ತ್ಯಾರ ಮಾತು ಕೇಳ್ಯಾರು? ಅವರು ಮನಸ್ಸು ಕಠಿಣ ಮಾಡಿಕೊಂಡು, ಬೇರೊಬ್ಬರ ಮಾತೂ ದೇವರ ಮಾತು ಸಹ ಕೇಳಲಿಕ್ಕಿಲ್ಲಾ. ಪ್ರೀತಿಯಿಂದ ಶಿಕ್ಷಿಸಿ, ತಿದ್ದಿ, ವಿಧೇಯರಾಗಲಿಕ್ಕೆ ಕಲಿಸಿರಿ.

ಮಕ್ಕಳೇ, ನಿಮ್ಮ ತಾಯಿತಂದೆಗಳಿಗೆ ಈ ಪ್ರಕಾರದ ದುಃಖ ಕೊಡ ಬೇಡಿರಿ; ತಾಯಿತಂದೆಗಳು ಶಿಕ್ಷೆ ಮಾಡುವಾಗ ಈ ಶಿಕ್ಷೆ ನನ್ನ ಹಿತಕ್ಕೆ ಎಂದು ತಿಳಿಯಿರಿ. ಕೆಟ್ಟ ಲೋಕ ಹುಡುಗರ ಸಹವಾಸ ಮಾಡದೆ, ಅವರೊಂದಿಗೆ ಆಡದೆ, ದೂರವಾಗಿರ್ರಿ; ಅವರು ನಿಮ್ಮನ್ನು ಕೆಟ್ಟ ದಾರಿಗೆ ಎಳದಾರು; ಕಡೆಗೆ ನಿಮ್ಮ ಪರಿಣಾಮ ಏನಾದೀತೋ ಯಾರು ಬಲ್ಲ? ಆದ್ದರಿಂದ ಸ್ನೇಹ ಮಾಡುವದರಲ್ಲಿ ಜಾಗ್ರತೆಯಾಗಿರ್ರಿ.

ಕೈಗಾರಿಕೆಯನ್ನು ಕುರಿತು.

ಸುಂದರಮನ್ ಎಂಬ ಹೆಸರುಳ್ಳ ಒಬ್ಬ ಕಮ್ಮಾರನಿದ್ದನು. ದಿನವೆಲ್ಲ ಮೊಳೆಗಳನ್ನು ಮಾಡುವದೇ ಅವನ ಕೆಲಸವಾಗಿತ್ತು. ಅವನ ನೆರೆಯಲ್ಲೇ ಇದ್ದ ಐಶ್ವರ್ಯವಂತನಾದ ಒಬ್ಬ ಗೃಹಸ್ಥನ ಮಗನು ದಿನಾಲೂ ಅವನು ಕೆಲಸ ಮಾಡುವಲ್ಲಿಗೆ ಬಂದು, ಅವನ ಹತ್ತರ ಮಾತಾಡುತ್ತಾ ಕೆಲಸ ನೋಡುತ್ತಾ ಕೂತುಕೊಳ್ಳುತ್ತಿದ್ದನು. ಒಂದು ದಿನ ಆ ಕಮ್ಮಾರನು ಅವನನ್ನು ಕೇಳಿದ್ದು—ನಿಮಗೆ ನಿಮ್ಮ ಕೈಯಿಂದ ಮೊಳೆಗಳನ್ನು ಮಾಡುವದಕ್ಕೆ ಮನಸ್ಸುಂಟೋ? ಮಾಡಿ ನೋಡಿ; ನಿಮಗೂ ಸಂತೋಷವಾದೀತು, ಮುಂದಕ್ಕೆ ಒಮ್ಮೆ ನಿಮಗೆ ಈ ಕೆಲಸದ ತಿಳಿಯುವಿಕೆಯು ಪ್ರಯೋಜನಕ್ಕೆ ಬೀಳಲಿಕ್ಕೆ ಸಾಕು, ಯಾರು ಬಲ್ಲ? ಅಂದನು. ಹುಡುಗನು ಸಂತೋಷವಾಗಿ ಕೆಳಗೆ ಕೂತುಕೊಂಡು, ಮೊಳೆ ಮಾಡುವದಕ್ಕೆ ಕೈಹಚ್ಚಿ, ಬೇಗ ಆ ಕೆಲಸ ಕಲಿತುಕೊಂಡನು.

ಹೀಗೆ ಕೆಲವು ವರ್ಷಗಳು ಹೋದ ಮೇಲೆ ಆ ಊರಿನಲ್ಲಿ ನಡದ ಯುದ್ಧದ ದೆಶೆಯಿಂದ ಆ ಧನವಂತ ಹುಡುಗನ ಯಾವತ್ತೂ ಸಂಪತ್ತು ಕಳದು ಹೋಗಿ, ಕೈಯಲ್ಲಿ ಒಂದು ಕಾಸೂ ಇಲ್ಲದವನಾಗಿ, ಅವನು ಊರು ಬಿಟ್ಟು, ಪರ ಊರಿಗೆ ಹೋಗ ಬೇಕಾಯಿತು; ಅವನು ಮೊಚ್ಚೆಗಳು ಬಹಳ ಮಾಡುತ್ತಿದ್ದ ಒಂದು ಊರಿಗೆ ಬಂದು ಮುಟ್ಟಿದನು. ಅಲ್ಲಿ ತನಗೇನಾದರೂ ಕೆಲಸ ಶಿಕ್ಕುವದೋ ಎಂತ ಹುಡುಕುತ್ತಾ ಒಬ್ಬನ ಸಂಗಡ ಮಾತಾಡುವಾಗ, ಆ ಊರಿನ ಮೊಚ್ಚೆಗಾರರು ಪ್ರತಿ ವರ್ಷವೂ ಕೈಯಲ್ಲಿ ರೊಕ್ಕ

ಮಧ್ಯ ಆಸ್ಯದಲ್ಲಿ ಖುರ್ದರು ಎಂಬ ಒಂದು ಜಾತಿ ಮುಸಲ್ಮಾನರು ತಂಡತಂಡವಾಗಿ ಹೊರಟು ಪಾರ್ಶಿಸ್ಥಾನದ ಸರಹದ್ದಿನ ಊರುಗಳ ಮೇಲೆ ಬಿದ್ದು ಬಹಳ ಹಾವಳಿ ಮಾಡಿದರು. ಪಾರ್ಶಿ ಸೈನ್ಯವೂ, ಹಾಂಗೂ ಸ್ತಂಬೂಲಿನ ಸುಲ್ತಾನನು ಕಳುಹಿಸಿದ ಸೈನ್ಯವೂ ಅವರನ್ನಣಗಿಸಿದರು. ಆ ಪ್ರಾಂತ್ಯದಲ್ಲಿ ಹೇರಳವಾಗಿರುವ ಕ್ರಿಸ್ತೀಯರಿಗೆ ಈ ಅವಾಂತರದಲ್ಲಿ ಬಹಳ ಸಂಕಷ್ಟ ಸಂಭವಿಸಿತು.

ಅಫ್ರಿಕ ಖಂಡದ ದಕ್ಷಿಣ ಭಾಗದಲ್ಲಿ ಇಂಗ್ಲಿಷ ರಾಜ್ಯದ ನೆರೆಯಲ್ಲಿ ತ್ರಾನ್ಸ್‌ವಾಲ್ ಎಂತಾ ಒಂದು ಶೀಮೆಯಲ್ಲಿ ದಚ್ಚರ ವಂಶಸ್ಥರಾದ ಬೂರ್ ಎಂಬವರು ಇದ್ದಾರೆ. ಇವರ ಶೀಮೆಯನ್ನು ಇಂಗ್ಲಿಷ ಸರಕಾರದವರು ತಮ್ಮ ರಾಜ್ಯಕ್ಕೆ ಶೇರಿಸಿದ್ದರಿಂದ ಆ ಜಾತಿಯವರಲ್ಲಿ ಹೆಚ್ಚಾದವರು ಅದಕ್ಕೊಪ್ಪದೆ, ಆಯುಧಪಾಣಿಗಳಾಗಿ ಒಬ್ಬ ದಳವಾಯಿಯನ್ನಿಟ್ಟುಕೊಂಡು ಸರಕಾರದ ಮೇಲೆ ಎದ್ದು, ಎರಡು ಮೂರು ಯುದ್ಧಗಳಲ್ಲಿ ಜಯಗೊಂಡವರಾದರು. ಆದರೆ ಇಂಗ್ಲಾಂಡಿನ ಪ್ರಧಾನ ಮಂತ್ರಿಸಭೆಯವರು ಬೂರರ ಕಾರ್ಯವನ್ನು ಹೆಚ್ಚು ಸೂಕ್ಷ್ಮವಾಗಿ ವಿಚಾರಿಸಿ, ಉಭಯ ಸಮ್ಮತಿಯಿಂದ ಯುದ್ಧ ನಿಲ್ಲಿಸಿ, ಉಭಯ ಕಡೆ ಪಂಚಾಯತರು ನೆರೆದು ಬಂದು ವಿವೇಕದಿಂದ ತೀರಿಸಿ, ಬೂರರು ನ್ಯಾ

ಯವಾಗಿ ಕೇಳುವಂಥಾದ್ದನ್ನು ಅವರಿಗೆ ಕೊಡಿಸ ಬೇಕೆಂದು ಅಪ್ಪಣೆ ಮಾಡಿದ್ದರಿಂದ ಅಲ್ಲಿಯ ಕಲಹವು ಶಾಂತವಾಗುವದಾಯಿತು.

ಉತ್ತರಾಫ್ರಿಕದಲ್ಲಿ ಫ್ರೆಂಚ ಸರಕಾರಕ್ಕೆ ಶೇರಿದ ಅಲ್ಜೀರಿಯಾ ದೇಶದ ಪ್ರಾಂತ ನಿವಾಸಿಗಳಾದ ಒಂದು ಜಾತಿಯವರು ತಂಟೆ ನಡಿಸಿದ ಕಾರಣ ಅವರನ್ನು ಅಣಗಿಸುವದಕ್ಕೆ ಫ್ರೆಂಚರು ತುನೀಸ ಪಟ್ಟಣಕ್ಕೆ ಸೈನ್ಯ ಕಳುಹಿಸಿದರು; ಬಹಳ ಯುದ್ಧವಾಗಿ ಫ್ರೆಂಚರೇ ಪ್ರಬಲಗೊಂಡು, ತುನಿಸಿನ ಪ್ರಭು ಬೇ ಮಹಮದಸಾದಿಕ್ ಎಂಬವನು ಫ್ರೆಂಚ ಸರಕಾರದ ಪಾರುಪತ್ಯದಲ್ಲಿರುವದಕ್ಕೆ ಒಪ್ಪಿದ್ದಾನೆ.

ಯೂರೋಪು.—ಮಾಜಿ ಪ್ರಧಾನ ಮಂತ್ರಿ ಲಾರ್ಡ್ ಬೀಕನ್ಸ್‌ಫೀಲ್ಡ್ ಪ್ರಭು ಎಪ್ಪತ್ತೇಳು ವರ್ಷ ಪ್ರಾಯದವರಾಗಿ ತೀರಿ ಹೋದರು. ಇವರು ಮಹಾ ಬುದ್ಧಿಶಾಲಿಯಾಗಿದ್ದು ಇಪ್ಪತ್ತನೇ ಪ್ರಾಯದಲ್ಲೇ ಗ್ರಂಥರಚನೆ ಮಾಡುವದಕ್ಕೆ ಪ್ರಾರಂಭಿಸಿದ್ದರು. ಹೀಗೆ ಪ್ರಖ್ಯಾತಿಗೆ ಬಂದು, ೧೮೩೭ನೆಯಲ್ಲಿ ಪಾರ್ಲಿಯಮೆಂಟ ಸಭೆಗೆ ಶೇರಿ, ೧೮೬೮ನೇದರಲ್ಲಿಯೂ, ಪುನಹಾ ೧೮೭೪ನೇದರಲ್ಲಿಯೂ ಪ್ರಧಾನ ಮಂತ್ರಿಯಾಗಿ, ೧೮೮೦ನೇದರವರೆಗೂ ಆ ಉದ್ಯೋಗದಲ್ಲೇ ಇದ್ದರು. ಚಕ್ರವರ್ತಿನಿಯವರು ಅವರ ಮೇಲೆ ಭಾವವಿಟ್ಟವರಾಗಿ, ಅವರಿಗೆ ದೊಡ್ಡ ದೊಡ್ಡ ಬಿರುದು ಕೊಟ್ಟಿದ್ದರು. ಅವರ ಪೂರ್ವದ ಹೆಸರು ಬೆನ್ಯಮೀನ್ ಡಿಸ್ರಯೇಲಿ ಎಂಬದಾಗಿ ಇತ್ತು.

ಐರ್ಲಂಡಿನಲ್ಲಿ ಏನೂ ಸಮಾಧಾನವಿಲ್ಲಾ. ರೈತ ಪ್ರಜೆಗಳು ಸರಕಾರಕ್ಕೆ ವಿರೋಧವಾಗಿ ಅಲ್ಲಲ್ಲಿ ಕೂಟ ಮಾಡಿ ತಂಟೆ ನಡಿಸುತ್ತಿದ್ದಾರೆ. ಈ ತಂಟೆಗೆ ಕಾರಣವೇನಂದರೆ: ಐರ್ಲಾಂಡಿನಲ್ಲಿ ಭೂಮಿ ಯಾವತ್ತೂ ಕೆಲ ಐಶ್ವರ್ಯವಂತ ಧನಿಗಳದು, ಇವರು ಭೂಮಿಯನ್ನು ಗೇಯುವ ಒಕ್ಕಲುಗಳಿಗೆ ಗೇಣಿಗೆ ಕೊಡುತ್ತಾರೆ; ಒಕ್ಕಲುಗಳಿಗೆ ಭೂಮಿಯಲ್ಲಿ ಏನೊಂದು ಹಕ್ಕಿಲ್ಲದೆ ಧನಿಗಳೂ ಅವರ ಕಡೇ ಮುತ್ತಾಲಿಕರೂ ಮಾಡುತ್ತಿರುವ ತಿಪ್ಪಲಿಗೆ ಯಾವಾಗಲೂ ಒಳಗಿರ ಬೇಕಾಗುತ್ತದೆ. ಇದನ್ನು ತಾವು ತಾಳೆವು, ಭೂಮಿ ತಮಗಾಗ ಬೇಕೆಂದು, ಅವರು ಹಟ ಮಾಡುತ್ತಾರೆ. ತಮಗೆ ಬೇಕಾದದ್ದನ್ನು ಕೇಳುವದು ನ್ಯಾಯವೇ, ಆದರೆ ಈ ಪರಿಯಲ್ಲಿ ಕೂಟ ಕೂಡಿ, ಸರಕಾರದ ಸೈನ್ಯವನ್ನೂ ಪೊಲೀಸಿನವರನ್ನೂ ಎದುರಿಸುವದೂ, ಹುದ್ದೆದಾರರನ್ನು ಕೊಲ್ಲುವದೂ ನ್ಯಾಯವಲ್ಲಾ. ಪರಂಪರೆಯಾಗಿ ನಡದು ಬಂದ ಹಕ್ಕನ್ನು ಧನಿಗಳಿಂದ ಏಕಾಏಕಿ ತೆಗದು ಹೊಸ ಕಟ್ಟಳೆ ಏರ್ಪಡಿಸುವದು ಆಗದ ಕಾರಣ ಈ ವಿಷಯದಲ್ಲಿ ಪಾರ್ಲಿಯಮೆಂಟ ಸಭೆಯು ಪಂಚಾಯತಿಕೆ ಮಾಡುತ್ತಾರೆ.

ಸರ್ವೇ ದೇಶಗಳಲ್ಲಿ ನಾಣ್ಯಗಳು ಏಕೋ ಪ್ರಕಾರ ಸಲ್ಲ ತಕ್ಕವಾಗಿರ ಬೇಕು ಎಂತ ಫ್ರೆಂಚರು ಸೂಚಿಸಿದ ಮೇರೆಗೆ ಯುರೋಪಿನ ಸರ್ವೇ ರಾಜ್ಯಗಳಿಂದಲೂ ಅಮೇರಿಕದಿಂದಲೂ ಆಯಾ ಸರಕಾರದವರು ಕಳುಹಿಸಿ ಕೊಟ್ಟ ರಾಯಭಾರಿಗಳು ಪರೀಸಿನಲ್ಲಿ ಕೂಡಿ ಬರೋಣವಾಗಿದೆ. ಚಿನ್ನ ಬೆಳ್ಳಿ ಇವೆರಡೂ ಕೂಡಿದ ನಾಣ್ಯಗಳಿರ ಬೇಕೆಂದು ಒಬ್ಬರು, ಕೇವಲ ಬೆಳ್ಳಿ ನಾಣ್ಯಗಳಿರ ಬೇಕೆಂದು ಬೇರೊಬ್ಬರು, ಕೇವಲ ಚಿನ್ನ

ನಾಣ್ಯಗಳಿರ ಬೇಕೆಂದು ಇನ್ನೊಬ್ಬರು ಅಭಿಪ್ರಾಯ ಕೊಟ್ಟವರಾದ್ದರಿಂದ, ವಾದ ಮುಂದೆ ನಡಿಯುತ್ತಾ ಇದ್ದು, ಯಾವ ತೀರ್ಪಾದೀತೆಂಬದು ಈಗ ಹೇಳ ಕೂಡದು.

ಸ್ಪೇನ ದೇಶದ ದಕ್ಷಿಣದಲ್ಲಿ ಸೆವಿಲ್ಲ, ಗ್ರನಾದ, ಕೊರ್ದೋವ ಮುಂತಾದ ಪ್ರದೇಶಗಳಲ್ಲಿ ನೆರೆಯಿಂದಲೂ ಬಿರುಘಾಳಿಯಿಂದಲೂ ಬಹಳ ಹಾವಳಿಯಾಯಿತು.

ಈಗಿಯ ಸಮುದ್ರದಲ್ಲಿರುವಂಥಾ ನೂರು ಮೈಲು ಸುತ್ತಳತೆ ಇರುವ ಕಿಯೋ ಎಂಬ ದ್ವೀಪದಲ್ಲಿ ಕಠಿಣ ಭೂಕಂಪ ಉಂಟಾಗಿ, ಕಿಯೋ ಪಟ್ಟಣವೂ ಅನೇಕ ಹಳ್ಳಿಗಳೂ ನಾಶವಾಗಿ ಸಾವಿರ ಸಾವಿರ ಜನರು ಸತ್ತು ಹೋದರು.



ರುಸ್ಯ ಸಾಮ್ರಾಜ್ಯದ ಮಹಾರಾಜರಾಗಿದ್ದ ಅಲೆಕ್ಸಂದರ್.

ರುಸ್ಯದ ಮಹಾರಾಜರನ್ನು ನಿಹಿಲಿಸ್ಟ್ ಎಂಬ ರಾಜದ್ರೋಹಿಗಳು ವಧೆ ಮಾಡುವದಕ್ಕೆ ಎತ್ತುಗಡೆ ಮಾಡುತ್ತಿದ್ದಾರೆಂದು ಕಳದ ಪಂಚಾಂಗದಲ್ಲಿ ಹೇಳಲಾಗಿತ್ತು; ಅವರ ಸಾಹಸಪ್ರಯತ್ನವು ಇದೇ ಕಳದ ಮಾರ್ಚಿ ೧೩ಲ್ಲು ನೆರವೇರಿತು. ಅಂದು ಮಹಾರಾಜರು ಒಂದು ಉತ್ಸವ ಸಂಬಂಧವಾಗಿ ಪಟ್ಟಣದ ಬೀದಿಯಲ್ಲಿ ದೇವಾಲಯಕ್ಕೆ ಹೋಗುತ್ತಿರುವಾಗ ಸಮಯ ಸಾಧನೆ ಮಾಡುತ್ತಿದ್ದ ದ್ರೋಹಿಗಳು ಏಕಾಏಕಿ ಜ್ವಲನ ಪದಾರ್ಥಗಳು ತುಂಬಿಸಿದ ಗುಂಡು ಅವರ ಕಡೆಗೆ ಬಿಡಲಾಗಿ, ಅದು ಅವರ ಕಾಲಡಿಯಲ್ಲೇ ಒಡದು, ಎರಡು ಕಾಲೂ ಕಿಬ್ಬೊಟ್ಟೆಯೂ ಭಿನ್ನಭಿನ್ನವಾಗಿ ಹೋದವು. ಇದಾದ ಎರಡು ತಾಸುಗಳಲ್ಲಿ ಅವರು ಪ್ರಾಣ ಬಿಟ್ಟರು. ಆ ಮೇಲೆ ಅವರ ಕುಮಾರನಿಗೆ ಮೂರನೇ ಅಲೆಕ್ಸಂದರನೆಂಬದಾಗಿ ಹೆಸರಿಟ್ಟು ಪಟ್ಟಾ ಕಟ್ಟೋಣವಾಯಿತು. ಇವರೂ ತಮ್ಮ ತಂದೆಯವರಂತೆಯೇ ರಾಜ್ಯಭಾರ ಮಾಡ ನಿಶ್ಚಯಿಸಿದ್ದಾಗಾದ್ದರಿಂದ, ಪ್ರಜೆಗಳು ತಮಗೆ ಸ್ವತಂತ್ರ ಶಿಕ್ಕುವದೆಂತ ಕೋರಿದ್ದು ವ್ಯರ್ಥವಾಗಿ, ಆ ನಿಹಿಲಿಸ್ಟ್ ಪಕ್ಷದವರು ಇವರನ್ನೂ ವಧೆ ಮಾಡ ಬೇಕೆಂದು ಯತ್ನ ಮಾಡುತ್ತಿದ್ದಾರೆ. ರುಸ್ಯರು ತಮ್ಮ ಸಾಮ್ರಾಜ್ಯವನ್ನು ಇನ್ನೂ ಬೆಳಿಸ ಬೇಕೆಂದು ವಾಂಛೆ ಹಿಡಿದು, ಮಧ್ಯಾಸ್ಯದಲ್ಲಿ ಮೆರ್ವ ಶೀಮೆಯಲ್ಲಿರುವ ತೆಕ್ಕೆತುರ್ಕೋಮನ್ನರನ್ನು ಜಯಿಸಿ, ಅವರ ದೇಶವನ್ನು ತಮ್ಮ ರಾಜ್ಯಕ್ಕೆ ಕೂಡಿಸಿದ್ದಾರೆ.

ಬೆರ್ಲಿನ ಪಟ್ಟಣದಲ್ಲಾದ ತಹಾನಾಮೆ ಮೇರೆಗೆ ತುರ್ಕಿ ಸುಲ್ತಾನನು ಗ್ರೀಕ ರಾಜ್ಯಕ್ಕೆ ಥೆಸ್ಸಲಿ ಮುಂತಾದ ಕೆಲವು ಶೀಮೆ ಬಿಟ್ಟು ಕೊಡುವ ವಿಷಯದಲ್ಲಿ ಸುಲ್ತಾನನು ದಿನಾಹರಣೆ ಮಾಡುತ್ತಾ ಬಂದ ಕಾರಣ ಇನ್ನೊಂದು ಸಾರಿ ಪಂಚಾಯತರು ಕೂಡಿ ಬಂದು, ಆ ಸಂಗತಿಗೆ ಕಡೆ ಮಾಡಿದರು; ಗ್ರೀಕ ಸರಕಾರದವರೂ ಸುಲ್ತಾನ ಸರಕಾರದವರೂ

ದಸ್ತೈವಜಿಗೆ ಒಪ್ಪಿತ ಹಾಕಿ ಕಾರ್ಯ ತೀರಿಸಿ ಕೊಂಡರಾದ್ದರಿಂದ, ಆ ಬಿಟ್ಟು ಕೊಡುವ ಶೀಮೆ ವಶ ಮಾಡಿಕೊಳ್ಳುವದಕ್ಕೆ ಗ್ರೀಕ ಸೈನ್ಯವು ಹೋಗಿರುತ್ತದೆ.

ಅಮೇರಿಕದಲ್ಲಿ ಯುನೈಟೆಡ್ ಸ್ಟೇಟ್ಸ್ ಅಂದರೆ ಸಂಯುಕ್ತಸಂಸ್ಥಾನಗಳು ಎಂಬದಾಗಿ ಪ್ರಜಾಧಿಪತ್ಯದ ದೊಡ್ಡ ಶೀಮೆಯದೆ ಅಷ್ಟೆ. ಅಲ್ಲಿ ಶೀಮೆಯ ಪಾರುಪತ್ಯ ನೋಡುತ್ತಿದ್ದ ಪ್ರೆಸಿಡೆಂಟ್ ಹೇಸ್ಸ್ ಇವರ ಅವಧಿ ಮುಗಿದದ್ದರಿಂದ ಇದೇ ಮಾರ್ಚಿ ೪ಲ್ಲು ಮಿ. ಗಾರ್ಫೀಲ್ಡ್ ಇವರನ್ನು ಪ್ರೆಸಿಡೆಂಟರಾಗಿ ಆದುಕೊಳ್ಳಲಾಯಿತು. ಸದ್ಯಾ ಬಂದ ವರ್ತಮಾನದ ಮೇರೆಗೆ ಈ ಹೊಸ ಪ್ರೆಸಿಡೆಂಟರನ್ನು ಒಬ್ಬ ಅರೆಮರುಳನು ವಿನಾ ಕಾರಣವಾಗಿ ಪಿಸ್ತೂಲಿನಿಂದ ಹೊಡೆದ್ದಲ್ಲಿ ಗುಂಡು ಹೊಟ್ಟೆಯೊಳಗೆ ಶೇರಿ, ಅವರು ಬದುಕುವದು ಮೋದಂಡವಾಗಿದೆ. ಈ ಯುನೈಟೆಡ್ ಸ್ಟೇಟ್ಸ್ ಶೀಮೆಗೆ ಗ್ರೇಟ್‌ಬ್ರಿಟನ್‌ರಾಜ್ಯ ಜರ್ಮನಿ, ಇತಾಲ್ಯ ಮುಂತಾದ ವಿಲಾಯತಿಯ ಬೇರೆ ಬೇರೆ ರಾಜ್ಯಗಳಿಂದ ಲಕ್ಷಾವಧಿ ಜನರು ವರ್ಷಂಪ್ರತಿ ಹೋಗುತ್ತಾ ವಸಾಹತ ಮಾಡುತ್ತಾರೆ; ಹೀಗಾಗಿ ಜನಸಂಖ್ಯೆಯಲ್ಲಿ, ವ್ಯಾಪಾರದಲ್ಲಿ, ನಾನಾ ಯುಕ್ತಿಯ ಕೆಲಸಗಳಲ್ಲಿ ಆ ಶೀಮೆ ಈಗ ಪ್ರಖ್ಯಾತಿ ಪಡುತ್ತಾ ಬರುತ್ತದೆ. ಅಲ್ಲಿಯ ಭಕ್ತರು ಈ ದೇಶಕ್ಕೂ ಮಿಶ್ಯನೆರಿಗಳನ್ನು ಕಳುಹಿಸಿ ಕ್ರಿಸ್ತೀಯಧರ್ಮವನ್ನು ಪ್ರಸಿದ್ಧ ಮಾಡುತ್ತಾರೆ.

ಅಮೇರಿಕ ಖಂಡಕ್ಕಾಚೆ ಸಾಂದ್ವಿಚ ದ್ವೀಪಗಳೆಂದೂ ಹವ್ವೈಯಿ ದ್ವೀಪಗಳೆಂದೂ ಅನ್ನಿಸಿಕೊಳ್ಳುವ ದ್ವೀಪಸಮುದಾಯವದೆ. ೧೮೨೦ನೇ ಇಸವಿಯಲ್ಲಿ ಅಮೇರಿಕದಿಂದ ಮಿಶ್ಯನೆರಿಗಳು ಆ ದ್ವೀಪಗಳಿಗೆ ಹೋಗಿ ಕ್ರಿಸ್ತೀಯ ಧರ್ಮವನ್ನು ಪ್ರಸರಿಸುವ ಕೆಲಸ ಪ್ರಾರಂಭಿಸಿದ್ದಲ್ಲಿ, ಮೊದಲು ಕೇವಲ ಕಿರಾತರೂ ನರಭಕ್ಷಕರೂ ಆಗಿದ್ದ ಆ ದ್ವೀಪನಿವಾಸಿಗಳು ಆ ಮಿಶ್ಯನೆರಿಗಳು ಸಾರಿದ ದೇವರನ್ನು ನಂಬಿ ಕ್ರಿಸ್ತೀಯರಾಗಿ, ಈಗ ಸರ್ವ ವಿಷಯಗಳಲ್ಲಿ ಘಟ್ಟಿಗರಾಗಿ, ಉತ್ತಮ ಸ್ಥಿತಿಗೆ ಬಂದಿದ್ದಾರೆ. ಆ ದ್ವೀಪಗಳ ಅರಸ ದಾವಿದ ಕಲಾಕುವಾ ಎಂಬವನು ಲೋಕದ ಸರ್ವೇ ರಾಜ್ಯಗಳನ್ನು ನೋಡ ಬೇಕೆಂದು ಊರಿನಿಂದ ಹೊರಟವನು ಪಯಣಮಾರ್ಗವಾಗಿ ಕಲ್ಕತೆಗೆ ಬಂದು, ಅಲ್ಲಿಂದ ಮುಂಬಾಯಿ ಮಾರ್ಗವಾಗಿ ವಿಲಾಯತಿಗೆ ಹೋದವನಾದನು.

ಸರ್ವಶಕ್ತನೂ ದಯಾಪರನೂ ಆಗಿರುವ ದೇವರು ಆಕಾಶದಿಂದ ನಮಗೆ ಮಳೆಯನ್ನೂ ಫಲಫಲಿಸುವ ಕಾಲಗಳನ್ನೂ ಕೊಟ್ಟು, ನಮ್ಮ ಹೃದಯಗಳನ್ನು ಆಹಾರದಿಂದಲೂ ಆನಂದದಿಂದಲೂ ತುಂಬಿಸಿ ಒಳ್ಳೇದನ್ನು ಮಾಡಿ ತನ್ನ ನಾಮಕ್ಕೆ ಸರ್ವೇ ಜನರಿಂದ ಮಹಿಮೆ ಉಂಟು ಮಾಡಿಕೊಳ್ಳಲಿ!

* * *

ಸದಮಲ ಭಕ್ತಿಭಾವವು.

ಸದ್ಭಕ್ತಿಯೆಂದೂ ಸದಮಲಭಕ್ತಿಭಾವವೆಂದೂ ಅನ್ನಿಸಿಕೊಳ್ಳ ತಕ್ಕಂಥಾದರಲ್ಲಿ ಮೂರು ಉಂಟು; ಏನಂದರೆ:

೧. ಎಲ್ಲವೂ ದೇವರ ಕೈಯಿಂದ ಎಂಬುವ ಭಾವವು. ಎಲ್ಲವೂ ದೇವರ ಕೈಯಿಂದಲೇ, ಆತನ ವರಹಸ್ತದಿಂದಾಗಲಿ ಭಯಹಸ್ತದಿಂದಾಗಲಿ, ಉಂಟಾಗಿ ಬರುತ್ತದೆ ಎಂಬೀ ಭಕ್ತಿಭಾವವು ಬರೋಣ ಹೋಗೋಣಗಳಲ್ಲಿಯೂ ಎಲ್ಲಾ ಸುಖ ದುಃಖಗಳಲ್ಲಿಯೂ ನಮಗಿರ ಬೇಕು. ರಾತ್ರಿಗೆ ನಾವು ಶಾಂತಿಯಲ್ಲಿ ನಿದ್ದೆಗೈದು, ವಿಶ್ರಮಿಸಿಕೊಂಡು, ಪ್ರಾತಃಕಾಲಕ್ಕೆ ನಿದ್ದೆ ತಿಳಿದೆದ್ದ ಕೂಡಲೇ "ಹೊತ್ತಿನ ಕಾಂತಿ ರಾತ್ರಿಯ ಶಾಂತಿ ದೇವರ ದಯೆಯ ದಾನಗಳೇ" ಎಂದರಿತುಕೊಂಡು, ನಮ್ಮನ್ನೂ ನಮ್ಮವರನ್ನೂ ಕೃಪೆಯಿಂದ ಕಾಪಾಡಿ, ಉಳಿಸಿ, ನಮಗೆ ವಿಶ್ರಾಂತಿಯನ್ನೂ ಹೊಸ ತ್ರಾಣವನ್ನೂ ಕೊಟ್ಟ ದೇವರನ್ನು ಮನಃಪೂರ್ವಕವಾಗಿ ಕೊಂಡಾಡ ತಕ್ಕದಾಗಿದೆ. ನಮ್ಮ ವೃತ್ತಿಗೆ ಸೇರುವ ಕೆಲಸಗಳನ್ನು ತೊಡಗುವಾಗಲೂ ಸಾಗಿಸುವಾಗಲೂ ನಾವು ಎಲ್ಲವೂ ದೇವರ ದಯವೇ ಎಂಬುವ ಭಾವದಲ್ಲಿ ನೆಲೆಯಾಗಿರ ಬೇಕು. ನಮ್ಮ ಕೆಲಸದಲ್ಲಿ ಮೈಗಳ್ಳರಾಗಿರದೆ, ದೇವರು ಕೊಟ್ಟ ತನುಬಲವನ್ನೂ ಬುದ್ಧಿಶಕ್ತಿ ಮೊದಲಾದ ಶಕ್ತಿಗಳನ್ನೂ ಸಾಧನಗಳನ್ನೂ ತಕ್ಕಂತೆ ಪ್ರಯೋಗ ಮಾಡಿ, ಉಪಯೋಗಕ್ಕೆ ಹಾಕಿ, ಸಾಹಸದಿಂದಲೂ ಗೆಲುವಿನಿಂದಲೂ ಪ್ರಯತ್ನಿಸಿ, ಕಷ್ಟ ತಾಳಿ, ಮುಖವು ಬೆವರುವಷ್ಟು ಗೈಯ ಬೇಕು. ಆದರೂ ನಾವು ಕೈಲಾದಷ್ಟು ಮಾಡಿ, ಏನಾದರೊಂದು ಫಲಸಿದ್ಧಿ ಹೊಂದಿದಲ್ಲಿ ಅದು ದೇವರಿಂದಲೇ ಬಂದದು, ದೇವಾನುಗ್ರಹದಲ್ಲಿ ಎಲ್ಲ ಉಂಟು, ದೇವಾನುಕೂಲ ಎಲ್ಲಾದಕ್ಕೆ ಬೇಕೇ ಬೇಕು, ಮುಖ್ಯ ಆಧಾರವು ದೇವರೇ, ಮುಖ್ಯ ಆದಾಯವು ಆತನ ದಯವೇ ಎಂತಾ ನಮ್ಮನ್ನು ಹೆಚ್ಚಿಸಿಕೊಳ್ಳದೆ, ದೇವರನ್ನು ಕೊಂಡಾಡಿ ಘನಪಡಿಸ ಬೇಕು. ಹೀಗಿರಲಾಗಿ ನಮ್ಮ ಕೆಲಸವು ಬಾಯಿಗೊಳ್ಳುವಲ್ಲಿ, ನಮ್ಮ ವ್ಯವಸಾಯಗಳಿಗೆ ತಕ್ಕ ಫಲವು ಲಾಭವಾಗುವಲ್ಲಿ, ಧನ ಮಾನಾದಿಗಳು ನಮಗೆ ಪ್ರಾಪ್ತಿಸುವಲ್ಲಿ ನಾವು ಸೊಕ್ಕೇರದೆ, ಗರ್ವಿಷ್ಠರಾಗದೆ, ಮದದಿಂದ ಉಬ್ಬಿಕೊಳ್ಳದೆ, ನಮ್ಮನ್ನೂ ನಮ್ಮ ಬಲ ಸಾಹಸ ಜಾಣತನಗಳನ್ನೂ ಹೊಗಳಿಕೊಳ್ಳದೆ, ದೈನ್ಯಭಾವದಿಂದ ದೇವರಿಗೆ ನಾವು ಆತನ ಕೃಪೆಗೂ ಮಹಾ ದಯಕ್ಕೂ ಕೇವಲ ಅಪಾತ್ರರೇ ಎಂಬದಾಗಿ ಅರಿಕೆ ಮಾಡಿ, ಆತನ ದಯವನ್ನೇ ಹೊಗಳ ತಕ್ಕದು. ಯಾವಜ್ಜೀವದಲ್ಲಿ ನಮ್ಮೆಲ್ಲಾ ಸುಖಲಾಭ ಸಂತೋಷಗಳೂ ಹೆಂಡರೂ ಮಕ್ಕಳೂ ಮಿತ್ರರೂ ದೇವರ ಕೈಯಿಂದಲೇ ನಮಗೆ ದೊರಕಿದ್ದು ಎಂದು ದೇವರನ್ನು ಕೊಂಡಾಡುತ್ತಾ ಬರ ಬೇಕು. ಸಾಯಂಕಾಲದಲ್ಲಿ ಮಲಗಿಕೊಳ್ಳಲಿಕ್ಕೆ ಹೋಗುವಾಗ್ಯೆ, ನಾವು ಅದೇ ಭಕ್ತಿಭಾವದಲ್ಲಿ ಇರ ಬೇಕು. ನಾವು ತಾಪತ್ರಯದಲ್ಲಿ ಬಿದ್ದು, ದುಃಖ ನಷ್ಟಗಳಿಗೆ ಗುರಿಯಾಗುವಾಗಲೂ, ನಮ

ಸ್ತವು ವಿಪರೀತವೇ ಅಗಿ, ಬಹು ಅನನುಕೂಲವಾಗಿ ನಡೆಯುವ ಅವಸ್ಥೆಯಲ್ಲಿಯೂ, ದುರ್ಭಿಕ್ಷ ರೋಗಾದಿಗಳು ಅನುಭವವಾಗುವಾಗಲೂ, ಎಲ್ಲವು ದೇವರ ಕೈಯಿಂದ ಆಗುತ್ತದೆ ಎಂದಂದುಕೊಂಡು, ಆತನ ಭಯಹಸ್ತಕ್ಕೂ ಮುದ್ದಿಟ್ಟು, ಆತನಲ್ಲಿ ಭರವಸವಿಟ್ಟು, ಸಮಾಧಾನವಾಗಿರ ತಕ್ಕದು. ಎಂಥಾ ಕಠಿಣ ಪೆಟ್ಟು ನಮಗೆ ಬಿದ್ದರೂ, ಅಪಾರ ಪ್ರೀತಿಯುಳ್ಳ ತಂದೆಯ ಕೈಯಿಂದ ಬಿದ್ದದು ಎಂದು ನಂಬಿ, ಗುಣುಗುಟ್ಟದೆ, ಶಠರಾಗದೆ, ವಿಗಡಿಸಿಕೊಳ್ಳದೆ ಅದನ್ನು ತಿನ್ನ ಬೇಕಷ್ಟೇ. ಏನೇನು ಆದರೂ, ನಿನ್ನದು ಚಿತ್ತವು ಆಗಲಿ! ಎಂಧೇಳಿ, ಪ್ರಾರ್ಥನೆ ಹೆಚ್ಚು ಮಾಡಿ, ದೇವರಿಗೆ ಒಡಂಬಟ್ಟು, ಒಳಗಾಗ ಬೇಕು. ಇತರರು ನಮಗೆ ಅನ್ಯಾಯ ಮಾಡಿದರೆ, ನಮ್ಮ ಮನಸ್ಸು ಅವರ ಮೇಲೆ ಕಹಿಯಾಗಗೊಡದೆ, ಈಡಿಗೀಡು ಸಲ್ಲಿಸದೆ, ಕೆಟ್ಟದಕ್ಕೆ ಒಳ್ಳೇದನ್ನು, ಹಿಂಸೆಗೆ ಉಪಕಾರವನ್ನು, ಶಾಪಕ್ಕೆ ಆಶೀರ್ವಾದವನ್ನು ಪ್ರತಿಯಾಗಿ ಮಾಡುವ ಪಾಠವನ್ನು ಕಲಿತುಕೊಳ್ಳುವವರಾಗಿ, ಅನ್ಯಾಯವನ್ನಾದರೂ ಸೈರಿಸಿಕೊಳ್ಳ ಬೇಕು.

೨. ಎಲ್ಲವು ದೇವರ ಕೈಯಿಂದಲೇ ಎಂಬುವ ಭಕ್ತಿಭಾವಕ್ಕೆ ಎಲ್ಲವು ದೇವರ ಸಂಗದಲ್ಲಿ ಎಂಬುವ ಭಾವವು ಜೋಡಾಗಿರುತ್ತದೆ. ಮೇಲು ಆದ್ದೆಲ್ಲವೂ ದೇವರಿಂದ ಬರುವಂಥಾದಾಗಿದೆ; ಮತ್ತು ದೇವರಿಂದ ಬರುವಂಥಾದು ಎಲ್ಲವೂ ಕೇಡಿಗಾಗದೆ, ಮೇಲಿಗೆನೇ ಆಗುವಥಾದು ಅಂತಿದ್ದ ಮೇಲೆ ದೇವರ ಮಾತನ್ನಲ್ಲದೆ, ಯಾರ ಮಾತನ್ನಾದರೂ ಕೇಳಲೂ ನಂಬಿಕೊಳ್ಳಲೂ ಬಾರದು, ಹಾಗೂ ದೇವರ ಚಿತ್ತಕ್ಕೆ ವಿರೋಧವಾದ್ದನ್ನು ಮಾಡಲೂ ದೇವರ ಮಾರ್ಗವನ್ನು ತೊಲಗಿ ಬಿಡಲೂ ಬಾರದು. ಸ್ವಾಮೀ! ಸ್ವಾಮೀ! ಕರ್ತಾ! ಕರ್ತಾ! ಎಂಧೇಳುವ ಬಾಯುಪಚಾರದ ಭಕ್ತಿ ಸಲ್ಲದ ಭಕ್ತಿ. ಸ್ವಾಮಿದೇವರ ಚಿತ್ತವನ್ನು ಕೈಕೊಂಡು ಮಾಡುವವರೇ ಭಕ್ತರು. ಸ್ವಾಮಿದೇವರು “ಹೋಗು!” ಅಂದರೆ, ಹೋಗುವದು, “ಬಾ!” ಅಂದರೆ, ಬರುವದು, “ನಡೆ!” ಅಂದರೆ, ನಡೆಯುವದು, “ತಡೆ!” ಅಂದರೆ, ತಡೆಯುವದು, ಇದೇ ಸದ್ಭಕ್ತಿಯ ಲಕ್ಷಣವಾಗಿದೆ. ಸದ್ಭಕ್ತರು ತಮ್ಮ ಧನ ಮಾನಾದಿಗಳನ್ನು, ತಮ್ಮ ಪ್ರಾಣವನ್ನಾದರೂ, ಬಿಟ್ಟುಬಿಡ ಬೇಕಾದರೂ, ತಮ್ಮ ಮನಸ್ಸಾಕ್ಷಿಯಲ್ಲಿ ಕೇಳಿಸುವ ದಿವ್ಯ ಶಬ್ದಕ್ಕೂ ಸತ್ಯ ವೇದೋಕ್ತಿಗಳಿಗೂ ವಿರೋಧವಾದ್ದಕ್ಕೆ ಸೇರಿಕೊಳ್ಳರು. ಏನೊಂದು ಜಂಬರಕ್ಕೆ ಹೊರಡುವಾಗ್ಯೆ, ಶಕುನ ನೋಡದೆ, “ನನ್ನ ದಾರಿ ದೇವರು ಕಾಣಿಸಿ ಕೊಟ್ಟದೋ? ದೇವರು ನನ್ನ ಸಂಗಡ ಇದ್ದಾನೋ?” ಎಂತಾ ವಿಚಾರಿಸಿಕೊಳ್ಳುತ್ತಾರೆ; ದೇವರು ತಮ್ಮ ಸಂಗಡ ಅದಕ್ಕೆ ಬಾರನು ಎಂದು ತಿಳಿದರೆ, ಅವರು ಆ ಕೆಲಸಕ್ಕೆ, ಅದರಲ್ಲಿ ಎಷ್ಟೋ ಲಾಭ ಕಂಡರೂ, ಹೋಗರು. ಸದ್ಭಕ್ತರು ಎಲ್ಲಾದರಲ್ಲಿ ದೇವರ ಸಂಗವನ್ನೇ ಅರಸುತ್ತಾ, ಆತನನ್ನು ಹೊಂದಿ ಬೆಂಕೊಳ್ಳ ನೋಡುತ್ತಾ ಬರುವವರಾಗಿದ್ದಾರೆ. ಅವರ ಸಂಗಡ ದೇವರು ಸಹ ಇದ್ದೇ ಇರುತ್ತಾನೆ. ಆತನನ್ನು ನಿತ್ಯವೇ ಅನುಭವಿಸುತ್ತಾ ಅವರು ತಪ್ಪಿ ಹೋಗದೆ, ಎಲ್ಲಾ ಬುದ್ಧಿ ವಿದ್ಯೆಗಳನ್ನು ಮೀರುವ ಆತನ ಶಾಂತಿಯಲ್ಲಿ ಹೆಚ್ಚು ಹೆಚ್ಚಾಗಿ ಶೇರಿ ನೆಲೆಗೊಳ್ಳುತ್ತಾ ಬರುತ್ತಾರೆ. ಹಾಗೆಯೇ ಬರುವವರಾಗಿ ನಾವು

೩. ಎಲ್ಲವೂ ದೇವರ ಸೇವೆಗೂ ಸಂತೋಷಕ್ಕೂ ಆಗಲೂ ಇರಲೂ ಬೇಕು ಎಂಬುವ ಭಕ್ತಿಭಾವದಲ್ಲಿ ಸಹ ನೆಲೆಗೊಂಡು, ಭಕ್ತಿಕಾರ್ಯಪ್ರವೀಣರಾಗಿರ ಬೇಕು. ನಮ್ಮ ಜೀವವು ನಮಗೆ ದೇವರಿಂದಲೇ ದೊರಕಿರಲಾಗಿ, ಅದನ್ನು ಮತ್ತು ತನು ಮನ ಧನಗಳನ್ನೂ ಸರ್ವಸ್ವವನ್ನೂ ದೇವರ ಸೇವೆಗಿಟ್ಟು, ನಾವು ದೇವರಿಗೆನೇ ಬದುಕಿ, ಮಾಡುವಂಥಾದೆಲ್ಲವನ್ನು ದೇವರಿಗೋಸ್ಕರವೇ ಮಾಡ ಬೇಕು. ನಿತ್ಯವೇ ಮನೋವಾಕ್ಕಾಯಗಳಿಂದ ಪರಮ ತಂದೆ ದೇವರನ್ನು ಸೇವಿಸಿ ಕೊಂಡಾಡಲೂ ಆತನ ನಾಮವನ್ನು ಘನ ಪಡಿಸಲೂ ಬೇಕು. ನಮ್ಮ ಮನೆ ನಮ್ಮದಲ್ಲಾ, ದೇವರದೇ ಅಂತಾಗ ಬೇಕು. ಮಕ್ಕಳನ್ನು ದೇವರ ಮಕ್ಕಳು ಎಂದು ದೇವರ ಸಂತೋಷಕ್ಕೂ ಮಾನಕ್ಕೂ ಸದ್ಭಕ್ತಿಯಲ್ಲಿ ಬೋಧಿಸಿ, ಬೆಳಿಸಿ, ಶಿಕ್ಷಿಸಿ, ನಡಿಸ ಬೇಕು. ನಮ್ಮ ಶಕ್ತಿ, ಬುದ್ಧಿ, ಆಸ್ತಿ, ಸ್ಥಿತಿ, ಉದ್ಯೋಗ, ಅಧಿಕಾರ ಮುಂತಾದ್ದು ಸ್ವಾರ್ಥಕ್ಕಲ್ಲಾ, ಪರಾರ್ಥಕ್ಕೂ ಪರೋಪಕಾರಕ್ಕೂ ಸ್ವಾಮಿಕಾರ್ಯಕ್ಕೂ ಉಪಯೋಗವಾಗ ಬೇಕು. ಪರರಲ್ಲಿ ಸ್ನೇಹಭಾವವಿಟ್ಟು, ಪರೋಪಕಾರಧರ್ಮವನ್ನು ಕೈಕೊಳ್ಳುವದೇ ಸದ್ಭಕ್ತಿಯ ಲಕ್ಷಣವೂ ಭೂಷಣವೂ ಆಗಿದೆ. ಪರೋಪಕಾರದ ಮನಸ್ಸನ್ನು ಹುಟ್ಟಿಸದೆ, ಅಹಂಕಾರ ಡಂಭಾಚಾರಾದಿಗಳನ್ನು ಹುಟ್ಟಿಸುವ ಭಕ್ತಿ ಸದ್ಭಕ್ತಿಯಾಗಿರದೆ, ಬರೇ ಕಳ್ಳಭಕ್ತಿಯಾಗಿರುತ್ತದಷ್ಟೇ. ಕಳ್ಳಭಕ್ತಿ ನಮಗೆ ಬೇಡವೇ ಬೇಡಾ! ಸದ್ಭಕ್ತವತ್ಸಲ ದೇವರು ನಮ್ಮ ಮೇಲೆ ದಯಾಪರನಾಗಿ, ಸದಮಲ ಭಕ್ತಿಯನ್ನು ನಮ್ಮಲ್ಲಿ ಹುಟ್ಟಿಸಿರಿಸಿ, ತನ್ನ ಕೃಪೆ ದಯ ಸತ್ಯಗಳನ್ನು ನಮ್ಮ ಮುಖಾಂತರ ಇನ್ನು ಹೆಚ್ಚು ಪ್ರಸಿದ್ಧ ಮಾಡಿ, ಘನಮಾನ ಮಹಿಮೆಗಳನ್ನು ಹೊಂದುವಾತನಾಗಲಿ! ತಥಾಸ್ತು!

ಸಂಕಷ್ಟಗಳ ಪ್ರಯೋಜನ.

ಭಂಗಾರವನ್ನು ಮೂಸೆಯೊಳಗೆ ಹಾಕಿ ಬೆಂಕಿಯಲ್ಲಿಟ್ಟು ಕಾಸಿ ಕರಗಿಸುವದನ್ನು ಏನೂ ತಿಳಿಯದವನೊಬ್ಬನು ನೋಡಿ, ಇದೇನು ವಿಪರೀತ ಕೆಲಸ ಅಕ್ಕಸಾಲೆ ಮಾಡುತ್ತಾನೆ? ಎಂತ ನೆನಸ ಬಹುದು. ಆದರೆ ಅಕ್ಕಸಾಲೆ ಸುಮ್ಮನೆ ಹಾಗೆ ಮಾಡುವದಿಲ್ಲಾ, ಆ ಚಿನ್ನದಿಂದ ಏನಾದರೊಂದು ಚಲೋ ಒಡವೆ ಮಾಡ ಬೇಕೆಂದು ಕರಗಿಸುತ್ತಾನಷ್ಟೇ. ಈ ಲೋಕದಲ್ಲಿರುವಾಗ್ಯೆ ಕೊಲುಮೆಯಲ್ಲಿ ಕಾಸಲ್ಪಡುವ ಕ್ರಿಸ್ತೀಯನ ವಿಶ್ವಾಸವು ಕಡೆಗೆ ಚಲೋ ಭಂಗಾರದ ಕಿರೀಟವಾಗಿ ಮಾಡಲ್ಪಡುವದು; ದೇವರಿಗೆ ಸ್ತೋತ್ರಮಹಿಮೆ ಕೊಡುವಂಥಾದ್ದಾಗಿ ಕಾಣುವದು. ಓ ಎಂಥಾ ದಿವ್ಯ ಸುವಾರ್ತೆ! ಜೀವವನ್ನೂ ನಿರ್ಲಯವನ್ನೂ ಬೆಳಕಿಗೆ ತಂದು, ನಾವು ಶುದ್ಧರಾಗಿ ತನ್ನ ಪರಿಶುದ್ಧತ್ವದಲ್ಲಿ ಪಾಲುಗಾರರಾಗುವ ಹಾಗೆ ನಮ್ಮನ್ನು ಕೊಲುಮೆಯಲ್ಲಿ ಹಾಕುವಂಥಾ ಕರುಣಾಳು ರಕ್ಷಕನನ್ನು ನಮಗೆ ತೋರಿಸುತ್ತದೆ! (ಕ್ರೈಸ್ತಸಭಾಪತ್ರದಿಂದ.)

ಶರೀರಚಿಕಿತ್ಸೆ.

(೧೮೮೧ನೇ ಇಸವಿಯ ಪಂಚಾಂಗಧಲ್ಲಿರುವ ವಿವರದಿಂದ ಮುಂದೆ.)

ರೋಗಗಳೂ ಇವುಗಳಲ್ಲಿ ಪ್ರಯೋಗವಾಗುವ ಊರೌಷಧಗಳೂ ಇವುಗಳನ್ನು ಕುರಿತು ನಿಘಂಟುರೂಪವಾದ ಸೂಚನಾಸಾರವು.

ಕರುಳುಗಳ ವ್ಯಾಧಿ (ಎಳವು ಮತ್ತು ಇತರ ನೋವುಗಳುಳ್ಳದು)

Spasmodic and other Painful Affections of the Bowels.

ಇದನ್ನು ಕುರಿತು ಕಳೆದ ವರ್ಷದ ಪಂಚಾಗದ ೪೪ನೇ ಪಾನಿನಲ್ಲಿರುವ, "ಎಳವು ಮತ್ತು ಇತರ ನೋವುಳ್ಳ ಕರುಳು (ಅಂದರೆ ಮಲಾಶಯದ) ವ್ಯಾಧಿ" ಎಂಬದರ ಕೆಳಗೆ ಓದಿಕೊಳ್ಳ ಬೇಕು.

ಕಲಿಜೆಯ ಹಿಡತ, ಯಕೃತ್ತಿನ ಬೀಗು Congestion of the Liver.

ಮಿತಿ ತಪ್ಪಿ ಉಂಡದ್ದರಿಂದ ಈ ರೋಗವು ಉಂಟಾಗಿದ್ದರೆ, ಕೆಲೊಮೆಲ್ (Calomel[1] ಎಂಬ ರಸಕರ್ಪೂರದ ಧಾತು) ೩ ಯಾ ೪ ಗ್ರೇನ್ ರಾತ್ರಿಗೆ ತಕ್ಕೊಂಡು, ಮರು ದಿನ ಬೆಳಿಗ್ಯೆ ಕರಿಜೀರಿಗೆ (೭೪[2]) ಇಲ್ಲವೆ ಹರಳೆಣ್ಣೆ (೧೫೦[3]) ಕೊಟ್ಟು ಮಲಶೋಧನೆ ಮಾಡಿಸುವ

☞ ಮೇಲಿನ ಸೂಚನಾಸಾರದಲ್ಲಿ ಔಷಧಗಳ ತೂಕವಾಗಲಿ ಅಳತೆಯಾಗಲಿ ಇಂಗ್ಲಿಷ ಹೆಸರಿನಿಂದ ಕೊಟ್ಟಿರುವಲ್ಲಿ ಅವುಗಳಲ್ಲಿ ಒಂದೊಂದು ಈ ಊರಿನ ಯಾವ ತೂಕಕ್ಕೂ ಅಳತೆಗೂ ಸರಿ ಬೀಳುತ್ತದೆಂಬದು ಮುಂದಿನ ಪಟ್ಟಿಯಿಂದ ಗೊತ್ತು ಮಾಡ ಬಹುದು. ಔಷಧಗಳನ್ನು ತಯಾರು ಮಾಡುವಾಗ ಇದನ್ನು ಸರಿ ನೋಡಿಕೊಳ್ಳ ಬೇಕು.

ತೂಕ:

೧ ಗ್ರೇನ್=೧ಗುಲ್ಗಂಜ=೧/೪ ಮಂಜಾಟಿತೂಕ
೩೦ " =೧/೨ ಡ್ರಮ್ =೭ ೧/೨ "
೪೫ " =೩/೪ " =೧ ಪಾವಲಿತೂಕ
೬೦ " =೧ " =೧ ೧/೩ "
೯೦ " =೧ ೧/೨ " =೧/೨ ರೂ. ತೂಕ (ತೊಲೆ)
೧೮೦ " =೩ " =೧ " "
೧ ಔನ್ಸ್=೮ " =ಸುಮಾರು ೨ ೧/೨ "
೨ " =೧೬ " = " ೫ "

ಅಳತೆ:

೧ ಮಿನಿಮ್ = ೧ ಸಾಧಾರಣ ತಟುಕು*
೬೦ " = ೧ ಡ್ರಮ್ = ೧ ಚಾಸೌಟು
೪ ಡ್ರಮ್ =೧/೨ ಔನ್ಸ್ =೧ಮೇಜಿನಸೌಟು
೮ " =೧ " =೨ "
೧ ಔನ್ಸ್ =ಸುಮಾರು ೧/೪ ಕುಡುತೆ
೪ " = " ೧ " =೧/೨ ಸೇರು
೨೦ " =೧ ಪ್ಯಾಂಟ್=೧/೨ ತೀಸೆ
೪೦ " =೨ " =೧ "

* ತಟುಕು ವಿದ್ಯಮಾನಾನುಸಾರವಾಗಿ ಚಿಕ್ಕದು ದೊಡ್ಡದು ಆಗುವದುಂಟು.

[1] ೧೮೮೧ನೇ ಇಸವಿಯ ಪಂಚಾಂಗದ ೫೧ನೇ ಪಾನಿನಲ್ಲಿ ೨ನೇ ಟಿಪ್ಪಣಿ ನೋಡು.

[2] ೧೮೭೯ನೇ ಇಸವಿಯ ಪಂಚಾಂಗದ ೭೭ನೇ ಪಾನಿನಲ್ಲಿ ನೋಡು.

[3] ೧೮೮೧ನೇ ಇಸವಿಯ ಪಂಚಾಂಗದ ೫೫ನೇ ಪಾನಿನಲ್ಲಿ ನೋಡು.

ದು. ಅದಲ್ಲದೆ ಬಿಸಿನೀರಿನ ಶೇಕ (೧೦೯[1]), ಟರ್ಪೆಂಟ್ಯಾನ್ ಎಂಬ ಕರ್ಪೂರತೈಲ್ಯದ ನೀರುಗಾವು (೨೪[2]), ಇಲ್ಲವೆ ವೀಳ್ಯದೆಲೆಯ ಶೇಕ (೧೫೬[3]) ಕಲಿಜೆ ಇರುವ ಭಾಗಕ್ಕೆ ಕೊಡುವದು. ಇದರಿಂದ ಗುಣವಾಗದ ಪಕ್ಷಕ್ಕೆ, ಅದೇ ಜಾಗಕ್ಕೆ ಇಲ್ಲವೆ ಗುದದ್ವಾರದ ಅಂಚಿನಲ್ಲಿ ಜಿಗಳೆ (೧೫೭) ಕಚ್ಚಿಸಿದ್ದಾದರೆ, ಸಾಕಷ್ಟು ಉಪಶಮನವಾಗುವದು. ಇಷ್ಟೆಲ್ಲಾ ಚಿಕಿತ್ಸೆ ಮಾಡುವದಲ್ಲದೆ, ಪಥ್ಯದ ವಿಷಯದಲ್ಲಿ ಸಹ ಬಹಳ ಜಾಗ್ರತೆ ಬೇಕು; ಉತ್ತೇಜಕವಾದ ಯಾವ ಆಹಾರವಾಗಲೀ ಪಾನವಾಗಲೀ ವರ್ಜ್ಯ ಮಾಡ ಬೇಕು.

೧೫೬. ಬೀಗು ಮುಂತಾದ ಕಲಿಜೆಯ ವ್ಯಾಧಿಯಲ್ಲಿ ವೀಳ್ಯದೆಲೆಗೆ ಎಣ್ಣೆ ಹಚ್ಚಿ ಬಿಸಿ ಮಾಡಿ ಆ ಜಾಗಕ್ಕೆ ಶೇಕ ಕೊಡುವದು ಒಳ್ಳೇದು. ಇದು ಈ ದೇಶದಲ್ಲಿ ರೂಢಿಯಾಗಿದ್ದು, ವಿಲಾಯತಿಯವರ ಅನುಭವದಿಂದ ಒಪ್ಪಿಗೆಯಾಗಿ ಅದೆ. ಇದರಿಂದ ಗುಣವಲ್ಲದೆ ಬಾಧಕವೇನೂ ಇಲ್ಲದರಿಂದ ಯಾವ ಸಂಗತಿಯಲ್ಲಾದರೂ ಪರೀಕ್ಷಿಸಿ ನೋಡ ಬಹುದು. ಕೆಮ್ಮು ಮುಖ್ಯವಾಗಿ ಬಾಲ್ಯಪ್ರಾಯದಲ್ಲಿ ಉಂಟಾಗಿ, ಉಸುರುತೊಡಕಾದರೆ, ಎದೆಗೆ ಇದೇ ಶೇಕ ಕೊಟ್ಟಲ್ಲಿ ಕೂಡಲೇ ಚನ್ನಾಗಿ ಶಮನವಾಗುವದು.

೧೫೭. ಕಲಿಜೆಗೆ ಬೀಗು ಉಂಟಾದರೆ, ಕಲಿಜೆಯಿರುವ ಮೈಭಾಗಕ್ಕೆ ಜಿಗಳೆ ಕಚ್ಚಿಸುವದರಿಂದ ಬಹಳ ಪ್ರಯೋಜನವಾಗುವದು. ಆದರೆ ಗುದದ್ವಾರದ ಅಂಚಿಗೆ ಕೆಲವು ಜಿಗಳೆಗಳು ಮಾತ್ರ ಕಚ್ಚಿಸಿದ್ದಾದರೆ, ಇನ್ನಷ್ಟು ಗುಣವಾಗುವದು.[4]

ಕಲಿಜೆ (ಯಕೃತ್ತು) ಸಮ್ಮಂಧವಾದ ದೀರ್ಘ ಕಾಲದ ರೋಗ

Chronic Affections of the Liver.

ಇದಕ್ಕೆ ನವಸಾಗರ (೧೫೮) ಕೊಟ್ಟಲ್ಲಿ ಅಧಿಕ ಪ್ರಯೋಜನ ಬರುವದು.

೧೫೮. ದೀರ್ಘಕಾಲದ ಯಕೃತ್ತಿನ ವ್ಯಾಧಿಗಳಲ್ಲಿ ವೇಧನೆಯೂ ಅವಿಶ್ರಾಂತಿಯೂ ಸುಸ್ತಿಯೂ ಇದ್ದಾಗ್ಯೆ ನವಸಾಗರವನ್ನು[5] ಚಿಕ್ಕ ಪರಿಮಾಣವಾಗಿ ಕೊಡುತ್ತಾರೆ. ಹ್ಯಾಗಂದರೆ ೧೦—೧೫ ಗ್ರೇನ್ ದಿನಕ್ಕೆ ೩—೪ ಸಾರಿ ಕೆಲವು ದಿನಗಳ ವರೆಗೆ ಕೊಡುತ್ತಾ ಬರ ಬೇಕು. ಅದು ಸುಗಂಧಿಬೇರಿನ ಕಲ್ಕದಲ್ಲಿ (೧೮೭೬ನೇ ಇಸವಿಯ ಪಂಚಾಂಗದ ೨೮ನೇ ಪಾನಿನಲ್ಲಿ ಇರುವ ೧೩ನೇ ಅಂಕೆಯಲ್ಲಿ ಹೇಳಿದಂತೆ) ಹಾಕಿ ಕೊಡುವದು ಉತ್ತಮ.

---

[1] ೧೮೮೦ನೇ ಇಸವಿಯ ಪಂಚಾಂಗದ ೪೧ನೇ ಪಾನಿನಲ್ಲಿ ನೋಡು.

[2] ೧೮೭೬ನೇ ಇಸವಿಯ ಪಂಚಾಂಗದ ೩೨ನೇ ಪಾನಿನಲ್ಲಿ ನೋಡು.

[3] ಅಂದರೆ ಕಳೆದ ಇಸವಿಯ ಪಂಚಾಂಗದ ೫೬ನೇ ಪಾನಿನಲ್ಲಿ ತೀರಿದ ಅಂಕೆಯಿಂದ ಮುಂದೆ.

[4] ಜಿಗಳೆ ಕಚ್ಚಿಸುವದನ್ನು ಕುರಿತು ೧೮೮೦ನೇ ಇಸವಿಯ ಪಂಚಾಂಗದ ೩೩-೩೭ನೇ ಪಾನುಗಳಲ್ಲಿ ವಿವರಿಸಿರುತ್ತದೆ.

[5] ೧೮೭೭ನೇ ಇಸವಿಯ ಪಂಚಾಂಗದ ೨೧ನೇ ಪಾನಿನಲ್ಲಿರುವ ೫೩ನೇ ಅಂಕೆಯ ಟಿಪ್ಪಣಿಯನ್ನು ನೋಡು.

ಕಲ್ಲುವ್ಯಾಧಿ Gall Stones.

ಇದನ್ನು ೧೮೭೯ನೇ ಇಸವಿಯ ಪಂಚಾಂಗದ ೪೨ನೇ ಪಾನಿನಲ್ಲಿರುವ "ಅಶ್ಮರಿ" ಎಂಬ ಹೆಸರಿನ ಕೆಳಗೆ ನೋಡು.

ಕಾಕಮಾರಿ (ಕಾಗಿಮೋರೆ) ಬೀಜದ ವಿಷಕ್ಕೆ

Poisoning by Cocculus Indicus.

ಈ ಬೀಜವನ್ನು ತಿಂದು ವಿಷವೇರಿದ್ದಕ್ಕೆ ಮೈಲತುತ್ತು (೬೪ನೇ ಅಂಕೆಯಲ್ಲಿ[1] ಹೇಳಿದ ಪ್ರಕಾರ), ಇಲ್ಲವೆ ಸಾಸಿವೆ (೩೮ನೇ ಅಂಕೆಯಲ್ಲಿ[2] ಹೇಳಿದ ಪ್ರಕಾರ) ಕೊಟ್ಟು ಚನ್ನಾಗಿ ವಾಂತಿ ಮಾಡಿಸಿ, ಹೊಟ್ಟೆ ಖಾಲಿ ಮಾಡಿಸಿ, ತರುವಾಯ ಯಥೇಷ್ಟ ಮಾಚಿಕಾಯಿ ಕಷಾಯ (೬೫[3]) ಕೊಟ್ಟು, ಆ ಮೇಲೆ ಕರುಳುಗಳಲ್ಲಿ ವಿಷದ ಲೇಶವೇನಾದರೂ ಉಳಿದಿರುವಂಥಾದ್ದನ್ನು ಹೊರಡಿಸುವ ಬಗ್ಗೆ ಹರಳೆಣ್ಣೆ ತುಂಬಾ ಪರಿಮಾಣದಲ್ಲಿ ಕೊಟ್ಟು ಝಾಡಣೆ ಮಾಡಿಸುವದು. ಇಷ್ಟೆಲ್ಲಾದರಿಂದ ನಿಶ್ಚೇತನವೂ ಕಂಗಳವೂ ಆದ ಪಕ್ಷಕ್ಕೆ ಬ್ರಾಂಡಿ ಮಿಶ್ರವನಾಗಲೀ[4] ಇತರ ಉತ್ತೇಜಕವನ್ನಾಗಲೀ ಕೊಡ ಬೇಕಾದೀತು.

ಕಾಮದ ಉರಿ (ಲಿಂಗೇಂದ್ರಿಯದುರಿ) Irritation of the Genital Organs.

ಇದಕ್ಕೆ ಕರ್ಪೂರ ಹೊಟ್ಟೆಯಲ್ಲಿ ಕೊಟ್ಟು ನೋಡುವದು[5]; ಮತ್ತು ಬಿಳಿಗಾರ (೧೫೯), ಸುಣ್ಣದ ತಿಳಿನೀರು (೧೬೦) ಬಾಹ್ಯಲೇಪನವಾಗಿ ಪ್ರಯೋಗಿಸುವದು. ಬಿಸಿನೀರಿನ ಹಬೆಯ ಮೇಲೆ ಕೂತುಕೊಳ್ಳುವದಾಗಲಿ, ತೊಡೆ ವರೆಗೆ ಬಿಸಿ ನೀರಿನಲ್ಲಿ ಮಜ್ಜನ ಮಾಡುವದಾಗಲಿ ಬಹಳ ಶಮನಕರವಾದ್ದು. ಉರಿಯು (ಬಹುಶಾ ಆಗುವ ಮೇರೆಗೆ) ಕರುಳುಗಳಲ್ಲಿ ಹುಳ ಶೇರಿದರಿಂದ ಉಂಟಾದರೆ, ಹುಳಗಳಿಗೆ ಹೇಳಿದ ಚಿಕಿತ್ಸೆಯನ್ನು ಮಾಡ ಬೇಕು. (Crablice) ಏಡಿಯಾಕಾರದ ಹೇನೆಂಬ ಒಂದು ತರದ ಹುಳವು ಕಪ್ಪು ಮೈಯಲ್ಲಿ ದೃಷ್ಟಿಗೆ ಬೀಳುವಂಥಾದ್ದು ಪ್ರಯಾಸವಾಗಿದ್ದು, ಬಹುಶಾ ಆ ದೆಶೆಯಿಂದ ಈ ತರದ ತುರಿ ಉಂಟಾಗುವದುಂಟು. ಅಂಥಾ ಹುಳ ಆ ತುರಿಯ ಕಾರಣವಾಗಿದ್ದ ಪಕ್ಷಕ್ಕೆ, ವಿಲಾಯತೀ ಔಷಧ ಮಾರುವ ಅಂಗಡಿಗಳಲ್ಲಿ ಶಿಕ್ಕುವಂಥ (Corrosive Sublimate ಎಂಬ) ರಸಪಾಷಾಣವನ್ನು ಪ್ರಯೋಗಿಸುವದು (೧೬೧).

---

[1] ೧೮೭೮ನೇ ಇಸವಿಯ ಪಂಚಾಂಗದ ೪೭ನೇ ಪಾನಿನಲ್ಲಿ ನೋಡು.

[2] ೧೮೭೭ನೇ ಇಸವಿಯ ಪಂಚಾಂಗದ ೩೭ನೇ ಪಾನಿನಲ್ಲಿ ನೋಡು.

[3] ೧೮೭೮ನೇ ಇಸವಿಯ ಪಂಚಾಂಗದ ೪೮ನೇ ಪಾನಿನಲ್ಲಿ ನೋಡು.

[4] ೧೮೭೭ನೇ ಇಸವಿಯ ಪಂಚಾಂಗದ ೧೭ನೇ ಪಾನಿನಲ್ಲಿ f. ನೋಡು.

[5] ೧೮೮೦ನೇ ಇಸವಿಯ ಪಂಚಾಂಗದ ೩೬-೩೭ನೇ ಪಾನುಗಳಲ್ಲಿರುವ ೧೦೩ನೇ ಅಂಕೆಯಲ್ಲಿ ಹೇಳಿದ ಪ್ರಕಾರ.

೧೫೯. ಗಂಡಸರಿಗೆ ಆಗಲೀ ಹೆಂಗಸರಿಗೆ ಆಗಲೀ ಉಪಸ್ತಗಳಲ್ಲಿ ಉಂಟಾಗುವ ಉಪದ್ರಕರವಾದ ಉರಿಯನ್ನು ಶಮನ ಮಾಡುವ ಬಗ್ಗೆ, ಅರ್ಧ ಔನ್ಸ್ ಬಿಳಿಗಾರವನ್ನು ಎಂಟು ಔನ್ಸ್ ಕರ್ಪೂರದ ನೀರಿನಲ್ಲಿ[1] ಆಗಲೀ ಅಷ್ಟೇ ಖಾಲಿ ನೀರಿನಲ್ಲಿ ಆಗಲೀ ಹಾಕಿ ಕಲಕಿಸಿ, ಒಂದು ವಸ್ತ್ರದ ತುಂಡನ್ನು ಅದರಲ್ಲಿ ಅದ್ದಿ, ತುರಿಯುಳ್ಳ ಜಾಗಕ್ಕೆ ಹಚ್ಚುವದು, ಇಲ್ಲವೆ ಪಿಚಕಾರಿಯ ದ್ವಾರಾ ಪ್ರಯೋಗಿಸ ಬಹುದು.

೧೬೦. ಲಿಂಗೇಂದ್ರಿಯಕ್ಕೆ ತುರಿಯಾಗಲೀ ಉರಿಯಾಗಲೀ ಉಂಟಾದರೆ, ಸುಣ್ಣದ ತಿಳಿನೀರಿನಿಂದ[2] ತೊಳದರೆ, ತಕ್ಕಷ್ಟು ಉಪಶಮನವಾಗುವದು.

೧೬೧. (Corrosive Sublimate[3] ಎಂಬ) ರಸಪಾಷಾಣ ಮೂರು ಗ್ರೇನ್ ತೆಗದು, ಒಂದು ಔನ್ಸ್ ಗುಲಾಬಿನ ನೀರಿನಲ್ಲಿ ಹಾಕಿ ಕಲಕಿಸುವದು. ಈ ನೀರಿನಿಂದ ದಿನಕ್ಕೆ ಎರಡಾವರ್ತಿ ಆ ತುರಿಯುಳ್ಳ ಭಾಗವನ್ನು ತೊಳಿಯುವದು. ಹುಣ್ಣಾಗಲೀ [illegible]ಾಯವಾಗಲೀ ಇರುವಲ್ಲಿ ಮಾತ್ರ ಈ ನೀರು ತಾಗದಂತೆ ಜಾಗ್ರತೆ ಮಾಡಿದರೆ, ಇದರಿಂದ ಬಾಧಕವೇನೂ ಇಲ್ಲಾ.

ಕಾಲುರಿ Burning of the Feet of Natives.

ಇದಕ್ಕೆ ಗೋರಂಟಿ ಒತ್ತಡ (ಪೋಲ್ಟಿಸ್) (೧೬೨) ಕಾಲಿಗೆ ಹಚ್ಚ ಬೇಕು, ಮತ್ತು (Bromide of Potassium ಎಂಬ) ಲವಣ ೫ರಿಂದ ೧೦ ಗ್ರೇನ್ ವರೆಗೆ ಒಂದಿಷ್ಟು ನೀರಿನಲ್ಲಿ ಕಲಕಿಸಿ ದಿನಕ್ಕೆ ಎರಡು ಮೂರಾವರ್ತಿ ಕೊಡುವದು.

೧೬೨. ಗೋರಂಟಿ[4] ಎಂಬ ಎಲೆಗಳನ್ನು ಈ ಊರಿನವರು "ಕಾಲುರಿಯೋಣ" ಎಂದು ಹೇಳುವ ಉಪದ್ರವವೂ ವೇಧನೆಯೂ ಉಳ್ಳ ರೋಗದಲ್ಲಿ ಪ್ರಯೋಗಿಸಿ ನೋಡ ಬಹುದು. ಈ ಉದ್ದಿಶ್ಯ ಹಸಿ ಎಲೆಗಳನ್ನು ಸಿರ್ಕದಲ್ಲಿ ಆಗಲೀ ನಿಂಬೆರಸದಲ್ಲಿ ಆಗಲೀ

---

[1] ಇದನ್ನು ಮಾಡುವ ಕ್ರಮ ಹ್ಯಾಗಂದರೆ: ಎರಡು ದ್ರಮ್ ಕರ್ಪೂರವನ್ನು ಒಂದು ಬಾಟ್ಲಿ ನೀರಿನಲ್ಲಿ ಹಾಕಿ ಕಲಕಿಸಿ ಮುಚ್ಚಿ ಇಡುವದು. ಈ ನೀರು ಬಹಳ ಕೆಲಸಕ್ಕೆ ಬರುತ್ತದೆ. ಬೇರೆ ಔಷಧಗಳನ್ನು ಕೊಡುವದಕ್ಕೆ ಇದು ಉಪಕರಣವಾಗಿರುತ್ತದೆ. ದೊಡ್ಡವರಿಗೆ ಆದರೆ, ಒಂದು ಸಾರಿಗೆ ಒಂದು ವೈನ್ ಗ್ಲಾಸ ತುಂಬ ಕೊಡ ಬಹುದು.

[2] ಇದನ್ನು ತಯಾರು ಮಾಡುವ ಕ್ರಮವನ್ನು ಕುರಿತು ೧೮೬೬ನೇ ಇಸವಿಯ ಪಂಚಾಂಗದ ೬೦ನೇ ಪಾನಿನಲ್ಲಿ ನೋಡು.

[3] *Engl:* **Corrosive Sublimate**; ದಖ:ಹಿಂದು: ಕಿಪೀರ, ತಿವೀರಮ್; ತಮ: ವೀರಮ್, ಶವ್ವೀರಮ್; ತೆಲು: ವೀರಮೂ, ಶವ್ವೀರಮು.—ಇದು ರಸಕರ್ಪೂರದ ತರವೆಂದು ತೋರುತ್ತದೆ. ಅಂಗಡಿಗಳಲ್ಲಿ ಮಾರಲ್ಪಡುವಂಥ ಲವಣವು ತಕ್ಕಷ್ಟು ಶುದ್ಧವಾಗಿರುವದರಿಂದ ವಿಲಾಯತಿಯಿಂದ ಬರುವಂಥಾ ಲವಣಕ್ಕೆ ಬದಲಾಗಿ ಇದನ್ನು ಉಪಯೋಗಿಸ ಬಹುದಂತೆ. ಇದು ತೀವ್ರ ವಿಷವಾಗಿರುವದರಿಂದ, ಮಕ್ಕಳಾಗಲೀ ಸೇವಕರಾಗಲೀ ತಿಳಿಯದೆ ಕೈ ಹಾಕದಂತೆ, ಜೋಕೆಯಲ್ಲಿ ಇಡ ಬೇಕು.

[4] *Engl:* **Henna Shrub**; ಹಿಂದು: ಮ್ಹೇಂದೀ; ದಖ: ಮ್ಹೇಂದಿ, ಮೇಂಧಿ; ತಮ: ಮರುತೋನ್ರಿ, ಐವನಮ್; ತೆಲು: ಗೋರಂಟ; ಮಲ: ಮಯಿಲಾಂಚಿ, ಮರುತೋನ್ನಿ; ಮಹಾ: ಮೇಂಧಿ.—ಈ ಊರಿನಲ್ಲಿ ಸಾಧಾರಣವಾಗಿ ಶಿಕ್ಕುವ ಗೋರಂಟೆ ಎಂಬುವ ಮದರಂಗಿ ಗಿಡದ ಎಲೆಗಳನ್ನು ಮಕ್ಕಳು ನೀರಿನಲ್ಲಿ ಅರದು, ಆಟಕ್ಕಾಗಿ ಉಗುರುಗಳಿಗೆ ಹಚ್ಚಿ ಕೆಂಪು ಬಣ್ಣ ಮಾಡಿಕೊಳ್ಳುತ್ತಾರೆ.

ಚನ್ನಾಗಿ ಅರದು, ಅಂಗಾಲುಗಳಿಗೆ ಪೋಲ್ಟಿಸಿನಂತೆ ಹಚ್ಚುವದು. ಮತ್ತೊಂದು ಕ್ರಮವು ಕೆಲವು ಸಾರಿ ಹೆಚ್ಚು ಚನ್ನಾಗಿ ಹಿಡಿಯುವಂಥಾದು, ಯಾವದಂದರೆ: ಎಲೆಗಳನ್ನು ಜಜ್ಜಿ ಕಾಲಿಗೆ ಚನ್ನಾಗಿ ಉಜ್ಜಿ ತಿಕ್ಕುವದು. ಬೇರೆ ಕೆಲವು ಚಿಕಿತ್ಸೆಗಳ ಹಾಗೆ ಇದು ತತ್ಕಾಲಿಕ ಗುಣಕರವಾದ್ದಾಗ್ಯೂ, ಒಂದೊಂದು ಸಂಗತಿಯಲ್ಲಿ ಇದರ ಗುಣವು ತಪ್ಪದೆ ಹಿಡಿಯುತ್ತದೆ. ಆದದರಿಂದ ಇದನ್ನು ಪರೀಕ್ಷಿಸಿ ನೋಡ ತಕ್ಕದಾಗಿದೆ.

ಕಾಸರ್ಕನ ಬೀಜದ ವಿಷ Poisoning by Nux Vomica.

ಇದರ ಬೀಜವನ್ನು ಆಗಲೀ ಎಲೆಯ ರಸವನ್ನು ಆಗಲೀ ಶೇವಿಸಿದರಿಂದ ಉಂಟಾದ ವಿಷಕ್ಕೆ ಹಿಂದೆ ಕಾಕಮಾರಿ ಬೀಜದಿಂದ ಆದ ವಿಷಕ್ಕೆ ಹೇಳಿದ ಚಿಕಿತ್ಸೆಯನ್ನು ಮಾಡುವದು. ಎಳ್ಳೆಣ್ಣೆ, ತೆಂಗಿನ ಎಣ್ಣೆ, ಉಂಡಿ ಎಣ್ಣೆ, ಇಲ್ಲವೆ ಈ ತರದ ಯಾವ ಎಣ್ಣೆಯಾದರೂ ಕೊಟ್ಟಲ್ಲಿ ಅದರ ವೇಗವು ಕಡಿಮೆ ಆಗುತ್ತದಂತೆ; ಆದದರಿಂದ ಅದನ್ನು ಧಾರಾಳವಾಗಿ ಕೊಡ ಬಹುದು.

ಕಿಬ್ಬೊಟ್ಟೆ ಕುಕ್ಷಿವಾಯುವಿನಿಂದ ಉಬ್ಬಿ ಹೋಗೋಣ (ಬೀಗು), ವಾಯು, ವಾಯುವಿನಿಂದ ಉಂಟಾಗುವ ಉದರಶೂಲೆ (ಅಂತರ್ವಾಮಿ)

Flatulent Distension of the Abdomen, Flatulence, and Flatulent Colic.

ಇದೆಲ್ಲಾ ಅಜೀರ್ಣದ ಇಲ್ಲವೆ ಅಗ್ನಿಮಾಂದ್ಯದ ಲಕ್ಷಣ. ಇದಕ್ಕೆ ಓಮದ ನೀರು (**೧೫**[1]), ಮಜ್ಜಿಗೆಹುಲ್ಲಿನ ಎಣ್ಣೆ (೧೨೭[2]), ಶೂಂಠೀ ಕಲ್ಕ (೧೨೮[2]), ಇಲ್ಲವೆ ಜಟಾಮಾಂಸಿಯ ಕಲ್ಕ (೧೨೯[3]) ಕೊಡುವದು. ಅದಲ್ಲದೆ ಬಾಹ್ಯಲೇಪನವಾಗಿ ಕಿರಿಹೊಟ್ಟೆಗೆ ಸಾಸಿವೆಯ ಒತ್ತಡ (೧೩೨[4]) ಮತ್ತು ಟರ್ಪೆಂಟ್ಯಾನ್ (ಅಂದರೆ ಕರ್ಪೂರ ತೈಲ್ಯದ) ಎಣ್ಣೆಯ ನೀರುಗಾವು (೨೪[5]) ಸಹ ಕೊಡುವದು. ಕಠಿಣ ಸಂಗತಿಗಳಲ್ಲಿ ಹಿಂಗುನೀರಿನ ಪಿಚ್ಕಾರಿ (೧೦೭[6]) ಹೊಡಿಯುವದರಿಂದ ಸಾಧಾರಣವಾಗಿ ಗುಣವಾಗುವದು. (ಮಕ್ಕಳ ಉದರಶೂಲೆ, ಕರುಳುಗಳ ಎಳವು ಮುಂತಾದ್ದನ್ನು ಕುರಿತು ಇರುವ ಚಿಕಿತ್ಸೆಯನ್ನು ಸಹ ಓದಿಕೊಳ್ಳುವದು.)

---

1) ಈ ಅಂಕೆಯನ್ನು ೧೮೭೬ನೇ ಇಸವಿಯ ಪಂಚಾಂಗದ ೨೧ನೇ ಪಾನಿನಲ್ಲಿ ನೋಡು. ಈ ಪ್ರಕಾರ ದಪ್ಪ ಅಂಕೆಯಿಂದ ಸೂಚಿಸಿರುವ ಔಷಧವು ವಿಶೇಷ ಗುಣವುಳ್ಳದೆಂದು ಎಣಿಸ ಬೇಕು.

2) ೧೮೮೧ನೇ ಇಸವಿಯ ಪಂಚಾಂಗದ ೪೫ನೇ ಪಾನಿನಲ್ಲಿ ನೋಡು. (ಮತ್ತು ಮಜ್ಜಿಗೆಹುಲ್ಲನ್ನು ಕುರಿತು ೧೮೮೦ನೇ ಇಸವಿಯ ಪಂಚಾಂಗದ ೪೮ನೇ ಪಾನಿನಲ್ಲಿರುವ ೨೨೧ನೇ ಅಂಕೆಯ ಟಿಪ್ಪಣಿ ಸಹ ಸರಿ ನೋಡುವದು.)

3) ೧೮೮೧ನೇ ಇಸವಿಯ ಪಂಚಾಂಗದ ೪೨ನೇ ಪಾನಿನಲ್ಲಿ ನೋಡು.

4) ಅದೇ ಇಸವಿಯ ಪಂಚಾಂಗದ ೪೨ನೇ ಪಾನಿನಲ್ಲಿ ನೋಡು.

5) ೧೮೭೬ನೇ ಇಸವಿಯ ಪಂಚಾಂಗದ ೭೨ನೇ ಪಾನಿನಲ್ಲಿ ನೋಡು.

6) ೧೮೮೦ನೇ ಇಸವಿಯ ಪಂಚಾಂಗದ ೬೯ನೇ ಪಾನಿನಲ್ಲಿ ನೋಡು.

ಕಿಲುಬಿನ ವಿಷಕ್ಕೆ Poisoning with Verdigris.

ಕೋಳಿಮೊಟ್ಟೆಯ ಬಿಳಿ ರಸವನ್ನು ಸಾಕಷ್ಟು ಕುಡಿಸುವದು. ಅದು ಶಿಕ್ಕದಿದ್ದರೆ, ಅಕ್ಕಿ ಹಿಟ್ಟನ್ನು ಹಾಲಿನಲ್ಲಿ ಕಲಸಿ ಕುಡಿಸುವದು.

ಕಿವಿನೋವು Earache.

ಇದಕ್ಕೆ (Laudanum) ಎಂಬ ಅಫೀಮಿಯ ಸತ್ವ ಮತ್ತು ಸಾಧಾರಣ ಯಾವದಾದರೂ ಎಣ್ಣೆ, ಇವೆರಡನ್ನೂ ಸಮಾಂಶ ತೆಗದು ಕೂಡಿಸಿ, ಒಂದು ಹತ್ತಿಯ ಗಿಡ್ಡಿಯನ್ನು ಆದರೊಳಗೆ ಅದ್ದಿ ಕಿವಿಯ ದ್ವಾರಕ್ಕೆ ತೂರುವದು; ಅದು ಬಹಳ ಒಳಗೆ ಶೇರದ ಹಾಗೆ ಮಾತ್ರ ಜಾಗ್ರತೆ ತೆಗದುಕೊಳ್ಳ ಬೇಕು. ಇದಲ್ಲದೆ ನೀರುಳ್ಳಿಯ ಒತ್ತಡ[1] ಸಹ ಹಚ್ಚುವದು ಒಳ್ಳೇದು. ಹ್ಯಾಗಂದರೆ ಎರಡು ದೊಡ್ಡ ನೀರುಳ್ಳಿ ಗಡ್ಡೆಗಳನ್ನು ಬೆಂಕಿಯಲ್ಲಿ ಹಾಕಿ ಸುಟ್ಟು, ಚನ್ನಾಗಿ ಬೆಂದು ಮೆತ್ತಗಾದ ಮೇಲೆ ತೆಗದು, ಹೊರಗಿನ ಶಿಪ್ಪೆ ಸುಲಿದು, ಚನ್ನಾಗಿ ಅರದು, ಒಂದು ಮಜಲೀನ ವಸ್ತ್ರದ ತುಂಡಿನ ಮೇಲೆ ಹಾಕಿ, ಬಿಸಿ ಇರುವಾಗಲೆ ನೋವುಳ್ಳ ಹೊರಭಾಗಕ್ಕೆ ಹಚ್ಚುವದು.

ಕಿವಿಯಿಂದ ಕೀವು ಸೋರುವದು (ನಂಜುಶರೀರಿಗಳಿಗೆ)

Discharges from the Ear in Scrofulous Subjects.

ಇದಕ್ಕೆ ಸುಣ್ಣದ (೧೭೩) ತಿಳಿನೀರಿನಿಂದಾಗಲೀ, ಉಗುರುಬೆಚ್ಚಗೆ ನೀರಿನಿಂದಾಗಲೀ, ಹಾಲು ಮತ್ತು ನೀರು ಕೂಡಿಸಿ ಆಗಲೀ ದಿನಂಪ್ರತಿ ಕಿವಿಗೆ ಪಿಚ್ಚಕಾರಿ ಹೊಡಿಯುವದು. ಮತ್ತು ಮೀನಿನ ಎಣ್ಣೆ[2] ಹೊಟ್ಟೆಯಲ್ಲಿ ಕೊಡುವದು.

೧೭೩. ಸುಣ್ಣದ ತಿಳಿನೀರು[3] ಒಂದಿಷ್ಟು ತೆಗದು, ಅದಕ್ಕೆ ಅಷ್ಟೇ ಹಾಲಾಗಲೀ ನೀರಾಗಲೀ ಬೆರಸಿ, ಅದರಿಂದ ಪಿಚ್ಚಕಾರಿ ಹೊಡಿಯುವದು ನಂಜು ದೇಹಿಗಳಿಗಾಗಲೀ ಇತರ ಮಕ್ಕಳಿಗಾಗಲೀ ಕಿವಿಯಿಂದ ಇಲ್ಲವೆ ಮೂಗಿನಿಂದ ಕೀವು ಸೋರುವದಕ್ಕೆ ಒಳ್ಳೇದು.

ಕಿವಿಯಲ್ಲಿ ಶಬ್ದವಾಗಲೀ ಝೀಂಕಾರವಾಗಲೀ ಆಗುವದು ವಿಶೇಷವಾಗಿ ಕಿವಿಯಲ್ಲಿ ಜಿಗಟು ಜಮೆಯಾಗಿ ಒಣಗಿದರಿಂದ ಆಗಿರುತ್ತದೆ. ಇದನ್ನು ನಿವಾರಿಸುವ ಬಗ್ಯೆ ಮಾಡ ಬೇಕಾದ್ದು ಬೇರೇನೂ ಇಲ್ಲ: ತೆಂಗಿನ ಇಲ್ಲವೆ ಹರಳೆಣ್ಣೆಯ ಒಂದು ಯಾ ಎರ

---

[1] ಈ ನೀರುಳ್ಳಿಯ ಒತ್ತಡವನ್ನು ಕುರಿತು (All about Everything) "ಎಲ್ಲಾ ಹಲವು ವಿಷಯ" ಎಂಬ ಪುಸ್ತಕದ ೨೭೫ನೇ ಪಾನಿನಲ್ಲಿ ಸಹ ಓದಿ ನೋಡ ಬಹುದು.

[2] ಇದನ್ನು ಮಾಡುವ ಇಲ್ಲವೆ ತಕ್ಕೊಳ್ಳುವ ಕ್ರಮವನ್ನು ಕುರಿತು ೧೮೭೭ನೇ ಇಸವಿಯ ಪಂಚಾಂಗದ ೨೭ನೇ ಪಾನಿನ ೭ನೇ ಅಂಕೆಯಲ್ಲಿಯೂ ಅದರ ಟಿಪ್ಪಣಿಯಲ್ಲಿಯೂ ನೋಡು.

[3] ಇದನ್ನು ಮಾಡುವ ಕ್ರಮವನ್ನು ಕುರಿತು ೧೮೭೭ನೇ ಇಸವಿಯ ಪಂಚಾಂಗದ ೩೦ನೇ ಪಾನಿನಲ್ಲಿ ನೋಡು.

೫೦ ನಿನ್ನ ಬಲಗೈಯನ್ನು ಹಿಡಿದು, ಭಯಪಡ ಬೇಡ, ನಾನು ನಿನಗೆ ಸಹಾಯ ಮಾಡುತ್ತೇನೆಂದು

ಡು ತಟಕು ಕಿವಿಯೊಳಗೆ ಬಿಟ್ಟು, ಒಂದು ಎರಡು ತಾಸು ಸುಮ್ಮಗಿರುವದು. ಆ ಮೇಲೆ ಉಗುರುಬೆಚ್ಚಗೆ ನೀರಿನಿಂದಾಗಲೀ ಸಾಬೂನಿನ ನೀರಿನಿಂದಾಗಲೀ ದಿನಕ್ಕೆ ಎರಡು ಮೂರಾವರ್ತಿ ಪಿಚ್ಚಕಾರಿ ಹೊಡಿಯುವದು. ಇದರಿಂದ ಕಿವಿನೋವು ಸಹ ಉತಾರಾಗುವದು.

ಕಿವಿಹಾವು ಕಚ್ಚಿದ ವಿಷಕ್ಕೆ Venomous Bites of Centipede.

ಇದಕ್ಕೆ ಕಳೆದ ವರ್ಷದ ಪಂಚಾಂಗದ ೫೦ನೇ ಪಾನಿನಲ್ಲಿ "ಕಣಜದ ಹುಳ ಚುಚ್ಚಿದಕ್ಕೆ" ಹೇಳಿದ ಚಿಕಿತ್ಸೆಯನ್ನು ಮಾಡುವದು.

ಕೀಲ್ಲುಗಳ ಬಾವು ಅಥವಾ ನೋವು, (ಪೆಟ್ಟಿನಿಂದಾಗಲೀ ಜಜ್ಜಿ ಹೋದದರಿಂದಾಗಲೀ ಉಂಟಾಗುವ) ಗಂಟುಗಳ ಬೆಳವು

Injuries or Enlargement of the Joints.

ಪ್ರಾರಂಭ ಸ್ಥಿತಿಯಲ್ಲಿ ಪಟಿಕಾರದ ನೀರು (೧೨೩[1]), ಇಲ್ಲವೆ ನವಸಾಗರದ ನೀರು (೧೧೭[2]) ಹಚ್ಚುವದು. ಆ ಮೇಲೆ ಕರ್ಪೂರದ ತೈಲ್ಯ (೧೧೯[3]), ಇಲ್ಲವೆ ಟರ್ಪೆಂಟ್ಯಾನ್ ಎಣ್ಣೆಯ (೧೨೨[4]) ಲೇಪ ಮಾಡ ಬಹುದು. ಗಂಟುಗಳ ಬೆಳವು ದೀರ್ಘ ಕಾಲದ್ದಾಗಿದ್ದರೆ, ಅದಕ್ಕೆ ಜಾಫಲದ ತೈಲ್ಯ (೧೬೪) ಹಚ್ಚುವದು. ನಂಜು ಶರೀರದ ದೆಶೆಯಿಂದ (ಗಂಡಮಾಲೆಯ ಸ್ವಭಾವದ) ಗಂಟುಗಳ ಬೆಳವು ಇದ್ದವರಿಗೆ ಮೀನಿನ ಎಣ್ಣೆ ಕೊಟ್ಟು ದೇಹದ ಆರೋಗಣೆ ಮಾಡ ಬೇಕು.

೧೬೪. ಅರ್ಧ ಔನ್ಸ್ ಜಾಫಲದ ಎಣ್ಣೆ, ಮೂರುವರೆ ಔನ್ಸ್ ತೆಂಗಿನ ಅಥವಾ ಎಳ್ಳೆಣ್ಣೆ, ಇವೆರಡನ್ನು ಚನ್ನಾಗಿ ಕಲಕಿಸಿ ಹಚ್ಚುವದು. ಈ ಮಿಶ್ರತೈಲ್ಯವು ಪ್ರಯೋಜನಕರವಾದ ಉತ್ತೇಜಕವಾಗಿರುತ್ತದೆ. ಇದನ್ನು ಹಚ್ಚಿದ್ದಾದರೆ, ಚೆಳ್ಳೆಯಂತೆ ಎದ್ದು, ಸೋರಿ, ದೀರ್ಘಕಾಲದ ವಾತ, ಪಕ್ಷವಾತ, ಗಂಟುಗಳ ವ್ಯಾಧಿ, ಕಫಕೋಶದ ಕ್ಷಯ, ದೀರ್ಘಕಾಲದ ನೇವಸ, ಇವುಗಳಲ್ಲಿ ವಿಶೇಷ ಗುಣ ಕೊಡುತ್ತದೆ.

ಕೀವು ಸೋರುವ ಹುಣ್ಣು Ulcers.

ಇದಕ್ಕೆ ಗುಣಕರವಾಗಿ ಮಾಡ ತಕ್ಕ ಚಿಕಿತ್ಸೆ ಹ್ಯಾಗಂದರೆ,—ಬಾಹ್ಯಲೇಪನವಾಗಿ ಮೈಲತುತ್ತಿನ ನೀರು (೧೬೫), ಜೇನುತುಪ್ಪದ ಮಧುತೈಲವೆಂಬ ಮುಲಾಮು

---

[1] ೧೮೮೦ನೇ ಇಸವಿಯ ಪಂಚಾಂಗದ ೪೮ನೇ ಪಾನಿನಲ್ಲಿ ನೋಡು.

[2] ಅದೇ ಇಸವಿಯ ಪಂಚಾಂಗದ ೪೪ನೇ ಪಾನಿನಲ್ಲಿ ನೋಡು.

[3] ಅದೇ ಇಸವಿಯ ಪಂಚಾಂಗದ ೪೬ನೇ ಪಾನಿನಲ್ಲಿ ನೋಡು.

[4] ಅದೇ ಇಸವಿಯ ಪಂಚಾಂಗದ ೪೮ನೇ ಪಾನಿನಲ್ಲಿ ನೋಡು.

(೭೨[1]), ಎಣ್ಣೆಯ ಲೇಪ (೧೬೬), ತಣ್ಣೀರಿನ ಶೇಕ(೧೧೬[2]), ಅಕ್ಕೀಪೋಲ್ಟಿಸ್(೧೧೮[3]) ಸಹ ಸಂಗತ್ಯಾನುಸಾರವಾಗಿ ಲೇಪಿಸಿ ಪ್ರಯೋಗಿಸುವದು. ಹುಣ್ಣಿನಿಂದ ದುರ್ವಾಸನೆಯುಳ್ಳ ಕೀವು ಸೋರಿದರೆ, ಇದ್ದಲಿನ ಪೋಲ್ಟಿಸ್ (೬೮[4]) ಹಚ್ಚುವದು. ಸೋರುವದು ವಿಶೇಷವಾದರೆ, ಕಾಚಿನ ನೀರು ಇಲ್ಲವೆ ಮುಲಾಮು (೧೬೭), ಮತ್ತು ಅಳಲೆ ಕಾಯಿಯ ಮುಲಾಮು (೧೬೮) ಸಹ ಹಚ್ಚುವದು. ಬಿಡದೆ ಕೀವು ಸೋರುತ್ತಾ ಕೊಳಿಯಲಿಕ್ಕೆ ಆದ ಹುಣ್ಣುಗಳಿಗೆ ಪಟಕಾರದ ಮುಲಾಮು (೧೬೯), ಬಿಳಿಗಾರದ ನೀರು (೧೭೦), ಬೇವಿನ ಎಲೆಗಳ ಪೋಲ್ಟಿಸ್ (೧೭೧), ಜಾಯಿಕಾಯಿಯ ಎಣ್ಣೆ(೧೭೨), ಹೆಂಡದ ಪೋಲ್ಟಿಸು (೬೬[5]), ಟರ್‌ಪೆಂಟ್ಯಾನ್ ಮುಲಾಮು (೭೦[6]), ದಾಮರ ಯಾನೆ ರೋಜಿನ ಧೂಪದ ಮುಲಾಮು (೭೨[7]) ಸಹ ಹಚ್ಚುವದು. ಕೃಷಿಯೆಂಬ ನೀರಿನ ಚಿಕಿತ್ಸೆಯು (೬೨[8]) ಹುಣ್ಣಿನಲ್ಲಿ ಕೀವುಗಟ್ಟದ ಹಾಗೆ ಮಾಡುವದಕ್ಕೂ, ಹುಣ್ಣು ಆರೋಗ್ಯದ ಸ್ಥಿತಿಗೆ [illegible]ರುವದಕ್ಕೂ ಬಹಳ ಪ್ರಯೋಜನಕರವಾದ್ದು. ಹುಣ್ಣಿಗೆ ವೇಧನೆಯೂ ಉರಿಯೂ ವಿಶೇಷವಿದ್ದು ನಿದ್ರೆಗೆ ಅಭ್ಯಂತರವಾದ ಪಕ್ಷಕ್ಕೆ, ಅಫೀಮಿಯಾಗಲೀ (೬೯[9]), ಉಮ್ಮತ್ತದ ಧೃತಿಯಾಗಲೀ (೧೭೩) ಕೊಡುವದು. ಹುಣ್ಣಿನ ಮೇಲೆ ವಿಶೇಷ ದುರ್ವಾಸನೆ ಎದ್ದರೆ, ಅದಕ್ಕೆ ಮೈಲತುತ್ತಿನ ನೀರು (೧೬೫) ಹಚ್ಚುವದು. ಯಾವ ಸಂಗತಿಯಲ್ಲಾದರೂ ಹುಣ್ಣಿಗೆ ಕಾರಣವಾದ ದೇಹದೊಳಗಣ ಅಕ್ರಮವನ್ನು ನಿವಾರಿಸಿ, ರಕ್ತಶುದ್ಧಿಯಾಗುವ ಬಗ್ಗೆ ಸುಗಂಧಿಬೇರಿನ ಕಲ್ಕವಾಗಲೀ, (೧೩[10]), ಒಂದೆಲಗದ ಚೂರ್ಣವಾಗಲೀ(೧೭೪), ಎಕ್ಕೆಗಿಡದ ಎಲೆಯ ಚೂರ್ಣವಾಗಲೀ(೧೭೫) ಹೊಟ್ಟೆಯಲ್ಲಿ ಕೊಡುವದು ಬಹಳ ಪ್ರಯೋಜನಕರವೇ. ನಂಜುಶರೀರಿಗಳಿಗೆ ಉಂಟಾಗುವ ಹುಣ್ಣುಗಳಿಗಾಗಿ ಮೀನಿನ ಎಣ್ಣೆ (೭[11]) ಹೊಟ್ಟೆಗೆ ಕೊಡುವದು ಅವಶ್ಯವೂ ಗುಣಕರವೂ ಆಗಿದೆ.

೧೬೫. ಕಠಿಣ ತರದ, ಬೇಗ ಮಾಯದೆ ಇರುವ ಹುಣ್ಣುಗಳಿಗೆ ಬೇರೆ ಔಷಧಗಳು ಹಿಡಿಯದೆ ಹೋದಾಗ್ಯೂ, ಮೈಲತುತ್ತಿನ ನೀರು ಹುಣ್ಣಿನ ಸ್ಥಿತಿಗನುಸಾರವಾಗಿ ಎರಡು ಗ್ರೇನ್ ಹಿಡಿದು ಹತ್ತು ಗ್ರೇನ್ ವರೆಗೆ ಒಂದು ಔನ್ಸ್ ನೀರಿನಲ್ಲಿ ಕಲಕಿಸಿ

---

1) ೧೮೭೮ನೇ ಇಸವಿಯ ಪಂಚಾಂಗದ ೫೨ನೇ ಪಾನಿನಲ್ಲಿಯೂ, ಅದರ ೭ನೇ ಟಿಪ್ಪಣಿಯಲ್ಲಿಯೂ ನೋಡು.

2) ೧೮೮೦ನೇ ಇಸವಿಯ ಪಂಚಾಂಗದ ೪೪ನೇ ಪಾನಿನಲ್ಲಿ ನೋಡು.

3) ಅದೇ ಇಸವಿಯ ಪಂಚಾಂಗದ ೪೫ನೇ ಪಾನಿನಲ್ಲಿ ನೋಡು.

4) ೧೮೭೮ನೇ ಇಸವಿಯ ಪಂಚಾಂಗದ ೫೦ನೇ ಪಾನಿನಲ್ಲಿ ನೋಡು.

5) ಅದೇ ಇಸವಿಯ ಪಂಚಾಂಗದ ೪೯ನೇ ಪಾನಿನಲ್ಲಿ ನೋಡು.

6) ಅದೇ ಇಸವಿಯ ಪಂಚಾಂಗದ ೫೧ನೇ ಪಾನಿನಲ್ಲಿ ನೋಡು.

7) ಅದೇ ಇಸವಿಯ ಪಂಚಾಂಗದ ೫೨ನೇ ಪಾನಿನಲ್ಲಿ ನೋಡು.

8) ಇದು ಅದೇ ಇಸವಿಯ ಪಂಚಾಂಗದ ೪೯-೫೦ನೇ ಪಾನುಗಳಲ್ಲಿ ವಿವರಿಸಿರುತ್ತದೆ.

9) ಅದೇ ಇಸವಿಯ ಪಂಚಾಂಗದ ೫೦-೫೧ನೇ ಪಾನುಗಳಲ್ಲಿ ನೋಡು.

10) ೧೮೬೬ನೇ ಇಸವಿಯ ಪಂಚಾಂಗದ ೨೮ನೇ ಪಾನಿನಲ್ಲಿ ನೋಡು.

11) ಅದೇ ಇಸವಿಯ ಪಂಚಾಂಗದ ೨೬ನೇ ಪಾನಿನಲ್ಲಿ ನೋಡು.

GOVERN
LIBRARY
Acc. No.
CGE

ಬಿಡದೆ ಹಚ್ಚುವದರಿಂದ ಬಹುಶಾ ವಾಸಿಯಾಗುವದು. ಪ್ರಾರಂಭದಲ್ಲಿ ಬರೇ ನೀರಿನಿಂದ ತೊಳದು, ಆ ಮೇಲೆ ಮೈಲತುತ್ತು ಬಹಳ ಸ್ವಲ್ಪ ಪರಿಮಾಣದಲ್ಲಿ ಹಾಕಿ ಮಾಡಿದ ನೀರಿನಿಂದ ಬೆಳಿಗ್ಯೆಯೂ ಸಾಯಂಕಾಲವೂ ಆ ಹುಣ್ಣನ್ನು ತೊಳದು, ನಡುವೆ ಆಗಾಗ್ಯೆ ಬರೇ ನೀರಿನಿಂದಲೂ (೬೭) ತೊಳಿಯುವದು. ಈ ಪ್ರಕಾರ ತೊಳಿಯುವದರಿಂದ ಆ ಹುಣ್ಣಿನ ಮೇಲೆ ಇದ್ದ ಉರಿಯು ಸ್ವಲ್ಪ ಶಮನವಾದ ಪಕ್ಷಕ್ಕೆ, ಮೈಲತುತ್ತು ಹತ್ತು ಗ್ರೇನ್ ವರೆಗೆ ಹೆಚ್ಚಿಸಿ ಮಾಡಿದ ನೀರಿನಿಂದ ತೊಳಿಯಲಾಗಿ ಹುಣ್ಣು ಸಾಧಾರಣವಾಗಿ ಮಾಯುತ್ತಾ ಬರುವದು. ಹುಣ್ಣಿನ ಅಂಚುಗಳು ಘಟ್ಟಿಯಾಗಿ, ಸವಿಯದೆ ಇದ್ದ ಪಕ್ಷಕ್ಕೆ, ಎರಡು ಮೂರು ದಿವಸಕ್ಕೆ ಒಂದಾವರ್ತಿ ಅಂಚುಗಳನ್ನು ಮೈಲತುತ್ತಿನ ತುಂಡಿನಿಂದ ತಡವ್ಯಾಡಿಸುವದು; ಮತ್ತು ಹುಣ್ಣಿನ ಮೇಲೆ ದುರ್ಮಾಂಸವೆದ್ದಲ್ಲಿಯೂ ಈ ಪ್ರಕಾರ ಮಾಡ ಬಹುದು.

೧೬೬. ಎಳ್ಳೆಣ್ಣೆ[1] ಹಿಂದುಸ್ಥಾನದಲ್ಲಿ ಎಲ್ಲಿಯೂ ಶಿಕ್ಕುತ್ತದೆ; ನೀರು ಬೆರಿಸದೆ ಸರಿಯಾಗಿ ಗಾಣ ಹಾಕಿ ತಯಾರು ಮಾಡಿದ ಪಕ್ಷಕ್ಕೆ, ವೈದ್ಯೋಪಯೋಗಗಳಿಗೆ ಇಪ್ಪೇ ಎಣ್ಣೆ (Olive oil) ಯಷ್ಟೆ ಸರಿಯಾಗಿ ಬಳಿಸಲಿಕ್ಕೆ ಬರುತ್ತದೆ. ಮೈಗೆ ಬೆಂಕಿ ತಾಗುವದು, ಇಲ್ಲವೆ ಹುಣ್ಣಾಗುವದು ಮುಂತಾದ ಅನುಪತ್ಯಕ್ಕಾಗಿ ಈ ಎಣ್ಣೆಯನ್ನು ದಾಸ್ತಾನಾಗಿ ಇಟ್ಟು ಕೊಳ್ಳುವದು ಒಳ್ಳೇದು. ಹುಣ್ಣು, ಕೀವಾದ ಘಾಯಗಳು, ಇಂಥಾದಕ್ಕೆ ಎಣ್ಣೆ ಹಚ್ಚುವ ಕ್ರಮವನ್ನು ಮುಂಬಯಿಯಲ್ಲಿ ಫಲಕರವಾಗಿ ಅನುಸರಿಸಿದ್ದಾರೆ. ಹ್ಯಾಗಂದರೆ: ಒಂದು ಬರೇ ಅರಿವೆಯ ಚಿಂದಿಯನ್ನು ತಾಜಾ ಎಳ್ಳೆಣ್ಣೆಯಲ್ಲಿ ನನೆಸಿ, ಹುಣ್ಣಿನ ಮೇಲೆ ತಪ್ಪದೆ ಇಡುವದು; ಎಣ್ಣೆ ಆರಿದ ಪಕ್ಷಕ್ಕೆ ಆಗಾಗ್ಯೆ ಆ ಅರಿವೆಯ ಮೇಲೆ ಎಣ್ಣೆ ಬಿಡುತ್ತಾ ಇರ ಬೇಕು. ಇದು ವಿಶೇಷವಾಗಿ ಬೇಸಿಗೆಕಾಲದಲ್ಲಿ ಬೇರೆ ಲೇಪಕ್ಕಿಂತಲೂ ವಿಶೇಷ ಗುಣಕರವೆಂತ ಹೇಳುತ್ತಾರೆ.

೧೬೭. ದೀರ್ಘಕಾಲ ವ್ರಣವಾಗಿ, ದುರ್ಗಂಧ ರೇಶಿ ಸೋರುವದಾದರೆ, ಒಂದು ದ್ರಮ್ ಕಾಚು ಚನ್ನಾಗಿ ವಸ್ತ್ರಗಾಳಿತ ಹುಡಿ ಮಾಡಿ, ಅದಕ್ಕೆ ಒಂದು ಔನ್ಸ್ ಚರ್ಬಿ ಇಲ್ಲವೆ ಜೇನುತುಪ್ಪದ ಮುಲಾಮು (೭೨) ಕೂಡಿಸಿ ಚನ್ನಾಗಿ ಮರ್ಧಿಸಿ ಮಾಡಿದ ಮುಲಾಮು ಹಚ್ಚಿದ್ದಾದರೆ, ಬಹುಶಾ ತ್ವರ್ಯದಲ್ಲಿ ವಾಶಿಯಾಗುವದು. ಕಠಿಣ ಸಂಗತಿಗಳಲ್ಲಿ ಆ ಮುಲಾಮಿಗೆ ೧೬ ಗ್ರೇನ್ ಮೈಲತುತ್ತಿನ ವಸ್ತ್ರಗಾಳಿತ ಹುಡಿ ಬೆರಸಿದರೆ, ಅದರ ಗುಣ ಇನ್ನಷ್ಟು ಹೆಚ್ಚುವದು. ಇಂಥಾ ಹಳೆ ಹುಣ್ಣುಗಳಿಗೆ ಕಾಚುವಿನದು ಇನ್ನೊಂದು ಚಿಕಿತ್ಸೆ ಮಾಡುವ ರೀತಿ ಯಾವದಂದರೆ: ಕಾಚು ೬ ದ್ರಮ್ ಒಂದು ಅರ್ಧ ಬಾಟ್ಲೆ ಬಿಸಿ ನೀರಿನಲ್ಲಿ ಕರಗಿಸಿ ತೆಗದ ಕಲ್ಕದಿಂದ ದಿವಸಕ್ಕೆ ಎರಡು ಮೂರು ಸಾರಿ ತೊಳದು, ಆಗಾಗ್ಯೆ ಜೇನುತುಪ್ಪದ ಮುಲಾಮು (೭೨) ಹಚ್ಚುವದು. ಗರ್ಭಿಣಿಗಳಿಗೆ ಮೊಲೆ

---

[1] *Engl:* Sesamum, Jinjili or Til Oil; ಹಿಂದು: ತೀಲ್‌ಕಾ ತೇಲ್, ಮಿಾಠಾ ತೇಲ್; ತಮ: ನಲ್ಲೆಣ್ಣೈ; ತೆಲು: ಮಂಚನೂನೆ; ಮಲ: ನಲ್ಲೆಣ್ಣಾ; ಮಹಾ: ಚೊಖೋಟಾತೇಲ್; ಗುಜ: ಮಿಾಠೊತೇಲ್.

ತೊಟ್ಟುಗಳಿಗೆ ಹುಣ್ಣಾದ್ದಾದರೆ, ಆ ಕಲ್ಕದಿಂದ ಪ್ರಸೂತವಾಗುವದಕ್ಕೆ ಮೊದಲು ಆರು ವಾರಗಳ ತನಕ ದಿನಾಲು ತೊಳಿಯುತ್ತಾ ಇದ್ದ ಪಕ್ಷಕ್ಕೆ, ತನ್ನಷ್ಟಕ್ಕೆ ಆ ಹುಣ್ಣು ವಾದು ಬರುವದಲ್ಲದೆ ಸ್ತನದ ನರಗಳು ಬಲಗೊಂಡು, ಗರ್ಭಿಣಿ ಹೆತ್ತ ತರುವಾಯ ಮಗುವು ಮೊಲೆ ತಿನ್ನಲಿಕ್ಕೆ ತೊಡಗುವಾಗ ಬಾಧಕವೇನೂ ಆಗದಂತೆ ಮಾಡುತ್ತದೆ.

೧೬೮. ದೀರ್ಘಕಾಲದ ವ್ರಣಗಳು, ಘಾಯದಿಂದಾದ ವ್ರಣಗಳು, ಮತ್ತು ಬಹಳ ರೇಶಿ ಸೋರುವ ಇತರ ಚರ್ಮವ್ಯಾಧಿಗಳು ಅಳಲೆಕಾಯಿಯ ಮುಲಾಮಿನ ಪ್ರಯೋಗದಿಂದ ಬಹುಶಾ ಗುಣ ಹೊಂದುವದುಂಟು. ಹ್ಯಾಗಂದರೆ: ಅಳಲೆಕಾಯಿಗಳನ್ನೂ ಒಂದಿಷ್ಟು ಕಾಚನ್ನೂ ಚನ್ನಾಗಿ ಒಣಗಿಸಿ, ವಸ್ತ್ರಗಾಳಿತ ಹುಡಿ ಮಾಡಿ, ಅವುಗಳ ಸಮಾಂಶಗಳನ್ನು ತೆಗದು ಒಟ್ಟು ಬೆರಸಿ, ಆ ಮಿಶ್ರಕ್ಕೆ ಮುಲಾಮಿಗೆ ಬರುವಷ್ಟು ತುಪ್ಪವಾಗಲೀ ಎಣ್ಣೆಯಾಗಲೀ ಕಲಸಿ, ಚನ್ನಾಗಿ ಮರ್ಧಿಸುವದು. ಈ ಮುಲಾಮನ್ನು ಒಂದು ಅರಿವೆಯ ಚಿಂದೀ ಮೇಲೆ ಹಾಸಿ, ವ್ರಣಕ್ಕೆ ಹಚ್ಚುವದು. ಇದನ್ನು ದಿನಕ್ಕೆ ಎರಡಾವರ್ತಿ ಬದಲಾಯಿಸುತ್ತಾ ಇರ ಬೇಕು.

೧೬೯. ಗಬ್ಬಾಗಿ ವಿಸ್ತರಿಸುತ್ತಾ ಸೋರುವ ದೀರ್ಘಕಾಲದ ಹಳೇ ಹುಣ್ಣುಗಳಿಗೆ ಮುಂದಿನ ಲೇಪವು ಉತ್ತಮವಾದ್ದು: ಪಟಿಕಾರದ ವಸ್ತ್ರಗಾಳಿತ ಹುಡಿ ೪ ದ್ರಮ್, ಕಾಚಿನ ವಸ್ತ್ರಗಾಳಿತ ಹುಡಿ ಒಂದು ದ್ರಮ್, ಅಫೀಮು ಅರ್ಧ ದ್ರಮ್, ಜೇನುತುಪ್ಪದ ಮುಲಾಮು (೭೨[1]), ಇಲ್ಲವೆ ಮುರ್ಗಿನಹುಳಿ (೭೧[1]) ಬೀಜದ ಎಣ್ಣೆ (Kokum butter), ಇಲ್ಲವೆ ತುಪ್ಪ ಒಂದು ಔನ್ಸ್; ಮೊದಲಾಗಿ ಜೇನುತುಪ್ಪದ ಮುಲಾಮಿನ ಸಂಗಡ ಅಫೀಮನ್ನು ಚನ್ನಾಗಿ ಕೂಡಿಸಿ, ಅನಂತರ ಉಳಿದ ಔಷಧವನ್ನು ಒಂದೊಂದಾಗಿ ಅದಕ್ಕೆ ಬೆರಸಿ, ಒಟ್ಟಾಗಿ ಚನ್ನಾಗಿ ಮರ್ಧಿಸುವದು. ಇದರಿಂದ ಸ್ವಲ್ಪ ತೆಗದು ಮೆತ್ತಗಾದ ಅರಿವೆಯ ಮೇಲೆ ಹಾಸಿ, ರಾತ್ರೆಯೂ ಬೆಳಿಗ್ಯೆಯೂ ಹುಣ್ಣಿಗೆ ಹಚ್ಚುವದು. ಈ ಮುಲಾಮು ಹಚ್ಚಿದರಿಂದ ನೋವು ಹೆಚ್ಚಾದ ಪಕ್ಷಕ್ಕೆ, ಜೇನುತುಪ್ಪದ ಮುಲಾಮಿನ ಅಂಶವನ್ನು ಇನ್ನಷ್ಟು ಹೆಚ್ಚಿಗೆ ಕೂಡಿಸ ಬೇಕು.

೧೭೦. ವ್ರಣವಾದ ತೊಡೆವಾಳ, ಗಬ್ಬಾದ ಹುಣ್ಣು, ಇಂಥಾದ್ದಕ್ಕೆ ಬಿಳಿಗಾರ ಎರಡು ದ್ರಮ್, ಅರ್ಧ ಬಾಟ್ಲೆ ನೀರಿನಲ್ಲಿ ಹಾಕಿ ಆಗಲೀ, ಕರ್ಪೂರ ನೀರಿನಲ್ಲಿ[2] ಆಗಲೀ ಕಲಕಿಸಿ, ಆ ನೀರಿನಿಂದ ಹುಣ್ಣನ್ನು ತೊಳಿಯುವದರಿಂದ ಅದನ್ನು ಶುಚಿಯಾಗಿ ಇಟ್ಟು ವಾದು ಬರುವದಕ್ಕೆ ಅನುಕೂಲಿಸುತ್ತದೆ. ಅದಲ್ಲದೆ ಈ ನೀರಿನಲ್ಲಿ ಒಂದು ಅರಿವೆಯನ್ನು ಅದ್ದಿ ಹುಣ್ಣಿನ ಮೇಲೆ ಇಡುವದು; ರಾತ್ರೆ ಹಗಲು ಅದನ್ನು ಬದಲಿಸುತ್ತಾ ಇರ ಬೇಕು. (Delhi Sores ಎಂಬ) ದೊಡ್ಡ ಹುಣ್ಣುಗಳನ್ನು ತೊಳಿಯುವದಕ್ಕೂ ಅವುಗಳು ಆರೋಗ್ಯದ ಸ್ಥಿತಿಗೆ ಬರಲೀಸುವದಕ್ಕೂ ತಕ್ಕದಾದ ಲೇಪ ಯಾವದಂದರೆ:

---

1) ೭೧, ೭೨ನೇ ಅಂಕೆಗಳನ್ನು ೧೮೭೮ನೇ ಇಸವಿಯ ಪಂಚಾಂಗದ ೫೨ನೇ ಪಾನಿನಲ್ಲಿ ನೋಡು.

2) ಇದೇ ಪಂಚಾಂಗದ ೪೭ನೇ ಪಾನಿನಲ್ಲಿ ೧೫೯ನೇ ಅಂಕೆಯ ಟಿಪ್ಪಣಿಯನ್ನು ನೋಡು.

ಬಿಳಿಗಾರ, ಗಂಧಕ, ಮತ್ತು ಕಾಚು, ಇವು ಒಂದೊಂದನ್ನು ವಸ್ತ್ರಗಾಳಿತ ಹುಡಿ ಮಾಡಿ, ಒಂದೊಂದು ದ್ರಮ್ ಸಮಾಂಶವಾಗಿ ತೆಗದು, ಅದಕ್ಕೆ ಎರಡುವರೆ ತೊಲೆ ಚರ್ಬಿಯಾಗಲೀ ತುಪ್ಪವಾಗಲೀ ಬೆರಸಿ, ಚನ್ನಾಗಿ ಮರ್ಧಿಸುವದು. ಇದನ್ನು ಇತರ ಯಾವ ವೃಣಗಳಿಗಾದರೂ ಹಚ್ಚಿ, ಗುಣಕರವಾಗಿ ಪ್ರಯೋಗಿಸ ಬಹುದು.

೧೭೧. ಜಡ್ಡಾದ ಮತ್ತು ಕೆಟ್ಟ ಸ್ಥಿತಿಯಲ್ಲಿರುವ ಹುಣ್ಣುಗಳಾಗಿ ಬಹಳ ಕಾಲ ಸೋರುತ್ತಾ ಇದ್ದರೆ, ಅವುಗಳಿಗೆ ಬೇವಿನ ಎಲೆಯ ಪೋಲ್ಟಿಸ್ ಬಹಳ ಗುಣಕರವಾಗಿ ಉತ್ತೇಜನ ಕೊಡುತ್ತದೆ. ಹಸಿಯಾದ ಎಲೆಗಳನ್ನು ತಕ್ಕಷ್ಟು ತಂದು, ಬಿಸಿ ನೀರಿನಿಂದ ಚನ್ನಾಗಿ ಅರದು, ಒಂದು ಅರಿವೆಯ ಚಿಂದಿಗೆ ಹಚ್ಚಿ, ಹುಣ್ಣಿನ ಮೇಲೆ ಇಟ್ಟು ಕಟ್ಟುವದು. ಇದರ ದೆಶೆಯಿಂದ (ಕೆಲವು ಸಂಗತಿಗಳಲ್ಲಿ ಆಗುವಂತೆ) ನೋವೂ ಉರಿಯೂ ಉಂಟಾದರೆ, ಅದಕ್ಕೆ ಅಷ್ಟೇ ಅಕ್ಕಿ ಹಿಟ್ಟು ಬೆರಸಿ, ನೀರು ಹಾಕಿ ಮೆತ್ತನ ಮಾಡಿ, ಸ್ವಲ್ಪ ಬೇಯಿಸಿ ಕಟ್ಟುವದು.

೧೭೨. ಈ ಊರಿನ ಜಾಯಿಕಾಯಿ[1] ತಾಜಾ ಜಾಯಿಕಾಯಿಗಿಂತ ಸ್ವಲ್ಪ ದೊಡ್ಡದಾಗಿಯೂ ವಿಶೇಷ ಪರಿಮಳವಾಗಲೀ ತೀವ್ರತೆಯಾಗಲೀ ಇಲ್ಲದ್ದಾಗಿಯೂ ಇದ್ದು, ಹೊಟ್ಟೆಯಲ್ಲಿ ತಕ್ಕೊಳ್ಳುವ ಔಷಧಕ್ಕೆ ಅಷ್ಟು ಒಳ್ಳೇದಲ್ಲಾ. ಆದರೂ ಈ ಜಾಯಿಕಾಯಿಯನ್ನು ಕುಟ್ಟಿ ಬೇಯಿಸಿ, ಇದರಿಂದ ಅರಸಿನ ಬಣ್ಣದ ಎಣ್ಣೆ ಇಳಿಸಲಿಕ್ಕಾಗುತ್ತದೆ. ಇದಕ್ಕೆ ಸ್ವಲ್ಪ ಬೇರೆ ಸಾಧಾರಣ ಎಣ್ಣೆ ಕೂಡಿಸಿ, ಬಿಸಿ ಮಾಡಿದರೆ, ಜಡ್ಡಾದ ಕೆಟ್ಟ ತರದ ಹುಣ್ಣುಗಳಿಗೆ ಹಚ್ಚಲಿಕ್ಕೆ ಬಹಳ ಒಳ್ಳೇದಂತೆ. ಇದರ ಲೇಪನದಿಂದ ಹುಣ್ಣು ಶುಚಿಯಾಗಿ ಆರೋಗ್ಯ ಸ್ಥಿತಿಗೆ ಬರುತ್ತದೆ.

೧೭೩. ಉಮ್ಮತ್ತದಿಂದ[2] ಪ್ರಯೋಜನಕರವಾದ ಧೃತಿ ತಯಾರು ಮಾಡುತ್ತಾರೆ; ಹ್ಯಾಗಂದರೆ: ಎರಡುವರೆ ಔನ್ಸ್ ಉಮ್ಮತ್ತದ ಬೀಜಗಳನ್ನು ಕುಟ್ಟಿ, ಅರ್ಧ ಶೀಸೆ (proof-spirit ಎಂಬ) ಮದ್ಯದಲ್ಲಿ[1] ಹಾಕಿ ಚನ್ನಾಗಿ ಬಾಯಿ ಮುಚ್ಚಿ, ಆಗಾಗ್ಯೆ ಅಲ್ಲಾಡಿಸುತ್ತಾ ಏಳು ದಿವಸದ ವರೆಗೆ ಇಡ ಬೇಕು. ಆ ಮೇಲೆ ಅದನ್ನು ತೆಗದು ಗಾಳಿಸಿ, ಬೀಜಗಳನ್ನು ಬಿಸಾಡಿ, ಆ ಧೃತಿಯು ಅರ್ಧ ಶೀಸೆಗಿಂತ ಕಡಿಮೆಯಾದ ಪಕ್ಷಕ್ಕೆ, ಭರ್ತಿಯಾಗಿ ಹೆಚ್ಚಿಗೆ ಮದ್ಯವನ್ನು ಶೇರಿಸಿ ಇಡುವದು. ಈ ಧೃತಿಯು ಸಾಧಾರಣವಾಗಿ ಅಫೀಮಿನಷ್ಟೇ ವೇಧನೋಪಶಮನವೂ ಶಿರೋಭ್ರಮಣಕವೂ ಆಗಿದ್ದು, ಹುಣ್ಣಿನ ವೇಧನೆಯೂ ಉರಿಯೂ ಶಮನ ಮಾಡುವದಕ್ಕೆ ಅಫೀಮಿನಷ್ಟೆ ವಿಶೇಷ ಗುಣವುಳ್ಳದ್ದು; ಮತ್ತು ಅಗ್ಗವಾಗಿದ್ದು, ಅಫೀಮಿನಷ್ಟು ಖರ್ಚು ಮುಟ್ಟುವಂಥಾದ್ದಲ್ಲ. ಇದನ್ನು ತಕ್ಕೊಳ್ಳುವ ಪರಿಮಾಣವು ಸಂಗತ್ಯಾನುಸಾರವಾಗಿ ಮಿತ ಪಡಿಸ ಬೇಕು. ಆದರೆ ಸಾಧಾರಣವಾಗಿ ಹತ್ತು ಹನ್ನೆರಡು ತಟುಕುಗಳಿಂದ ತೊಡಗಿ ೨೦-೩೦ ತಟಕುಗಳ ವರೆಗೆ ಒಂದಿಷ್ಟು ನೀರಿನಲ್ಲಿ ಹಾಕಿ ತೆಗದುಕೊಳ್ಳ ಬಹುದು. ಸಾಧಾರಣವಾಗಿ ೨೦ ತಟಕುಗಳು ಒಂದು ಗ್ರೇನ್ ಅಫೀಮಿಗೆ ಸಮ. ಉಮ್ಮತ್ತದ ಧೃತಿಯನ್ನು ತಕ್ಕೊಳ್ಳುವದರಿಂದ ತೋರುವ ಒಂದು ವಿಶೇಷ ಲಕ್ಷಣವೇನಂದರೆ: ಕಣ್ಣಿನ ಗೊಂಬೆ ವಿಕಾಸಿಸುವದು; ಆದದರಿಂದ ಈ ಔಷಧವನ್ನು ತಕ್ಕೊಳ್ಳುವಾಗ ಆಗಾಗ್ಯೆ ಕಣ್ಣು ಪರೀಕ್ಷೆ ಮಾಡಿ ನೋಡ ಬೇಕು; ಕಣ್ಣುಗೊಂಬೆ ವಿಕಾಸಿಸಿ ಹೋದ ಪಕ್ಷಕ್ಕೆ, ಈ ಔಷಧವು ಅಪಾಯವಿಲ್ಲದೆ ಎಷ್ಟರ ಮಟ್ಟಿಗೆ ಕೊಡ ಬಹುದಿತ್ತೋ ಅಷ್ಟರ ಮಟ್ಟಿಗೆ ಶೇರಿತು ಎಂತಾ ತಿಳಕೊಳ್ಳ ಬೇಕು; ಆದದರಿಂದ ಗುಣ ಬರಲಿ ಬಾರದೆ ಇರಲಿ, ಅದನ್ನು ನಿಲ್ಲಿಸ ಬಹುದು.

---

[1] *Engl:* Nutmeg; ಹಿಂದು: ಜಾಯಿಫಲ್; ತಮ: ಜಾದಿಕಾಯಿ; ತೆಲು: ಜಾಜೀಕಾಯ; ಮಲ: ಜಾತಿಕ್ಕಾ; ಮಹಾ: ಜಾಯ್ಫಲ.—*Engl:* Mace; ಹಿಂದು: ತೆಲು: ಜಾಯಿಪತ್ರೀ; ತಮ: ಮಲ: ಜಾದಿಪತ್ತೀರಿ.—ಜಾಯಿಕಾಯಿಯೂ ಪತ್ರೆಯೂ ಅಂಗಡಿಗಳಲ್ಲಿ ಸಾಧಾರಣವಾಗಿ ಸಿಕ್ಕುತ್ತವೆ. ಅವಕ್ಕೆ ತೀವ್ರ ವಾಸನೆಯುಳ್ಳದ್ದಾಗಿ ಉತ್ತೇಜನವೂ ವಾತೋಪಶಮನಕವೂ ಆಗಿದ್ದು, ಲವಂಗಕ್ಕೂ ದಾಲ್ಚಿನ್ನಿಗೂ ಗುಣದಲ್ಲಿ ಸರಿಸಮಾನವಾಗಿರುವದರಿಂದ ಒಂದಕ್ಕೆ ಬದಲಾಗಿ ಇನ್ನೊಂದು ಪ್ರಯೋಗಿಸೋಣಾಗುತ್ತದೆ. ಜಾಯಿಕಾಯಿ ಹೆಚ್ಚು ತಕ್ಕೊಂಡರೆ, ಸಿರೋಭ್ರಮಣ ಪಡಿಸುತ್ತದಂತೆ. ಆದದರಿಂದ ಇದನ್ನು ಹೊಟ್ಟೆಗೆ ತೆಗದುಕೊಳ್ಳುವಾಗ ಜಾಗ್ರತೆ ಬೇಕು.

[2] ಉಮ್ಮತ್ತದ ಗಿಡವು ಬಿಳೀ ಕೆಂಪು ಕಪ್ಪು ತರಗಳೆಂಬ ಹಲವು ವಿಧದ್ದುಂಟು. ಬಿಳೀ ಮತ್ತು ಕೆಂಪು ತರದವುಗಳು ಹಿಂದುಸ್ಥಾನದಲ್ಲಿ ಸಾಧಾರಣವಾಗಿ ಬಂಜರು ಸ್ಥಳಗಳಲ್ಲಿ ಸಿಕ್ಕುತ್ತವೆ. ಇವುಗಳಲ್ಲಿ ಯಾವ ತರಕ್ಕಾದರೂ ಗುಣ ಒಂದೇ; ಆದರೂ ಕೆಂಪು ಉಮ್ಮತ್ತದ ಗುಣವು ಹೆಚ್ಚು ಬಲವಾದ್ದೆಂತ ಜನರು ನೆನಸುತ್ತಾರೆ. ಆದರೆ ಅದು ಹೌದೆಂಬದಕ್ಕೆ ದೃಷ್ಟಾಂತವೇನೂ ತೋರುವದಿಲ್ಲಾ. ಉಮ್ಮತ್ತವು ಅಮೂಲ್ಯ ಔಷಧವಾಗಿದ್ದಾಗ್ಯೂ, ಅದನ್ನು ಪ್ರಯೋಗಿಸುವದರಲ್ಲಿ ಜಾಗ್ರತೆ ಇರ ಬೇಕು; ಯಾಕಂದರೆ ಇದು ಹೆಚ್ಚು ಹೊಟ್ಟೆಗೆ ಶೇರಿದರೆ, ವಿಪರೀತ ಬುದ್ಧಿಭ್ರಮಣೆಯಾಗುವದು.

೧೭೪. ಒಂದೆಲಗವು[2] ಮೇಹದಿಂದಲೂ ಗಂಡಮಾಲೆಯ ತರದ ನಂಜಿನಿಂದಲೂ ಉಂಟಾಗುವ ದೀರ್ಘ ಕಾಲದ ವ್ರಣಗಳಿಗೆ ಹೊಟ್ಟೆಯಲ್ಲಿಯೂ ಬಾಹ್ಯಲೇಪನವಾಗಿಯೂ ಪ್ರಯೋಗಿಸಿದ್ದಲ್ಲಿ ಬಹುಶಾ ಖಂಡಿತವಾದ ಗುಣ ಕಂಡು ಬರುತ್ತದೆ; ಆದರೆ ಅದರ ಚಿಕಿತ್ಸೆಯು ಬಿಡದೆ ಸ್ಥಿರ ಮನಸ್ಸಿನಿಂದ ಮಾಡ ಬೇಕಷ್ಟೆ. ಅದನ್ನು ಉಪಯೋಗಿಸಿಕೊಳ್ಳುವದು ಹ್ಯಾಗಂದರೆ: ಹಸಿ ಎಲೆಗಳನ್ನು ಜಾಗ್ರತೆಯಿಂದ ಗಿಡದಿಂದ ಪ್ರತ್ಯೇಕಿಸಿ ತೆಗದು, ನೆರಳಿನಲ್ಲಿ ಒಂದು ಚಾಪೆಯ ಮೇಲೆ ಹಾಕಿ, ಬಿಸಲಿಗೆ ಇಡದೆ, ಘಾಳಿಗೆ ಮಾತ್ರ ಇಟ್ಟು, ಒಣಗಿಸ ಬೇಕು. ಈ ಪ್ರಕಾರ ಒಣಗಿಸಿದರಿಂದ ಅದರ $\frac{೧}{೧೦}$ ಅಂಶ ಭಾರ ಕಡಿಮೆ ಆದೀತು. ಚನ್ನಾಗಿ ಒಣಗಿದ ಮೇಲೆ ಆ ಎಲೆಗಳನ್ನು ಕುಟ್ಟಿ ವಸ್ತ್ರಗಾಳಿತ ಹುಡಿ ಮಾಡಿ, ಒಂದು ಬಾಟ್ಲಿಯಲ್ಲಿ ಹಾಕಿ ಬಿಮ್ಮಗಾದ ಬಿರಡೆಯಿಂದ ಅದರ ಬಾಯಿ ಮುಚ್ಚಿ ಇಡ ಬೇಕು.

---

[1] ಕಳ್ಳು ಘಾಳಿಗೆ ತೆರದಿಟ್ಟಲ್ಲಿ ಹುಳಿಯಾಗಿ, ಈ ಊರಿನಲ್ಲಿ ಬಹಳ ಲಹರಿ ಪಡಿಸುವಂತೆ ಕುಡಿಯುವ ಸಾರಾಯಿಯಾಗಿ ಮಾರಲ್ಪಡುತ್ತದೆ. ಈ ಸಾರಾಯಿಯನ್ನು ಬಟ್ಟಿ ಇಳಿಸಿ, ·920 ಇಷ್ಟು ಭಾರವುಳ್ಳ ಹದಕ್ಕೆ ಇಳಿಸಲಾಗಿ, ಧೃತಿಯನ್ನು ಮಾಡುವದಕ್ಕೂ ಬೇರೆ ಚಿಕಿತ್ಸಾ ಪ್ರಯೋಗಕ್ಕೂ (**proof-spirit** ಎಂಬ) ವಿಲಾಯತಿ ಮದ್ಯಕ್ಕೆ ಬದಲಾಗಿ ಬಳಿಸ ಬಹುದು.

[2] *Engl:* **Hydrocotyle Asiatica**; ಹಿಂದು: ವಲ್ಲಾರಿ; ತಮು: ವಲ್ಲಾರೈ; ತೆಲು: ಮಂಡೂಕಬ್ರಹ್ಮಕೂರಾಕು; ಪಿನ್ನವಿಕಿಚೆಟ್ಟು, ಬೊಕ್ಕುಡುಚೆಟ್ಟು; ಮಲ: ಕುಟಕನ್, ಕೊಡೊಗವ್.—ಈ ಚಿಕ್ಕ ಗಿಡವು ಹಿಂದುಸ್ಥಾನದ ಅನೇಕ ಕಡೆಗಳಲ್ಲಿ ತ್ಯಾವವುಳ್ಳ ಸ್ಥಳದಲ್ಲಿ ಬೆಳಿಯುತ್ತದೆ. ಕುಷ್ಠರೋಗದಲ್ಲಿ ಇದು ವಿಲಾಯತಿಯವರ ಕೈಯಲ್ಲಿ ಒಳ್ಳೇ ಔಷಧವೆಂದು ಪ್ರಸಿದ್ಧಿ ಹೊಂದಿರುತ್ತದೆ.

(ಈ ಚೂರ್ಣವನ್ನು ಪ್ರಯೋಗಿಸುವಾಗ ಅದಕ್ಕೆ ಯಾವ ತರದ ಶೆಕೆಯಾದರೂ ತಾ ದಂತೆ ಜಾಗ್ರತೆ ಮಾಡ ಬೇಕು; ಯಾಕಂದರೆ ಅದಕ್ಕೆ ಶೆಕೆ ತಾಗಿದರೆ, ಅದರ ಔಷ ಗುಣವು ಕೆಟ್ಟು ಹೋದೀತು.) ಈ ಚೂರ್ಣವನ್ನು ದಿನಕ್ಕೆ ಮೂರು ಸಾರಿ, ಸಾರಿ ೩-೫ ಗ್ರೇನ್ ವರೆಗೆ ತಕ್ಕೊಳ್ಳ ಬಹುದು. ಮತ್ತು ಅದೇ ಚೂರ್ಣವನ್ನು ಹುಣ್ಣುಗ ಮೇಲೆ ಚೆಲ್ಲ ಬಹುದು; ಇಲ್ಲವೆ ಅದಕ್ಕಿಂತಲೂ ಉತ್ತಮವಾಗಿ ಹಸಿ ಎಲೆಗಳನ್ನು ಅರದು ಲೇಪ ಮಾಡಿ ಒತ್ತಡದಂತೆ ಕಟ್ಟಲೂ ಬಹುದು. ಈ ಪ್ರಕಾರ ಒಂದೆಲಗದ ಪ್ರಯೋಗ ಮಾಡುತ್ತಾ ಇರಲಾಗಿ ಕೆಲವು ವಾರಗಳೊಳಗೆ ರೋಗಿಯು ಎಲ್ಲಾ ವಿಷಯಗಳಲ್ಲಿ ಗುಣ ಹೊಂದ್ಯಾನು. ಕೆಲವು ಕಾಲದ ವರೆಗೆ ಪ್ರಯೋಗ ನಡದ ತರುವಾಯ ಇದರಿಂದ ಮೈಗೆಲ್ಲಾ ಬಹಳ ತುರಿ ಉಂಟಾದ ಪಕ್ಷಕ್ಕೆ, ಅದನ್ನು ಒಂದು ವಾರದ ವರೆ ಬಿಟ್ಟುಬಿಟ್ಟು, ಸಾಧಾರಣ ಮಲಶೋಧನೇ ಬಗ್ಗೆ ಔಷಧವನ್ನು ತಕ್ಕೊಂಡು, ಆ ಮೇ ತಿರಿಗಿ ಒಂದೆಲಗದ ಪ್ರಯೋಗವನ್ನು ಮಾಡ ಬಹುದು. ಈ ಎಲೆಗಳ ಪ್ರಯೋ ದಿಂದ ಮಾತ್ರ ಪೂರ್ಣವಾಗಿ ಗುಣ ತೋರದಿದ್ದ ಪಕ್ಷಕ್ಕೂ ಬಹುಶಾ ಅದರಿಂದ ತ ಷ್ಟಾದರೂ ಗುಣಾಂಶ ಬಾರದಿರಲಿಕ್ಕಿಲ್ಲ.

೧೭೫. ಕುಷ್ಠರೋಗ, ಪ್ರಮೇಹದ ರೋಗ, ಕಠಿಣ ತರದ ವ್ರಣಗಳು, ದೀರ್ಘ ಕಾಲದ ವಾತ, ಮತ್ತು ಪಾದರಸ ತಕ್ಕೊಂಡ ದೋಷದ ದೆಶೆಯಿಂದ ಉಂಟಾಗುವ ಚ ರ್ಮ ವ್ಯಾಧಿಗಳಲ್ಲಿ ಎಕ್ಕೆ ಗಿಡದ[1] ಎಲೆಯ ಚೂರ್ಣ ವಿಶೇಷ ಪ್ರಯೋಜನವುಳ್ಳದ್ದಾಗಿ ಕೆ ಲವು ಸಂಗತಿಗಳಲ್ಲಿ ಕಂಡು ಬಂದದೆ; ಆದರೆ ಬೇರೆ ಸ್ವಲ್ಪ ಸಂಗತಿಗಳಲ್ಲಿ ಅದರ ಗುಣ ತಪ್ಪಿ ಹೋದದ್ದೂ ಉಂಟು. ಎಕ್ಕೆ ಗಿಡದ ಎಲೆಯ ಚೂರ್ಣವು ಒಂದು ಸಾರಿಗೆ ಮೂರ ಗ್ರೇನಿನಿಂದ ತೊಡಗಿ ಹತ್ತು ಯಾ ಹೆಚ್ಚು ಗ್ರೇನ್ ವರೆಗೆ ದಿನಕ್ಕೆ ಮೂರಾವರ್ತಿ ಸೇವಿಸುವದು.

ಕೀಳುಕರುಳು ಹೊರಗಿಳಿಯುವ ರೋಗ Descent of the Lower Bowels

ಇದರ ಚಿಕಿತ್ಸೆಯನ್ನು ೧೮೭೯ನೇ ಇಸವಿಯ ಪಂಚಾಂಗದ ೩೯-೪೦ನೇ ಪಾನಗಳಲ್ಲಿ ಓದಿಕೊಳ್ಳುವದು.

ಕುಚಗ್ರದಲ್ಲಿ (ಸ್ತನದ ತುದಿಯಲ್ಲಿ) ಆಗುವ ಹುಣ್ಣು ಅಥವಾ ಘಾಯ
Sore or Cracked Nipples.

ಇದಕ್ಕೆ ಬಿಳಿಗಾರದ ನೀರಿನಿಂದಾಗಲೀ (೧೭೬), ನಿಂಬೇರಸದ ನೀರಿನಿಂದಾಗಲೀ (೧೭೭) ತೊಳದು ಲೇಪಿಸುವದು. ಕುಚಗ್ರಕ್ಕೆ ಘಾಯವಾಗಲೀ ಹುಣ್ಣಾಗಲೀ ಆಗ ಹಾಗೆ ಅಭ್ಯಂತರವಾಗಿ ಕಾಚುವಿನ ಕಲ್ಕ(೧೭೮) ಪ್ರಯೋಗಿಸುವದು. ಈ ವಿಷಯದಲ್ಲಿ

---

[1] ಎಕ್ಕೆ ಗಿಡದ ವಿಷಯದಲ್ಲಿ ೧೮೭೯ನೇ ಇಸವಿಯ ಪಂಚಾಂಗದ ೮೯ನೇ ಪಾನಿನಲ್ಲಿರುವ ೯೭ನೆ ಅಂಕೆಯ ಟಿಪ್ಪಣಿಯನ್ನು ನೋಡು.

ವೈದ್ಯಪಂಡಿತ ರಿಂಗರ್ ಧೊರೆ ಎಂಬವರು ಹೇಳುವದೇನಂದರೆ: ಅಂತರಾಯವಾಗುವ ಬಗ್ಗೆ ಸ್ತನದ ತುದಿಯನ್ನು ಮಗು ಮೊಲೆ ತಿಂದಾದ ಕೂಡಲೆ ಸ್ವಲ್ಪ ಬ್ರಾಂಡಿ ಮತ್ತು ನೀರು ಕೂಡಿಸಿದ ಮಿಶ್ರದಿಂದ ಜಾಗ್ರತೆಯಾಗಿ ತೊಳೆಯುವದು; ಅದಲ್ಲದೆ ಹೆರುವದಕ್ಕೆ ಸ್ವಲ್ಪ ಮುಂಚೆ, ಇಲ್ಲವೆ, ಹೆತ್ತ ಮೇಲಾದರೆ, ಮಗುವು ಮೊಲೆ ತಿಂದಷ್ಟು ಸಾರಿ ಆ ಪ್ರಕಾರ ತೊಳೆಯುವದರಿಂದ ಮಾಂಸದ ಎಳೆಗಳು (tissues) ಘಟ್ಟಿಯಾಗುವವು. ಇದಲ್ಲದೆ ಲೋಹದಿಂದ ಒಂದು ಮುಚ್ಚಳದಂತೆ ಮಾಡಿ, ಮೊಲೆಯ ತುದಿಯ ಮೇಲಿಟ್ಟು ಕಟ್ಟುವದು ಬಹಳ ಪ್ರಯೋಜನವಾದ್ದು; ಮಗುವು ಮೊಲೆ ತಿನ್ನದ ವೇಳೆಯಲ್ಲಿ ಯಾವಾಗಲೂ ಅದು ಇಟ್ಟಿರುವದು ಒಳ್ಳೇದು.

೧೭೬. ಒಂದು ದ್ರಮ್ ಬಿಳಿಗಾರ ಒಂದು ಔನ್ಸ್ ನೀರಿನಲ್ಲಿ ಕರಗಿಸಿ, ಕೂಸು ಮೊಲೆ ತಿನ್ನುವ ಮುಂಚೆಯೂ ಅನಂತರವೂ ನೋವುಳ್ಳ ಸ್ತನದ ತುದಿಗೆ ಹಚ್ಚುವದು ಗುಣಕರ; ಇಲ್ಲವಾದರೆ, ಒಂದು ದ್ರಮ್ ಬಿಳಿಗಾರ ಒಂದು ಔನ್ಸ್ ತುಪ್ಪದಲ್ಲಿ ಹಾಕಿ ಮರ್ಧಿಸಿ, ಮುಲಾಮಿನಂತೆ ಮಾಡಿ ಹಚ್ಚುವದೂ ಒಳ್ಳೇದೇ. ಇವು ಬೀಗೂ ನೋವೂ ಉಳ್ಳ ಮೂಲವ್ಯಾಧಿಗೂ ಪ್ರಯೋಜನವುಳ್ಳದ್ದು.

೧೭೭. ಕುಚಾಗ್ರದ ವೇಧನೆಗೆ ಲಿಂಬೇರಸವು ಶಮನಕರವಾದ್ದು. ಬೆಳಿಗ್ಯೆಯೂ ರಾತ್ರಿಯೂ ಲಿಂಬೇರಸವನ್ನು ಅದಕ್ಕೆ ಹಚ್ಚುವದು. ಸೊಳ್ಳೆ ನುಸಿ ಮುಂತಾದ್ದು ಕಚ್ಚಿದರಿಂದ ಉಂಟಾಗುವ ಉರಿಯೂ ಬಾಯುವಿಕೆಯೂ ಸಹ ಲಿಂಬೇರಸದ ಲೇಪನದಿಂದ ವಾಶಿಯಾಗುತ್ತದಲ್ಲದೆ, ಆ ರಸ ಹಚ್ಚಿದ್ದಲ್ಲೆಲ್ಲಾ ಗುಂಗಾಡಿಗಳು ಕಚ್ಚದಂತೆ ಕಾಪಾಡುತ್ತದಂತೆ.

ಕುಟಿಲವಾತ (ಗ್ರಹಣಿ, ಮಕ್ಕಳ ವ್ಯಾಧಿ, ಹಳ್ಳೆರೋಗ) Rickets.

ಈ ರೋಗವು ಮಕ್ಕಳಿಗೆ ಎರಡು ವರ್ಷ ಪ್ರಾಯಕ್ಕೆ ಮುಂಚೆ ಉಂಟಾಗುವಂಥಾದಾಗಿ, ಶರೀರಕ್ಕೆ ಪುಷ್ಟಿಯೂ ಚೇತನವೂ ಕಡಿಮೆಯಾಗಿದ್ದ ದೆಶೆಯಿಂದ ಎಲುಬುಗಳು ಬೆಳಿಯದೆ ಸೊಟ್ಟಗಾಗುವವು. ಸಾಧಾರಣವಾಗಿ ಈ ರೋಗವು ಹಲ್ಲು ಬರುವಾಗ ಆಗಲೀ ಮೊಲೆ ತಿನ್ನುವದು ಬಿಡುವಾಗ ಆಗಲೀ ವಿಕಾಸಿಸುವದು. ಇದಕ್ಕೆ ಮುಂದಾಗಿ ವಾಯುವಿನ ಉಪದ್ರ, ಆಮ್ಲಪಿತ್ತ, ಉದರಶೂಲೆ, ದುರ್ವಾಸನೆಯುಳ್ಳ ಶ್ವಾಸ, ಕಿರಿಹೊಟ್ಟೆಯಲ್ಲಿ ಬೀಗು ಸಹ ಇರುವದು; ಬಹುಶಾ ಅತಿರೇಕ ಬಾಯಿಸವಿ; ಮೈ ಕುಂದಿ ಕ್ಷೀಣವಾಗುವದು; ಮುಖವು ಬಡವಾಗಿ ಮುದುರಿಕೊಳ್ಳುವದು; ಮಂದಬೆಳವು; ನಿಲ್ಲುವದಕ್ಕಾಗಲೀ ನಡಿಯುವದಕ್ಕಾಗಲೀ ಚೇತನವಿಲ್ಲ; ಗಂಟುಬಾವು; ಪಕ್ಕೆಲುಬು ಮುಂಧೋರುವದು; ಬೆನ್ನೆಲುಬು ಬಾಗುವದು; ಹಲ್ಲುಗಳು ಹೊರಟಾಗ್ಯೂ ಮೊಳಿಯುವಷ್ಟರೊಳಗೆ ಕರಗಿ ಹೋಗುವವು, ಇಲ್ಲವೆ ಹಲ್ಲಿನಲ್ಲಿ ಅರಸಿನ ಕಂದು ಗಾರೆ ಕಟ್ಟುವದು; ಮುಖ್ಯವಾಗಿ ಕಾಲುಗಳು ಮೆತ್ತಗಾಗಿ ಬಾಗಿ ಹೋಗುವವು; ಆಗಾಗ್ಯೆ ಹೊಟ್ಟೆ ಝಾಡಿಸುವದು, ಮಂದಜ್ವರ, ಶ್ವಾಸಬದ್ಧತೆ; ಮೂತ್ರದಲ್ಲಿ

ಜೇಡಿಯಂತೆ ತಲಕ್ಕೆ ನಿಲ್ಲುವದು; ಮಲವು ಬಿಳಿ ತರದ್ದಾಗಿ ತೋರುವದು. ಆದರ ಮಗುವು ಬೆಳಿಯುತ್ತಾ ಪುಷ್ಟಿಯಾಗುತ್ತಾ ಇರಲಾಗಿ ಮೇಲೆ ಹೇಳಿದ ಚಿನ್ಹೆಗಳೆಲಾ ಕಡಿಮೆಯಾಗುತ್ತಾ ಈ ರೋಗವು ತನ್ನಷ್ಟಕ್ಕೆ ಕಾಣದೆ ಹೋಗುವದು.

ಚಿಕಿತ್ಸೆ.—ಇದಕ್ಕೆ ಮೀನಿನ ಎಣ್ಣೆ (೧೭೬¹) ಬಹಳ ಗುಣಕರವಾಗಿ ಕೊಡ ಬಹುದು. ಮಗುವು ಬಹಳ ಮೈಗರೆದು ಚೇತನವಿಲ್ಲದ್ದಾಗಿದ್ದರೆ, ಆ ಎಣ್ಣೆಯ ಸಂಗಡ ಅನ್ನಭೇದಿ ಸಹ (೧೭೮) ಕೊಡುವದು ಒಳ್ಳೇದು. ಸುಣ್ಣದ ತಿಳೀನೀರು ಮತ್ತು ಹಾಲು (೧೯,೪೬²) ಅಂಥ ಮಕ್ಕಳಿಗೆ ಆಗಾಗ್ಯೆ ಒಳ್ಳೇ ಪಾನವಾಗಿರುತ್ತದೆ.

೧೭೮. ಪಕ್ಷವಾತದಲ್ಲಿಯೂ ಮಕ್ಕಳ ಗ್ರಹಣಿಯಲ್ಲಿಯೂ, ಮೈಗರೆಯೋಣಕ್ಕೆ ಅನ್ನಭೇದಿಯನ್ನು ಕೊಡುತ್ತಾರೆ. ಹ್ಯಾಗಂದರೆ ಓಮದ ನೀರು (೧೫) ಮತ್ತು ಕಿ ಯಾತದ್ದ ಕಲ್ಕ (೧೦), ಒಂದೊಂದು ೬ ಔನ್ಸ್ ತೆಗೆದು ಕೂಡಿಸಿ, ಅದರಲ್ಲಿ ಅನ್ನಭೇ ೨-೩ ಗ್ರೇನ್ ಹಾಕಿ ಕಲಕಿಸುವದು. ಇದು ಮಕ್ಕಳಿಗೆ, ಪ್ರಾಯ ನೋಡಿ, ಚ ಸೌಟಿನಿಂದ ಮೇಜಿನ ಸೌಟು ವರೆಗೆ ದಿನಕ್ಕೆ ಎರಡು ಮೂರಾವರ್ತಿ ಕೊಡುವದು ಅನ್ನಭೇದಿಯನ್ನು ಮೇಲಿನ ಪರಿಮಾಣದಲ್ಲಿ ತನ್ನಷ್ಟಕ್ಕೆ ಆಗಲಿ ರಕ್ತಬೋಳದ ಸಂಗ ಕೂಡಿಸಿ (೧) ಆಗಲಿ ಕೃಶರೋಗದಲ್ಲಿ ಗುಣಕರವಾಗಿ ಕೊಡುತ್ತಾರೆ.

ಕುಡಿಕಾಟದಿಂದ (ಮದ್ಯಪಾನದಿಂದ) ಅಮಲೇರಿದ್ದಕ್ಕೆ Drunkenness.

ಲಹರಿಯುಳ್ಳ ಮದ್ಯ ಕುಡಿದು ಅಮಲೇರಿ, ಸ್ವಯ ತಪ್ಪಿದವನಿಗೆ ಸಾಸಿವೆ ಕೊಟ್ವಾಂತಿ ಮಾಡಿಸಿ (೩೮³), ಹೊಟ್ಟೆಯಲ್ಲಿರುವ ಮದ್ಯವನ್ನೆಲ್ಲಾ ಕಾರಿಸಿ, ಖಾಲಿ ಮಾಡವದು ಒಳ್ಳೇದು. ಆ ಮೇಲೆ (Liquor Ammoniac⁴ ಎಂಬ) ನವಸಾಗರದ ದ್ರ ೬ರಿಂದ ೧೨ ತಟುಕುಗಳ ವರೆಗೆ ನೀರಿನಲ್ಲಿ ಹಾಕಿ ಕೊಡುವದು ಬಹುಶಾ ವಿಶೇಷ ಫ ಕರವಾಗಿರುವದು. ಬುನ್ನಿನ ಕಷಾಯ ಸಹ ಕೊಡುವದು ತಕ್ಕಷ್ಟು ಗುಣಕರವ ಅನಂತರ ಕುಡಿಯುವ ವ್ಯಸನಕ್ಕೆ ಕಾಂಕ್ಷೆ ಉಂಟಾದರೆ, ಅದನ್ನು ಶಮನ ಪಡಿಸು ಬಗ್ಯೆ ಓಮದ ನೀರನ್ನು (೧೭೯) ಕೊಟ್ಟು ನೋಡುವದು.

೧೭೯. ಮದ್ಯಪಾನ ಮಾಡುವ ವ್ಯಸನಕ್ಕೆ ಸೋತು ಹೋದವರಾಗಲೀ, ಆ ವ್ಯಸ ಬಿಡದೆ ಹಿಡಿದಿರುವವರಾಗಲೀ, ಮದ್ಯಪಾನಕ್ಕೆ ಅನಿವಾರ್ಯ ಕಾಂಕ್ಷೆ ಉಳ್ಳವರಾಗ ಓಮದ ನೀರನ್ನು ಗುಣಕರವಾಗಿ ತೆಕ್ಕೊಂಡು ಪರೀಕ್ಷಿಸಿ ನೋಡ ಬಹುದು. ಈ ವಿಷ ದಲ್ಲಿ ಉಡ್ ಎಂಬ ಧೊರೆ ಬರಿಯುವದೇನಂದರೆ: ಓಮಕ್ಕೆ ಚುಚ್ಚುವಂಥಾ ತೀವ್ರ ಆದರೂ ಹಿತವಾದ, ರುಚಿ ಇರುವದರಿಂದ ಮತ್ತು ಅದರ ಸೇವನದಿಂದ ಹೊಟ್ಟೆಯ

---

[1] ೧೮೮೧ನೇ ಇಸವಿಯ ಪಂಚಾಂಗದ ೪೬ನೇ ಪಾನಿನಲ್ಲಿಯೂ, ೧೮೭೬ನೇ ಇಸವಿಯ ಪಂಚಾಂಗ ೨೬ನೇ ಪಾನಿನಲ್ಲಿಯೂ ನೋಡು.

[2] ೧೮೭೬ನೇ ಇಸವಿಯ ಪಂಚಾಂಗದ ೩೦ನೇ ೩೮ನೇ ಪಾನುಗಳಲ್ಲಿ ನೋಡು.

[3] ಅದೇ ಇಸವಿಯ ಪಂಚಾಂಗದ ೩೬ನೇ ಪಾನಿನಲ್ಲಿ ನೋಡು.

[4] ಇದು ವಿಲಾಯತಿಯ ಔಷಧ ಮಾರುವ ಅಂಗಡಿಗಳಲ್ಲಿ ಮಾರೋಣಾಗುತ್ತದೆ.

ಶಿಕೆ ಹುಟ್ಟಿಸುವದರಿಂದ ಇತ್ತಲಾಗೆ ಅದನ್ನು (alcohol ಎಂಬ) ಮದ್ಯಪಾನಕ್ಕೆ ಕಾಂಕ್ಷೆ ಉಳ್ಳವರಿಗೆ, ಬಹುಶಾ ಮದ್ಯಪಾನದ ಅಭ್ಯಾಸದ ದೆಶೆಯಿಂದ ಹೊಟ್ಟೆಯಲ್ಲಿ ಕಚ್ಚುವ ತರದ ವೇದನೆಯಾಗಲೀ ಕಳವಳಿಕೆಯಾಗಲೀ ನಿವಾರಿಸುವದಕ್ಕೆ ಕೊಡುತ್ತಾರೆ. ಇದರಿಂದ ಅಮಲು ಆಗುವದಿಲ್ಲವಾದಾಗ್ಯೂ, ಸಾಧಾರಣ ಅಮಲುಳ್ಳ ಉತ್ತೇಜಕಗಳಿಗೆ ಕಿರಿದಾದ್ದಲ್ಲ. ಈ ಕುಡಿಕಾಟದ ವ್ಯಸನಕ್ಕೆ ದಾಸರಾಗಿ ಹೋದ ಅನೇಕ (ಅನ್ಯಥಾ ಬುದ್ಧಿಯುಳ್ಳ) ಕಾರ್ಯಸ್ಥ ಜನರಿಗೆ ಈ ಓಮವು ಆ ವ್ಯಸನದಿಂದ ಶಿಕ್ಕುಬಿಡಿಸುವದಕ್ಕೆ ಹೇತುವೆಯಾಗಿದೆ ಎಂದು ನನಗೆ ಕಂಡು ಬಂದದೆ.

ಕುತ್ತಿಗೆಬೀಗು (ಕುತ್ತಿಗೆಶಿಕ್ಕು) Stiff Neck.

ಇದಕ್ಕೆ ಅಫೀಮಿಯ ಮುಲಾಮು ಹಚ್ಚುವದು. ಇದನ್ನು ಮಾಡುವ ಕ್ರಮವನ್ನು ೧೮೮೦ನೇ ಇಸವಿಯ ಪಂಚಾಂಗದ ೪೭ನೇ ಪಾನಿನ ೧೨೦ನೇ ಅಂಕೆಯಲ್ಲಿ ನೋಡು.)

ಕುದುರೆಲುಬಿನ ಬಾವು Nodes, or Painful Swelling on the Skin-bone.

ಇದಕ್ಕೆ ಉಮ್ಮತ್ತದ ಪೋಲ್ಟಿಸ್ (೬[1]), ಇಲ್ಲವೆ ಮುಂದೆ ನೋವುಳ್ಳ ಮೊಡವೆಗಳ ವಿಷಯದಲ್ಲಿ ಹೇಳುವ ಚಿಕಿತ್ಸೆಯನ್ನು ಮಾಡುವದು..

ಕುರುಗಳು Boils.

ಇದಕ್ಕೆ ಬಾವಿನ ವಿಷಯದಲ್ಲಿ ಹೇಳಿದ ಚಿಕಿತ್ಸೆಯನ್ನು ಮಾಡುವದು. ಹ್ಯಾಗಂದರೆ ಬಿಸಿ ನೀರಿನ ಶೇಕ (೧೦೯[2]), ನವಸಾಗರದ ನೀರು (೧೧೭[3]), ಮತ್ತು ಅಕ್ಕಿ ಬತ್ತಾಷ (೧೧೮[3]) ಸಹ ಹಚ್ಚುವದು. ಇದಲ್ಲದೆ ಶಿಡತವೂ ಬೀಗೂ ಇದ್ದರೆ, ಜಿಗಳೆ ಕಚ್ಚಿಸಬಹುದು; ಆದರೆ ಇದು ಅವಶ್ಯವಾಗುವದು ಅಪರೂಪ. ಶರೀರಧಾತುವಿನಲ್ಲಿ ಅಕ್ರಮವಿದ್ದರೆ, ಸುಗಂಧಿ ಬೇರಿನ ಕಷಾಯ (೧೩[4]) ಹೊಟ್ಟೆಗೆ ಕೊಡುವದು. ಪ್ರಯೋಜಕವೂ ಜನಜನಿತವೂ ಆಗಿರುವ "ಹೀರುವ ಮುಲಾಮು" ಎಂಬದನ್ನು ಮಾಡುವದು ಹ್ಯಾಗಂದರೆ: ಮೊಗದುಮಿ ಸಕ್ಕರೆ, ವಿಲಾಯತಿ ಅರಸಿನ ಸಾಬೂನು, ಇವೆರಡನ್ನು ಸಮ ಭಾಗ ತೆಗದು, ಚನ್ನಾಗಿ ಅರದು ಮಿಶ್ರ ಮಾಡುವದು. ಇನ್ನೂ ಹೆಚ್ಚು ಗುಣವುಳ್ಳದು ಜೇನುಮೇಣದ ಮುಲಾಮು (೧೮೦) ಆಗಿರುತ್ತದೆ. ಇವೆರಡರಲ್ಲಿ ಯಾವ ತರದ ಮುಲಾಮನ್ನಾದರೂ ಒಂದು ಅರಿವೆ ತುಂಡಿಗೆ ಹಚ್ಚಿ, ಕುರುವಿಗೆ ಅಂಟಿಸುವದು. ("ರಾಜಕುರು" ಎಂಬದರ ಚಿಕಿತ್ಸೆಯನ್ನು ಕುರಿತು ೧೮೭೮ನೇ ಇಸವಿಯ ಪಂಚಾಂಗದ ೪೮-೫೨ ಪಾನುಗಳಲ್ಲಿ ನೋಡು.)

---

[1] ೧೮೭೬ನೇ ಇಸವಿಯ ಪಂಚಾಂಗದ ೨೫ನೇ ಪಾನಿನಲ್ಲಿ ನೋಡು.

[2] ೧೮೮೦ನೇ ಇಸವಿಯ ಪಂಚಾಂಗದ ೪೧ನೇ ಪಾನಿನಲ್ಲಿ ನೋಡು.

[3] ಈ ಅಂಕೆಗಳನ್ನು ಅದೇ ಇಸವಿಯ ಪಂಚಾಂಗದ ೪೪, ೪೫ನೇ ಪಾನುಗಳಲ್ಲಿ ನೋಡು.

[4] ೧೮೭೬ನೇ ಇಸವಿಯ ಪಂಚಾಂಗದ ೨೮ನೇ ಪಾನಿನಲ್ಲಿ ನೋಡು.

ಪ್ರೀತಿಯು ಬಹು ತಾಳ್ಮೆ ಪಡುವದು, ದಯ ಮಾಡುವದು; ಹೊಟ್ಟೆಕಿಚ್ಚು ಪಡದು,

೧೮೦. ಹಿಂದುಸ್ಥಾನದ ಹಲವು ಪ್ರಾಂತ್ಯಗಳಲ್ಲಿ ಕೆಲವು ಸಾರಿ ವಿಶೇಷವಾಗಿ ಆಗುವ "ಕುರುಡ ಕುರು" (blind-boils) ಅಂದರೆ ಬಾಯಿಯಾಗದ ಕುರುವಿಗೆ ಜೇನು ಮೇಣದಿಂದ[1] ಒಂದು ಒಳ್ಳೇ ಮುಲಾಮು ಮಾಡುತ್ತಾರೆ. ಹ್ಯಾಗಂದರೆ: ಗುಗ್ಗುಳ, ಜೇನು ಮೇಣ, ಒಂದೊಂದು ೨½ ತೊಲೆ, ಮತ್ತು ಎಳ್ಳೆಣ್ಣೆ ¼ ಕುಡುತೆ (=೧ ಔನ್ಸ್), ಇವು ಮೂರನ್ನು ಒಟ್ಟು ಮಾಡಿ, ಮಂದ ಬೆಂಕಿಯ ಮೇಲಿಟ್ಟು ಕರಗಿಸಿ, ಚನ್ನಾಗಿ ಕಲಕಿಸಿ, ಗಾಳಿಸುವದು. ಇದು ತಣ್ಣಗಾದ ಮೇಲೆ ಇದರಿಂದ ಒಂದಿಷ್ಟು ತೆಗದು ಒಂದು ಅರಿವೆ ಚಿಂದಿಯ ಮೇಲೆ ಹಾಸಿ ಕುರುವಿನ ಮೇಲೆ ಹಚ್ಚುವದು. ಬೇರೆ ಔಷಧಗಳಿಗಿಂತ ಇದು ಗುಣಕರವಾಗಿದ್ದು, ಕುರು ತುದಿಗೆ ಬರಲೀಸಿ, ಬಾಯಿ ಮಾಡಿ, ಒಡಿಸುತ್ತದೆ. ಮತ್ತು ಒಡದು ಸೋರಿ ಹೋದ ಮೇಲೂ, ಹುಣ್ಣನ್ನು ತೊಳದು ಈ ಮುಲಾಮು ಹಚ್ಚುವದಕ್ಕೆ ಒಳ್ಳೇದು.

(ಮುಂದಿನ ವರ್ಷದ ಪಂಚಾಂಗದಲ್ಲಿ ಮುಂದರಿಸಲ್ಪಡುವದು.)

ಹೆಂಗಸರು ಹಟಮಾರಿಗಳೋ? ಗಂಡಸರು ಹಟಮಾರಿಗಳೋ?

ಒಂದಾನೊಂದು ದಿವಸ ಒಬ್ಬಾನೊಬ್ಬ ಪುರುಷನು ತನ್ನ ಹೆಂಡತಿಯ ಸಂಗಡ ಪ್ರಯಾಣಕ್ಕೆ ಹೊರಟು, ದಾರಿಯಲ್ಲಿ ನಡೆದು ಹೋಗುವಾಗ್ಯೆ ಒಂದು ತೋಟವನ್ನು ಹಾದು ಹೋಗುವದಾಯಿತು. ಆ ತೋಟಕ್ಕೆ ಬಹು ನುಣ್ಣಗಾಗಿಯೂ ಆಯಕಟ್ಟಾಗಿಯೂ ಇದ್ದಂಥಾ, ರಮಣೀಯತ್ವದಿಂದ ಸಲೆಶೋಭಿಸುತ್ತಿದ್ದಂಥಾ ಬೇಲಿ ಇತ್ತು. ಈ ಬೇಲಿಯನ್ನು ನೋಡಿ, ಆ ದಂಪತಿಗಳು ಅದರ ಚಂದಕ್ಕೆ ಬೆರಗಾಗಿ ಹೋಗಲು, "ಈ ಬೇಲಿಯನ್ನು ಅಷ್ಟು ನುಣ್ಣಗೆ ಮಾಡಿದ್ದು ಕತ್ತಿಯಿಂದಲೋ? ಕತ್ತರಿಯಿಂದಲೋ?" ಎಂಬುವ ಪ್ರಶ್ನೆ ಅವರೊಳಗೆ ಹುಟ್ಟಿತು. ಗಂಡನಿಗೆ ಕತ್ತಿಯಿಂದಲೇ ಎಂದು, ಹೆಂಡತಿಗೆ ಕತ್ತರಿಯಿಂದ ಎಂದು ತೋರಲಾಗಿ, ಅವರಿಬ್ಬರೊಳಗೆ ವಾಗ್ವಾದವು ಹುಟ್ಟಲಾಯಿತು. ನಡೆದು ಹೋಗುತ್ತಾ ಹೋಗುತ್ತಾ ಅವರು ಎಷ್ಟು ವಾಗ್ವಾದ ಮಾಡಿದರೂ, ಇಬ್ಬರ ಮನಸ್ಸಿನಲ್ಲಿ ಉರಿ ಹೆಚ್ಚಿ, ಮಿಗಿಲಾಗುತ್ತಾ ಬಂದದಲ್ಲದೆ, ಸಮ್ಮತಿಯಾಗವಲ್ಲದು. ಕಡೆಗೆ ಅವರು ಒಂದು ಹೊಳೆಯನ್ನು ದಾಟುವ ಸೇತುವೆಗೆ ಬಂದು ಮುಟ್ಟಿದರು. ಆ ಸೇತುವೆ ಬರೇ ಇಕ್ಕಟ್ಟಾಗಿತ್ತು. ಅದನ್ನು ಶೇರಿ ದಾಟುವಾಗಲೂ ತರ್ಕವೇ ತರ್ಕ ಮಾಡಿದರು. ಸೇತುವೆಯ ಮಧ್ಯದಲ್ಲೇ ಹೆಂಡತಿ ಬಹಳ ದುಡುಕಿನಿಂದ "ಕತ್ತರಿಸಿ, ಬೇಲಿಯನ್ನಷ್ಟು ನುಣ್ಣಗೆ ಮಾಡಿದ್ದು ನಿಶ್ಚಯವೇ!" ಎಂದು ಹೇಳಲು, ಗಂಡನು ಬಹಳ ಸಿಟ್ಟೇರಿ, "ಕತ್ತಿಯಿಂದ ಕಡಿದು, ನುಣ್ಣಗೆ ಮಾಡಿದರು!" ಎಂದು

---

[1] *Engl:* Wax; ಹಿಂದು: ಮೋಮ್; ತಮಿ: ಮೊಟುಕ್ಕು; ತೆಲು: ಮಾಯಿನಮ್; ಮಲ: ಮೇಟುಕ.—ಮೇಣವು ಒಳ್ಳೇ ತರದ್ದು ಅಂಗಡಿಗಳಲ್ಲಿ ಶಿಕ್ಕುತ್ತದೆ. ಅದಕ್ಕೆ ವಿಶೇಷ ಔಷಧಗುಣವಿಲ್ಲದಿದ್ದಾಗ್ಯೂ, ಸ್ವಲ್ಪ ಅಂಟು ಇರುವದರಿಂದಲೂ ಸ್ವಲ್ಪ ಲಘು ಉತ್ತೇಜಕ ಗುಣವಿರುವದರಿಂದಲೂ ಮುಲಾಮು ಪಲಾಸ್ತ್ರಿ ಮುಂತಾದ್ದನ್ನು ಮಾಡುವದಕ್ಕೆ ಇವನ್ನು ಕೂಡಿಸುತ್ತಾರೆ.

ಛಳ್ಳದಿಂದ ಹೇಳಿ, ಹೆಂಡತಿಯನ್ನು ಸೇತುವೆಯಿಂದ ಹೊಳೆಗೆ ದೊಬ್ಬಿಕೊಟ್ಟು, ತನ್ನದೇ ಮಾತು ಖರೆ ಎಂಬದಕ್ಕೆ ಡೊಣ್ಣೇ ದೃಷ್ಟಾಂತ ಕೊಟ್ಟನು. ಆದರೆ ಹೆಂಡತಿ ಹೊಳೆಯಲ್ಲಿ ಬಿದ್ದ ಮೇಲೆಯಾದರೂ ಸುಮ್ಮಗಾಗದೆ, ನೀರಿನ ಮೇಲೆ ಈಜಲಿಕ್ಕೆ ಕೂಡಿದಷ್ಟು ಸಮಯ ಆದಷ್ಟು ಘಟ್ಟಿಯಾಗಿ "ಕತ್ತರಿಯಿಂದ! ಕತ್ತರಿಯಿಂದ!" ಎಂತ ಕೂಗುತ್ತಿದ್ದಳು. ಬಡವೆ ಕಡೆಗೆ ಮುಳುಗಿ ಹೋಗಿ, ಇನ್ನು ಕೂಗಲಿಕ್ಕೆ ಕೂಡದೆ ಹೋದಾಗ್ಯೆ ನೀರಿನೊಳಗಿಂದ ಕೈ ಚಾಚಿ, "ಕತ್ತರಿಸಿದರು!" ಎಂದು ತೋರಿಸುವ ಬಗ್ಯೆ ತೋರುಬೆರಳು ಮತ್ತು ನಡುಬೆರಳು ಕತ್ತರಿಯಂತೆ ಮಾಡಿ, ಆಡಿಸಿ, ಸತ್ತು ಹೋದಳು.

ಈ ಕಥೆಯನ್ನು ಓದಿ, ಗಂಡಸರು ವಿನೋದಿಸಿಕೊಂಡು, ನೆಗಾಡಲಿಕ್ಕೆ ಸಾಕು. ಹೆಂಗಸರು ಸತ್ತು ಹೋದ ಹೊರ್ತು ಬಾಯಿ ಮುಚ್ಚರು, ಸತ್ತರೂ ಛಲ ಬಿಡರು ಎಂಥೇಳಿ ಕೆಲವರು ಒಂದು ವೇಳ್ಯೆ ತಮ್ಮ ಹೆಂಡರಿಗೆ ಹಾಸ್ಯ ಮಾಡಿ, ನಾಚಿಸಲಿಕ್ಕಾದರೂ ಸಾಕು. ಛಲ ಹಿಡಿದು, ಹಟ ಸಾಧಿಸುವಂಥಾ ಸ್ತ್ರೀಯರು ಈ ಕಥೆಯನ್ನು ಓದಿಕೊಂಡು, ನಾಚಿಕೊಂಡು, ಬಾಯಿ ಮುಚ್ಚಿಕೊಳ್ಳ ಕಲಿತು ಕೊಂಡರೆ, ಬಹಳ ಒಳ್ಳೇದಾದೀತು. ಮತ್ತು ಯಾವ ಸ್ತ್ರೀಯಾದರೂ ತಾನು ಆಕೆಯಂಥಾ ಛಲವಾದಿಯಲ್ಲಾ ಎಂದು ನೆನಸಿಕೊಳ್ಳಲಾಗದು. ಹೆಚ್ಚು ಕಡಿಮೆ ಇದ್ದರೂ, ಸ್ತ್ರೀಯರೆಲ್ಲರೂ ಹಟಮಾರಿಗಳೇ ಎಂಬುವ ಮಾತು ಅನ್ಯಾಯದ್ದಾದರೂ, ಛಲ ಹಿಡಿಯುವ ಮತ್ತು ಹಟ ಸಾಧಿಸುವ ದುರ್ಗುಣವು ಸ್ತ್ರೀಜಾತಿಗೆ ನಿಲಕದಷ್ಟು ದೂರವಲ್ಲವೇ ಅಲ್ಲಾ. ಹಟಬುದ್ಧಿಯನ್ನು ಬಿಟ್ಟು ಬಿಟ್ಟು, ಸಾಧುಭಾವದಲ್ಲಿ ನಡದುಕೊಳ್ಳುವದು ಪುರುಷರಿಗೆ ಅತಿ ಹಿತವಾಗಿಯೂ ಒಂದು ಭೂಷಣವಾಗಿಯೂ ಇರಲಾಗಿ, ಸ್ತ್ರೀಯರುಗಳಿಗೆ ಅದು ಹತ್ತು ಗುಣದಷ್ಟು ಹಿತವೂ ಚಂದವೂ ಆಗಿರುತ್ತದೆ.

ಆದರೆ ಹೆಂಗಸರ ವಿಷಯದಲ್ಲಿ ನೆಗಾಡಿ, ಹಾಸ್ಯ ಮಾಡಲಿಕ್ಕೆ ಗಂಡಸರಿಗೆ ಏನೂ ಕಾರಣವಿಲ್ಲಾ! ಮೇಲಿನ ಕಥೆಯನ್ನು ನೋಡಿದರೆ, ಗಂಡನು ಹೆಂಡತಿಗಿಂತ ಹಟಮಾರಿಯಾಗಿ, ತರ್ಕ ಮಾಡಿದ್ದಲ್ಲದೆ, ಡೊಣ್ಣೆಯ ದೃಷ್ಟಾಂತ ಮಾತ್ರದಿಂದ ಛಲ ತರ್ಕಗಳನ್ನು ತೀರಿಸಿ, ಹೆಂಡತಿ ಮಾಡದ ಅನ್ಯಾಯವನ್ನಾದರೂ ಮಾಡಿ, ಪಾತಕಿಯಾದನಲ್ಲಕಟಾ! ಹೀಗಿರಲಾಗಿ ನಾಚಿಕೊಳ್ಳಲಿಕ್ಕೆ ಸ್ತ್ರೀಯರಿಗೆ ಕಾರಣ ತೋರಲಾಗಿ, ಪುರುಷರಿಗೆ ನಾಚಿಕೊಳ್ಳಲಿಕ್ಕೆ ಇನ್ನು ಹೆಚ್ಚು ಕಾರಣವದೆ. ಹಾಗಾದರೆ ದಂಪತಿಗಳಾದಂಥವರೂ ಉಳಿದ ಎಲ್ಲಾ ಸ್ತ್ರೀಪುರುಷರೂ ಯಾವತ್ತು ಹಟಬುದ್ಧಿಯನ್ನೂ ಛಲಸಾಧನೆಯನ್ನೂ ಬಿಟ್ಟುಬಿಟ್ಟು; ಸಾಧುಭಾವದಲ್ಲಿ ಶೇರಿ, ನ್ಯಾಯವೂ ಸ್ತುತ್ಯವೂ ಆಗಿರುವಂಥಾದನ್ನು ಬಗೆದು, ಕೈಕೊಂಡು ಮಾಡಲೂ ಒಬ್ಬರನ್ನೊಬ್ಬರು ಸಹಿಸಿಕೊಳ್ಳಲೂ ಕಲಿತುಕೊಳ್ಳುವವರಾಗಲಿ!

೬೨ ಮೇಲಿನ ಆಕಾಶದಲ್ಲಿಯೂ ಕೆಳಗಿನ ಭೂಮಿಯಲ್ಲಿಯೂ ಯೆಹೋವನೇ ದೇವರೆಂದೂ

ದಕ್ಷಿಣ ಹಿಂದುಸ್ಥಾನದಲ್ಲಿ ರೂಢಿಯಾಗಿ ಎಣಿಸುವ

ಶಕಗಳ ಮೊಕಾಬಿಲೆ ಪಟ್ಟಿ.

ಕ್ರಿಸ್ತಶಕ A. D.		ಹಿಂದು ಶಕಗಳು					ಫಸಲಿ		ಮಹಮ್ಮದಿ ಹಿಜರಿ	
		ಚಾಂದ್ರಮಾನ			ಸೌರಮಾನ					
		ಸಂವತ್ಸರಗಳು	ಶಾಲಿವಾಹನ ಶಕ		ಮಲಯಾಳ ಕೊಲ್ಲಮ್					
1807	1867	ಪ್ರಭವ	1729	1789	982	1042	1216	1276	1222	1284
1808	1868	ವಿಭವ	1730	1790	983	1043	1217	1277	1223	1285
1809	1869	ಶುಕ್ಲ	1731	1791	984	1044	1218	1278	1224	1286
1810	1870	ಪ್ರಮೋದೂತ	1732	1792	985	1045	1219	1279	1225	1287
1811	1871	ಪ್ರಜೋತ್ಪತ್ತಿ	1733	1793	986	1046	1220	1280	1226	1288
1812	1872	ಆಂಗೀರಸ	1734	1794	987	1047	1221	1281	1227	1289
1813	1873	ಶ್ರೀಮುಖ	1735	1795	988	1048	1222	1282	1228-29	1290
1814	1874	ಭಾವ	1736	1796	989	1049	1223	1283	1230	1291
1815	1875	ಯುವ	1737	1797	990	1050	1224	1284	1231	1292
1816	1876	ಧಾತು	1738	1798	991	1051	1225	1285	1232	1293
1817	1877	ಈಶ್ವರ	1739	1799	992	1052	1226	1286	1233	1294-95
1818	1878	ಬಹುಧಾನ್ಯ	1740	1800	993	1053	1227	1287	1234	1296
1819	1879	ಪ್ರಮಾಥಿ	1741	1801	994	1054	1228	1288	1235	1297
1820	1880	ವಿಕ್ರಮ	1742	1802	995	1055	1229	1289	1236	1298
1821	1881	ವಿಷು	1743	1803	996	1056	1230	1290	1237	1299
1822	1882	ಚಿತ್ರಭಾನು	1744	1804	997	1057	1231	1291	1238	1300
1823	1883	ಸ್ವಭಾನು	1745	1805	998	1058	1232	1292	1239	1301
1824	1884	ತಾರಣ	1746	1806	999	1059	1233	1293	1240	1302
1825	1885	ಪಾರ್ಥಿವ	1747	1807	1000	1060	1234	1294	1241	1303
1826	1886	ವ್ಯಯ	1748	1808	1001	1061	1235	1295	1242	1304
1827	1887	ಸರ್ವಜಿತು	1749	1809	1002	1062	1236	1296	1243	1305
1828	1888	ಸರ್ವಧಾರಿ	1750	1810	1003	1063	1237	1297	1244	1306
1829	1889	ವಿರೋಧಿ	1751	1811	1004	1064	1238	1298	1245	1307
1830	1890	ವಿಕೃತಿ	1752	1812	1005	1065	1239	1299	1246	1308
1831	1891	ಖರ	1753	1813	1006	1066	1240	1300	1247	1309
1832	1892	ನಂದನ	1754	1814	1007	1067	1241	1301	1248	1310
1833	1893	ವಿಜಯ	1755	1815	1008	1068	1242	1302	1249	1311
1834	1894	ಜಯ	1756	1816	1009	1069	1243	1303	1250	1312

ಕ್ರಿಸ್ತಶಕ		ಸಂವತ್ಸರಗಳು	ಶಾಲಿವಾಹನ ಶಕ		ಮಲಯಾಳ ಕೊಲ್ಲಮ್		ಫಸಲಿ		ಮಹಮ್ಮದಿ ಹಿಜರಿ	
1835	1895	ಮನ್ಮಥ	1757	1817	1010	1070	1244	1304	1251	1313
1836	1896	ದುರ್ಮುಖಿ	1758	1818	1011	1071	1245	1305	1252	1314
1837	1897	ಹೇವಿಳಂಬಿ	1759	1819	1012	1072	1246	1306	1253	1315
1838	1898	ವಿಳಂಬಿ	1760	1820	1013	1073	1247	1307	1254	1316
1839	1899	ವಿಕಾರಿ	1761	1821	1014	1074	1248	1308	1255	1317
1840	1900	ಶಾರ್ವರಿ	1762	1822	1015	1075	1249	1309	1256	1318
1841	1901	ಪ್ಲವ	1763	1823	1016	1076	1250	1310	1257	1319
1842	1902	ಶುಭಕೃತು	1764	1824	1017	1077	1251	1311	1258	1320
1843	1903	ಶೋಭಕೃತು	1765	1825	1018	1078	1252	1312	1259	1321
1844	1904	ಕ್ರೋಧಿ	1766	1826	1019	1079	1253	1313	1260	1322
1845	1905	ವಿಶ್ವಾವಸು	1767	1827	1020	1080	1254	1314	1261-62	1323
1846	1906	ಪರಾಭವ	1768	1828	1021	1081	1255	1315	1263	1324
1847	1907	ಪ್ಲವಂಗ	1769	1829	1022	1082	1256	1316	1264	1325
1848	1908	ಕೀಲಕ	1770	1830	1023	1083	1257	1317	1265	1326
1849	1909	ಸೌಮ್ಯ	1771	1831	1024	1084	1258	1318	1266	1327-28
1850	1910	ಸಾಧಾರಣ	1772	1832	1025	1085	1259	1319	1267	1329
1851	1911	ವಿರೋಧಿಕೃತು	1773	1833	1026	1086	1260	1320	1268	1330
1852	1912	ಪರಿಧಾವಿ	1774	1834	1027	1087	1261	1321	1269	1331
1853	1913	ಪ್ರಮಾದೀಚ	1775	1835	1028	1088	1262	1322	1270	1332
1854	1914	ಆನಂದ	1776	1836	1029	1089	1263	1323	1271	1333
1855	1915	ರಾಕ್ಷಸ	1777	1837	1030	1090	1264	1324	1272	1334
1856	1916	ನಳ	1778	1838	1031	1091	1265	1325	1273	1335
1857	1917	ಪಿಂಗಳ	1779	1839	1032	1092	1266	1326	1274	1336
1858	1918	ಕಾಳಯುಕ್ತಿ	1780	1840	1033	1093	1267	1327	1275	1337
1859	1919	ಸಿದ್ಧಾರ್ಥಿ	1781	1841	1034	1094	1268	1328	1276	1338
1860	1920	ರೌದ್ರಿ	1782	1842	1035	1095	1269	1329	1277	1339
1861	1921	ದುರ್ಮತಿ	1783	1843	1036	1096	1270	1330	1278	1340
1862	1922	ದುಂದುಭಿ	1784	1844	1037	1097	1271	1331	1279	1341
1863	1923	ರುಧಿರೋದ್ಗಾರಿ	1785	1845	1038	1098	1272	1332	1280	1342
1864	1924	ರಕ್ತಾಕ್ಷಿ	1786	1846	1039	1099	1273	1333	1281	1343
1865	1925	ಕ್ರೋಧನ	1787	1847	1040	1100	1274	1334	1282	1344
1866	1926	ಕ್ಷಯ	1788	1848	1041	1101	1275	1335	1283	1345

ಸೂಚನೆ: 1. ಕ್ರಿಸ್ತಶಕವೆಂಬ ಇಸವಿ ಜನವರಿ 1ನೇ ತಾರೀಕಿಗೆ ಪ್ರಾರಂಭವಾಗುವದು.
2. ಸಂವತ್ಸರವೂ ಶಾಲಿವಾಹನ ಶಕವೂ (ಒಂದೇ ದಿವಸ) ಮಾರ್ಚ-ಎಪ್ರಿಲಲ್ಲಿ ಪ್ರಾರಂಭವಾಗುವದು.
3. ಮಲಯಾಳ ಕೊಲ್ಲಮ್ ಎಂಬ ಕೇರಳ ಶಕವು ಸಪಟಂಬರ ತಿಂಗಳಲ್ಲಿ ”
4. ಫಸಲಿ ಜುಲಾಯಿ 1ನೇ ತಾರೀಕಿಗೆ ”
5. ಮಹಮ್ಮದಿ ಹಿಜರಿ ಸಾಮಾನ್ಯವಾಗಿ ವರ್ಷ ವರ್ಷ ೧೫ ದಿವಸಕ್ಕೆ ಮುಂದಾಗಿ „

ಠಸೇತೀವೇ.

(೧೮೭೯ನೇ ಇಸವಿ Iನೇ ಆಕ್ಟಿನಲ್ಲಿರುವ ಪಟ್ಟಿಯಿಂದ ಸಂಕ್ಷೇಪಿಸಿದ್ದು.)

ದಸ್ತಾವೇಜಿನ ವಿವರಣೆ:	ಸ್ಟ್ಯಾಂಪ್ ಹಾಸಲು:
1. **(Acknowledgment)** ಇಪ್ಪತ್ತು ರೂಪಾಯಿಗೆ ಮೀರಿರುವ ಸಾಲದ ಪಾವತೀ ಒಪ್ಪಿತ (ಯಾನೆ ರಶೀದಿ)	೧ ಆಣೆ
2. **(Administration-bond)** ಎಡ್ಮಿನಿಸ್ಟ್ರೇಶನ್ ಬೊಂಡ್ (ಅಂದರೆ ಸೊತ್ತಿನ ಮೇಲೆ ಅಧಿಕಾರ ನಡಿಸುವ ಬಗ್ಗೆ ಹುಟ್ಟುವ ಪತ್ರ . .	14ನೇ ಅಂಕೆಯಲ್ಲಿ ಹೇಳಿರುವಷ್ಟೆ ಠಸೆ
3. **(Affidavit)** ಅಫಿದಾವಿತ್ (ಅಂದರೆ ಪ್ರಮಾಣ ಮಾಡಿಸಲಿಕ್ಕೆ ಅಧಿಕಾರವುಳ್ಳವನ ಮುಂದೆ ಪ್ರಮಾಣದ ಮೇಲಾಗಲೀ ಸತ್ಯದ ಮೇಲಾಗಲೀ ಬರಹಾಮೂಲಕವಾಗಿ ಕೊಡುವ ವಾಙ್ಮೂಲ ಇಲ್ಲವೆ "ಡಿಕ್ಲರೇಶನ್" ಯಾನೆ ಹೇಳಿಕೆ	೧ ರೂಪಾಯಿ
6. **(Appointment)** ನೇಮಕ (ಅಂದರೆ ಟ್ರಸ್ಟಿಗಳ ಇಲ್ಲವೆ ಸ್ಥಿರ ಯಾ ಚರಸೊತ್ತುಗಳ ಅಧಿಕಾರದ ಅಮಲಿನಲ್ಲಿ ಆದ ನೇಮಕ) ಮರಣಶಾಸನವಲ್ಲದ ಯಾವ ಬರವಣಿಕೆಯಿಂದಾಗಲಿ ಮಾಡಲ್ಪಟ್ಟದ್ದರೆ . . .	೧೫ ರೂಪಾಯಿ
7. **(Appraisement)** ಅಂದಾಜುಪಟ್ಟಿ (ಯಾ ಕಿಮ್ಮತು ಚೀಟು—ಒಂದು ವ್ಯಾಜ್ಯ ನಡಿಯುತ್ತಿರುವಾಗ ಕೋರ್ಟಿನವರ ಅಪ್ಪಣೆ ಮೇಲಲ್ಲದೆ ಅನ್ಯಥಾ ತಯಾರು ಮಾಡೋಣಾದರೆ)	10ನೇ ಅಂಕೆಯಲ್ಲಿ ಹೇಳಿರುವಷ್ಟೆ ಠಸೆ
8. ಯಾವದೊಂದು ಸಂಘದ (Articles) ನಿಬಂಧನೆಗಳು . . .	೨೫ ರೂಪಾಯಿ
ಹವಾಲ್ತೆ	21ನೇ ಮತ್ತು 60ನೇ ಅಂಕೆಗಳನ್ನು ನೋಡು.
10. ಪಂಚಾಯಿತರ ಇಲ್ಲವೆ ಮಧ್ಯಸ್ಥರ (Award) ಎವರ್ಡ್ ಯಾನೆ ಇತ್ಯರ್ಥ (ಅಂದರೆ ಒಂದು ವ್ಯಾಜ್ಯ ನಡಿಯುತ್ತಿರುವಾಗ ಕೋರ್ಟಿನವರ ಹುಕುಮಿನ ಮೇಲಲ್ಲದೆ ಅನ್ಯಥಾ ಒಬ್ಬ ಪಂಚಾಯಿತದಾರನಿಗೆ ರಿಫೆರ್ ಮಾಡಲಾಗಿ ಆತನಿಂದ ಬರಹಾಮೂಲಕವಾಗಿ ಕೊಡೋಣಾಗುವ ಫೈಸಲು):—	
a) ಸದರಿ ಇತ್ಯರ್ಥಕ್ಕೆ ಕಾರಣವಾದ ಸೊತ್ತಿನ ಮೊಬಲಗು ೧೦೦೦ ರೂಪಾಯಿಗೆ ಮೀರದಿದ್ದರೆ	13ನೇ ಅಂಕೆಯಲ್ಲಿ ಹೇಳಿರುವಷ್ಟೆ ಠಸೆ
b) ಇತರ ಸಂಗತಿಯಲ್ಲಿ	೫ ರೂಪಾಯಿ
11. (Bill of Exchange or Promissory Note) ಬಿಲ್ ಒಫ್ ಎಕ್ಸ್‌ಚೇಂಜ್ ಯಾ ಪ್ರೊಮಿಸರಿ ನೋಟು (ಅಂದರೆ ವಟಾಯಿಸ ತಕ್ಕ ಹುಂಡಿ ಯಾ ವಾಯಿದೇ ಚೀಟು. ಇದರಲ್ಲಿ ಚೆಕ್ಕ್, ಪತ್ರ, ಬೆಂಕನೋಟು, ಇಲ್ಲವೆ ಕರೆನ್ಸಿ ನೋಟು ಸೇರುವದಿಲ್ಲ):—	
a) ಕೇಳಿದಾಗಲೇ ಪಾವತಿ ಆಗ ತಕ್ಕದ್ದಾಗಿ, ೨೦ ರೂಪಾಯಿಗೆ ಮೀರದಿದ್ದರೆ	೧ ಆಣೆ

	ಒಂದಕ್ಕೆ		ದುಬಾರಿಪ್ರತಿಗೆ		ತಿಬಾರಿಪ್ರತಿಗೆ	
b) ಕೇಳಿದಾಗಲೀ ಅಲ್ಲದೆ ಅನ್ಯಥಾ ಪಾವತಿಯಾಗ ತಕ್ಕದ್ದಾಗಿ, ಬರದ ಯಾ ಕಂಡ ತಾರೀಕಿನಿಂದ ಒಂದು ಸಂವತ್ಸರಕ್ಕೆ ಮೀರದ ವಾಯಿದೆ ಇದ್ದರೆ:	ರೂ.	ಆ.	ರೂ.	ಆ.	ರೂ.	ಆ.
ನಮೂದಿಸಿದ ರೂಪಾಯಿ ೨೦೦ಕ್ಕೆ ಮೀರದಿದ್ದರೆ	೦	೨	೦	೧	೦	೧
ರೂಪಾಯಿ ೨೦೦ಕ್ಕೆ ಮೀರಿ ೪೦೦ ,, ,,	೦	೪	೦	೨	೦	೨
,, ೪೦೦ ,, ೬೦೦ ,, ,,	೦	೬	೦	೩	೦	೨
,, ೬೦೦ ,, ೧೦೦೦ ,, ,,	೦	೧೦	೦	೫	೦	೪
,, ೧೦೦೦ ,, ೧೨೦೦ ,, ,,	೦	೧೨	೦	೬	೦	೪
,, ೧೨೦೦ ,, ೧೬೦೦ ,, ,,	೧	೦	೦	೮	೦	೬
,, ೧೬೦೦ ,, ೨೫೦೦ ,, ,,	೧	೮	೦	೧೨	೦	೮
೨೫೦೦ ರೂಪಾಯಿ ಮೇಲೆ ೧೦೦೦೦ ರೂ. ವರೆಗೆ ಪ್ರತಿ ರೂ. ೨೫೦೦ಕ್ಕೆ ಯಾ ಅದರ ಅಂಶಕ್ಕೆ	೧	೮	೦	೧೨	೦	೮
೧೦೦೦೦ ರೂಪಾಯಿ ಮೇಲೆ ೩೦೦೦೦ ರೂಪಾಯಿ ವರೆಗೆ ಪ್ರತಿ ರೂಪಾಯಿ ೫೦೦೦ ಯಾ ಅದರ ಅಂಶಕ್ಕೆ . . .	೩	೦	೧	೮	೧	೦
೩೦೦೦೦ ರೂಪಾಯಿ ಮೇಲೆ ಪ್ರತಿ ರೂಪಾಯಿ ೧೦೦೦೦ಕ್ಕೆ ಯಾ ಅದರ ಅಂಶಕ್ಕೆ	೬	೦	೩	೦	೨	೦

c) ಬರದ ತಾರೀಕಿನಿಂದ ಇಲ್ಲವೆ ಕಂಡ ತಾರೀಕಿನಿಂದ ಒಂದು ಸಂವತ್ಸರದ ಮೇಲೆ ಪಾವತಿ ಆಗ ತಕ್ಕದ್ದಾದರೆ— ೧೩ನೇ ಅಂಕೆಯಲ್ಲಿ ಹೇಳಿರುವಷ್ಟೆ ರಸೆ

12. (Bill of Lading) ಬಿಲ್ ಒಫ್ ಲೇಡಿಂಗ್ ಎಂಬ ಸಾಮಾನು (ಜಹಜಿನ ಮೇಲೆ) ಭರಾವಣಿಚೀಟು . . . . ೪ ಆಣೆ

13. ಪತ್ರ (ಈ ಆಕ್ಟನಿಂದ ಅನ್ಯಥಾ ನಿಬಂಧಿಸಲ್ಪಡದೆ ಇರುವಂಥಾದ್ದು):—

ಇದರ ಮೊಬಲಗು ೧೦ ರೂಪಾಯಿಗೆ ಮೀರದಿದ್ದರೆ, . . .	೨ ಆಣೆ
೧೦ ರೂಪಾಯಿಗೆ ಮೀರಿ ೫೦ ರೂಪಾಯಿಗೆ ,, ...	೪ ಆಣೆ
೫೦ ,, ,, ೧೦೦ ,, ,, ...	೮ ಆಣೆ
೧೦೦ ರೂ. ಮೇಲೆ ೧೦೦೦ ರೂ. ವರೆಗೆ ಪ್ರತಿ ರೂ. ೧೦೦ಕ್ಕೆ ಯಾ ಅದರಂಶಕ್ಕೆ	೮ ಆಣೆ
೧೦೦೦ ,, ,, ಪ್ರತಿ ,, ೫೦೦ಕ್ಕೆ ಯಾ ಅದರ ಅಂಶಕ್ಕೆ. . . .	೨ ರೂಪಾಯಿ ೮ ಆಣೆ

14. (Bond or Mortgage-Deed) ಪತ್ರ ಅಥವಾ ಅಡಮಾನ ಪತ್ರ (ಒಂದು ಕೆಲಸವನ್ನು ಸರಿಯಾಗಿ ನೆರವೇರಿಸ ತಕ್ಕ ಬಗ್ಗೆ ಅಥವಾ ತದ್ವಾರಾ ವಸೂಲಾದ ಹಣಕ್ಕೆ ಸಬಬು ಕೊಡ ತಕ್ಕ ಬಗ್ಗೆ ಜಾಮೀನಾಗಿ ಬರಕೊಡುವಂಥಾದ್ದು):—

a) ಪತ್ರದ ಮೊಬಲಗು ೧೦೦೦ ರೂಪಾಯಿಗೆ ಮೀರದಿದ್ದರೆ— 13ನೇ ಅಂಕೆಯಲ್ಲಿ ಹೇಳಿರುವಷ್ಟೆ ರಸೆ

b) ಇತರ ಸಂಗತಿಯಲ್ಲಿ . . . . ೫ ರೂಪಾಯಿ

15. (Bottomry-Bond) ಬೊಟ್ಟಮ್ರಿ ಬೊಂಡ್ (ಅಂದರೆ ಸಮುದ್ರ ಪ್ರಯಾಣ ಮಾಡುವ ಒಂದು ಜಹಜಿನ ಧನಿಯು ತನ್ನ ಜಹಜನ್ನು ಕಾಪಾಡುವ ಬಗ್ಗೆ ಇಲ್ಲವೆ ಅದರ ಪಯಣ ಸಾಗಿಸುವ ಬಗ್ಗೆ ಸದರಿ ಜಹಜಿನ ಈಡಿನ ಮೇಲೆ ಸಾಲ ತಕ್ಕೊಂಡು ಬರಕೊಡುವ ದಸ್ತಾವೇಜು)— 13ನೇ ಅಂಕೆಯಲ್ಲಿ ಹೇಳಿರುವಷ್ಟೆ ರಸೆ

16. (Certificate of Sale) ವಿಕ್ರಯದ ಸರ್ಟಿಫಿಕೇಟು (ಅಂದರೆ ಸಿವಿಲ್ ಕೋರ್ಟಿನವರಿಂದಾಗಲೀ ರೆವನೀ ಕೋರ್ಟಿನವರಿಂದಾಗಲೀ ಬಹಿರಂಗವಾದ ಲೈಲಾಮಿನ ಮೂಲಕ ವಿಕ್ರಯಿಸೋಣಾದ ಯಾವ ಸೊತ್ತನ್ನಾಗಲೀ ಕೊಂಡುಕೊಂಡವನಿಗೆ ಕೊಡುವಂಥಾದ್ದು)—ಕ್ರಯದ ಹಣವಿಗೆ 21ನೇ ಅಂಕೆಯಲ್ಲಿ ಹೇಳಿರುವಷ್ಟೆ ರಸೆ

ಉತ್ತರದಲ್ಲಿ ಪಂಜಾಬ ಶೀಮೆಯಲ್ಲಿರುವ ಲೋದಿಯಾನಾ ಪಟ್ಣದ ಹತ್ತರ ಚಂಬಾ ಎಂಬದಾಗಿ ಎತ್ತರ ಸ್ಥಳದಲ್ಲಿರುವಂಥಾ ಒಂದು ಊರು ಅದೆ. ಅದು ಹಿಮಾಲಯ ಪರ್ವತಗಳ ಒಂದು ಸಾಲಿನಲ್ಲಿದ್ದು ಸುತ್ತಮುತ್ತಲಿನ ಪ್ರದೇಶಕ್ಕಿಂತ ಎತ್ತರವಾಗಿರುವದರಿಂದ ಅಲ್ಲಿ ಬಹಳ ಛಳಿಯುಂಟು. ಈ ಊರಿಗೆ ನೀರು ಎತ್ತರವಾದ ಬಂಡೆಯೊಳಗಿಂದ ಹರಿದು ಬರುತ್ತದೆ. ಒಮ್ಮೆ ಒಬ್ಬ ಕ್ರಿಸ್ತೀಯ ಬೋಧಕನು ಆ ಚಂಬಾ ಊರಿಗೆ ಹೋಗಿದ್ದು ಬಂಡೆಯೊಳಗಿಂದ ಹರಿದು ಬರುವ ನಿರ್ಮಲ ಜಲವನ್ನು ನೋಡಿ ಅಲ್ಲಿದ್ದವರನ್ನು—"ಇಷ್ಟು ಎತ್ತರವಾದ ಜಾಗದಿಂದ ನಿಮಗೆ ನೀರು ಹ್ಯಾಗೆ ಹರಿದು ಬರುತ್ತದೆಂದು ನನಗೆ ಆಶ್ಚರ್ಯವಾಗುತ್ತದೆ, ಇದರ ವಿಷಯದಲ್ಲಿ ನಿಮಗೆ ಗೊತ್ತಿದ್ದದ್ದು ನನಗೆ ಹೇಳಿರಿ," ಎಂತ ಕೇಳಿದನು. ಆಗ ಅಲ್ಲಿ ನಿಂತವರಲ್ಲಿ ಒಬ್ಬನು ಅವನಿಗೆ ಹೇಳಿದ್ದು: "ಬಹು ಪೂರ್ವ ಕಾಲದಲ್ಲಿ ಈ ಊರಿಗೆ ನೀರು ಬಹಳ ಕಡಿಮೆ ಇತ್ತು. ವರ್ಷಂಪ್ರತಿ ನೀರಿನ ಬರಗಾಲವೇ ಬರುತ್ತಿತ್ತು. ಆದರೆ ಪೂರ್ವದಲ್ಲಿ ಈ ಊರನ್ನಾಳುತ್ತಿದ್ದ ಪುಣ್ಯವಂತೆಯಾದ ಒಬ್ಬ ರಾಣಿ ಜನರ ಕಷ್ಟವನ್ನು ನೋಡಿ ಅದನ್ನು ನಿವಾರಿಸುವದಕ್ಕೆ ಬಹುತರವಾಗಿ ಆಲೋಚಿಸಿ, ನಾನಾ ಯುಕ್ತಿಗಳನ್ನು ಮಾಡಿದರೂ ಎಲ್ಲಾ ನಿರರ್ಥಕವಾಯಿತಂತೆ. ಆಗ ಅವಳು ಪರದೇಶದಿಂದ ಸನ್ಯಾಸಿಗಳನ್ನು ಕರಿಸಿ ಯಾವತ್ತೂ ಕಷ್ಟಗಳನ್ನು ಅವರಿಗೆ ಶೃತಗೊಳಿಸಿ, 'ನಮ್ಮ ಊರಿನಲ್ಲಿ ಎತ್ತರವಾದ ಬಂಡೆಯಲ್ಲಿ ಯಥೇಷ್ಟ ನೀರು ಇರ ಬೇಕೆಂದು ನನಗೆ ತೋರುತ್ತದೆ. ಆದರೆ ಅಂಥಾ ದುರ್ಗಮ ಸ್ಥಳಕ್ಕೆ ಹೋಗುವದು ಹ್ಯಾಗೆ? ಅಲ್ಲಿಂದ ನೀರು ಊರಿಗೆ ತರಿಸುವದು ಹ್ಯಾಗೆ?' ಎಂಬದಾಗಿ ಅವರನ್ನು ಕೇಳಿದಳು. ಅದಕ್ಕೆ ಆ ಸೂಜ್ಞ ಪುರುಷರು ಹೇಳಿದರು—'ಈ ಊರಿನ ಅರಸನು ಇಂಥಿಂಥಾ ಸ್ಥಳದಲ್ಲಿ ಜನರಿಗಾಗಿ ತನ್ನ ಪ್ರಾಣ ಅರ್ಪಿಸಿದರೆ ಮಾತ್ರ ನೀರು ದೊರಕುವದು; ಬೇರೆ ಉಪಾಯವಿಲ್ಲಾ.' ಆಗ ರಾಣಿ—'ಒಳ್ಳೇದು, ನಾನು ಸಿದ್ಧ ಇದ್ದೇನೆ, ಯಾವ ಸ್ಥಳದಲ್ಲಿ ನನ್ನನ್ನು ಅರ್ಪಣೆ ಮಾಡ ಬೇಕು?' ಎಂದು ಅವರನ್ನು ಕೇಳಿದ್ದಲ್ಲಿ, 'ಈ ಎತ್ತರವಾದ ಗುಡ್ಡದಲ್ಲಿ' ಎಂದು ಅವರು ತೋರಿಸಿದರು. ಅವಳು ಅವರ ಮಾತಿನ ಮೇರೆಗೆ ಧೈರ್ಯದಿಂದ ಆ ಬಂಡೆಯನ್ನೇರಿ ಹೋಗಿ ಚಾಕರರಿಗೆ, 'ನನಗಾಗಿ ಇಲ್ಲಿ ಒಂದು ಕುಣಿ ಅಗಿಯಿರಿ' ಎಂತ ಆಜ್ಞಾಪಿಸಿದಳು; ಅಗಿದ ಮೇಲೆ ಶಾಂತ ಮನಸ್ಸಿನಿಂದ ಕುಣಿಯೊಳಗಿಳಿದು ಮಲಗಿ ತನ್ನನ್ನು ಜೀವಂತ ಹುಗಿಸಿಕೊಂಡಳಂತೆ; ಸಂಗಡಲೇ ಬಂಡೆಯೊಡದು ಇಲ್ಲಿ ಬುಗ್ಗೆ ಉಂಟಾಗಿ ಅಂದಿನಿಂದ ಊರಿನವರೆಲ್ಲರಿಗೆ ಅವರವರ ಮನೆಯ ಹತ್ತರವೇ ನಿರ್ಮಲವಾದ ನೀರು ಯಥೇಷ್ಟವಾಗಿ ಶಿಕ್ಕುತ್ತದೆ." ಈ ಕಥೆ ಕೇಳಿ ಪಾದ್ರಿ ಸ್ವಲ್ಪ

ಹೊತ್ತು ನಿಧಾನಿಸಿ ಅಲ್ಲಿ ಕೂಡಿ ಬಂದಿದ್ದವರಿಗೆ ಉಪದೇಶ ಮಾಡಿದನು, ಹ್ಯಾಗಂದರೆ: “ನೀವು ಹೇಳಿದ್ದು ಕೇವಲ ದಂತಕಥೆಯಾದಾಗ್ಯೂ ಅದರಿಂದ ಕೆಲವು ಬುದ್ಧಿ ಮಾತು ತೆಗೆದುಕೊಳ್ಳ ಬೇಕು. ನಿಮ್ಮ ಶರೀರದ ನೀರಡಿಕೆ ಈ ನೀರಿನಿಂದ ತಂಪಾಗುತ್ತದೆ, ಖರೆ; ನಿಮಗೆ ಆತ್ಮೀಕ ನೀರಡಿಕೆ ಇಲ್ಲವೋ? ಅದು ಪರಿಹಾರವಾಗುವದು ಹ್ಯಾಗೆ? ಆತ್ಮೀಕ ನೀರಡಿಕೆಯೆಂದರೇನು? ನೀವು ಈ ವರೆಗೆ ಮಾಡುತ್ತಾ ಬಂದ ಪಾಪಗಳು ಪರಿಹಾರವಾಗಿ ನಿಮ್ಮ ಹೃದಯಗಳು ಶುದ್ಧವಾಗಿ ನಿಮಗೆ ದೇವರ ದಯೆಯು ಸಂಪರ್ಕವು ದೊರಕ ಬೇಕು, ಕಡೆಗೆ ಪರಲೋಕರಾಜ್ಯವು ಶಿಕ್ಕ ಬೇಕು ಎಂಬ ಅಪೇಕ್ಷೆ ನಿಮ್ಮಲ್ಲಿ ಉಂಟಲ್ಲಾ. ಅದು ತೃಪ್ತಿಯಾಗುವದು ಹ್ಯಾಗೆ? ನೀವು ಈ ವರೆಗೆ ಅನುಸರಿಸುತ್ತಾ ಬಂದ ನಿಮ್ಮ ಹಿರಿಯರ ಮಾರ್ಗದಿಂದ ಅದು ನಿಮಗೆ ಶಿಕ್ಕುವದೋ? ಶಿಕ್ಕದು. ನಿಮ್ಮ ಆರಾಧನೆ ಭಕ್ತಿ ಮುಂತಾದ್ದೆಲ್ಲಾ, ಬಾಯಾರಿದವನು ಉಪ್ಪು ನೀರನ್ನೂ ಸಂಜು ನೀರನ್ನೂ ಕುಡಿದಂತೆಯೇ ಸರಿ. ಆದರೆ—‘ದಾಹಗೊಳ್ಳುವವನು ನನ್ನ ಬಳಿಗೆ ಬಂದು ಕುಡಿಯಲಿ, ನಾನು ಕೊಡುವ ನೀರು ಕುಡಿಯುವವನು ಎಂದೆಂದಿಗೂ ದಾಹಗೊಳ್ಳನು’ ಎಂದು ಹೇಳಿದವನೊಬ್ಬನಿದ್ದಾನೆ. ಆತನ್ಯಾರು? ನಮಗೂ ನಿಮಗೂ ದೇವರು ತೋರಿಸಿದ ರಕ್ಷಕನಾಗಿರುವ ಯೇಸು ಕ್ರಿಸ್ತನು. ನಿಮ್ಮ ಊರಿನ ಪೂರ್ವಿಕ ರಾಣಿ ಪ್ರಜೆಗಳ ಉಪಕಾರಾರ್ಥವಾಗಿ ಪ್ರಜೆಗಳ ಮೇಲಣ ಪ್ರೀತಿಯಿಂದ ಸ್ವಜೀವಾರ್ಪಣೆ ಮಾಡಿದಳೆಂದು ಹೇಳಿದಿರಲ್ಲಾ. ಈ ಯೇಸು ಕ್ರಿಸ್ತನು ಪರಲೋಕದಲ್ಲಿ ದೇವರ ಬಳಿಯಲ್ಲಿದ್ದವನು ದೇವರ ಮಗನಾಗಿರುವವನು ಮನುಷ್ಯರ ಮೇಲಣ ಪ್ರೀತಿಯಿಂದ ಈ ಲೋಕದಲ್ಲಿ ಅವತರಿಸಿ, ಪರಿಶುದ್ಧ ಪುರುಷನಾಗಿ ಮನುಷ್ಯರ ಮಧ್ಯದಲ್ಲಿ ಬದುಕಿ, ತನ್ನಲ್ಲಿ ಶೋಭಿಸುತ್ತಿದ್ದ ಪರಮಜ್ಞಾನದಿಂದಲೂ ಪರೋಪಕಾರಾರ್ಥವಾಗಿ ನಡಿಸಿದ ಅದ್ಭುತಗಳಿಂದಲೂ ದಿವ್ಯ ಬೋಧನೆಯಿಂದಲೂ ನಿಷ್ಕಳಂಕ ನಡತೆಯಿಂದಲೂ ತಾನು ದೇವತಾಪುರುಷನು, ಮನುಷ್ಯರ ರಕ್ಷಕನು ಎಂದು ದೃಷ್ಟಾಂತ ಪಡಿಸಿ, ಕಡೆಗೆ ಎಲ್ಲಾ ಮನುಷ್ಯರ ಪಾಪಗಳ ಪರಿಹಾರಕ್ಕೆ ತಾನೇ ಸ್ವಜೀವಾರ್ಪಣೆ ಮಾಡಿ ಪ್ರಾಯಶ್ಚಿತ್ತವಾದನು. ಆತನು ಮರಣಾನಂತರ ಪುನಶ್ಚ ಸಜೀವನಾಗಿ ಎದ್ದು, ಪರಲೋಕವನ್ನೈದಿದನು. ಆತನೀಗ ಪರಲೋಕದಲ್ಲಿರುವವನಾಗಿ ತನ್ನನ್ನು ವಿಶ್ವಾಸಿಸುವವರಿಗೆ ಪಾಪಗಳ ಪರಿಹಾರವನ್ನೂ, ಹೃದಯಶುದ್ಧಿಯನ್ನೂ, ಸಮಾಧಾನವನ್ನೂ, ನೀತಿಯಲ್ಲಿ ನಡೆಯುವದಕ್ಕೆ ಬಲವನ್ನೂ ಕೊಡುತ್ತಾನೆ. ತನ್ನ ಭಕ್ತರನ್ನು ಮರಣಕಾಲದಲ್ಲಿಯೂ ಬಿಡದೆ, ಅವರನ್ನು ಮೇಲಿನ ವಿಶ್ರಾಂತಿಗೆ ನಡಿಸಿಕೊಂಡು ಹೋಗುತ್ತಾನೆ. ಈ ಯೇಸು ರಕ್ಷಕನನ್ನು ನೀವು ಶರಣ ಹೊಕ್ಕರೆ, ನಿಮಗೆ ಇಹದಲ್ಲಿಯೂ ಪರದಲ್ಲಿಯೂ ಶುಭವಾಗುವದು. ನಿಮ್ಮ ಆತ್ಮದಾಹವನ್ನು ಪರಿಹರಿಸುವವನು ಆತನೊಬ್ಬನೇಯಲ್ಲದೆ ಬೇರೆ ಯಾರೂ ಇಲ್ಲಾ. ಆತನು ಸರ್ವರಿಗೂ ಉಚಿತವಾಗಿ ಕೊಡುತ್ತಾನೆ. ಆತನು ತನ್ನ ಜೀವವನ್ನು ನಮಗಾಗಿ ಕೊಟ್ಟದ್ದರಿಂದ ಈಗ ನಾವೇನೂ ಕಷ್ಟ ಮಾಡುವದು ಬೇಡ, ನಮ್ಮ ಪ್ರಯತ್ನದಿಂದ ಏನೂ ಸಾಧ್ಯವಾಗದು. ಎಲ್ಲಾ ನಮಗೆ ಆತನೇ ಸಿದ್ಧ ಮಾಡಿ ‘ಕಷ್ಟ ಪಟ್ಟು ಭಾರ ಹೊರುವವರೆಲ್ಲರೇ, ನನ್ನ ಬಳಿಗೆ ಬನ್ನಿರಿ, ನಾನು ನಿಮಗೆ ವಿಶ್ರಾಂತಿಯನ್ನು ಕೊಡುವೆನು’ ಎಂದು ಕರಿಯುತ್ತಾನೆ. ಆತನು ಕರಿಯುವದನ್ನು ಕೇಳಿ ನೀವೂ ಬನ್ನಿ, ಉಚಿತವಾಗಿ ತೆಗೆದುಕೊಳ್ಳಿ.”

ಶರೀರಚಿಕಿತ್ಸೆ.

(೧೮೮೩ನೇ ಇಸವಿಯ ಪಂಚಾಂಗದಲ್ಲಿರುವ ವಿವರದಿಂದ ಮುಂದೆ.)

ರೋಗಾದಿಗಳೂ ಇವುಗಳಲ್ಲಿ ಪ್ರಯೋಗವಾಗುವ ಊರೌಷಧಗಳೂ, ಇವುಗಳನ್ನು ಕುರಿತು ನಿಘಂಟುರೂಪವಾದ ಸೂಚನಾಸಾರವು.

ಕುಷ್ಠರೋಗ (ಮದಕರಿ ಇಲ್ಲವೆ ಔದುಂಬರಕುಷ್ಠರೋಗ) Leprosy.

ಈ ರೋಗಕ್ಕೆ ಮುಖ್ಯವಾಗಿ ಗರ್ಜನ್ ತೈಲದಿಂದ ಮಾಡುವ ಚಿಕಿತ್ಸೆಯನ್ನು ಕುರಿತು ೧೮೭೯ನೇ ಇಸವಿಯ ಪಂಚಾಂಗದ ೫೨—೫೫ನೇ ಪಾನುಗಳಲ್ಲಿ ಸವಿಸ್ತಾರವಾಗಿ ವಿವರಿಸಿರುತ್ತದೆ. ಅದಲ್ಲದೆ ಹೊಟ್ಟೆಗೆ ಚಾಲಮುಗ್ರ ಬೀಜದ ತೈಲ (೧೮೧[1]) ಕೊಡ ಬಹುದು; ಇಲ್ಲವೆ ಒಂದೆಲಗದ (೧೭೪[2]) ಚೂರ್ಣ, ಇಲ್ಲವೆ ಎಕ್ಕೆ ಗಿಡದ ಚೂರ್ಣ[3] (೧೮೨) ಪ್ರಯೋಗಿಸುವದು. ಅದಲ್ಲದೆ ಮಿಾನಿನ ಎಣ್ಣೆ[4] ಸಹ (೧೮೩) ಅವುಗಳ ಸಹಿತವಾಗಲೀ, ಒಂದೇ ಮಾತ್ರವಾಗಲೀ ಕೊಡುವದು. ಮಿಾನಿನ ಎಣ್ಣೆಯು

☞ ಮೇಲಿನ ವಿವರದಲ್ಲಿ ಔಷಧಗಳ ತೂಕವಾಗಲಿ, ಅಳತೆಯಾಗಲಿ ಇಂಗ್ಲಿಷ ಹೆಸರಿನಲ್ಲಿ ಕೊಟ್ಟಿರುವಲ್ಲಿ ಅವುಗಳ ಒಂದೊಂದು ಈ ಊರಿನ ಯಾವ ತೂಕಕ್ಕೂ ಅಳತೆಗೂ ಸರಿ ಬೀಳುತ್ತದೆಂಬದು ಮುಂದಿನ ಪಟ್ಟಿಯಿಂದ ಗೊತ್ತು ಮಾಡಿಕೊಳ್ಳ ಬಹುದು. ಔಷಧಗಳನ್ನು ತಯಾರು ಮಾಡುವಾಗ ಇದನ್ನು ಸರಿ ನೋಡಿಕೊಳ್ಳ ಬೇಕು.

ತೂಕ:	ಅಳತೆ:
೧ ಗ್ರೇನ್=೧ಗುಲ್ಗಂಜ=೧/೪ ಮಂಜೂಟಿತೂಕ	೧ ಮಿನಿಮ್=೧ ಸಾಧಾರಣ ತಟುಕು*
೩೦ " =೧/೨ ಡ್ರಮ್ =೭೧/೨ "	೬೦ " =೧ ಡ್ರಮ್=೧ ಚಾಸೌಟು
೪೫ " =೩/೪ " =೧ ಪಾವಲಿತೂಕ	೪ ಡ್ರಮ್ =೧/೨ ಔನ್ಸ್=೧ಮೇಜನಸೌಟು
೬೦ " =೧ " =೧೧/೩ "	೮ " =೧ " =೨ ".
೯೦ " =೧೧/೨ " =೧/೨ ರೂ. ತೂಕ (ತೊಲೆ)	೧ ಔನ್ಸ್ =ಶುಮಾರು ೧/೪ ಕುಡುತೆ
೧೮೦ " =೩ " =೧ " "	೪ " = " ೧ " =೧/೨ ಸೇರು
೧ ಔನ್ಸ್=೮ " =ಶುಮಾರು ೨೧/೨ "	೨೦ " =೧ ಪ್ಯಾಂಟ್=೧/೨ ಶೀಸೆ
೨ " =೧೬" = " ೫ "	೪೦ " =೨ " =೧ "

* ತಟಕು ವಿದ್ಯಮಾನಾನುಸಾರವಾಗಿ ಚಿಕ್ಕದು ದೊಡ್ಡದು ಆಗುವದುಂಟು.

[1] ೧೮೮೩ನೇ ಇಸವಿಯ ಪಂಚಾಂಗದ ೬೦ನೇ ಪಾನಿನಲ್ಲಿ ತೀರಿದ ೧೮೦ನೇ ಅಂಕೆಯಿಂದ ಮುಂದೆ.

[2] ಅದೇ ಪಂಚಾಂಗದ ೫೫ನೇ ಪಾನಿನಲ್ಲಿ ನೋಡು.

[3] ಎಕ್ಕೆ ಗಿಡದ ಚೂರ್ಣವನ್ನು ಕುರಿತು ೧೮೭೯ನೇ ಇಸವಿಯ ಪಂಚಾಂಗದ ೪೯ನೇ ಪಾನಿನಲ್ಲಿರುವ ೯೬ನೇ ಅಂಕೆಗಿರುವ ಟಿಪ್ಪಣಿಯನ್ನು ಸರಿ ನೋಡು.

[4] ಮಿಾನಿನ ಎಣ್ಣೆಯ ವಿಷಯದಲ್ಲಿ ೧೮೭೬ನೇ ಇಸವಿಯ ಪಂಚಾಂಗದ ೨೬ನೇ ಪಾನಿನಲ್ಲಿರುವ ೭ನೇ ಅಂಕೆಯನ್ನೂ ಅದರ ಟಿಪ್ಪಣಿಯನ್ನೂ ನೋಡು.

ಕುಷ್ಠರೋಗದಲ್ಲಿ ದಿನಾಲು ಕೊಡುತ್ತಾ ಬರಲಾಗಿ, ಅದು ತಾನೇ ರೋಗ ವಾಶಿಮಾಡ ತಕ್ಕ ಗುಣವುಳ್ಳದ್ದಲ್ಲದಿದ್ದರೂ, ಆದರ ಅನೇಕ ಪೀಡೆಯುಳ್ಳ ಲಕ್ಷಣಗಳನ್ನು ಪರಿಹರಿಸಲಿಕ್ಕಾಗುತ್ತದೆ. ಗರ್ಜನ್ ತೈಲದ ಚಿಕಿತ್ಸೆಯು ಬಹುಶಾ ಮಾಡಲುಚಿತವಾದ್ದೇ. ಕುಷ್ಠರೋಗದ ದೆಶೆಯಿಂದ ಹುಣ್ಣುಗಳು ಉಂಟಾದ್ದಕ್ಕೆ ಒಂದೆಲಗದ ಒತ್ತಡ (೧೭೪[1]), ಇಲ್ಲವೆ ಬೇವಿನ ಎಲೆಯ ಒತ್ತಡ (೧೮೪) ಮಾಡ ಬಹುದು. ಅಫೀಮು[2] (೧೮೫) ನೋವು ಶಮನ ಮಾಡುವದಕ್ಕೂ ನಿದ್ರೆ ಬೀಳಿಸುವದಕ್ಕೂ ಒಳ್ಳೇದು.

೧೮೧. ಚಾಲಮುಗ್ರದ[3] ಬೀಜಗಳ ಪ್ರಯೋಗದಿಂದ ಕುಷ್ಠವ್ಯಾಧಿಯಲ್ಲಿ ಉತ್ತಮ ಗುಣ ಕಂಡಿರುತ್ತದೆ; ಅದಲ್ಲದೆ ಗಂಡಮಾಲೆ ಮುಂತಾದ ಇತರ ಚರ್ಮವ್ಯಾಧಿ ಮತ್ತು ದೀರ್ಘಕಾಲದ ಶ್ರೋಣಿತವಾತಗಳಲ್ಲಿ ಸಹ ಗುಣಕರವಾಗಿ ಕೊಟ್ಟದೆ. ಹ್ಯಾಗಂದರೆ: ಬೀಜಗಳನ್ನು ಕುಟ್ಟಿ ಹುಡಿ ಮಾಡಿ, ಒಂದೊಂದು ೬ಗ್ರೇನಿನಷ್ಟು ತೆಗದು ಗುಳಿಗೆ ಕಟ್ಟಿ, ದಿನಕ್ಕೆ ಮೂರು ಸಾರಿ ತಿನ್ನಿಸುವದು. ಕ್ರಮೇಣವಾಗಿ ಈ ಪರಿಮಾಣವನ್ನು ೩ ಯಾ ೪ ಪಾಲು, ಇಲ್ಲವೆ ಅದಕ್ಕೂ ಮಿಾರಿ ಹೆಚ್ಚಿಸ ಬಹುದು. ಆದರಿಂದ ವಾಕರಿಕೆ ಉಂಟಾದರೆ, ಆದರ ಪರಿಮಾಣವನ್ನು ಕಡಿಮೆ ಮಾಡ ಬಹುದು, ಇಲ್ಲವೆ ಕೆಲವು ಕಾಲ ಬಿಟ್ಟು ಬಿಡಲು ಬಹುದು. ಚಾಲಮುಗ್ರವನ್ನು ಈ ಪ್ರಕಾರ ಕೊಡುವಂಥಾದ್ದು ಉತ್ತಮ ಕ್ರಮ. ಪರಂತು ಚಾಲಮುಗ್ರದ ಎಣ್ಣೆ ಕೊಡುವದಾದರೆ, ಒಂದು ಸಾರಿಗೆ ೪ ಯಾ ೫ ತಟಕುಗಳನ್ನು ಕೊಟ್ಟು, ಬೀಜಗಳ ಹುಡಿಯ ಪರಿಮಾಣದಂತೆ ಕ್ರಮೇಣವಾಗಿ ಹೆಚ್ಚಿಸಲು ಕಡಿಮೆ ಮಾಡಲು ಬಹುದು. ಈ ಔಷಧ ಸೇವಿಸುವ ಕಾಲದಲ್ಲಿ ಉಪ್ಪು ಹಾಕಿದ ಮಾಂಸ, ಹುಳಿ ಪದಾರ್ಥ, ಸಂಬಾರಗಳು, ಮಿಠಾಯಿ, ಇವುಗಳನ್ನು ವರ್ಜಿಯ ಮಾಡುವದು ಅವಶ್ಯವೆಂತಲೂ, ಬೆಣ್ಣೆ, ತುಪ್ಪ ಮುಂತಾದ ತೈಲಪದಾರ್ಥಗಳು ಈ ಚಿಕಿತ್ಸೆಗೆ ಅನುಕೂಲವೆಂತಲೂ ಎಣಿಸುತ್ತಾರೆ. ಇದಲ್ಲದೆ ಈ ಚಿಕಿತ್ಸೆ ಮಾಡುವ ಕಾಲದಲ್ಲಿ ಮಿಾನಿನ ಎಣ್ಣೆ ಸಹ ಪ್ರಯೋಜನಕರವಾಗಿ ಕೊಡ ಬಹುದು. ಈ ಚಾಲಮುಗ್ರದ ಬೀಜಗಳಿಂದ ಒಂದು ತರದ ಮುಲಾಮು ಸಹ ಮಾಡುತ್ತಾರೆ; ಹ್ಯಾಗಂದರೆ: ಆ ಬೀಜಗಳನ್ನು ಜಜ್ಜಿ, ಅವುಗಳ ಶಿಪ್ಪೆ ತೆಗದು ಚನ್ನಾಗಿ ಅರದು, ಅದಕ್ಕೆ ತುಪ್ಪವಾಗಲೀ ಇತರ ಸಾಧಾರಣ ಮುಲಾಮಾಗಲೀ ಬೆರಸಿ, ಬೇಗ ವಾಸಿ ಆಗದ ಚರ್ಮವ್ಯಾಧಿಗಳಲ್ಲಿ ಬಹಳ ಪ್ರಯೋಜನಕರವಾಗಿ ಹಚ್ಚುತ್ತಾರೆ.

---

[1] ೧೮೮೨ನೇ ಇಸವಿಯ ಪಂಚಾಂಗದ ೫೫ನೇ ಪಾನಿನಲ್ಲಿ ನೋಡು.

[2] ೧೮೭೮ನೇ ಇಸವಿಯ ಪಂಚಾಂಗದ ೫೦ನೇ ೫೧ನೇ ಪಾನುಗಳಲ್ಲಿರುವ ಟಿಪ್ಪಣಿಯನ್ನು ನೋಡು.

[3] *Engl:* Chaulmugra; ಹಿಂದು: ಚಾಲಮೂಗ್ರ; ಚಾಲಮೊಗ್ರಿಕೇ ಬೀಂಜ್; [ದಕ್ಷಿಣ ಹಿಂದುಸ್ಥಾನದಲ್ಲಿ ಚಾಲಮುಗ್ರದ ಬೀಜಗಳು ಶಿಕ್ಕುವದು ಅಪರೂಪ; ಅದಕ್ಕೆ ಬದಲಾಗಿ (ತಮಿ: ನೀರಡಿಮುತ್ತು; ತೆಲು: ನಿರಡಿವಿತ್ತುಲು ಎಂಬ) ಗರುಡಫಲದ ಬೀಜದ ಎಣ್ಣೆ ಪ್ರಯೋಗಿಸುತ್ತಾರೆ. ಈ ಎಣ್ಣೆ ಮಲಯಾಳ ದೇಶದಲ್ಲಿ ಕುಷ್ಠವ್ಯಾಧಿಗೆ ಒಳ್ಳೇ ಔಷಧವೆಂದು ಹೆಸರುಗೊಂಡದೆ.] ಚಾಲಮುಗ್ರ ಬೀಜವು ಉರುಟಾಗಿ ಒಂದು ಇಂಚು ಉದ್ದವಿದ್ದು ಒಂದಕ್ಕೊಂದು ಒತ್ತಿಕೊಂಡಿರುವದರಿಂದ ಆಕಾರದಲ್ಲಿ ಹೆಚ್ಚುಕಡಿಮೆಯಾಗಿರುತ್ತದೆ. ಬೀಜದ ಮೇಲಿನ ಶಿಪ್ಪೆಯು ಕಂದು ಬಣ್ಣವಾಗಿದ್ದು, ನಯವಾಗಿ, ತೆಳುವಡಿಯಾಗಿರುವಂಥಾದ್ದಾಗಿರುತ್ತದೆ. ಶಿಪ್ಪೆಯೊಳಗಿನ ಬೀಜ ಹಿಂಡಿದ್ದಾದರೆ, ಒಂದು ತರದ ದಪ್ಪ ಎಣ್ಣೆ ಬರುತ್ತದೆ. ಈ ಎಣ್ಣೆ ಮೂಗಿಗೂ ನಾಲಿಗೆಗೂ ಅಷ್ಟು ಹಿತ ಕಾಣದು. ಅಂಗಡಿಗಳಲ್ಲಿ ಮಾರುವ ಇದರ ಎಣ್ಣೆಯು ವಾಡಿಕೆಯಾಗಿ ಮಡ್ಡಿತರದ್ದು; ಆದದರಿಂದ ಶುದ್ಧ ಮಾಡದ ಹೊರ್ತು ಹೊಟ್ಟೆಗೆ ತೆಗದುಕೊಳ್ಳುವದಕ್ಕೆ ತಕ್ಕದ್ದಲ್ಲ.

ಹಿಂದುಸ್ಥಾನದ ವೈದ್ಯ ಇಲಾಖೆಯ ಸರ್ಜನ್ ಜೆನರಲರಾಗಿದ್ದ ಪಂಡಿತ ಬೆಲ್ಫ್ಲೋರ ಧೊರೆಯು ಔದುಂಬರಕುಷ್ಠವ್ಯಾಧಿಯಲ್ಲಿ ಚಾಲಮುಗ್ರ್ರದ ತ್ಯೆಲದ ಪ್ರಯೋಗವನ್ನು ಕುರಿತು ಹೇಳಿದ್ದಾರೆ. ಅದರ ಸಾರಾಂಶವೇನಂದರೆ:—ಆ ತ್ಯೆಲವನ್ನು ಹೊಟ್ಟೆಗೆ ಕೊಡುವದು: ಹತ್ತು ತಟಕುಗಳನ್ನು ಒಂದು ವ್ಯಾನ್ ಗ್ಲಾಸ ಹಾಲಿನಲ್ಲಿ ಹಾಕಿ ದಿನಕ್ಕೆ ಎರಡು ಯಾ ಮೂರು ಸಾರಿ ಕೊಡುವದು.—ಬಾಹ್ಯಪ್ರಯೋಗ: ಆ ಎಣ್ಣೆಗೆ ಹದಿನಾರು ಭಾಗ ತೆಂಗಿನ ಎಣ್ಣೆ ಕೂಡಿಸಿ, ಬೆಳಿಗ್ಯೆಯೂ ಸಾಯಂಕಾಲವೂ ಎರಡು ಯಾ ಮೂರು ಮೇಜಿನ ಸೌಟನಷ್ಟು ತೆಗದು ರೋಗವುಳ್ಳ ಮ್ಯೆಭಾಗಕ್ಕೆ ಹಚ್ಚಿ, ಚನ್ನಾಗಿ ತಿಕ್ಕುವದು. ದಿನಂಪ್ರತಿ ಮಧ್ಯಾನ್ಹಕ್ಕೆ ಮಜ್ಜನ ಮಾಡಬೇಕು: ಮಿಾಯುವ ನೀರು ತಣ್ಣಗಾದರೂ ಉಗುರುಬೆಚ್ಚಗಾದರೂ ಇರ ಬೇಕು; ಮ್ಯೆ ಶುಚಿ ಮಾಡಲಿಕ್ಕೆ ಒಣ ಕೆಮ್ಮಣ್ಣು ಮತ್ತು ಎಣ್ಣೆಯಿಂದಾಗಲೀ ಸಾಬುನಿಂದಾಗಲೀ ಉಜ್ಜಿಕೊಂಡು ತೊಳಿಯ ಬಹುದು. ಪಥ್ಯದ ವಿಷಯದಲ್ಲಿ ಏನೂ ನಿರ್ಬಂಧವಿಲ್ಲ.

೧೮೨. ಕುಷ್ಠರೋಗ, ದೇಹವ್ಯಾಪಿತ ಮೇಹ, ಕಠಿಣ ತರದ ವ್ರಣಗಳಲ್ಲಿಯೂ ದೀರ್ಘ ಕಾಲದ ಶ್ರೋಣಿತವಾತದಲ್ಲಿಯೂ ಪಾದರಸದ ದುಷ್ಪ್ರಯೋಗದಿಂದುಂಟಾಗುವ ಚರ್ಮವ್ಯಾಧಿಗಳಲ್ಲಿಯೂ ಎಕ್ಕೆ ಗಿಡದ ಚೂರ್ಣ (ಕೆಲವು ಸಂಗತಿಗಳಲ್ಲಿ ಹಿಡಿಯದಿದ್ದಾಗ್ಯೂ) ಬಹುಶಾ ಬಹಳ ಗುಣಕರವಾಗಿದೆ. ಈ ಚೂರ್ಣವನ್ನು ಸಾರಿಗೆ ಮೂರು ಗ್ರೇನಿನಿಂದ ಪ್ರಾರಂಭಿಸಿ, ಕ್ರಮೇಣ ಹತ್ತು ಗ್ರೇನ್ ಯಾ ಹೆಚ್ಚು ಪ್ರಮಾಣ ಏರಿಸುತ್ತಾ ದಿನಕ್ಕೆ ಮೂರಾವರ್ತಿ ಕೊಡುವದು.

೧೮೩. ದುರ್ಬಲತೆ ಶರೀರಕ್ಷೀಣತೆ ಸಹಿತ ಇರುವ ಕುಷ್ಠರೋಗದಲ್ಲಿಯೂ ದೀರ್ಘ ಕಾಲದ ವಾತರೋಗಗಳಲ್ಲಿಯೂ, ಮುಖ್ಯವಾಗಿ ಆ ಕ್ಷೀಣತೆಯು ವಾತಸಮ್ಮಂಧವಾಗಿಯಾಗಲೀ, ಗಂಡಮಾಲೆ ಸಮ್ಮಂಧವಾಗಿಯಾಗಲೀ, ಅಗ್ನಿಮಾಂದ್ಯತೆಯ ದೆಶೆಯಿಂದಾಗಲೀ, ಇಲ್ಲವೆ ಶೆರೆಮನೆ ಮುಂತಾದ ತಗ್ಗಾದ ಕೋಣೆಗಳಲ್ಲಿ ಬಹಳ ಕಾಲ ಜೀವಿಸಿಕೊಂಡಿದ್ದ ದೆಶೆಯಿಂದಾಗಲೀ ಉಂಟಾದರೆ, ಕೆಲವು ಕಾಲ ಮಿಾನಿನ ಎಣ್ಣೆ ಕೊಡುವದು ಬಹಳ ಫಲಕರವಾದೀತು. ಕೆಲವು ತರದ ಪಕ್ಷವಾತಗಳಲ್ಲಿ ಅದು ತಕ್ಕಷ್ಟು ಪ್ರಯೋಜನಕರವಾಗಿ ಕಂಡದ್ದುಂಟು. ಕುಷ್ಠರೋಗದಲ್ಲಿ ಈ ಎಣ್ಣೆಯನ್ನು ಬಹಳ ಜಾಗ್ರತೆಯಿಂದ ಕೊಟ್ಟು ಪರೀಕ್ಷಿಸ ಬಹುದು; ಹ್ಯಾಗೂ ಈ ಎಣ್ಣೆಯ ಸೇವನೆಯಿಂದ ಕುಷ್ಠರೋಗದಲ್ಲಿರುವ ಸಂಕಟಕರವಾದ ಕೆಲವು ಲಕ್ಷಣಗಳು ನಿವಾರಣೆಯಾದಾವು; ಆದಾಗ್ಯೂ, ಆ ರೋಗ ಪೂರಾ ಆ ಎಣ್ಣೆಯಿಂದ ಗುಣವಾಗುವಂಥಾದ್ದಲ್ಲ.

೧೮೪. ಜಡ್ಡಾದ ಹುಣ್ಣುಗಳಿಗೂ, ಮುಖ್ಯವಾಗಿ ದೀರ್ಘ ಕಾಲದ ಕೆಟ್ಟ ವ್ರಣಗಳಿಗೂ ಬೇವಿನ ಎಲೆಗಳ ಒತ್ತಡ ಬಹಳ ಗುಣಕರವಾದ ಉತ್ತೇಜನವಾಗಿ ಪ್ರವರ್ತಿಸುತ್ತದೆ. ಬೇವಿನ ಹಶಿ ಎಲೆಗಳನ್ನು ತಕ್ಕಷ್ಟು ತಂದು ಉಗುರುಬೆಚ್ಚಗಾದ ನೀರಿನಲ್ಲಿ ಅರದು, ಒಂದು ಅರಿವೆ ತುಂಡಿಗೆ ಹಚ್ಚಿ ಹುಣ್ಣು ಇರುವ ಜಾಗಕ್ಕೆ ಕಟ್ಟುವದು. ಇದರಿಂದ (ಒಮ್ಮೊಮ್ಮೆ ಆಗುವಂತೆ) ನೋವೂ ಉರುತವೂ ಉಂಟಾದರೆ, ಅದಕ್ಕೆ ಅಷ್ಟೇ ಅಕ್ಕಿಹಿಟ್ಟು ಬೆರಿಸ ಬಹುದು.

೧೮೫. ಕುಷ್ಠರೋಗದ ಸಮ್ಮಂಧವಾದ, ಇಲ್ಲವೆ ಮೇಹ ಗಂಡಮಾಲೆ ಸಮ್ಮಂಧವಾದ ಮಣ್ಣುಗಳುಳ್ಳವರಿಗೆ ನೋವಿನ ದೆಶೆಯಿಂದ ರಾತ್ರಿಕಾಲದಲ್ಲಿ ನಿದ್ರೆಭಂಗವಾದರೆ, ಅಫೀಮು ಅತಿ ಶಮನಕರವಾಗಿ ಪ್ರಯೋಗಿಸ ಬಹುದು. ಪ್ರಾಯಸ್ಥರಿಗೆ ಪ್ರಾರಂಭಕ್ಕೆ ಒಂದು ಗ್ರೇನ್ ಅಫೀಮು ಇಲ್ಲವೆ (laudanum) "ಲೊಡೆನಮ್" ಎಂಬ ಅಫೀಮಿನ ಸತ್ವದ ೧೫ ತಟಕುಗಳು ರಾತ್ರೆ ಮಲಗಲಿಕ್ಕೆ ಹೋಗುವ ಒಂದು ತಾಸು ಮುಂಚೆ ಕೊಡುವದು. ಇದರಿಂದ ನಿದ್ರೆ ಬರಲೀಸುವದಾದರೆ, ರಾತ್ರೆ ರಾತ್ರೆಗೆ ಆ ಪ್ರಕಾರ ಕೊಡುತ್ತಾ ಬರುವದು; ಇಲ್ಲದಿದ್ದರೆ, ಎರಡನೇ ರಾತ್ರೆಗೆ ಆ ಪರಿಮಾಣವನ್ನು ಇಮ್ಮಡಿ ಮಾಡ ಬಹುದು, ಇಲ್ಲವೆ ಮೂರನೇ ರಾತ್ರೆ ಮುಮ್ಮಡಿ ಮಾಡ ಬಹುದು. ಏವಂಚ ವೈದ್ಯಪಂಡಿತನ ಅನುಜ್ಞೆ ಹೊರತು ಈ ಕಡೇ ಪರಿಮಾಣಕ್ಕೆ ಏಾರಿ ಕೊಡ ಬಾರದು. ಸದರಿ ಪರಿಮಾಣಕ್ಕಾದರೂ ಒಂದು ಯಾ ಎರಡು ವಾರದನಂತರ ಬಲ ಸಾಲದೇ ಹೋದೀತು, ಆ ಪಕ್ಷದಲ್ಲಿ ಆ ಪರಿಮಾಣವನ್ನು ಜಾಗ್ರತೆಯಾಗಿ ಸ್ವಲ್ಪ ಸ್ವಲ್ಪ ಮತ್ತೂ ಹೆಚ್ಚಿಸುತ್ತಾ ಬರ ಬೇಕಾಗುವದು. ಆದರೆ ನೋವು ಕಡಿಮೆಯಾಗುತ್ತಾ ಬಂದು, ರೋಗಿ ಸ್ವಸ್ಥತೆಗೆ ಬರುತ್ತಾ ಇರಲಾಗಿ ಅಫೀಮಿನ ಪರಿಮಾಣವನ್ನು ಒಮ್ಮಿಂದೊಮ್ಮೆ ಫಕ್ಕನೆ ಬಿಟ್ಟು ಬಿಡದೆ, ಮೆಲ್ಲ ಮೆಲ್ಲನೆ ಕಡಿಮೆ ಮಾಡುತ್ತಾ ಬರ ಬೇಕು.

ಕುಕ್ಷಿವಾಯುವಿನಿಂದ ಕಿಬ್ಬೊಟ್ಟೆ ಉಬ್ಬಿ ಹೋಗೋಣ

Flatulent Distention of the Abdomen.

(೧೮೮೩ನೇ ಇಸವಿಯ ಪಂಚಾಂಗದ ೪೮ನೇ ಪಾನು ನೋಡು.)

ಕೃಶರೋಗ (ಮೈಗರೆಯುವದು) Atrophy or Wasting of the Body.

ಮೈಗರೆಯುವದಕ್ಕೆ ಕಾರಣಗಳು ಆಹಾರದ ಕೊರತೆ, ತಕ್ಕೊಂಡ ಆಹಾರವು ಮೈಕೊಳ್ಳದೆ ಶರೀರದಿಂದ ಯಾವ ವಿಧದಿಂದಾದರೂ ಸೋರಿ ಹೋಗುವದು, ಕ್ರಿಮಿಗಳು ಉಂಟಾಗಿ ಮಲಕೋಶದಲ್ಲಿ ಉಪದ್ರಿಸುವದು, ಮಕ್ಕಳಿಗಾದರೆ ಹಲ್ಲು ಬರುವ ಕಾಲದಲ್ಲಿ ಉಂಟಾಗುವ ಅಕ್ರಮ ಸಹ ಆಗಿರುತ್ತವೆ. ಇದಕ್ಕೆ ಚಿಕಿತ್ಸೆ ಮೀನಿನ ಎಣ್ಣೆ (೧೮೩[1]) ಮತ್ತು ಕಿರಿಯಾತಿನ ನೀರು (೧೦, ೧೧[2]) ಮುಂತಾದ ಉತ್ತೇಜಕಗಳನ್ನು ಕೊಟ್ಟು, ಹವೆ ಬದಲಿಸಿ, ಆಹಾರ ಕ್ರಮವಿಡುವದು.

ಕೆನ್ನೆಬೀಗು (ಕೆಪ್ಪಡೆ) Mumps.

ಕೆನ್ನೆಬೀಗು ಅಂದರೆ ಕಿವಿಯ ಕೆಳಗಿನ ನರಗಳ ಬೀಗು; ವೇದನೆ, ಸಿಡತ, ದವಡೆ ಚಲಿಸುವದಕ್ಕೆ ಪ್ರಯಾಸ; ಇದರಿಂದ ಒಂದು ಭಾಗದ ಕೆನ್ನೆ ಬಾತಿ ಹೋಗಿ, ಅದು ಪೂರ್ವ ಸ್ಥಿತಿಗೆ ಬರುವಷ್ಟರೊಳಗೆ ಇನ್ನೊಂದು ಸಹ ಬಾತಿ ಹೋಗುವದು. ಇದರ ಸಂಗಡ ಜ್ವರ ಸಹ ಬರುವದುಂಟು. ಇದು ಒಂದು ಸೋಂಕು ರೋಗವಾಗಿದ್ದು, ಶೀತ ಹವೆಯುಳ್ಳ ಕಾಲದಲ್ಲಿ ಸಾಧಾರಣವಾಗಿ ಒಬ್ಬರಿಂದ ಒಬ್ಬರಿಗೆ ಹಿಡಿಯುತ್ತದೆ.

---

[1] ಇದೇ ಪಂಚಾಂಗದ ೪೩ನೇ ಪಾನಿನಲ್ಲಿ ನೋಡು.

[2] ೧೮೭೬ನೇ ಇಸವಿಯ ಪಂಚಾಂಗದ ೨೮ನೇ ಪಾನಿನಲ್ಲಿ ನೋಡು.

ಚಿಕಿತ್ಸೆ: ಹರಳೆಣ್ಣೆಯನ್ನು (೧೫೦[1]) ಇಲ್ಲವೆ ಸೋನಾಮುಕ್ಕಿ ಸೊಪ್ಪಿನ ಕಲ್ಕವನ್ನು (೧೮೬) ಕೊಟ್ಟು ಸಾಧಾರಣ ಮಲಶೋಧನೆ ಮಾಡಿಸಿ, ಆ ಬಾತಿ ಹೋದಲ್ಲಿ ಶೀತ ಘಾಳಿ ತಾಗದಂತೆ ಒಂದು ಉಣ್ಣೆ ವಸ್ತ್ರದ ತುಂಡು ಕಟ್ಟುವದು, ಮತ್ತು ಕೆಲವು ದಿವಸಗಳ ವರೆಗೆ ಪಥ್ಯಕರವಾದ ಆಹಾರ ಕೊಡುವದು. ವಿಶೇಷ ನೋವು ಇದ್ದರೆ, ರಾತ್ರೆ ಮಲಗುವಾಗ ಅಫೀಮಿನ ಮುಲಾಮು (೧೨೦[2]) ಬಾತಿ ಹೋದ ಸರಗಳ ಮೇಲೆ ಹಚ್ಚುವದು. ವಿಶೇಷ ಜ್ವರವಿದ್ದರೆ, (nitre) ಪೆಟ್ಲುಪ್ಪಿನ ನೀರು (೧೮೭) ಕೆಲವು ಸಾರಿ ಕೊಡುವದು.

೧೮೬. ಸೋನಾಮುಕ್ಕಿ (ನೆಲಾವರಿಕೆ ಗಿಡದ) ಸೊಪ್ಪು[3] ಸಾಧಾರಣ ಮಲಶೋಧನೆ ಮಾಡುವದಕ್ಕೆ ಬಹಳ ಒಳ್ಳೇದು. ಹ್ಯಾಗಂದರೆ: ಒಂದು ಔನ್ಸ್ ಸೋನಾಮುಕ್ಕಿ ಸೊಪ್ಪು, ಶುಂಠಿ ಮತ್ತು ಲವಂಗದ ಪುಡಿ ಅರ್ಧರ್ಧ ದ್ರಮ್, ಹತ್ತು ಔನ್ಸ್ ಕುದಿಯುವ ನೀರಿನಲ್ಲಿ ಹಾಕಿ, ಒಂದು ತಾಸಿನ ವರೆಗೆ ಮುಚ್ಚಿಟ್ಟು, ಆ ಮೇಲೆ ಗಾಳಿಸಿ ತೆಗಿಯುವದು. ಮಲಬದ್ಧತೆಯುಳ್ಳವರಿಗೆ ಈ ಕಲ್ಕವನ್ನು ೧$\frac{೧}{೨}$ ಇಲ್ಲವೆ ೨ ಔನ್ಸ್ ಕೊಟ್ಟಲ್ಲಿ ಒಳ್ಳೇ ಮಲಶೋಧನೆ ಆಗುವದು; ಮಕ್ಕಳಿಗೆ ಆದರೆ, ಅದರ ಅರೆವಾಶಿ ಯಾ ಅದಕ್ಕಿಂತ ಕಡಿಮೆ ಕೊಡ ಬಹುದು. ಈಗ ಹೇಳಿದ ರೀತಿಯಲ್ಲಿ ಸೋನಾಮುಕ್ಕಿ ಸೊಪ್ಪಿನಿಂದ ಕಲ್ಕ ಮಾಡಿ ಅದಕ್ಕೆ ಹಾಲೂ ಸಕ್ಕರೆಯೂ ಹಾಕಿ, ಬಿಸಿ ಇರುವಾಗಲೇ ತೆಕೊಂಡರೆ, ಅದಕ್ಕೂ ಚಾ ನೀರಿಗೂ ಅಷ್ಟು ಹೆಚ್ಚುಕಡಿಮೆ ತೋರಲಿಕ್ಕಿಲ್ಲ. ಈ ಪ್ರಕಾರ ಮಾಡಿ ಚಿಕ್ಕ ಮಕ್ಕಳಿಗೆ ಸುಲಭವಾಗಿ ಕೊಡ ಬಹುದು; ಮತ್ತು ಬಹಳ ಅಶಕ್ತ ಅನ್ನಕೋಶವುಳ್ಳವರಾದರೂ ದಕ್ಕಿಸಿಕೊಳ್ಳ ಬಹುದು. ಏವಂಚ ಮಕ್ಕಳಿಗೆ ಮಲಶೋಧನೇ ಬಗ್ಗೆ ಹರಳೆಣ್ಣೆ ಕೊಡುವದು ಉತ್ತಮ.

೧೮೭. ಕೆನ್ನೆಬೀಗು ಮುಂತಾದ ಬೀಗುಳ್ಳ ನೋವಿನ ದೆಶೆಯಿಂದಾಗಲೀ ಇತರ ಕಾರಣದಿಂದಾಗಲೀ ಜ್ವರ ಉಂಟಾಗಿ, ಮೈ ಬಿಸಿಯಾಗಿಯೂ ಆರಿದ್ದಾಗಿಯೂ, ನಾಲಿಗೆಯು ಪಶೆ ಇಲ್ಲದ್ದಾಗಿಯೂ, ವಿಶೇಷ ದಾಹ, ಮೂತ್ರ ಸ್ವಲ್ಪವಾಗಿಯೂ ವರ್ಣ ಏರಿದ್ದಾಗಿಯೂ ಇದ್ದರೆ, ಎರಡು ದ್ರಮ್ ಪೆಟ್ಲುಪ್ಪನ್ನು ಒಂದು ಬಾಟ್ಲೆ ಗಂಜಿನೀರಿನಲ್ಲಿ ಹುಡಿ ಮಾಡಿ ಕಲಸಿ, ಅದಕ್ಕೆ ರುಚಿಗೆ ತಕ್ಕದ್ದಾಗಿ ಜೇನುತುಪ್ಪವಾಗಲೀ ಕಲ್ಲುಸಕ್ಕರೆಯಾಗಲೀ ಹಾಕಿ ಕುಡಿಯುವದು ಬಹಳ ಒಳ್ಳೇದು. ಈ ಪರಿಮಾಣವನ್ನು ದಿನಾಲು ಸಾಧಾರಣ ಪಾನದಂತೆ ಬೇಕಾದ ಹಾಗೆ ಭಾಗಗಳಾಗಿ ಆಗ್ಯಾಗ್ಯೆ ತೆಕೊಳ್ಳ ಬಹುದು.

---

[1] ಈ ಅಂಕೆಯನ್ನು ೧೮೮೧ನೇ ಇಸವಿಯ ಪಂಚಾಂಗದ ೫೫ನೇ ಪಾನಿನಲ್ಲಿ ನೋಡು.

[2] ೧೮೮೦ನೇ ಇಸವಿಯ ಪಂಚಾಂಗದ ೪೬ನೇ ಪಾನಿನಲ್ಲಿ ನೋಡು.

[3] *Engl:* Senna; ಹಿಂದು: ಸಾನಾ, ಹಿಂದೀಸಾನಾಕಾ ಪತ್ತಾ; ದಖ: ನಾತಕೀಸಾನಾ; ತಮ: ನಿಲಾವರಯಿ, ನೀಲವಕಾಯಿ; ತೆಲು: ನೇಲತಂಗೇಡು; ಮಲ: ನಿಲವಾಕಾ; ಕನ್ನಡ: ನೆಲಾವರಿಕೆ, ಸೋನಾಮುಕ್ಕಿ.—ಅಂಗಡಿಗಳಲ್ಲಿ ತಿಕ್ಕುವಂಥಾ ಸೋನಾಮುಕ್ಕಿಸೊಪ್ಪು ಪರದೇಶದಿಂದ ಈ ಊರಿಗೆ ಬಂದು, ಕೀಳು ತರದ್ದಾಗಿದ್ದು, ಎಲೆಗಳ ಚೂರು, ದಂಟು ತುಂಡುಗಳು ಮತ್ತು ಬೇರೆ ಕಸ ಸಹ ಕೂಡಿರುತ್ತದೆ. ಅರಬಸ್ಥಾನದಿಂದ ಆಮದು ಆಗಿ, ಮಕ್ಕಾಸೆನ್ನಾ ಇಲ್ಲವೆ ಸೆನ್ನಾಮುಕ್ಕೀ ಅನ್ನಿಸಿಕೊಳ್ಳುವಂಥಾ ಈ ಸೊಪ್ಪಿಗಿಂತ ಹಿಂದುಸ್ಥಾನದಲ್ಲಿ, ಮುಖ್ಯವಾಗಿ ತಿರುನೆಲ್ವೇಲಿಯಲ್ಲಿ ಬೆಳೆಯುವ ಸೊಪ್ಪು ವಿಶೇಷ ತರದ್ದು. ಆ ಸೊಪ್ಪು ಇಡಿಯಾಗಿದ್ದು ಶುಚಿಯಾಗಿಯೂ ಬೇಗ ಚೂರಾಗ ತಕ್ಕಂಥಾದ್ದಾಗಿಯೂ, ಪಚ್ಚೆಯಾಗಲೀ ಹಸುರುಬಿಳಿಯಾಗಲೀ ಇದ್ದು ಮಂದ ವಾಸನೆಯುಳ್ಳದ್ದು.

ಈ ಪಾನವು ಇನ್ನಷ್ಟು ಹಿತಕರವಾಗುವ ಹಾಗೆ, ಒಂದಿಷ್ಟು ಹುಣಸೆ ಹುಳಿ ಆಗಲೀ ನಿಂಬೆ ರಸವಾಗಲೀ ಅದಕ್ಕೆ ಕೂಡಿಸ ಬಹುದು. ಇದರಿಂದ ಜ್ವರವು ಕಡಿಮೆಯಾಗುವದಲ್ಲದೆ ಬೆವರು ಬರಲೀಸುವದು, ಮತ್ತು ಮೂತ್ರವು ಸರಾಗವಾಗಿ ಹೋಗಲೀಸುವದು. ರೋಗಿಯು ಒಂದೆರಡು ಸಾರಿ ಕುಡಿಯುವದಕ್ಕೆ ಹ್ಯಾವರಿಕೆ ಪಟ್ಟಾಗ್ಯೂ, ಅದು ಪೂರ್ಣವಾಗಿ ಶೇರುವದಿಲ್ಲವೆಂತಾ ಕಂಡರೆ ಹೊರ್ತು, ಅದನ್ನು ಸ್ಥಿರ ಮನಸ್ಸಿನಿಂದ ಕೊಡುತ್ತಾ ಬರ ತಕ್ಕದ್ದು.

ಕೆಮ್ಮುಗಳು Coughs.

ಕೆಮ್ಮು ಯಾವದೊಂದು ರೋಗದ ಲಕ್ಷಣವಾಗಿರುತ್ತದೆ ಹೊರತು, ಅದು ತಾನೇ ಒಂದು ರೋಗವಲ್ಲ; ಅದು ಶೀತ, ಕಂಠದ್ವಾರದ ಇಲ್ಲವೆ ಶ್ವಾಸಕೋಶದ ಇಲ್ಲವೆ ಅದಕ್ಕೆ ಸಮ್ಮಂಧವಾದ ಇತರ ಇಂದ್ರಿಯಗಳ ಅಕ್ರಮವನ್ನು ಸೂಚಿಸುತ್ತದಷ್ಟೆ.

ಚಿಕಿತ್ಸೆ: ನವಸಾಗರ (೧೫೨[1]), ಇಲ್ಲವೆ ಊರ ಕಿರುಮಂಜಿ (೧೫೧[2]) ಕೊಟ್ಟು ನೋಡುವದು. ಅದರ ಸಂಗಡ ಬಾಹ್ಯಲೇಪವಾಗಿ ಅಕ್ಕೀ ಒತ್ತಡ (೧೧೮[3]), ಇಲ್ಲವೆ ಸಾಸಿವೆಯ ಒತ್ತಡ (೬೨[4]), ಟರ್ಪೆಂಟ್ಯಾನಿನ ಮುಲಾಮು (೧೨೨[5]), ಕರ್ಪೂರ ಹಾಕಿ ಮಾಡಿದ ಅಫೀಮಿನ ಮುಲಾಮು (೧೨೦[6]) ಸಹ ಪ್ರಯೋಗಿಸ ಬಹುದು. ಅದಲ್ಲದೆ ಬಿಸಿ ನೀರಿನ ಹೊಗೆ (೧೮೮), ಇಲ್ಲವೆ ಬೆಂಡೆಕಾಯಿಯ (೧೮೯) ಕಷಾಯದ ಹೊಗೆಯನ್ನು ಬಾಯೊಳಗೆ ಇಂಗಿಕೊಳ್ಳುವದು. ಕೆಮ್ಮು ಕಠಿಣವಾಗಿದ್ದರೆ, ಎದೆಗೆ ಚಳ್ಳೆ ಎಬ್ಬಿಸುವದು (ಅಂದರೆ ಬ್ಲಿಸ್ತರ್ ಹೊಡಿಯುವದು) (೧೯೦) ಅಗತ್ಯವಾದೀತು. ಕೆಮ್ಮು ದೀರ್ಘಕಾಲದ್ದಾಗಿದ್ದು, ವಿಶೇಷ ಕಫೋದ್ರೇಕವೂ ಅಶಕ್ತಿಯೂ ಇದ್ದರೆ, ಮೀನಿನ ಎಣ್ಣೆ (೧೯೧) ಕೊಡುವದು. ಶಟಬೇನೆಯುಳ್ಳ ಕೆಮ್ಮುಗಳಲ್ಲಿ ಅದರ ಕಠಿಣತೆಯನ್ನು ಪೆಟ್ಲುಪ್ಪಿನ ಕಾಗದದ (೧೧೨[7]) ಹೊಗೆಯಿಂದಾಗಲೀ, ಉಮ್ಮತದ ಸೊಪ್ಪಿನ ಬತ್ತಿ ಮಾಡಿ (೧೧೩[7]) ಶೇದುವದರಿಂದಾಗಲೀ ಶಮನವಾಗುವದು. ಮುದಿ ಪ್ರಾಯದವರ ಕೆಮ್ಮಿಗೆ ಗಂಧ ಮೆಣಸಿನ ಚೂರ್ಣ (೧೯೨) ಕೊಟ್ಟು ನೋಡ ಬಹುದು. ಮಕ್ಕಳ ಕೆಮ್ಮಿಗೆ ಜ್ಯೇಷ್ಠ ಮಧುವಿನ (ಗುಲಗುಂಜಿ ಬೇರಿನ) ಲೇಹ್ಯವಾಗಲೀ (೧೯೩), ಹಿಂಗಿನ ನೀರು ಆಗಲೀ (೧೧೧[8]), ಜೇನುತುಪ್ಪ ಮತ್ತು ಶಿರ್ಕದ ಮಿಶ್ರವಾಗಲೀ (೧೯೪), ಮೀನಿನ ಎಣ್ಣೆಯಾಗಲೀ ಸಂಗತ್ಯಾನುಸಾರವಾಗಿ ಕೊಡ ಬಹುದು. ಅದಲ್ಲದೆ ಶ್ವಾಸೋಶ್ವಾಸದಲ್ಲಿ ಆಗುವ ಖಾಸದುಪದ್ರವಕ್ಕಾಗಿ ಕರ್ಪೂರದ ತೈಲ (೧೯೫) ಇಲ್ಲವೇ ಸಾಸಿವೇ ಒತ್ತಡ ಎದೆಗೆ

---

1) ೧೮೮೧ನೇ ಇಸವಿಯ ಪಂಚಾಂಗದ ೫೬ನೇ ಪಾನಿನಲ್ಲಿ ನೋಡು.

2) ೧೮೮೧ನೇ ಇಸವಿಯ ಪಂಚಾಂಗದ ೫೫ನೇ ಪಾನಿನಲ್ಲಿ ನೋಡು.

3) ೧೮೮೦ನೇ ಇಸವಿಯ ಪಂಚಾಂಗದ ೪೫ನೇ ಪಾನಿನಲ್ಲಿ ನೋಡು.

4) ೧೮೬೬ನೇ ಇಸವಿಯ ಪಂಚಾಂಗದ ೨೫ನೇ ಪಾನಿನಲ್ಲಿ ನೋಡು.

5) ೧೮೮೦ನೇ ಇಸವಿಯ ಪಂಚಾಂಗದ ೪೮ನೇ ಪಾನಿನಲ್ಲಿ ನೋಡು.

6) ೧೮೮೦ನೇ ಇಸವಿಯ ಪಂಚಾಂಗದ ೪೬ನೇ ಪಾನಿನಲ್ಲಿ ನೋಡು.

7) ಈ ೧೧೨ನೇ ಮತ್ತು ೧೧೩ನೇ ಅಂಕೆಗಳನ್ನು ೧೮೮೦ನೇ ಇಸವಿಯ ಪಂಚಾಂಗದ ೪೨ನೇ ಪಾನಿನಲ್ಲಿ ನೋಡು.

8) ೧೮೮೦ನೇ ಇಸವಿಯ ಪಂಚಾಂಗದ ೪೧ನೇ ಪಾನಿನಲ್ಲಿ ನೋಡು.

ಹಾಕ ಬಹುದು; ಅಥವಾ ಬಿಸಿ ಉಪ್ಪು ಹಾಕಿದ ಚೀಲದಿಂದ ಯಾ ವೀಳ್ಯದೆಲೆಯಿಂದ (೧೫೬[1]) ಶೇಕ ಕೊಡ ಬಹುದು. ಎದೆಗೆ ಶಿರ್ಕದಲ್ಲಿ ಅದ್ದಿದ ಸ್ಪಂಜ ಹಾಕಿ ತೊಳೆಯುವದರಿಂದ (೧೯೬) ಕೆಮ್ಮಿನ ಉಪದ್ರವ ಮತ್ತೂ ಬಾರದಂತೆ ಅಭ್ಯಂತರಿಸುತ್ತದಂತೆ.

೧೮೮. ಹಲವು ತರದ ಆಗ್ರ, ಗಂಟ್ಲುನೋವು, ಶ್ವಾಸೋಪದ್ರವ, ಕಫ ಹೊರಡಿಸುವದಕ್ಕೆ ಪ್ರಯಾಸ ಇರುವಲ್ಲಿ ಬಿಸಿ ನೀರಿನ ಹೊಗೆಯನ್ನು ಆಗ್ಯಾಗ್ಯೆ ಉಸುರಿನಿಂದ ಎಳಕೊಳ್ಳುವದರಿಂದ ಗುಣ ಬರುವದು; ಮತ್ತು ಅದರ ಗುಣವು ಹೆಚ್ಚಿಸುವಂತೆ, ಆ ನೀರಿಗೆ ಬಿಸಿ ಮಾಡುವಾಗ ಬೆಂಡೆಕಾಯಿ ಮುಂತಾದ ಜಿಗಟಾದ (ಗೋಂದಿನಂಥಾ) ಪದಾರ್ಥವೇನಾದರೂ ಕೂಡಿಸಿದರೆ ಒಳ್ಳೇದು. ಎದೆನೆಗಡಿ (croup) ಉಂಟಾದ ಮಕ್ಕಳ ಕೆನ್ನೆಯಿಂದ ಕೊರಳು ವರೆಗೆ ತಾಳಿಕೊಳ್ಳುವಷ್ಟು ಬಿಸಿ ನೀರಿನ ಸ್ಪಂಜವನ್ನು ಅರ್ಧ ತಾಸಿನ ವರೆಗೆ ಇಡುವದರಿಂದ ಉಸುರುಶಿಕ್ಕು ಶಮನವಾಗುವದುಂಟು.

೧೮೯. ಬೆಂಡೆಕಾಯಿ[2] ಸಿಗಿದು ತುಂಡುಗಳಾಗಿ ಮಾಡಿ, ಮೂರು ಔನ್ಸ್ ತೆಗದು ಒಂದುವರೆ ಪ್ಯಾಂಟ್ ನೀರಿನಲ್ಲಿ ಹಾಕಿ ೨೦ ನಿಮಿಷಗಳ ವರೆಗೆ ಬೇಯಿಸುವದು. ಬಿಸಿ ಇರುವಾಗಲೇ ಈ ಕಷಾಯದ ಹೊಗೆಯನ್ನು ಬಾಯಿ ತೆರೆದು ಉಸುರಿನಿಂದ ಎಳಕೊಂಡಲ್ಲಿ, ಗಂಟ್ಲು ಒಡಿಯೋಣ ಮತ್ತು (ಕ್ಷಯರೋಗದಲ್ಲಿ ಆಗುವಂತೆ) ಉಪದ್ರಕರವಾದ ಕೆಮ್ಮಿಗೆ ಕಾರಣವಾದ ಗಂಟ್ಲುಕೊಳವಿನಲ್ಲಿ ಕೆದರಿದಂತೆ ಆಗೋಣ ಸಹ ಅನೇಕ ಸಂಗತಿಗಳಲ್ಲಿ ಗುಣವಾದದ್ದುಂಟು.

೧೯೦. ಚಳ್ಳೀ ಹುಳವನ್ನು[3] ಮುಖ್ಯವಾಗಿ ಸ್ಫೋಟಕವಾಗಿ ಪ್ರಯೋಗಿಸುತ್ತಾರೆ. ಇದರಿಂದ ಬ್ಲಿಸ್ತರು ಮಾಡುವದು ಹ್ಯಾಗಂದರೆ—ತೇಲಿನೀ ನೊಣಗಳನ್ನು ತೆಗದು

---

[1] ೧೮೮೨ನೇ ಇಸವಿಯ ಪಂಚಾಂಗದ ೪೫ನೇ ಪಾನಿನಲ್ಲಿ ನೋಡು.

[2] *Engl:* **Abelmoschus, Okra**; ಹಿಂದು: ಭಿಂಡೀ, ರಾಮತುರಾಯಿ; ತಮ: ವೆಂಡೆಕ್ಕಾಯ್; ತೆಲು: ಬೆಂಡಕಾಯ; ಮಲ: ವೆಂಟಿಕ್ಕಾಯ; ಮಹಾ: ಬೇಂಡಾ.—ಈ ಜನಜನಿತವಾದ ಪಲ್ಯಕಾಯಿಯು ಸರ್ವ ಹಿಂದುಸ್ಥಾನದಲ್ಲಿ ಬೆಳೆಸೋಣವಾಗುತ್ತದೆ. ಇದರಲ್ಲಿ ಬಹುತರ ಗೋಂದಿನಂಥಾ ಜಿಗಟಾದ ದ್ರವವಿರುತ್ತದೆ. ಇದಕ್ಕೆ ಸ್ನಿಗ್ಧ (ಮೃದು ಮಾಡುವಂಥಾ) ಮತ್ತು ಶಮನಕರವಾದ ಗುಣವಿರುವದರಿಂದ ಹಿಂದುಸ್ಥಾನದ ವೈದ್ಯನಿಗೆ ಅದಿದ್ದರೆ, ಆ ತರದ ವಿಲಾಯತಿ ಔಷಧವೇನಾದರು ಅಗತ್ಯ ಬೀಳಲಿಕ್ಕಿಲ್ಲ. ಹಶಿಯಾದ ಬೆಂಡೆಕಾಯಿ ಶಿಕ್ಕದ ಪಕ್ಷಕ್ಕೆ ಒಣಗಿದ ಕಾಯಿ ಪ್ರಯೋಗಿಸ ಬಹುದು.—ಯಾವದೊಂದು ಮೈಭಾಗವನ್ನು ಮೃದು ಯಾ ಉಪಶಮನ ಪಡಿಸುವ ಬಗ್ಗೆ ಬೆಂಡೆಕಾಯಿಯ ತುಂಡುಗಳನ್ನು ಚನ್ನಾಗಿ ಅರದು ಒತ್ತಡದಂತೆ ಮಾಡಿ ಕಟ್ಟುವದು ಒಳ್ಳೇದು.

[3] *Engl:* **Telini fly**; ಹಿಂದು: ತೇಲ್ನಿ, ತೇಲ್ನಿಮಖ್ಖಿ; ದಖ: ಜರಾಂಗೀ, ಒಡ್ಡೊಕೀ ಜೇರಾಂಗಿ; ತಮ: ಪಿಂಚತರಿನೀ; ತೆಲು: ಬ್ಲಿಸ್ತರಿಂಗೀಗೆಲು.—ಈ ಸ್ಫೋಟಕಕರವಾದ ನೊಣವು ಹಿಂದುಸ್ಥಾನದಲ್ಲೆಲ್ಲಾ ಶಿಕ್ಕುತ್ತದೆ. ಅದರ ಆಕೃತಿ ಮುಂತಾದ ವಿವರವೇನಂದರೆ—ಒಂದು ಇಂಚು ಉದ್ದ, $\frac{1}{3}$ ಇಂಚು ಅಗಲ, ಅದರ ರೆಕ್ಕೆ ಮಣ್ಣರಸಿನ ಬಣ್ಣವಿದ್ದು, ಅದಕ್ಕೆ ಅಂಕುಡೊಂಕಾಗಿ ಮೂರು ರೇಖೆಗಳು ಇರುತ್ತವೆ. ಮೊದಲನೇ ರೇಖೆಯು ತುಂಡಾಗಿ ಮೂರು ನಾಲ್ಕು ಬೊಟ್ಟುಗಳಂತೆ ಕಾಣುತ್ತದೆ. ಹಿಂದುಸ್ಥಾನದ ಹಲವು ಭಾಗಗಳಲ್ಲಿ ಈ ಹುಳದ ಬೇರೆ ಬೇರೆ ಜಾತಿಗಳು ಶಿಕ್ಕುತ್ತವೆ; ಆದರೆ ಅವೆಲ್ಲಕ್ಕೂ ಒಂದೇ ತರದ ಉರಿಯುವ ಸ್ಫೋಟಕ ಗುಣವಿದ್ದು (Cantharides ಎಂಬ) ವಿಲಾಯತಿ ಚಳ್ಳೀ ಹುಳದ ಗುಣಗಳಿಗೆ ಪೂರ್ಣ ಹೋಲಿಕೆಯಾಗಿರುತ್ತವೆ. ಇದರ ಮುಲಾಮು ತಕ್ಕ ಜಾಗ್ರತೆಯಿಂದ ತಯಾರು ಮಾಡಿದ್ದಾದರೆ, ಚಳ್ಳೆ ಎಬ್ಬಿಸುವದರಲ್ಲಿ ವಿಲಾಯತಿ ಬ್ಲಿಸ್ತರಿನಷ್ಟೇ ಬಲವಾಗಿ ಉಪಯೋಗಿಸ ಬಹುದು. ಮಳೆಗಾಲ ಶುರುವಾಗಲಿಕ್ಕಿರುವಾಗ ಈ ಹುಳಗಳು ಬೆಳಿಗ್ಯೆ ಯಾ ಸಾಯಂಕಾಲ ಬಹುತೇಕವಾಗಿ ಶಿಕ್ಕುವದರಿಂದ ಆ ಸಮಯ ನೋಡಿ ಅವುಗಳನ್ನು ಹಿಡಿದು, ಶಿರ್ಕವನ್ನು ಕುದಿಸಿ, ಅದರ ಉಗಿಯಲ್ಲಿಟ್ಟು, ಆ ಮೇಲೆ ತೆಗದು ಬಿಸಲಿನಲ್ಲಿ ಚನ್ನಾಗಿ ಒಣಗಿಸಿ, ಗಾಜಿನ ಬಿರಡೆ ಇರುವ ಬಾಟ್ಲಿಯಲ್ಲಿ ಹಾಕಿ, ಜೋಪಾನ ಮಾಡುವದು.

ಸಣ್ಣಗೆ ಪುಡಿ ಮಾಡಿ, ಬಿಳಿ ಯಾ ಕಪ್ಪು ದಾಮರು, ಜೇನುಮೇಣ, ಚರಬಿ, ಒಂದೊಂದು ಎರಡೆರಡು ಔನ್ಸ್ ತೆಗದು, ಮಂದ ಬೆಂಕಿಯ ಮೇಲಿಟ್ಟು ಕರಗಿಸಿ, ಆ ಮೇಲೆ ಅದರಲ್ಲಿ ಆ ಪುಳದ ಪುಡಿಯನ್ನು ಚಿಮಿಕಿಸಿ, ಅದೆಲ್ಲಾ ಚನ್ನಾಗಿ ಮಿಶ್ರ ಮಾಡಿ, ಆ ಮಿಶ್ರಣವನ್ನು ತಣ್ಣಗಿರಿಸುವದು.

ಬ್ಲಿಸ್ತರು[1] ಹೊಡಿಯುವದು ಅನೇಕ ಸಂಗತಿಗಳಲ್ಲಿ ಪ್ರಯೋಜನವುಳ್ಳದ್ದಾದರೂ, ಅದನ್ನು ಪ್ರಯೋಗಿಸುವಲ್ಲಿ ಜಾಗ್ರತೆಯೂ ವಿವೇಚನವೂ ಬೇಕು. ಹ್ಯಾಗಂದರೆ—ಯಾವದೊಂದು ಬೀಗು ಉರಿ ತೊಡಗುವಲ್ಲಿ ಬ್ಲಿಸ್ತರು ಹಚ್ಚಿದರೆ, ಕೇಡು ಅತಿರೇಕವಾಗುವದು. ಆದರೆ ಅಂಥಾ ಉರಿಯು ಕೆಲವು ಕಾಲವಾಗಿ ವಿಶೇಷವಾಗಿದ್ದ ಪಕ್ಷಕ್ಕೆ, ಬ್ಲಿಸ್ತರು ಹಾಕುವದರಿಂದ ಬಹಳ ಗುಣ ಬರುವದು. ಗರ್ಭಿಣಿಗಳಿಗೆ ಎದೆಗೆ ಬ್ಲಿಸ್ತರು ಹೊಡೆದ ಪಕ್ಷಕ್ಕೆ, ಅಕಾಲಪತನ, ಮೂತ್ರಕಟ್ಟು ಇತ್ಯಾದಿ ತೊಂದರೆ ಆದೀತು; ಮತ್ತು ನಾವಿಕರ ಪಿತ್ತ (scurvy) ಇರುವವರಿಗೆ ಹಚ್ಚಿದ್ದಾದರೆ, ಉಪದ್ರಕರವಾದ ಹುಣ್ಣುಂಟಾಗುವದು. ಬ್ಲಿಸ್ತರು ಹಾಕಿದರಿಂದ ರೇಶಿ ಉಂಟಾಗಿ ವ್ರಣವಾಗದ ಹಾಗೆ, (ಮುಖ್ಯವಾಗಿ ಮಕ್ಕಳಿಗೆ) ಚಳ್ಳೆ ನಾಲ್ಕೈದು ತಾಸಿಗೆ ಮೀರಿ ಇರಗೊಡಿಸ ಬಾರದು; ಅಷ್ಟರೊಳಗೆ ಅದನ್ನು ತೆರೆದು, ಅನ್ನದ ಬಿಸಿಯಾದ ಒತ್ತಡವನ್ನು ಕಟ್ಟ ಬೇಕು. ಶಿಶುಗಳಿಗೆ ಬ್ಲಿಸ್ತರು ಹಾಕುವದಾದರೆ, ಬ್ಲಿಸ್ತರಿಗೂ ಮೈಗೂ ನಡುವೆ ಮಸ್ಲೀನಿನ ತುಂಡು ಇಡ ಬೇಕು. ಬ್ಲಿಸ್ತರು ಹಾಕಿದರಿಂದ ಮೂತ್ರ ಕಟ್ಟಿದ ಪಕ್ಷಕ್ಕೆ, ಬೆಂಡೆಕಾಯಿಯ (೧೮೯) ಕಷಾಯವಾಗಲೀ ಗಂಜಿನೀರಾಗಲೀ ಇತರ ತಣುಪಾದದ್ದೇನಾಗಲೀ ಯಥೇಷ್ಟ ಕುಡಿಸ ಬೇಕು; ಆದರೆ ತೈಲಪದಾರ್ಥವೆಲ್ಲಾ ವರ್ಜಿಸ ಬೇಕಷ್ಟೆ. ಬ್ಲಿಸ್ತರು ಹಾಕಿ ಉಂಟಾಗುವ ಗುಳ್ಳೆಗಳನ್ನು ಸ್ವಲ್ಪ ಚುಚ್ಚಿ ಒಳಗಿನ ನೀರೆಲ್ಲಾ ಹೊರಹಾಕಿ ಅವುಗಳನ್ನು ಚಪ್ಪೆ ಮಾಡಿ, ಅವುಗಳ ಮೇಲೆ ಎಳೇ ಬಾಳೇ ಎಲೆಯನ್ನು ಇಟ್ಟು ಕಟ್ಟ ಬೇಕು. ಹ್ಯಾಗಂದರೆ, ಬ್ಲಿಸ್ತರು ಮುಚ್ಚುವಷ್ಟು ಒಂದು ಎಳೆತಾದ ಬಾಳೇ ಎಲೆಯ ತುಂಡನ್ನು ತೆಗದು, ಅದರ ನಯವಾದ ಕಡೆಗೆ (ಮುಂಭಾಗಕ್ಕೆ) ಒರೀ ಎಣ್ಣೆ ಹಚ್ಚಿ, ಆ ಚಳ್ಳೆಯ ಮೇಲಿಟ್ಟು ವಸ್ತ್ರದಿಂದ ಕಟ್ಟ ಬೇಕು; ಕಟ್ಟಿದಲ್ಲಿ ಉರುತವೆಲ್ಲಾ ಶಮನವಾಗಿ ತಣ್ಣಗಾಗುವದು; ಮತ್ತು ಆ ಹುಣ್ಣು ೪-೫ ದಿವಸದೊಳಗೆ ಮಾದು ಬರುವದು. ಈ ಎಲೆಯನ್ನು ದಿನಾಲು ೨-೩ ಸರ್ತಿ ಬದಲಾಯಿಸುತ್ತಿರ ಬೇಕು. ಮೊದಲನೇ ಎರಡು ದಿವಸಗಳಲ್ಲಿ ಎಲೆಯ ಮೇಲಿನ ನಯವಾದ ಕಡೆಯನ್ನು ಹುಣ್ಣಿಗೆ ತಾಗಿಸಿ ಇಟ್ಟು, ಆ ಮೇಲೆ ಹಿಂದಿನ ಭಾಗವನ್ನು ಅದಕ್ಕೆ ತಾಗಿಸಿಟ್ಟು ಹುಣ್ಣು ವಾಸಿಯಾಗುವ ವರೆಗೆ ಕಟ್ಟ ಬೇಕು.

೧೯೧. ದೀರ್ಘಕಾಲದ ನಾಯಿಕೆಮ್ಮು, ಉಬ್ಬಸ ವಾಸಿ ಆದ ಮೇಲೆ ಉಳಿಯುವ ಶಟಬೇನೆಯುಳ್ಳ ಕೆಮ್ಮು ಬಲಹೀನ ಮಕ್ಕಳಿಗೆ ಉಂಟಾದರೆ, (೧೮೬೬ನೇ ಇಸವಿಯ ಪಂಚಾಂಗದ ೨೬ನೇ ಪಾನಿನಲ್ಲಿ ವಿವರಿಸಿದ ಪ್ರಕಾರ) ಮೀನಿನ ಎಣ್ಣೆ ಕೊಟ್ಟಲ್ಲಿ ಗುಣವಾಗುವದು.

---

[1] ಇದನ್ನು ತಯಾರು ಮಾಡುವದು ಪ್ರಯಾಸವಾದರೆ, ವಿಲಾಯತಿ ಅಂಗಡಿಗಳಲ್ಲಿ ಸಿಕ್ಕುವಂಥಾ (blistering liquid) “ಬ್ಲಿಸ್ತರಿನ ನೀರು” ತಂದು, ಚಳ್ಳೆ ಎಬ್ಬಿಸ ತಕ್ಕ ಜಾಗಕ್ಕೆ ಒಂದು ಗರಿಯಿಂದ ೨-೩ ನಿಮಿಷ ಹಚ್ಚಿ, ಒಣಗುವದಕ್ಕೆ ಬಿಟ್ಟು, ಆ ಮೇಲೆ ಅಕ್ಕೀ ಪೋಲ್ಟಿಸ್ ಮಾಡಿ ಅಲ್ಲಿ ಕಟ್ಟ ಬೇಕು. ಹೀಗೆ ಮಾಡಿದರೆ, ಒಂದೆರಡು ತಾಸಿನೊಳಗೆ ಚಳ್ಳೆಗಳು ಏಳುವವು.

೧೯೨. ಬಹಳ ಕಫ ಬರುವಂಥಾ ಮುದಿಪ್ರಾಯದವರ ಕೆಮ್ಮಿಗೆ ಗಂಧಮೆಣಸಿನ ಚೂರ್ಣ (೧೮೭೯ನೇ ಇಸವಿಯ ಪಂಚಾಂಗದ ೬೩ನೇ ಪಾನಿನಲ್ಲಿರುವ ೮೩ನೇ ಅಂಕೆಯಲ್ಲಿ ಹೇಳಿದ ಪ್ರಕಾರ) ಸಾರಿಗೆ ೮-೧೦ ಗ್ರೇನ್ ಮೇರೆಗೆ ದಿನಕ್ಕೆ ಮೂರು ಸಾರಿ ಕೊಟ್ಟಲ್ಲಿ ಬಹಳ ಗುಣ ಕಂಡಿರುತ್ತದೆ.

೧೯೩. ಊರ ಜ್ಯೇಷ್ಠಮಧು (ಗುಲಗುಂಜಿ ಬೇರು¹) ಮತ್ತು ಬೆಂಡೆಕಾಯಿ ಹಾಕಿ ಮಾಡಿದ ಲೇಹ್ಯವು ಮಕ್ಕಳ ಕೆಮ್ಮಿಗೆ ಬಹಳ ಒಳ್ಳೇದು. ಅದನ್ನು ಮಾಡುವದು ಹ್ಯಾಗಂದರೆ—೨ ಔನ್ಸ್ ಕುಟ್ಟಿದ ಗುಲಗುಂಜಿ ಬೇರು ಮತ್ತು ಒಂದು ಔನ್ಸ್ ಬೆಂಡೆಕಾಯಿಯ ತುಂಡುಗಳು, ಇವೆರಡನ್ನು ಅರ್ಧ ಶೀಸೆ ನೀರಿನಲ್ಲಿ ಹಾಕಿ ಅರ್ಧ ತಾಸಿನ ವರೆಗೆ ಚನ್ನಾಗಿ ಬೇಯಿಸಿ, ತೆಗದ ಕಷಾಯವನ್ನು ಗಾಳಿಸಿ, ಅದಕ್ಕೆ ೮ ಔನ್ಸ್ ಕಲ್ಲುಸಕ್ಕರೆ ಇಲ್ಲವೆ ಜೇನುತುಪ್ಪ ಕೂಡಿಸಿ, ಅದು ಶರಬತ್ತಿನಂತೆ ಆಗುವ ವರೆಗೆ ಪುನಹಾ ಬೇಯಿಸ ಬೇಕು. ಕೆಮ್ಮು ಬಹಳ ಉಪದ್ರಕರವಾಗಿರುವಾಗ, (ಜ್ವರ ಇದ್ದರೂ ಇಲ್ಲದಿದ್ದರೂ) ಇದನ್ನು ಒಂದರಿಂದ ಎರಡು ಚಾಸೌಟು ವರೆಗೆ ದಿನಕ್ಕೆ ಕೆಲವು ಸಾರಿ ಕೊಡ ಬಹುದು. ಆದಲ್ಲದೆ ಈ ಲೇಹ್ಯವನ್ನು ಇತರ ಕೆಮ್ಮಿನ ಔಷಧಕ್ಕೆ ಒಳ್ಳೇ ಸಹಾಯಕವಾಗಿ ಕೂಡಿಸ ಬಹುದು. ಇದನ್ನು ಬಹಳ ದಿವಸ ಇಟ್ಟರೆ ಬೇಗ ಹುಳಿ ಆಗುತ್ತದೆ ಎಂಬ ಒಂದೇ ಆಕ್ಷೇಪ ಇದಕ್ಕೆ ಉಂಟು; ಆದ್ದರಿಂದ ಬೇಕಾದ ಹಾಗೆ ಸ್ವಲ್ಪ ಸ್ವಲ್ಪವೇ ಮಾಡ ತಕ್ಕದ್ದು.

೧೯೪. ಜೇನುತುಪ್ಪ ಮತ್ತು ಬಟ್ಟಿ ಇಳಿಸಿದ ಶಿರ್ಕ ಇಲ್ಲವೆ ನಿಂಬೆರಸ ಸಮಭಾಗ ಬೆರಿಸಿ, ಮಂದ ಬೆಂಕಿಯ ಮೇಲಿಟ್ಟು ಬಿಸಿ ಮಾಡಿ, ತೆಗದ ಮಿಶ್ರವು ಬೇರೆ ಕೆಮ್ಮಿನ ಔಷಧಕ್ಕೆ ಉತ್ತಮ ಜತೆಯಾಗಿರುತ್ತದೆ. ಮಕ್ಕಳ ಕೆಮ್ಮುಗಳಲ್ಲಿ, ಈ ಮಿಶ್ರಕ್ಕೆ ಸಮ ಭಾಗ ನೀರು ಬೆರಿಸಿ, ಅದರಲ್ಲಿ (paregoric ಅಂದರೆ) ಬೇನೆ ಕಳೆಯುವ ಔಷಧದ ಕೆಲವು ತಟಕುಗಳನ್ನು ಹಾಕಿ ಆಗಲೀ ಹಾಕದೆ ಆಗಲೀ ಮಕ್ಕಳಿಗೆ ಕೊಡ ಬಹುದು. ಪ್ರಯೋಜನಕರವಾಗಿಯೂ ಹಿತಕರವಾಗಿಯೂ ಇರುವ ಈ ಮಿಶ್ರವನ್ನು ಮಕ್ಕಳು ಬೇರೆ ಅಸಹ್ಯಕರವಾದ ಔಷಧಗಳ ಹಾಗೆ ತೆಕ್ಕೊಳ್ಳುವದಕ್ಕೆ ಅಡ್ಡಿ ಮಾಡುವದಿಲ್ಲ.

೧೯೫. ಮಕ್ಕಳ ಕೆಮ್ಮಿಗೆ ಕರ್ಪೂರದ ತೈಲ (೧೧೯²) ಸ್ವಲ್ಪ ಬಿಸಿ ಮಾಡಿ ರಾತ್ರೆ ಕಾಲದಲ್ಲಿ ಎದೆಗೆ ಹಚ್ಚಿದಲ್ಲಿ ಬಹುಶಾ ತಕ್ಕಷ್ಟು ಗುಣ ಕೊಡುತ್ತದೆ. ಮಕ್ಕಳಿಗೋಸ್ಕರ ಕರ್ಪೂರದ ತೈಲ ಮಾಡುವಾಗ, ಅದರ ಪರಿಮಾಣವು ಅರ್ಧಕ್ಕೆ ಇಲ್ಲವೆ ಇನ್ನೂ ಕಡಿಮೆ ಆಗುವಂತೆ ಅದಕ್ಕೆ ಹೆಚ್ಚಿಗೆ ಎಣ್ಣೆ ಬೆರಿಸ ಬಹುದು.

---

¹) *Engl:* **Abrus, or Country Liquorice Root**; ಹಿಂದು: ಮುಲಾಥೀಹಿಂದಿ, ಗೂಂಜ್ಕಾರ್ಝಾಡ್; ತಮ: ಗುಂಡುಮಣಿವೇರ್; ತೆಲು: ಗುರುವೆಂಡವೇರು; ಮಲ: ಕುನ್ನಿಕುರುವೇರ್.—ಈ ಬೇರು ಹಿಂದುಸ್ಥಾನದಲ್ಲಿ ಸಾಮಾನ್ಯವಾಗಿ ಶಿಕ್ಕುವ ಒಂದು ಬಳ್ಳಿಯದಾಗಿರುತ್ತದೆ. ಇದರ ಬೀಜವು ಗುಲಗುಂಜಿ ಅನ್ನಿಸಿಕೊಂಡು, ಕೆಂಪಾಗಿದ್ದು, ಅದರ ತುದಿಯ ಮೇಲೆ ಕಪ್ಪು ಬೊಟ್ಟುಳ್ಳದ್ದಾಗಿರುತ್ತದೆ; ಮತ್ತು ಅದಕ್ಕೆ ಅಂಗಡಿಗಳಲ್ಲಿ ಶಿಕ್ಕುವ ತಾಜಾ ಜ್ಯೇಷ್ಠಮಧುವಿನ ಔಷಧಗುಣವಿದ್ದು, ಅದಕ್ಕೆ ಬದಲಾಗಿ ಉಪಯೋಗಿಸಲಾಗುತ್ತದೆ. ಈ ಗುಲಗುಂಜಿ ಬೇರಿನಿಂದ ತೆಗದ ಸತ್ವವು ತಾಜಾ ಬೇರಿನದರ ಹಾಗೆ ಇದ್ದರೂ, ಅದರಷ್ಟು ಶೀಯಾಗಿರುವದಿಲ್ಲ; ಆದರೆ ಅದಕ್ಕಿಂತ ಸ್ವಲ್ಪ ಕಹಿಯಾಗಿರುತ್ತದಷ್ಟೆ.

²) ೧೮೮೦ನೇ ಇಸವಿಯ ಪಂಚಾಂಗದ ೬೭ನೇ ಪಾನಿನಲ್ಲಿ ನೋಡು.

೧೯೬. ಕ್ಷಯರೋಗದಲ್ಲಿ ವಿಶೇಷ ಬೆವರು ಬರುವವರಿಗೆ ಶಿರ್ಕದ ನೀರು ಬಹಳ ಗುಣಕರವಾಗಿರುವದಂತೆ. ಇದಕ್ಕಾಗಿ ಒಂದು ಭಾಗ ಶಿರ್ಕ, ಒಂದು ಭಾಗ (Eau de Cologne ಅಂದರೆ) ಕೋಲೋನಿನ ದ್ರವ ಎಂಬ ಪರಿಮಳವುಳ್ಳ ನೀರು ಮತ್ತು ಎರಡು ಭಾಗ ಬರೇ ನೀರು ಚನ್ನಾಗಿ ಮಿಶ್ರ ಮಾಡಿ, ಅದರಿಂದ ಎದೆಗೆ ಹಚ್ಚುತ್ತಿರುವದು ಬಹಳ ಗುಣಕರವಾಗಿರುವದಲ್ಲದೆ ರೋಗಿಗೆ ಬಹಳ ಹಿತಕರವಾಗುವದು.

ಕ್ರಮ ತಪ್ಪಿ ಮುಟ್ಟಾಗುವದು Irregular Menstruation.

(ಈ ವಿಷಯದಲ್ಲಿ ೧೮೭೬ನೇ ಇಸವಿಯ ಪಂಚಾಂಗದ ೨೪ನೇ ಪಾನಿನಲ್ಲಿ ನೋಡು.)

ಕ್ರಿಮಿರೋಗ Worms.

ಲಾಡಿಹುಳಕ್ಕೆ ಕಮೇಲ ಎಂಬ ಹುಡಿಯನ್ನು (೧೯೭), ದಾಳಿಂಬದ ಬೇರನ್ನು (೧೯೮), ಇಲ್ಲವೆ ಟರ್‌ಪೆಂಟ್ಯಾನ್ (೧೯೯) ಕೊಡುವದು. ಇವುಗಳಲ್ಲಿ ಒಂದು ತಪ್ಪಿದರೆ, ಇನ್ನೊಂದು ತಾಗುವದು. ಉರುಟು ಹುಳಕ್ಕೆ ಮುತ್ತುಗದ (ಪಲಾಶವೃಕ್ಷದ) ಬೀಜ (೨೦೦), ಕಾಡುಜೀರಿಗೆ (೨೦೧), ಇಲ್ಲವೆ ಪಪ್ಪಾಯಿ ಹಣ್ಣಿನ ರಸ (೨೦೨) ಕೊಡುವದು. ಅದಲ್ಲದೆ ವಿಲಾಯತೀ ಔಷಧದಲ್ಲಿ (santonin) “ಸೆಂಟೊನಿನ್” ಎಂಬ ಕಿರಿವೋಮದ ಸತ್ವವು (೨೦೩) ಎಲ್ಲಾದಕ್ಕಿಂತಲು ಒಳ್ಳೇದು. ನೂಲಹುಳಕ್ಕೆ ಸುಣ್ಣದ ತಿಳೀನೀರಿನ (೨೦೪), ಹಿಂಗಿನ (೧೦೭[1]) ಇಲ್ಲವೆ ಟರ್‌ಪೆಂಟ್ಯಾನ್ ಎಣ್ಣೆಯ (೧೩೩[2]) ಪಿಚಕಾರಿ ಹೊಡಿಯುವದು.

೧೯೭. ಕಮೇಲ[3] ಎಂಬ ಹುಡಿಯು ಲಾಡಿಹುಳವನ್ನು ಹೊಟ್ಟೆಯಿಂದ ಝಾಡಿಸುವದಕ್ಕೆ ಒಳ್ಳೇ ಔಷಧವೆಂದು ಹೆಸರು ಹೊಂದಿರುತ್ತದೆ. ಮಲಾಶಯದಲ್ಲಿ ಹೊಕ್ಕ ಬೇರೆ ತರದ ಕ್ರಿಮಿಗಳಿಗೆ ಅದರಿಂದ ಅಷ್ಟು ಪ್ರಯೋಜನವಿಲ್ಲ. ಈ ಹುಡಿಯನ್ನು ದೊಡ್ಡವರಿಗೆ ೨-೩ ದ್ರಮ್ ಜೇನುತುಪ್ಪದಲ್ಲಿ ಆಗಲೀ (aromatic water) ಸುಗಂಧ ನೀರಿನಲ್ಲಿ ಆಗಲೀ ಹಾಕಿ ಕೊಡುವದು. ಇದಕ್ಕೆ ಮುಂಚೆ ಆಗಲೀ ಅನಂತರವಾಗಲೀ ಬೇರೆ ಏನೂ ಔಷಧ ಅವಶ್ಯವಿಲ್ಲ. ಮೇಲಿನ ಪರಿಮಾಣದಲ್ಲಿ ಈ ಔಷಧ ಸರಾಗವಾಗಿ ಮಲಶೋಧನೆ ಮಾಡಿಸುತ್ತದೆ. ಕೆಲವು ಸಂಗತಿಗಳಲ್ಲಿ ಇದರಿಂದ ಉಂಟಾಗುವ ವಾಕರಿಕೆಯೂ ಹೊಟ್ಟೆನೋವೂ ಈ ತರದ ಬೇರೆ ಔಷಧಗಳಿಂದ ಉಂಟಾಗುವದಕ್ಕಿಂತ ಹೆಚ್ಚಾಗಿರುವದಿಲ್ಲ. ಇದರಿಂದ ಒಂದೆರಡು ಸರ್ತಿ ಮಲಶೋಧನೆ ಆಗುತ್ತಲೆ ಕ್ರಿಮಿಗಳು ನಿರ್ಜೀವವಾಗಿ ಹೊರಬೀಳುವವು. ಈ ಪ್ರಕಾರ ಮೊದಲನೇ ಸರ್ತಿ ಈ ಹುಡಿ ಕೊಟ್ಟದ್ದರಿಂದ ಪ್ರಯೋಜನವಾಗದೆ ಹೋದ ಪಕ್ಷಕ್ಕೆ, ಒಂದು ವಾರದ ಮೇಲೆ ಪುನಹಾ ಕೊಡ

---

[1] ಈ ಹಿಂಗಿನ ವಿಷಯದಲ್ಲಿ ಮತ್ತು ಅದರ ನೀರಿನಿಂದ ಪಿಚಕಾರಿ ಹೊಡಿಯುವ ವಿಷಯದಲ್ಲಿ ೧೮೮೦ನೇ ಇಸವಿಯ ಪಂಚಾಂಗದ ೩೯ನೇ ಪಾನಿನಲ್ಲಿ ನೋಡು. [2] ೧೮೮೧ನೇ ಪಂಚಾಂಗದ ೪ನೇ ಪಾನು.

[3] *Engl:* **Kamala, Kaméla**; ಹಿಂದು: ಕಮೇಲಾ, ಕಮೂಪ್; ತಮು: ಕಮೋಲಾಪೂವು, ಕಾಪಿಲಪೊಡಿ; ತೆಲು: ಕಾಪಿಲಪೊಡಿ.—ಈ ದೇಶದಲ್ಲಿ ಬಣ್ಣಕ್ಕೆ ಹೆಚ್ಚಾಗಿ ಪ್ರಯೋಗಿಸುವ ಕಮೇಲ ಎಂಬ ಒಳ್ಳೇ ಕೆಂಪು ಬಣ್ಣದ ಹುಡಿಯು ಅಂಗಡಿಗಳಲ್ಲಿ ಶಿಕ್ಕುತ್ತದೆ. ಆದರೆ ಅದರಲ್ಲಿ ಹೊಯಿಗೆಯಾಗಲೀ ಧೂಳಾಗಲೀ ಬೆರತಿರದ ಹಾಗೆ ನೋಡಬೇಕು.

ಬಹುದು; ಆದರೂ ತಪ್ಪಿದರೆ, ಮತ್ತೂ ಕೊಟ್ಟು ಪ್ರಯೋಜನವಿಲ್ಲ; ಬೇರೆ ಔಷಧವೇನಾದರು ಕೊಟ್ಟು ನೋಡ ಬಹುದು.

೧೯೮. ದಾಳಿಂಬದ[1] ಬೇರು ಲಾಡಿಹುಳ ಹೊರಡಿಸುವದಕ್ಕೆ ಒಳ್ಳೇ ಔಷಧವೆಂದು ಸ್ಥಾಪಿತವದೆ. ಹ್ಯಾಗಂದರೆ ೨ ಔನ್ಸ್ ಹಶಿಯಾದ ಬೇರುಗಳನ್ನು ೨ ಪ್ಯಾಂಟ್ ನೀರಿನಲ್ಲಿ ಹಾಕಿ ಬೇಯಿಸಿ, ಒಂದು ಪ್ಯಾಂಟ್ ಆಗುವ ವರೆಗೆ ಕುದಿಸಿ, ಆ ಮೇಲೆ ತೆಗದು ಗಾಳಿಸುವದು. ಇದರಿಂದ ಬೆಳಿಗ್ಯೆ ಹೊಟ್ಟೆ ಖಾಲಿ ಇರುವಾಗ ೨ ಔನ್ಸ್ ಕೊಡುವದು; ಆ ಮೇಲೆ ಅರ್ಧರ್ಧ ತಾಸಿಗೊಮ್ಮೆ ಅದೇ ಪ್ರಕಾರ ೪ ಸಾರಿ ವರೆಗೆ ಕೊಡುವದು. ಇದರ ತರುವಾಯ ಸಾಧಾರಣ ಒಂದು ಮಲಶೋಧಕ ಔಷಧ (ಅಂದರೆ ಒಂದು ಔನ್ಸ್ ಹರಳೆಣ್ಣೆ) ಕೊಟ್ಟಲ್ಲಿ, ೧೨ ತಾಸಿನೊಳಗೆ ಕ್ರಿಮಿಗಳೆಲ್ಲಾ ಹೊರಬೀಳುವವು. ಈ ಉದ್ದಿಶ್ಯ ಗಂಡು ದಾಳಿಂಬೀ ಮರದ ಬೇರುಗಳ ತೊಗಟೆ ಹೆಚ್ಚು ಗುಣವುಳ್ಳದ್ದೆಂದು ನೆನಸುತ್ತಾರೆ.

೧೯೯. ಲಾಡಿಹುಳವನ್ನು ಮಲಕೋಶದಿಂದ ಹೊರಡಿಸುವದಕ್ಕೆ ಟರ್‌ಪೆಂಟ್ಯಾನ್ ಎಣ್ಣೆಯ ಪ್ರಯೋಗವು ಪ್ರಶಸ್ತವದೆ. ಅದನ್ನು ಹ್ಯಾಗೆ ಕೊಡುವದಂದರೆ: ಮೂರು ದ್ರಮ್ ಟರ್‌ಪೆಂಟ್ಯಾನ್ ಎಣ್ಣೆಗೆ ಅಷ್ಟೇ ಹರಳೆಣ್ಣೆ ಕೂಡಿಸಿ ಕೊಡುವದು. ಟರ್‌ಪೆಂಟ್ಯಾನ್ ಎಣ್ಣೆ ಮಾತ್ರವೇ ಕೊಟ್ಟ ಪಕ್ಷಕ್ಕೆ ಉಂಟಾಗುವ ಶಿರೋಭ್ರಮಣೆ ನಿವಾರಿಸುವ ಬಗ್ಯೆ ಅದಕ್ಕೆ ಹರಳೆಣ್ಣೆ ಕೂಡಿಸುವಂಥಾದ್ದಾಗಿರುತ್ತದೆ. ಇದನ್ನು ಕೊಡತಕ್ಕ ಉತ್ತಮ ಕಾಲವು ಊಟವಾದ ೨-೩ ತಾಸಿನ ಮೇಲೆ ಆಗಿರುತ್ತದೆ; ಖಾಲಿ ಹೊಟ್ಟೆಗೆ ತೆಕ್ಕೊಂಡರೆ, ವಾಂತಿಗೆ ಕಾರಣವಾದೀತು. ಈ ಚಿಕಿತ್ಸೆ ಮಾಡಿಕೊಳ್ಳುವವನು ಎಣ್ಣೆ ತೆಕ್ಕೊಂಡ ಮೇಲೆ ವಿಶ್ರಾಂತನಾಗಿರ ಬೇಕು. ಔಷಧದ ಜಾರೀ ಸಡಿಯುವ ಕಾಲದಲ್ಲಿ ಮಾಂಸದ ಸಾರವಾಗಲೀ ಜಿಗಟಾದ ಯಾವದೊಂದು ಪಾನವಾಗಲೀ ತೆಕ್ಕೊಳ್ಳ ಬಾರದು. ಈ ಪ್ರಕಾರ ಹೊಟ್ಟೆಗೆ ತೆಕ್ಕೊಳ್ಳುವದಕ್ಕೆ ಬೇಕಾದ ಟರ್‌ಪೆಂಟ್ಯಾನ್ ಎಣ್ಣೆಯು ಶುದ್ಧವಾಗಿದ್ದು ವಿಲಾಯತೀ ಔಷಧ ಮಾರುವ ಅಂಗಡಿಯಲ್ಲಿ ಶಿಕ್ಕುವಂಥಾದ್ದಾಗಿರ ಬೇಕು.

೨೦೦. ಮುತ್ತಗದ (ಪಲಾಶವೃಕ್ಷದ) ಬೀಜವು[2] ಹಿಂದೂ ದೇಶಸ್ಥರಲ್ಲಿ ಉಂಟಾಗುವ ಉರುಟು ಕ್ರಿಮಿಗಳನ್ನು ಹೊರಡಿಸುವದಕ್ಕೆ ಒಳ್ಳೇ ಔಷಧವೆಂದು ಅನ್ನುವ ಮಹಮ್ಮದಿ ವೈದ್ಯರ ಅಭಿಪ್ರಾಯವು ವಿಲಾಯತಿಯವರ ಅನುಭವಕ್ಕೆ ಚನ್ನಾಗಿ ಒಪ್ಪಿಗೆಯಾಗಿರುತ್ತದೆ. ಈ ಬೀಜಗಳನ್ನು ಮೊದಲಾಗಿ ನೀರಿನಲ್ಲಿ ತೋಯಲಿಕ್ಕೆ ಇಟ್ಟು, ಚನ್ನಾಗಿ ನೆನದ ಮೇಲೆ ಅವುಗಳ ಶಿಪ್ಪೆಯನ್ನು ಸುಲಿದು, ಅದರೊಳಗಿರುವದನ್ನು ಚನ್ನಾಗಿ ಕುಟ್ಟಿ ಪುಡಿ ಮಾಡುವದು. ಈ ಚೂರ್ಣವನ್ನು ಸಾರಿಗೆ ೨೦ ಗ್ರೇನ್ ಪ್ರಕಾರ ದಿನಕ್ಕೆ ಮೂರಾವರ್ತಿ ಮೂರು ದಿವಸಗಳ ವರೆಗೆ ಕೊಟ್ಟು, ನಾಲ್ಕನೇ ದಿವಸ ಒಂದಿಷ್ಟು ಹರಳೆಣ್ಣೆ ಕೊಡು

---

[1] ೧೮೬೬ನೇ ಇಸವಿಯ ಪಂಚಾಂಗದ ೬೫ನೇ ಪಾನಿನಲ್ಲಿರುವ ೬೫ನೇ ಅಂಕೆಯನ್ನೂ ಅದರ ಟಿಪ್ಪಣಿಯನ್ನೂ ಸರಿ ನೋಡು.

[2] *Engl:* Butea Seeds; ಹಿಂದು: ಪಲಾಶಕೇಬೀಂಜ್; ತಮು: ಪೊರಸುಂವಿರೈ, ಮುರುಕ್ಕಮ್‌ವಿರೈ; ತೆಲು: ಪಲಾಶವಿತ್ತುಲು; ಮಲ: ಪ್ಲಾಶು, ಮುರುಕ್ಕವಿತ್ತ್.—ಪಲಾಶವೃಕ್ಷದ ಬೀಜಗಳು ಚಪ್ಪೆಯಾಗಿ, ಸುಮಾರು ೧½ ಇಂಚು ಉದ್ದವಿದ್ದು, ರುಚಿಯಾಗಲೀ ವಾಸನೆಯಾಗಲೀ ಅವುಗಳಿಗೆ ಇರುವದಿಲ್ಲ.

LIBRARY

ವದು. ಇವಕ್ಕೆ ಇರುವ ಒಂದೇ ದೋಷವೇನಂದರೆ—ಕ್ರಿಮಿ ಹೊರಡಿಸುವ ಇದರ ಗುಣ ವ್ಯಕ್ತವಾಗದ್ದಲ್ಲಿ ಅಗ್ಯಾಗ್ಯೆ ಬರೇ ಜುಲಾಬು ಮಾಡಿಸುವದು, ಮತ್ತು ಕೆಲವು ಸಂಗತಿಗಳಲ್ಲಿ ವಾಂತಿ ಮತ್ತು (kidneys) ಹುರುಳಿಕಾಯಿಗಳ ಉರುತ ಸಹ ಉಂಟು ಮಾಡುವದು; ಆದ್ದರಿಂದ ಈ ಲಕ್ಷಣಗಳು ಸಾಮಾನ್ಯವಾಗಿ ಎಲ್ಲಾ ಸಂಗತಿಗಳಲ್ಲಿ ಕಾಣದಿದ್ದರೂ, ಆ ಬೀಜಗಳ ಪ್ರಯೋಗದಲ್ಲಿ ಸ್ವಲ್ಪ ಜಾಗ್ರತೆಯಾಗಿರ ಬೇಕು.

೨೦೧. ಕಾಡುಜೀರಿಗೆ[1] ಒಳ್ಳೇ ಕ್ರಿಮಿಮಾರಕವೆಂದು ಈ ದೇಶಸ್ಥರಲ್ಲಿ ಹೆಸರುಗೊಂಡಿರುತ್ತದೆ. ಇದರ ಪ್ರಯೋಗದಿಂದ ಉರುಟು ಹುಳಗಳು ನಿರ್ಜೀವವಾಗಿ ಹೊರಬೀಳುತ್ತವಂತೆ; ಆದ್ದರಿಂದ ಕ್ರಿಮಿಗಳ ಉಪದ್ರವಕ್ಕೆ ಇದು ಮನಗಂಡ ಔಷಧವೆಂದು ತೋರುತ್ತದೆ. ೨ ಡ್ರಮ್ ಈ ಬೀಜಗಳನ್ನು ಕುಟ್ಟಿ ಪುಡಿ ಮಾಡಿ, ಸ್ವಲ್ಪ ಜೇನು ಕೂಡಿಸಿ ಲೇಹ್ಯದಂತೆ ಮಾಡಿ, ಕೆಲವು ತಾಸುಗಳ ನಡುವೆ ಎರಡು ಸಾರಿ ಕೊಟ್ಟು, ಆ ಮೇಲೆ ಮಲಶೋಧನೇ ಬಗ್ಗೆ ಜುಲಾಬಿನ ಔಷಧ ಕೊಡುವದು. ಇಂಥಾ ಸಂಗತಿಯಲ್ಲಿ ಕಾಡುಜೀರಿಗೆಯ ಗುಣವನ್ನು ಮತ್ತೂ ಶೋಧಿಸಿ ನೋಡ ತಕ್ಕದ್ದಾಗಿರುತ್ತದೆ. ತ್ರಾವಣಕೋಡಿನಲ್ಲಿ ಮೈಯಲ್ಲಿ ಹೇನು ತುಂಬದವರು ಕಾಡುಜೀರಿಗೆಗಳನ್ನು ನಿಂಬೆರಸದಲ್ಲಿ ಅರೆದು ಬಹಳವಾಗಿ ಹಚ್ಚಿಕೊಳ್ಳುತ್ತಾರಂತೆ.

೨೦೨. ಪಪ್ಪಾಯಿ ಹಣ್ಣಿನ[2] ಹಾಲಿನಂತೆ ಇರುವ ಸೊನೆಯನ್ನು ಕ್ರಿಮಿಗಳ ಉಪದ್ರವದಲ್ಲಿ, ಮುಖ್ಯವಾಗಿ ಉರುಟು ಹುಳಗಳ ಕಾಟಕ್ಕೆ, ಬಹಳ ಫಲಕರವಾಗಿ ಪ್ರಯೋಗಿಸುತ್ತಾರೆ. ಹಸಿಯಾದ ಕಾಯಿಗೆ ಚೂರಿಯಿಂದ ಘಾಯ ಹಾಕಿದ್ದಲ್ಲಿ ಅದರಿಂದ ಸೊನೆ ಹೊರಡುತ್ತದೆ. ಆ ಸೊನೆಯನ್ನೆಲ್ಲಾ ಒಂದು ಪಾತ್ರೆಯಲ್ಲಿ ಇಳಿಸಿಡ ಬೇಕು. ಇದರಿಂದ ಒಂದು ಮೇಜಿನ ಸೌಟಿನಷ್ಟು ಸೊನೆ ತೆಗದು, ಅದಕ್ಕೆ ಅಷ್ಟೇ ಜೇನುತುಪ್ಪ ಕೂಡಿಸಿ, ಆ ಮಿಶ್ರವನ್ನು ೨ ಔನ್ಸ್ ಕುದಿಯುವ ನೀರಿನಲ್ಲಿ ಹಾಕಿ ಚನ್ನಾಗಿ ಕಲಕಿಸುನದು. ತಣ್ಣಗಾದ ಮೇಲೆ ಅದನ್ನೆಲ್ಲಾ ಒಮ್ಮೆಯೇ ಕುಡಿದು ಬಿಟ್ಟು, ಅದರ ಎರಡು ತಾಸಿನ ತರುವಾಯ ಒಂದು ಔನ್ಸ್ ಹರಳೆಣ್ಣೆ ಅರ್ಧ ಮೇಜಿನ ಸೌಟಿನಷ್ಟು ನಿಂಬೆರಸದ ಸಂಗಡ ತೆಕ್ಕೊಳ್ಳುವದು (ಇದು ದೊಡ್ಡವರ ಪರಿಮಾಣವು). ಈ ಪ್ರಕಾರ ಬಿಡದೆ ಎರಡು ದಿವಸ ತೆಕ್ಕೊಳ್ಳ ಬೇಕು. ೩ರಿಂದ ೭ ವರುಷಗಳ ವರೆಗಿನ ಮಕ್ಕಳಿಗಾದರೆ, ಮೇಲಿನ ಪರಿಮಾಣದ ಅರೆವಾಶಿ; ಮೂರು ವರುಷಗಳ ಒಳಗಿನ ಮಕ್ಕಳಿಗಾದರೆ, ಮೇಲಿನ ಪರಿಮಾಣದ $\frac{೧}{೪}$ ಅಂಶ ಸಹ ಸಾಕಾಗುವದು. ಈ ಔಷಧದಿಂದ ಒಂದು ವೇಳೆ ಹೊಟ್ಟೆನೋವು ಉಂಟಾದ ಪಕ್ಷಕ್ಕೆ, ಸಕ್ಕರೆನೀರಾಗಲೀ ಸಕ್ಕರೆ ಹಾಕಿದ ಹಾಲಾಗಲೀ ಯಥೇಷ್ಟ ಕೊಟ್ಟಲ್ಲಿ ಪರಿಹಾರವಾಗುವದು.

---

1) *Engl:* **Vernonia Seeds**; ಹಿಂದು: ಸೋಮ್ರಾಜ್, ಬುಕ್‌ಚೀ; ತಮ: ಕಾಟುಶೀರಗಂ; ತೆಲು: ಅಡವಿಜಿಲಕರ, ವಿಷಕಂಟಕಾಲು; ಮಲ: ಕಾಟ್ಟುಜೀರಕಂ; ಮಹಾ: ರಾನಾಚೆ ಜೀರೇ.—ಈ ಕಾಡುಜೀರಿಗೆ ಗಿಡವು ಹಿಂದುಸ್ಥಾನದ ಬಂಜರ ಸ್ಥಳಗಳಲ್ಲಿ ಅಲ್ಲಲ್ಲಿ ತಿಕ್ಕುತ್ತದೆ. ಅದರ ಬೀಜಗಳು ಗಂಧಸರಕಿನ ಅಂಗಡಿಗಳಲ್ಲಿ ಮಾರಲಾಗುತ್ತವೆ. ಅದರ ಆಕೃತಿ $\frac{೧}{೬}$ ಇಂಚು ಉದ್ದ, ಕಪ್ಪಗೆ ಆಗಿದ್ದು, ಅದರ ಮೇಲೆ ಬಿಳೀ ಕುಸುಮಗಳು ಇರುತ್ತವೆ. ಅದರ ರುಚಿಯು ಸ್ವಲ್ಪ ವಾಕರಿಕೆ ಹುಟ್ಟಿಸುವ ಕಹಿಯಾಗಿದೆ.

2) *Engl:* **Papaw tree**; ಹಿಂದು: ಪೊಪಯ್ಯಾ; ತಮ: ಪಪ್ಪಾಯಿ; ತೆಲು: ಬೊಪ್ಪಾಯಿ; ಮಲ: ಪಪ್ಪಾಯ; ಮಹಾ: ಪೋಪಯಾ.

೨೦೩. ಹೊಟ್ಟೆಯಿಂದ ಹುಳಗಳನ್ನು ಹೊರಡಿಸುವದಕ್ಕೆ "ಸೆಂಟೊನಿನ್" (santonin ಅಂದರೆ ಕಿರಿವೋಮದ ಸತ್ವ) ಎಂಬ ವಿಲಾಯತೀ ಔಷಧಕ್ಕೆ ಸಮಾನವಾದ್ದು ಬೇರೊಂದಿಲ್ಲ. ಹಿಂದು ಜನರೊಳಗೆ ಕ್ರಿಮಿಗಳ ಉಪದ್ರವು ಬಹುತೇಕವಿದ್ದು, ಅದು ಹಲವು ಅಕ್ರಮಗಳಿಗೆ ಕಾರಣವಾಗುವದರಿಂದ ಈ ಔಷಧವನ್ನು ಯಾವಾಗಲು ಸಮೀಪ ಇಟ್ಟುಕೊಳ್ಳುವದು ಅಗತ್ಯವಾಗಿರುತ್ತದೆ. ಇದರ ಪರಿಮಾಣವು ನಾಲ್ಕು ವರ್ಷದ ಕೆಳಗಿನ ಮಕ್ಕಳಿಗೆ ೨ರಿಂದ ೪ ಗ್ರೇನ್ ವರೆಗೆ, ೧೨ ವರುಷದ ಮೇಲಿನವರಿಗೆ ೬ರಿಂದ ೮ ಗ್ರೇನ್ ವರೆಗೆ ಕೊಡ ಬಹುದು. ಈ ಪರಿಮಾಣದಷ್ಟು ಹುಡಿಗೆ ಅದರ ಇಮ್ಮಡಿ ತೂಕ ಸಕ್ಕರೆ ಕೂಡಿಸಿ, ೬ ತಾಸಿಗೆ ಆಗಲೀ ೮ ತಾಸಿಗೆ ಆಗಲೀ ಒಮ್ಮೆ ಪ್ರಕಾರ ಮೂರು ಸಾರಿ ಕೊಡುವದು. ಬಹಳ ಫಲಕರವೆಂದು ಕಂಡು ಬಂದ ರೀತಿ ಹ್ಯಾಗಂದರೆ—ಸೆಂಟೊನಿನ್ನವು ರಾತ್ರೆ ಊಟವಾಗಿ ಮಲಗುವಾಗ ಕೊಟ್ಟು, ಬೆಳಿಗ್ಯೆ ಒಂದಿಷ್ಟು ಹರಳೆಣ್ಣೆ ಕೊಡುವದು; ಇದೇ ಪ್ರಕಾರ ಮೂರು ದಿವಸ ಮಾಡುವದು. ಅನೇಕ ಸಂಗತಿಗಳಲ್ಲಿ ಇದು ಕೊಟ್ಟ ಮೇಲೆ ಸ್ವತೀವ ಆಗುವ ಮಲಶೋಧನೆಯಲ್ಲಿ ಕ್ರಿಮಿಗಳು ಕಂಡು ಬಂದರೆ, ಪ್ರತ್ಯೇಕ ವಿರೇಚಕ ಔಷಧ ಕೊಡುವದೇ ಅವಶ್ಯವಿಲ್ಲವೆಂತ ಕೆಲವರು ಹೇಳುತ್ತಾರೆ; ಆದರೂ ಅದನ್ನು (ಹರಳೆಣ್ಣೆ) ಕೊಡುವದು ಭದ್ರವಾಗಿರುತ್ತದೆ. ಈ ಸೆಂಟೊನಿನ್ ಔಷಧವು ಲಾಡಿಹುಳಕ್ಕೆ ಪ್ರಯೋಜನವಿಲ್ಲ. ನೂಲಹುಳವು ಇದರ ದೆಸೆಯಿಂದ ಬಹುಶಾ ಹೊರಬೀಳಲಿಕ್ಕೆ ಅನುಕೂಲಿಸುವದಾದಾಗ್ಯೂ, ಅದು ಪುನಹಾ ಉಂಟಾಗದ ಹಾಗೆ ಅಭ್ಯಂತರಿಸಲಿಕ್ಕೆ ಆಗುವದಿಲ್ಲ. ಉರುಟು ಹುಳಕ್ಕೆ ಇದು ನಮಗಿರುವ ಅತ್ಯುತ್ತಮ ಔಷಧವಾಗಿರುತ್ತದಷ್ಟೆ.

೨೦೪. ನೂಲಹುಳಕ್ಕೆ ಮೂರು ಯಾ ನಾಲ್ಕು ಔನ್ಸ್ ಸುಣ್ಣದ ತಿಳೀನೀರಿನಿಂದ[1] ಪಿಚಕಾರಿ ಹೊಡೆದು ಅದರ ಉಪದ್ರವ ನಿವಾರಣೆ ಆಗುವದು.

ಖಜ್ಜಿ Itch.

೨೦೫. ಖಜ್ಜಿಗೆ ಗಂಧಕದ ಮುಲಾಮು ಪ್ರಶಸ್ತವಾದ ಔಷಧವಾಗಿರುತ್ತದೆ. ಅಂಗಡಿಗಳಲ್ಲಿ ಶಿಕ್ಕುವ ಗಂಧಕವಾಗಲೀ, (sublimed sulphur ಎಂಬ) ಶುದ್ಧ ಮಾಡಿದ ಗಂಧಕವಾಗಲೀ[2] ತಂದು ಕುಟ್ಟಿ, ನಯವಾದ ಪುಡಿ ಮಾಡಿ, ಅದರ ಒಂದು ಭಾಗಕ್ಕೆ ೬ ಪಾಲು ನೆಣವಾಗಲೀ (ಚರಬಿ), ಮುರ್ಗಿನಹುಳೀ ಬೀಜದ ಎಣ್ಣೆ (kokum butter = ಹಿಂದು: ಕೋಕುಮ್ಕಾ ತೇಲ್) ಆಗಲೀ, ಅದು ಶಿಕ್ಕದಿದ್ದರೆ, ಇತರ ಸಾಧಾರಣ ಎಣ್ಣೆಯಾಗಲೀ ಚನ್ನಾಗಿ ಕಲಕಿಸಿ ಮುಲಾಮು ಮಾಡುವದು. ಖಜ್ಜಿ ಇರುವ ಭಾಗವನ್ನು ಸಾಬುನು ಹಾಕಿ ಬಿಸಿ ನೀರಿನಿಂದ ಚನ್ನಾಗಿ ತೊಳದು, ನೀರು ಒರಸಿ ತೆಗದು, ಆ ಮೇಲೆ ಈ ಮುಲಾಮು ಆ ಖಜ್ಜಿಗೆ ಹಚ್ಚಿ ೧೫-೨೦ ನಿಮಿಷಗಳ ವರೆಗೆ ತಿಕ್ಕಿ, ಖಜ್ಜಿ ಬೊಕ್ಕೆಗಳೆಲ್ಲಾ ಪೂರಾ ಒಡಿಯುವ ವರೆಗೆ ಚನ್ನಾಗಿ ಉಜ್ಜುವದು.

---

[1] ಸುಣ್ಣದ ತಿಳೀನೀರು ತಯಾರು ಮಾಡುವದನ್ನು ಕುರಿತು ೧೮೭೬ನೇ ಇಸವಿಯ ಪಂಚಾಂಗದ ೭೦ನೇ ಪಾನಿನಲ್ಲಿ ನೋಡು.

[2] ಶುದ್ಧ ಮಾಡಿದ ಗಂಧಕ ವಿಲಾಯತೀ ಔಷಧ ಮಾರುವ ಅಂಗಡಿಯಲ್ಲಿ ಶಿಕ್ಕುವದು.

ಇದರ ಪ್ರಯೋಗವು ಕೈಗಳಿಗೂ ಮಣಿಕಟ್ಟಿಗೂ ಮತ್ತು ಖಜ್ಜಿ ಇರುವ ಇತರ ಭಾಗಕ್ಕೂ ಸಲ್ಲುವದು; ಸರ್ವಾಂಗ ಹಚ್ಚುವದರಿಂದ ಏನೂ ಪ್ರಯೋಜನವಿಲ್ಲ. ರಾತ್ರೆ ಕಾಲದಲ್ಲಿ ಮಲಗುವಾಗ ಈ ಮುಲಾಮು ತಿಕ್ಕಿ, ಮರುದಿನ ಬೆಳಿಗ್ಯೆ ಸಾಬುನು ಹಾಕಿ ಬಿಸಿ ನೀರಿನಿಂದ ತೊಳದು ತೆಗಿಯುವದು ಒಳ್ಳೇದು. ಈ ಪ್ರಕಾರ ಪ್ರತಿ ರಾತ್ರೆ ಮುಲಾಮು ಚನ್ನಾಗಿ ಹಚ್ಚಿದ ಪಕ್ಷಕ್ಕೆ, ಕೆಲವು ದಿವಸಗಳಲ್ಲಿ ಖಜ್ಜಿ ಎಲ್ಲಾ ವಾಶಿಯಾದೀತು. ಖಜ್ಜಿಯು ಒಮ್ಮೆ ವಾಶಿಯಾದ್ದು ಪುನಹಾ ಬಾರದಂತೆ ಖಜ್ಜಿಯ ರೇಸಿ ತಾಗಿದ ವಸ್ತ್ರಗಳನ್ನೆಲ್ಲಾ ನೀರಿನಲ್ಲಿ ಚನ್ನಾಗಿ ಬೇಯಿಸಿ ಒಗೆದು ತೆಗಿಯ ಬೇಕು, ಹೊರತು ಸಾಧಾರಣವಾಗಿ ನೀರಿನಲ್ಲಿ ಅದ್ದಿ ತೆಗದ್ದರಿಂದ ಅದರ ಸೋಂಕು ಹೋಗುವದಿಲ್ಲ.

ಖಾಸಶ್ವಾಸ (ದೀರ್ಘ ಕಾಲದ್ದು) Chronic Bronchitis.

ದೀರ್ಘಕಾಲದ ಖಾಸಶ್ವಾಸವು ಸಾಧಾರಣವಾಗಿ ನಡುಪ್ರಾಯ ಕಳೆದವರಿಗೆ ಉಂಟಾಗುತ್ತದೆ. ಕೆಮ್ಮು, ಉಸುರುಕಟ್ಟು, ಬಹುತರ ಕಫೋದ್ರೇಕವಾಗುವದು, ಕೆಲವು ಸಾರಿ ಒಳಜ್ವರ, ರಾತ್ರೆಕಾಲದಲ್ಲಿ ಬೆವರು, ಇದರ ಮುಖ್ಯ ಲಕ್ಷಣಗಳಾಗಿರುತ್ತವೆ. ಕಫವು ದಪ್ಪವಾಗಿ, ನೀಲ ಇಲ್ಲವೆ ಹಳದಿ ಬಿಳುಪು ಛಾಯವಾಗಿದ್ದು, ವಾಸನೆಯುಳ್ಳದ್ದಾಗಿರುವದು. ಮುದಿಪ್ರಾಯದವರಿಗೆ ಛಳಿಕಾಲದಲ್ಲಿ ಆಗುವ ಕೆಮ್ಮು ಇದರದೊಂದು ದೃಷ್ಟಾಂತವಾಗಿರುತ್ತದೆ. ಸಾಧಾರಣ ನೆಗಡಿ ಲಕ್ಷ್ಯ ಮಾಡದೆ ಇದ್ದದರಿಂದ ಕ್ರಮೇಣ ಇಂಥಾ ಖಾಸಶ್ವಾಸಕ್ಕೂ ಕೆಮ್ಮಿಗೂ ಕಾರಣವಾಗುತ್ತದೆ.

ಚಿಕಿತ್ಸೆ: ಬಜೆಯ ಕಷಾಯವಾಗಲೀ (೯೬[1]) ಕಿರುಮಂಜೀ ಚೂರ್ಣವಾಗಲೀ (೧೫೧[2]), ಹಿಂಗಿನ ಕಲ್ಕವಾಗಲೀ (೧೧೧[3]), ಮೀನಿನ ಎಣ್ಣೆಯಾಗಲೀ[4] ಕೊಡುವದು. ಮತ್ತು ಬಾಹ್ಯಚಿಕಿತ್ಸೆಯಾಗಿ ಅಕ್ಕೀಬತ್ತಡ(೧೧೮[5]), ಜಾಫಲದ ಎಣ್ಣೆಯ ಲೇಪ(೧೬೪[6]), ಟರ್ಪೆಂಟ್ಯಾನ್ ಎಣ್ಣೆಯ ಶೇಕ (ನೀರುಗಾವು) ಸಹ ಗುಣಕರವಾಗಿ ಕೊಡುವದು. ಅದಲ್ಲದೆ ಬೆಂಡೆಕಾಯಿಯ ಹೊಗೆ (೧೮೯) ಶೇದಿಕೊಳ್ಳುವದು ಸಹ ಪ್ರಯೋಜನಕರವಾದದ್ದು. ರೋಗಿಯು ವಾಸವಾಗಿರುವ ಕೋಣೆಯ ಹವೆಯು ಸಮಧಾತುವಿನದಾಗಿರ ಬೇಕು. ಯಾವ ಸಂಗತಿಯಲ್ಲ್ಯಾದರೂ ಕೆಮ್ಮಿನ ಉರುಬನ್ನು ಅಣಗಿಸುವದಕ್ಕೆ ಪೆಟ್ಲುಪ್ಪಿನ ಕಾಗದದ ಹೊಗೆಯನ್ನು (೧೧೭[7]) ಶೇದುವದು ಒಳ್ಳೇದು.

ಗಂಡಮಾಲೆ (ರಾಜಹುಣ್ಣು) Scrofula.

ಈ ರೋಗವು ಮಾಂಸಗ್ರಂಥಿಯ ಬೀಗು, ಶರೀರದಲ್ಲಿರುವ ರಸಧಾತುಗಳು ಕೆಡೋ

---

[1] ೧೮೭೯ನೇ ಇಸವಿಯ ಪಂಚಾಂಗದ ೪೯ನೇ ಪಾನಿನಲ್ಲಿರುವ ೯೬ನೇ ಅಂಕೆಯ ಕಡೇ ಭಾಗವನ್ನು ಓದಿ ನೋಡು.

[2] ೧೮೮೧ನೇ ಇಸವಿಯ ಪಂಚಾಂಗದ ೫೫ನೇ ಪಾನಿನಲ್ಲಿ ನೋಡು.

[3] ೧೮೮೦ನೇ ಇಸವಿಯ ಪಂಚಾಂಗದ ೪೫ನೇ ಪಾನಿನಲ್ಲಿ ನೋಡು.

[4] ೧೮೭೬ನೇ ಇಸವಿಯ ಪಂಚಾಂಗದ ೨೬ನೇ ಪಾನಿನಲ್ಲಿಯೂ ಅದರ ಟಿಪ್ಪಣಿಯಲ್ಲಿಯೂ ನೋಡು.

[5] ೧೮೮೦ನೇ ಇಸವಿಯ ಪಂಚಾಂಗದ ೪೧ನೇ ಪಾನಿನಲ್ಲಿ ನೋಡು.

[6] ೧೮೮೨ನೇ ಇಸವಿಯ ಪಂಚಾಂಗದ ೫೦ನೇ ಪಾನಿನಲ್ಲಿ ನೋಡು.

[7] ೧೮೮೦ನೇ ಇಸವಿಯ ಪಂಚಾಂಗದ ೪೨ನೇ ಪಾನಿನಲ್ಲಿ ನೋಡು.

ಣ, ಬೇಗ ಮಾಯದೆ ಗಬ್ಬಾಗುವ ಹುಣ್ಣು, ವ್ರಣ, ಕ್ಷಯವ್ಯಾಧಿಗೆ ಇಲ್ಲವೆ (mesenteric ಎಂಬ) ಗ್ರಂಥಿಗಳ ರೋಗಕ್ಕೆ ಹೇತುವೆ, ಈ ಮುಂತಾದ ಲಕ್ಷಣಗಳಿಂದ ವಿಶೇಷಿಸಲ್ಪಡುತ್ತದೆ.

ಚಿಕಿತ್ಸೆ: ಮೀನಿನ ಎಣ್ಣೆಯು[1] ಬಾವು ಹುಣ್ಣು ಮುಂತಾದ ಚರ್ಮವ್ಯಾಧಿಯಲ್ಲಿ ಬಹಳ ಪ್ರಯೋಜನಕರವಾಗಿರುತ್ತದೆ. ಗಂಡಮಾಲೇ ದೆಶೆಯಿಂದುಂಟಾದ ಕಣ್ಣುಬೇನೆಗೆ ಸಹ ಅದರಿಂದ ಪ್ರಯೋಜನ ಬಂದದ್ದುಂಟು. ರೋಗಿಯು ಅಶಕ್ತನಾಗಿ ರಕ್ತಛಾಯೆ ಇಲ್ಲದೆ ಕಳೆಗುಂದಿದವನಾದ ಪಕ್ಷಕ್ಕೆ, ಆ ಎಣ್ಣೆಯ ಸಂಗಡ ಅನ್ನಭೇದಿ ಸಹ ಕೂಡಿಸಿ ಕೊಡ ಬಹುದು. ಆಗಾಗ್ಯೆ ಚಾಲಮುಗ್ರದ ತೈಲ (೧೮೧), ಒಂದೆಲಗದ ಚೂರ್ಣ (೧೭೪[2]), ಸುಣ್ಣದ ತಿಳೀನೀರು (೨೦೬) ಗುಣಕರವಾಗಿ ಕೊಡಬಹುದು. ಈ ಹುಣ್ಣುಗಳ ದೆಶೆಯಿಂದಾಗಲೀ ಬೇರೆ ಚರ್ಮವ್ಯಾಧಿಯ ದೆಶೆಯಿಂದಾಗಲೀ ಉರುತವೂ ನೋವೂ ಇದ್ದು ರಾತ್ರೆಕಾಲದಲ್ಲಿ ನಿದ್ರೆಗೆ ಅಭ್ಯಂತರವಾದ ಪಕ್ಷಕ್ಕೆ, ಅಫೀಮು (೧೮೫[3]) ಇಲ್ಲವೆ ಉಮ್ಮತ್ತದ ಬೀಜದ ಧೃತಿ (೧೭೩[2]) ಕೊಡುವದು. ಪಥ್ಯಕ್ಕೆ ಎಥೇಷ್ಟ ಮಾಂಸಾಹಾರವೂ, ಶುದ್ಧ ಘಾಳಿಯಲ್ಲಿ ವಿಹಾರವೂ, ಸಮುದ್ರಸ್ನಾನವೂ ಮೇಲಿನ ಚಿಕಿತ್ಸೆಗೆ ಬಹುತರ ಅನುಕೂಲವಾಗಿರುತ್ತದೆ.

೨೦೬. ಗಂಡಮಾಲೆಯಲ್ಲಿ ಸುಣ್ಣದ ತಿಳೀನೀರು[4] ಸಾರಿಗೆ ಅರ್ಧ ಔನ್ಸ್ ಪ್ರಕಾರ ದಿನಕ್ಕೆ ಮೂರು ನಾಲ್ಕು ಸಾರಿ ಹಾಲಿನಲ್ಲಿ ತೆಕ್ಕೊಂಡದ್ದರಿಂದ ಕೆಲವು ಸಂಗತಿಗಳಲ್ಲಿ ಅದರ ಗುಣ ಕಂಡಿರುತ್ತದೆ. ಪದೇ ಪದೇ ಹುಣ್ಣುಗಳೂ ಬಾವುಗಳೂ ಆಗುತ್ತಿರುವವರಿಗೆ ಈ ಚಿಕಿತ್ಸೆಯು ಒಪ್ಪುತ್ತದೆ. ಇದರಿಂದ ಸರಿಯಾದ ಪ್ರಯೋಜನ ಶಿಕ್ಕ ಬೇಕಾದರೆ, ಬಿಡದೆ ಕೆಲವು ಕಾಲ ತೆಕ್ಕೊಳ್ಳ ಬೇಕು. ಗಂಡಮಾಲೆ ಸಮ್ಮಂಧವಾದ ಮತ್ತು ಇತರ ಹುಣ್ಣುಗಳಿಗೆ ಬಹಳ ಕೀವು ಸೋರುವದಿದ್ದರೆ, ಸುಣ್ಣದ ತಿಳೀನೀರಿನಿಂದ ಬಾಹ್ಯಲೇಪನವಾಗಿ ವಿಶೇಷ ಗುಣ ಬರುವದು. ಹ್ಯಾಗಂದರೆ—ಅರ್ಧ ಶೀಸೆ ಸುಣ್ಣದ ತಿಳೀನೀರಿಗೆ (calomel[5] ಎಂಬ) ಪಾದರಸದ ಧಾತು ೩೦ ಗ್ರೇನ್ ಹಾಕಿ ಚನ್ನಾಗಿ ಕಲಕಿಸಿ, ಆ ನೀರಿನಲ್ಲಿ ಅರಿವೇ ತುಂಡನ್ನು ಅದ್ದಿ ಹುಣ್ಣಿನ ಮೇಲೆ ಮುಚ್ಚಿ ಆಗಾಗ್ಯೆ ಆ ನೀರಿನಿಂದ ತೋಯಿಸುತ್ತಾ ಇರುವದು.

ಗರ್ಭಾವಸ್ಥೆ (ಗರ್ಭಧಾರಣೆ) Pregnancy.

ಇದು ಸ್ತ್ರೀಯರಿಗೆ ಆಗುವ ಸ್ವಾಭಾವಿಕ ಅವಸ್ಥೆಯಾಗಿದ್ದಾಗ್ಯೂ, ಗರ್ಭಿಣಿಯಾಗಿರುವ ಕಾಲದಲ್ಲಿ ಶರೀರದೊಳಗೆ ಅಕ್ರಮಗಳು ಆಗುವದುಂಟು. ಸೊಂಟದಲ್ಲಿ ನೋ

---

1) ೧೮೭೬ನೇ ಇಸವಿಯ ಪಂಚಾಂಗದ ೨೬ನೇ ಪಾನಿನಲ್ಲಿ ನೋಡು.

2) ೧೭೩ನೇ ಮತ್ತು ೧೭೪ನೇ ಅಂಕೆಗಳನ್ನು ೧೮೭೨ನೇ ಇಸವಿಯ ಪಂಚಾಂಗದ ೫೪-೫೫ನೇ ಪಾನುಗಳಲ್ಲಿ ನೋಡು.

3) ಇದೇ (೧೮೭೩ನೇ) ಇಸವಿಯ ಪಂಚಾಂಗದ ೪೪ನೇ ಪಾನಿನಲ್ಲಿ ನೋಡು.

4) ಸುಣ್ಣದ ತಿಳೀನೀರು ಮಾಡುವ ಕ್ರಮವನ್ನು ಕುರಿತು ೧೮೭೬ನೇ ಇಸವಿಯ ಪಂಚಾಂಗದ ೩೦ನೇ ಪಾನಿನಲ್ಲಿ ನೋಡು.

5) ಇದು ವಿಲಾಯತೀ ಔಷಧಗಳನ್ನು ಮಾರುವ ಅಂಗಡಿಗಳಲ್ಲಿ ದೊರಕುವದು.

ವಾದ ಪಕ್ಷಕ್ಕೆ ಕರ್ಪೂರದ ಮುಲಾಮಾಗಲೀ (೧೧೯[1]) ಕರ್ಪೂರ ಮಿಶ್ರ ಮಾಡಿದ ಅಫೀಮಿನ ಮುಲಾಮಾಗಲೀ (೧೨೦[1]) ಹಚ್ಚುವದು. ವಿಶೇಷ ವಾಂತಿ ಉಂಟಾದ ಪಕ್ಷಕ್ಕೆ, ಅದು ಉತಾರು ಆಗುವ ಬಗ್ಗೆ ಲವಂಗದ ಕಲ್ಕವನ್ನು (೧೩೦[2]) ಕೊಡುವದು. ಬಿಸಿಯಾದ ಕಾಫಿ (ಬುಂದಿನ) ನೀರು ಮತ್ತು ರೊಟ್ಟಿ ದಿನಾಲು ಮುಂಜಾನೆ ಹಾಸಿಗೆಯಲ್ಲಿರುವಾಗಲೇ ಕೊಟ್ಟು, ಏಳುವ ಹೊತ್ತಾಗುವ ವರೆಗೆ ಹಾಸಿಗೆಯಲ್ಲಿಯೇ ಇರುವದು ಒಳ್ಳೇದು; ಯಾಕಂದರೆ ಈ ಉಪಾಯದಿಂದ ವಾಂತಿಯು ಬಹುಶಾ ನಿಂತು ಹೋದೀತು.

ಗರ್ಭವಾಯು (ಗರ್ಭಾಶಯದಾಹ, ಸೂತಿಕಾವಾಯು,[3] ಸೂತಿಕಾಸನ್ನಿ)

Hysterical Affections.

ಇದೊಂದು ವಿಶೇಷವಾಗಿ ಸ್ತ್ರೀಯರಿಗೆ ಗರ್ಭಾಶಯದ ಅಕ್ರಮಸೂಚಕವಾಗಿಯಾಗ್ಲೀ ಇತರ ಅಶಕ್ತೀ ದೆಶೆಯಿಂದಾಗಲೀ ಉಂಟಾಗುವ ನರಗಳ ಸಮ್ಮಂಧವಾದ ಶರೀರಕಾರ್ಯಗಳ ಅಕ್ರಮ. ಇದು ಕಾಲಾವಧಿಯಾಗಿ ಅನಿಯಮಿತ ಹೊತ್ತಿಗೆ ಬರುವಂಥಾದ್ದಾಗಿದ್ದು, ಇತರ ಕಾಲವೆಲ್ಲಾ ಸ್ತ್ರೀಯು ಸಹಜ ಸ್ಥಿತಿಯಲ್ಲಿದ್ದು, ಅದು ಉಂಟಾದ ಹೊತ್ತಿನಲ್ಲಿ ಸ್ಮೃತಿ ತಪ್ಪದೆ ಇದ್ದಾಗ್ಯೂ, ಸನ್ನಿಯಾಗಿದ್ದಂತೆ ಕೂಗುವದಾಗಲೀ, ನೆಗಾಡುವದಾಗಲೀ, ನೆಟ್ಟುಸುರಿಡುವದಾಗಲೀ, ಬುದ್ಧಿಭ್ರಾಂತಿಯಾಗಲೀ ಬಹುತರ ಇರುತ್ತದೆ.

ಚಿಕಿತ್ಸೆ: ಇದರ ಏರಿಕೆ ತಡಿಸುವ ಬಗ್ಗೆ ಹಿಂಗು (೧೨೪[4]), ರಕ್ತಬೋಳ ಮತ್ತು ಹಿಂಗು ಕೂಡಿದ ಮಾತ್ರೆ (೨೦೭), ಜಟಾಮಾಂಸಿ (೮[5]), ಓಮದ ನೀರು (೧೫[6]) ಸಹ ಪ್ರಯೋಗವಾಗುತ್ತದೆ. ಅದಲ್ಲದೆ ಟರ್‌ಪೆಂಟ್ಯಾನ್ ಎಣ್ಣೆಯಿಂದ ಪಿಚಕಾರಿ ಹೊಡಿಯುವದು (೧೩೩[7]), ತಣ್ಣೀರಿನ ಧಾರೆ (೫೮[8]) ಸಹ ಕೊಡ ಬಹುದು.

೨೦೭. ರಕ್ತಬೋಳ[9] ಮತ್ತು ಹಿಂಗು ಹಾಕಿ ಮಾತ್ರೆ ಮಾಡುವದು ಹ್ಯಾಗಂ

---

[1] ೧೧೯ನೇ ಮತ್ತು ೧೨೦ನೇ ಅಂಕೆಗಳನ್ನು ೧೮೮೦ನೇ ಇಸವಿಯ ಪಂಚಾಂಗದ ೪೬ನೇ ಪಾನಿನಲ್ಲಿ ನೋಡು.

[2] ೧೮೮೧ನೇ ಇಸವಿಯ ಪಂಚಾಂಗದ ೪೬ನೇ ಪಾನಿನಲ್ಲಿ ನೋಡು.

[3] ೧೮೭೬ನೇ ಇಸವಿಯ ಪಂಚಾಂಗದ ೨೪ನೇ ಪಾನಿನಲ್ಲಿ "ರೋಗಗಳು" ಎಂಬ ಮೇಲ್ಬರಹದ ಕೆಳಗೆ "ಸೂತಕರೋಗ" ಎಂದಲ್ಲ, "ಸೂತಿಕರೋಗ" ಎಂತ ಆಗ ಬೇಕು.

[4] ೧೮೮೧ನೇ ಇಸವಿಯ ಪಂಚಾಂಗದ ೪೨ನೇ ಪಾನಿನಲ್ಲಿ ನೋಡು.

[5] ೧೮೭೬ನೇ ಇಸವಿಯ ಪಂಚಾಂಗದ ೨೬ನೇ ಪಾನಿನಲ್ಲಿ ನೋಡು.

[6] ೧೮೭೬ನೇ ಇಸವಿ ಯಪಂಚಾಂಗದ ೨೯ನೇ ಪಾನಿನಲ್ಲಿ ನೋಡು.

[7] ೧೮೮೧ನೇ ಇಸವಿಯ ಪಂಚಾಂಗದ ೪೬ನೇ ಪಾನಿನಲ್ಲಿ ನೋಡು.

[8] ೧೮೭೬ನೇ ಇಸವಿಯ ಪಂಚಾಂಗದ ೨೭ನೇ ಪಾನಿನಲ್ಲಿ ನೋಡು.

[9] *Engl:* Aloes; ಹಿಂದು: ಮುಸಬ್ಬಾರ್, ಇಲ್ವಾ, ಯಲ್ವಾ; ತಮ: ಕರಿಯಪ್ಪೋಲಂ, ಇರಕ್ತಪ್ಪೋಲಂ; ತೆಲು: ಮೂಶಾಂಬರಂ; ಮಲ: ಚನ್ನನಾಯಕಂ; ಮಹಾ: ಮುಸಂಬರಾಬೋಳಾ.—ಪೇಟೆಯಲ್ಲಿ ಮಾರೋಣಾಗುವ ರಕ್ತಬೋಳವು ಪರದೇಶದಿಂದ ಇಲ್ಲಿ ಆಮದಾಗುವಂಥಾದ್ದಾಗಿ ಕೀಳು ತರದ್ದಾಗಿರುತ್ತದೆ. ಆದರೆ ಅದನ್ನು ಕೆಳಗೆ ಹೇಳಿದ ರೀತಿಯಲ್ಲಿ ಶುದ್ಧೀಕರಿಸ ಬಹುದು. ಹಾಗಂದರೆ—ಅಂಗಡಿಯಿಂದ ಒಂದು ರಾತಲು ರಕ್ತಬೋಳವನ್ನು ತಂದು, ಕುಟ್ಟಿ, ಒಂದು ಗೇಲನ್ (=೧೨ ಶೀಸೆ) ನೀರಿನಲ್ಲಿ ಹಾಕಿ ಕುದಿಸಿ, ಚನ್ನಾಗಿ ಮಿಶ್ರವಾಗುವ ವರೆಗೆ ಅದನ್ನು ಕಲಕಿಸ ಬೇಕು. ಆ ಮೇಲೆ ಒಲೆಯಿಂದ ತೆಗದು, ೧೨ ತಾಸುಗಳ ವರೆಗೆ ಪ್ರತ್ಯೇಕ ಇಟ್ಟು, ಆದರ ಮೇಲಿನ ತೆಳುವಾದ ಕಷಾಯವನ್ನು ಗಾಳಿಸಿ ತೆಗದು, ಬಾಯಿ ಅಗಲವಿರುವ ಪಾತ್ರೆಯಲ್ಲಿ ಹಾಕಿ, ಬಿಸಲಿನಲ್ಲಿ ಇಟ್ಟಲ್ಲಿ ನೀರೆಲ್ಲಾ ಆರಿ ಹೋಗಿ, ಒಣ ತುಂಡುಗಳು ಮಾತ್ರ ಉಳಿಯುವವು.

ದರೆ—೨೦ ಗ್ರೇನ್ ತೂಕ ರಕ್ತಬೋಳ ಮತ್ತು ಅಷ್ಟೇ ಹಿಂಗು ಇವೆರಡನ್ನು ಚನ್ನಾಗಿ ಜೇನುತುಪ್ಪದ ಸಂಗಡ ಅರದು, ೧೨ ಮಾತ್ರೆಗಳಾಗಿ ಕಟ್ಟುವದು. ಈ ಮಾತ್ರೆಗಳನ್ನು ಸಾರಿಗೆ ಒಂದೊಂದರ ಮೇರೆಗೆ ದಿವಸಕ್ಕೆ ಎರಡು ಸರ್ತಿ ಕೊಡುವದು. ಸೂತಿಕಸನ್ನಿ ಇರುವ ಸ್ತ್ರೀಯರಿಗೂ, ಅಂತರ್ವಾಯಿ ಎಂಬ ವಾಯುಸಮ್ಮಂಧವಾದ ಶೂಲೆಯುಳ್ಳವರಿಗೂ, ಮುಖ್ಯವಾಗಿ ಮಲಬದ್ಧತೆಯುಳ್ಳವರಿಗೂ ಈ ಮಾತ್ರೆಗಳು ಬಹಳ ಪ್ರಯೋಜನಕರವಾಗಿ ಪ್ರವರ್ತಿಸುತ್ತವೆ. ಸೂತಿಕಬದ್ಧತೆಯ ದೆಶೆಯಿಂದಾಗಲೀ ಮೂಲವ್ಯಾಧಿಯ ರಕ್ತ ಹರಿಯುವದರಿಂದಾಗಲೀ ಉಂಟಾಗುವ ತಲೆಶಿಡತಕ್ಕೂ ಈ ಮಾತ್ರೆಗಳು ಬಹಳ ಸಾರಿ ಗುಣಕರವಾಗಿ ಪ್ರವರ್ತಿಸುತ್ತವೆ; ಆದರೆ ರಕ್ತಬೋಳವನ್ನು ಮೂಲವ್ಯಾಧೀ ರೋಗವುಳ್ಳವರಿಗೆ ಕೊಡ ಬಾರದು, ಯಾಕಂದರೆ ಆದರ ದೆಶೆಯಿಂದ ಆ ರೋಗವು ವಿಶೇಷವಾಗುವದು.

ಗರ್ಭಸ್ರಾವ (ಗರ್ಭಪಾತ, ಮೈಯಿಳಿಯೋಣ, ಹಲವಿಳಿಯೋಣ, ಹೊಟ್ಟೆ ಇಳಿಯೋಣ) Abortion.

(೧೮೭೯ನೇ ಇಸವಿಯ ಪಂಚಾಂಗದ ೪೩-೪೪ನೇ ಪಾನುಗಳಲ್ಲಿ ಅಸ್ಥಿಸ್ರಾವಕ್ಕೆ ಹೇಳಿದ ಚಿಕಿತ್ಸೆಯನ್ನು ಸಹ ಸರಿ ನೋಡುವದು.)

ಚಿಕಿತ್ಸೆ: ಶಿರ್ಕವನ್ನು ಹೊಟ್ಟೆಯೊಳಗೂ ಹಾಹ್ಯಲೇಪನವಾಗಿಯೂ (೫೭[1]) ಪ್ರಯೋಗಿಸುವದು. ಅವಿಶ್ರಾಂತಿಯೂ ವೇದನೆಯೂ ವಿಶೇಷವಿದ್ದರೆ, ಅಫೀಮು (೨೦೮) ಕೊಡುವದು. ಗರ್ಭಾಶಯ ಮುದುರಿಕೊಳ್ಳುವಂತೆ ಶಕ್ತಿ ಸಾಲದೆ ಇರುವ ದೆಶೆಯಿಂದ ನೆತ್ತರ ಹರಿಯೋಣವು ನಿಲ್ಲದೆ ಇಲ್ಲವೆ ಕಡಿಮೆ ಆಗದೆ ಹೋದರೆ, ಬಿಳಿಗಾರವನ್ನೂ ದಾಲ್ಚಿನಿಯನ್ನೂ (೨೦೯) ಕೊಟ್ಟು ನೋಡುವದು; ಇಲ್ಲವೆ ಟರ್ಪೆಂಟ್ಯಾನ ಎಣ್ಣೆಯ ಪಿಚಕಾರಿ ಹೊಡಿಯುವದು (೧೩೩[2]). ರಕ್ತಶ್ರಾವವು ಹಿಂದೆ ಹೇಳಿದ ಔಷಧಗಳಿಂದ ನಿಲ್ಲದೆ ಹೋದ ಪಕ್ಷಕ್ಕೆ, (acetate of lead) ಸೀಸದ "ಎಸಿಟೇಟ್" ಅಂದರೆ ಲವಣ (೧೮೭೭ನೇ ಇಸವಿಯ ಪಂಚಾಂಗದ ೨೦ನೇ ಪಾನಿನಲ್ಲಿ ಹೇಳಿದ ಪ್ರಕಾರ) ಮತ್ತು ಅಫೀಮು (೨೦೮) ಕೊಟ್ಟು ಗುಣವಾಗುವದು. ಈ ಸಂಗತಿಗಳಲ್ಲಿ ಮಾತ್ರವಲ್ಲದೆ ಬೇರೆ ಎಲ್ಲಾ ವಿಷಯಗಳಲ್ಲಿ ಶರೀರಪ್ರಕೃತಿಯು ಸ್ವತೇವ ತನ್ನಂತೆ ಸರಿಯಾಗಗೊಡಿಸ ಬೇಕೇ ಹೊರ್ತು ಆ ವಿಷಯದಲ್ಲಿ ಯಾವದೊಂದು ವಿಶೇಷ ಚಿಕಿತ್ಸೆಗೆ ಕೈಹಾಕ ಬಾರದು; ಯಾಕಂದರೆ ಅದರಿಂದ ಕೇಡಾದೀತಲ್ಲದೆ ಪ್ರಯೋಜನ ಬಾರದು. ಗರ್ಭಸ್ರಾವ ಪಟ್ಟ ಸ್ತ್ರೀಯು ತನ್ನ ಮನಸ್ಸನ್ನೂ ದೇಹವನ್ನೂ ವಿಶ್ರಾಂತಿಯಾಗಿರಿಸಿ, ಒಳ್ಳೇ ಘಾಳಿ ಸರಾಗವಾಗಿ ಚಲಿಸುವ ಕೋಣೆಯಲ್ಲಿ ವಾರೆಯಾಗಿ ಮಲಗಿಕೊಂಡಿರ ಬೇಕು; ಮತ್ತು ಎಲ್ಲಾ ಉತ್ತೇಜಕ ಆಹಾರ ಪಾನಗಳನ್ನು ವರ್ಜಯ ಮಾಡಿ, ಮನಸ್ಸು ಉದ್ವೇಗವಾಗದಂತಿರುವದು ಫಲಕರವಾದ ಚಿಕಿತ್ಸೆಗೆ ಅಗತ್ಯವಾಗಿರುತ್ತದೆ. ಗರ್ಭಿಣಿಗೆ ವಿಪರೀತ ಧಾವತಿಯಿಂದಾಗಲೀ, ಬಿದ್ದು ಪೆಟ್ಟು ತಾಗಿದದರಿಂದಾಗಲೀ ಗರ್ಭಸ್ರಾವ ಉಂಟಾದೀತೆಂಬ

---

[1] ೧೮೭೭ನೇ ಇಸವಿಯ ಪಂಚಾಂಗದ ೨೨ನೇ ಪಾನಿನಲ್ಲಿ ನೋಡು.

[2] ೧೮೮೧ನೇ ಇಸವಿಯ ಪಂಚಾಂಗದ ೪೭ನೇ ಪಾನಿನಲ್ಲಿ ನೋಡು.

ಭಯಕ್ಕೆ ಕಾರಣವಿದ್ದರೆ, ಅಫೀಮು (೨೦೮) ಕೊಟ್ಟು, ಮೇಲೆ ಹೇಳಿದ ಸೂಚನೆಗಳನ್ನು ಅನುಸರಿಸಿದಲ್ಲಿ ಅಂಥಾ ಅಪಾಯ ನಿವಾರಣೆಯಾಗ ಬಹುದು.

೨೦೮. ಗರ್ಭಾಶಯಸಮ್ಮಂಧವಾದ ಅನೇಕ ಉಪಹತಿಗಳಲ್ಲಿ ಅಫೀಮು ಬಹಳ ಪ್ರಯೋಜನವುಳ್ಳದ್ದು. ಅದನ್ನು ಪಿಚಕಾರಿಯಾಗಿ ಯಾ ಮುಲಾಮಾಗಿ ಉಪಯೋಗಿಸುವದರ ಹೊರತು ಕಿಬ್ಬೊಟ್ಟೆಯ ಕೆಳಗೆ ಸಹ ತಿಕ್ಕ ಬಹುದು; ಮತ್ತು ಆಕ್ಕಿಯ ಒತ್ತಡ ಮಾಡಿ (laudanum) ಎಂಬ ಅಫೀಮಿನ ಸತ್ವವನ್ನು ಅದರ ಮೇಲೆ ಚಿಮಿಕಿಸಿ, ಅದನ್ನು ಕಿಬ್ಬೊಟ್ಟೆಯ ಕೆಳಗೆ ಕಟ್ಟ ಬಹುದು. ಹೊಟ್ಟೆಗೆ ಕೊಡುವದಾದರೆ, ತುಂಬಾ ಪರಿಮಾಣದಲ್ಲಿ ಕೊಡ ಬಹುದು, ಇಲ್ಲವೆ ಕರ್ಪೂರದ ಸಂಗಡ ಇನ್ನೂ ಪ್ರಯೋಜನಕರವಾಗಿ ಕೊಡಲೂ ಬಹುದು. ತರುವಾಯದ ನೋವಿಗೆ ಅಫೀಮಿನ ಸತ್ವದ ೧೫-೨೦ ತಟಕುಗಳನ್ನು ಕರ್ಪೂರದ ನೀರಿನಲ್ಲಿ[1] ಆಗಲೀ, ಓಮದ ನೀರಿನಲ್ಲಿ ಆಗಲೀ[2] ಗಂಜೀ ನೀರಿನಲ್ಲಿ ಆಗಲೀ ಕೊಟ್ಟಲ್ಲಿ ಕೂಡಲೇ ಗುಣ ತೋರುವದು. ಬಿದ್ದ ದೆಶೆಯಿಂದಾಗಲೀ ಅತಿ ಸಾಹಸದಿಂದಾಗಲೀ ಗರ್ಭಸ್ರಾವಕ್ಕೆ ಹೇತುವೆ ಉಂಟಾದ್ದಲ್ಲಿ, ಅದನ್ನು ನಿಲ್ಲಿಸುವದಕ್ಕೆ, ಪೂರ್ಣ ವಿಶ್ರಾಂತಿಯಾಗಿದ್ದು, ಮೈ ಮಾಲಿಕೊಂಡು ಇರುವದಲ್ಲದೆ ಅಷ್ಟೇ ಅಫೀಮಿನ ಸತ್ವ ಕೊಟ್ಟರೆ, ಸಾಕಾಗಿರುತ್ತದೆ; ವಿಶೇಷ ಕರಕರೆಯೂ ನೋವೂ ಇದ್ದರೆ, ಅದೇ ಪ್ರಕಾರ ಗುಣಕರವಾಗಿ ಇನ್ನು ಕೊಡ ಬಹುದು.

೨೦೯. ದೀರ್ಘಕಾಲದ ಪ್ರಸವವೇದನೆಯಲ್ಲಿ ಗರ್ಭವು ಹೊರಪಡಿಸುವದಕ್ಕೆ ಗರ್ಭಾಶಯಕ್ಕೆ ಸಾಮರ್ಥ್ಯ ಸಾಲದೆ ಹೋದರೆ, ಅಥವಾ ಅಂಥಾ ಸಂಗತಿಯಲ್ಲಿ ಗರ್ಭಸ್ರಾವವಾಗಿ ಹೋದ ಪಕ್ಷಕ್ಕೆ, ೩೦ ಗ್ರೇನ್ ಬಿಳಿಗಾರ್ ೧೦ ಗ್ರೇನ್ ಡಾಲ್ಚಿನಿ (ಲವಂಗದ ಚಕ್ಕೆಯ) ಹುಡಿ ಇವೆರಡನ್ನು ಬಿಸಿಯಾದ ಗಂಜೀ ನೀರಿನಲ್ಲಿ ಕಲಕಿಸಿ ಒಂದೊಂದು ಯಾ ಎರಡೆರಡು ತಾಸಿಗೆ ಒಂದು ಸರ್ತಿ ಮೂರು ಯಾ ನಾಲ್ಕು ಸಾರಿ ವರೆಗೆ ಕೊಡುವದು. ಇದನ್ನು ಪ್ರಸವವೇದನೆಯಲ್ಲಿ ಉಂಟಾಗುವ ಸನ್ನಿಗೂ ಸಹ ಕೊಡ ಬಹುದು.

* * *

ಒಬ್ಬ ಹುಡುಗಿಯ ಸಾಹಸವು.

ಅಮೇರಿಕದಲ್ಲಿ ಯುನೈಟೆಡ್ ಸ್ಟೇಟ್ಸ್ ಸಂಸ್ಥಾನದ ಐಬಿವಾ ಎಂಬ ಶೀಮೆಯ ಸರಕಾರದವರು ಹದಿನೈದು ವರ್ಷದ ಒಬ್ಬ ಹುಡುಗಿಯ ಶೌರ್ಯವನ್ನು ನೋಡಿ, ಅವಳಿಗೆ ಭಂಗಾರದ ಪದಕವನ್ನೂ ನಾಲ್ಕುವರೆ ನೂರು ರೂಪಾಯಿಯನ್ನೂ ಇನಾಮಾಗಿ ಕೊಟ್ಟರು. ಈ ಹುಡುಗಿ ಇರುವ ಊರಿನ ಹತ್ತರವೇ ಹೊಗೆಭಂಡಿಯ ಮಾರ್ಗದ ಸೇತುವೆಯದೆ. ಹೊಳೆ ಬಹಳ ಆಳವಾಗಿರುವದರಿಂದ ಸೇತುವೆ ಭಯಂಕರವಾಗಿ

---

[1] ಕರ್ಪೂರದ ನೀರು ಮನೆಯಲ್ಲಿ ಯಾವಾಗಲು ತಯಾರು ಮಾಡಿ ಇಟ್ಟುಕೊಳ್ಳುವದು ಒಳ್ಳೇದು. ಅದನ್ನು ಮಾಡುವದು ಹ್ಯಾಗಂದರೆ—೨ ಡ್ರಮ್ ಕರ್ಪೂರವನ್ನು ಒಂದು ಶೀಸೆ ನೀರಿನಲ್ಲಿ ಹಾಕಿ ಬಾಯಿ ಮುಚ್ಚಿ, ಕೆಲವು ದಿವಸದ ವರೆಗೆ ಇಡುವದು. ಈ ನೀರನ್ನು ದೊಡ್ಡವರು ಒಂದು ವ್ಯಾನ್ ಗ್ಲಾಸಿನಷ್ಟು ತಕ್ಕೊಳ್ಳ ಬಹುದು; ಮಕ್ಕಳಿಗೆ ಪ್ರಾಯಕ್ಕನುಸಾರವಾಗಿ ಕೊಡುವದು. ಈ ನೀರು ಬೇರೆ ಮದ್ದು ತಕ್ಕೊಳ್ಳುವದಕ್ಕೆ ಒಳ್ಳೇ ಉಪಕರಣವಾಗಿರುತ್ತದೆ.

[2] ೧೮೭೭ನೇ ಇಸವಿಯ ಪಂಚಾಂಗದ ೨೪ನೇ ಪಾನಿನಲ್ಲಿರುವ ೭ನೇ ಅಂಕೆಯಲ್ಲಿ ನೋಡು.

ಕಾಣುತ್ತದೆ. ಒಂದು ದಿನ ರಾತ್ರಿ ಜಡಿಮಳೆ ಬಂದು ಪ್ರಚಂಡವಾಯುವೂ ಬೀಸುತ್ತಿದ್ದು ಆ ಸೇತುವೆ ಏಕಾಏಕಿ ಕುಸಿದು ಬಿತ್ತು. ಈ ಸಂಗತಿ ಆ ಹುಡುಗಿಗೆ ಗೊತ್ತಾಯಿತು. ಅಲ್ಲಿಂದ ಅರ್ಧ ಹರದಾರಿ ದೂರದಲ್ಲಿ ಸ್ಟೇಶನಿತ್ತು, ಮತ್ತು ಟಪ್ಪಾಲಗಾಡಿ ಬರುವ ಹೊತ್ತು ಆಗಿತ್ತು. ಹುಡುಗಿ ಇರುವ ಊರಿನಿಂದ ಆ ಸ್ಟೇಶನಿಗೆ ಹೋಗುವದಕ್ಕೆ ಇನ್ನೊಂದು ಸೇತುವೆಯ ಮೇಲೆ ಮಾರ್ಗವಿತ್ತು, ಮತ್ತು ಆ ಮಾರ್ಗ ಅವಳಿಗೆ ಗೊತ್ತಿತ್ತು. ಸಂಕವು ಕುಸಿದು ಬಿದ್ದದ್ದು ಈ ಹುಡುಗಿಗೆ ತಿಳಿದ ಕೂಡಲೇ ಅವಳ ಮನಸ್ಸಿನಲ್ಲಿ ಬಹಳ ಚಿಂತೆ ಹುಟ್ಟಿತು. ಇಂಥಾ ಕತ್ತಲೆವೇಳೆಗೆ ಈ ಮಾರ್ಗವಾಗಿ ಗಾಡಿ ಬಂದದ್ದೇ ಹೌದಾದರೆ, ನೂರಾರು ಮನುಷ್ಯರು ಪ್ರಾಣ ಕಳಕೊಳ್ಳುವರು; ಈಗೇನು ಮಾಡುವಾ? ಗಾಡಿ ಬರುವ ಹೊತ್ತು ಆಯಿತು, ಕತ್ತಲೆವೇಳೆಯಲ್ಲಿ ನಾನೊಬ್ಬಳೇ ಹೋಗುವದೂ ಕಷ್ಟ; ಆದರೆ ಈಗ ಆಲೋಚಿಸುತ್ತಾ ಕುಂಡ್ರುವದಕ್ಕೆ ಸಮಯವಿಲ್ಲಾ; ನಾನೇ ಸ್ಟೇಶನಿಗೆ ಹೋಗಿ ತಿಳಿಸುವದು ಹೊರ್ತು ಬೇರೆ ಉಪಾಯವಿಲ್ಲಾ’ ಎಂತ ದೃಢ ಮಾಡಿಕೊಂಡಳು. ಕೂಡಲೇ ಮನೆಯೊಳಗೆ ಹೋಗಿ ಲಾಂದರು ಹೊತ್ತಿಸಿ, ಹೊರಗೆ ಜಡಿಮಳೆ ಬರುತ್ತಿರುವದೂ ಗಾಡಾಂಧಕಾರವೂ ಘಾಳಿಯ ಗರ್ಜನೆಯೂ ಲಕ್ಷ್ಯ ಮಾಡದೆ, ಒಬ್ಬಳಾಗಿ ಆ ಸ್ಟೇಶನಿಗೆ ಹೋಗುವದಕ್ಕೆ ಹೊರಟಳು. ಅವಳು ಎರಡನೇ ಸಂಕದ ಬಳಿಗೆ ಬಂದಾಗ ಅದೂ ಮುರಿಯಲಿಕ್ಕೆ ಹತ್ತಿರವಾಗಿತ್ತು. ಆದಾಗ್ಯೂ ನೂರಾರು ಪ್ರಾಣಗಳನ್ನು ಉಳಿಸ ಬೇಕೆಂಬ ತನ್ನ ಪಂಥ ಬಿಡದೆ ಸೇತುವೆಯನ್ನು ದಾಟುವಾಗಲೇ ಕೈಯಲ್ಲಿದ್ದ ದೀಪವೂ ನೊಂದಿ ಹೋಯಿತು. ಆದರೂ ಧೈರ್ಯ ಬಿಡದೆ ಹಾಗೂ ಹೀಗೂ ಕತ್ತಲಲ್ಲಿ ತಡವ್ಯಾಡುತ್ತಾ ಆ ಸ್ಟೇಶನಿಗೆ ಬಂದು ಮುಟ್ಟಿದಳು. ಗಾಡಿ ಬರುವ ಹೊತ್ತಾಯಿತೆಂದು ಸ್ಟೇಶನ ಮಾಸ್ತರನು ಕೈಯಲ್ಲಿ ಬೆಳಕು ಹಿಡಿದುಕೊಂಡು ಹೊರಗೆ ಬರುತ್ತಿರುವಾಗಲೇ ಈ ಹುಡುಗಿ ಅವನ ದೃಷ್ಟಿಗೆ ಬಿದ್ದಳು. ಅವಳು, ಸೇತುವೆ ಕುಸಿದು ಬಿದ್ದದೆ, ಗಾಡಿ ನಿಲ್ಲಿಸಿರಿ ಎಂಬದಾಗಿ ಎರಡೆರಡು ಸಾರಿ ಹೇಳಿ ಸಂಗಡಲೇ ಸ್ಮರಣೆ ತಪ್ಪಿ ಕೆಳಗೆ ಬಿದ್ದು ಹೋದಳು; ಬಾಯಿಂದ ಮಾತು ಬಾರದೆ ಹೋಯಿತು. ಸ್ಟೇಶನ ಮಾಸ್ತರನು ಹುಡುಗಿಯ ಗುರುತು ಹಿಡಿದು, ಅವಳು ತಂದ ವರ್ತಮಾನದ ಮೇಲೆ ಭರವಸವಿಟ್ಟು, ಅಲ್ಲಿಗೆ ಹೋಗುವ ಗಾಡಿಯನ್ನು ನಿಲ್ಲಿಸಿ ಬಿಟ್ಟನು. ಈ ಹುಡುಗಿಯ ಧೈರ್ಯದಿಂದ ಎಷ್ಟು ಮಂದಿಯ ಜೀವ ಉಳಿಯಿತು? ಅವರೆಲ್ಲರೂ ಅವಳನ್ನು ಹ್ಯಾಗೆ ಹೊಗಳಿದ್ದಾರು? ದೊಡ್ಡವರಿಂದ ಮಾತ್ರವಲ್ಲಾ, ಚಿಕ್ಕವರಿಂದಲೂ ಈ ಲೋಕದಲ್ಲಿ ಮಹಾ ಕಾರ್ಯಗಳು ಸಂಭವಿಸಿದ್ಧಾವೆ! ದೇವರ ಕೃತ್ಯಗಳನ್ನು ಶೋಧಿಸಿ ತಿಳಿದವರ್ಯಾರೂ ಇಲ್ಲಾ. ಆ ಗಾಡಿಯಲ್ಲಿ ಪ್ರಯಾಣ ಮಾಡುತ್ತಿದ್ದವರು ತಮಗೆ ಇಂಥಾ ವಿಪತ್ತು ಸಂಭವಿಸಲಿಕ್ಕಿತ್ತೆಂದು ಏನೂ ಅರಿಯದಿದ್ದರು; ಈ ಹುಡುಗಿಯ ಮೂಲಕವಾಗಿ ದೇವರು ಅವರನ್ನು ಅದಕ್ಕೆ ತಪ್ಪಿಸಿ ರಕ್ಷಿಸಿದನು. ಹೀಗೆ ನಮಗೆ ತಿಳಿಯದೆ ಬರುವ ಸಾವಿರಾರು ಗಂಡಾಂತರಗಳಿಂದ ದೇವರು ನಮ್ಮನ್ನು ರಕ್ಷಿಸುತ್ತಾನೆ. ನಾವೆಲ್ಲರೂ ಆತನನ್ನು ತಿಳಿದು, ಆತನ ವಿಶ್ವಾಸದಲ್ಲಿ ನೆಲೆಯಾಗಿ, ಆತನನ್ನೇ ಸ್ತೋತ್ರ ಮಾಡುವದು ವಿಹಿತವಾಗಿದೆ.

ದಕ್ಷಿಣ ಹಿಂದುಸ್ಥಾನದಲ್ಲಿ ರೂಢಿಯಾಗಿ ಎಣಿಸುವ

ಶಕಗಳ ಮೊಕಾಬಿಲೆ ಪಟ್ಟಿ.

ಕ್ರಿಸ್ತಶಕ A. D.		ಹಿಂದು ಶಕಗಳು hindu					ಫಸಲಿ		ಮಹಮ್ಮದಿ ಹಿಜರಿ	
		ಚಾಂದ್ರಮಾನ			ಸೌರಮಾನ					
		ಸಂವತ್ಸರಗಳು	ಶಾಲಿವಾಹನ ಶಕ		ಮಲಯಾಳ ಕೊಲ್ಲಮ್					
1807	1867	ಪ್ರಭವ	1729	1789	982	1042	1216	1276	1222	1284
1808	1868	ವಿಭವ	1730	1790	983	1043	1217	1277	1223	1285
1809	1869	ಶುಕ್ಲ	1731	1791	984	1044	1218	1278	1224	1286
1810	1870	ಪ್ರಮೋದೂತ	1732	1792	985	1045	1219	1279	1225	1287
1811	1871	ಪ್ರಜೋತ್ಪತ್ತಿ	1733	1793	986	1046	1220	1280	1226	1288
1812	1872	ಆಂಗೀರಸ	1734	1794	987	1047	1221	1281	1227	1289
1813	1873	ಶ್ರೀಮುಖ	1735	1795	988	1048	1222	1282	1228-29	1290
1814	1874	ಭಾವ	1736	1796	989	1049	1223	1283	1230	1291
1815	1875	ಯುವ	1737	1797	990	1050	1224	1284	1231	1292
1816	1876	ಧಾತು	1738	1798	991	1051	1225	1285	1232	1293
1817	1877	ಈಶ್ವರ	1739	1799	992	1052	1226	1286	1233	1294-95
1818	1878	ಬಹುಧಾನ್ಯ	1740	1800	993	1053	1227	1287	1234	1296
1819	1879	ಪ್ರಮಾಥಿ	1741	1301	994	1054	1228	1288	1235	1297
1820	1880	ವಿಕ್ರಮ	1742	1802	995	1055	1229	1289	1236	1298
1821	1881	ವಿಷು	1743	1803	996	1056	1230	1290	1237	1299
1822	1882	ಚಿತ್ರಭಾನು	1744	1804	997	1057	1231	1291	1238	1300
1823	1883	ಸ್ವಭಾನು	1745	1805	998	1058	1232	1292	1239	1301
1824	1884	ತಾರಣ	1746	1806	999	1059	1233	1293	1240	1302
1825	1885	ಪಾರ್ಥಿವ	1747	1807	1000	1060	1234	1294	1241	1303
1826	1886	ವ್ಯಯ	1748	1808	1001	1061	1235	1295	1242	1304
1827	1887	ಸರ್ವಜಿತು	1749	1809	1002	1062	1236	1296	1243	1305
1828	1888	ಸರ್ವಧಾರಿ	1750	1810	1003	1063	1237	1297	1244	1306
1829	1889	ವಿರೋಧಿ	1751	1811	1004	1064	1238	1298	1245	1307
1830	1890	ವಿಕೃತಿ	1752	1812	1005	1065	1239	1299	1246	1308
1831	1891	ಖರ	1753	1813	1006	1066	1240	1300	1247	1309
1832	1892	ನಂದನ	1754	1814	1007	1067	1241	1301	1248	1310
1833	1893	ವಿಜಯ	1755	1815	1008	1068	1242	1302	1249	1311
1834	1894	ಜಯ	1756	1816	1009	1069	1243	1303	1250	1312

ಕ್ರಿಸ್ತಶಕ		ಸಂವತ್ಸರಗಳು	ಶಾಲಿವಾಹನ ಶಕ		ಮಲಯಾಳ ಕೊಲ್ಲಮ್		ಫಸಲಿ		ಮುಹಮ್ಮದಿ ಹಿಜರಿ	
1835	1895	ಮನ್ಮಥ	1757	1817	1010	1070	1244	1304	1251	1313
1836	1896	ದುರ್ಮುಖಿ	1758	1818	1011	1071	1245	1305	1252	1314
1837	1897	ಹೇವಿಳಂಬಿ	1759	1819	1012	1072	1246	1306	1253	1315
1838	1898	ವಿಳಂಬಿ	1760	1820	1013	1073	1247	1307	1254	1316
1839	1899	ವಿಕಾರಿ	1761	1821	1014	1074	1248	1308	1255	1317
1840	1900	ಶಾರ್ವರಿ	1762	1822	1015	1075	1249	1309	1256	1318
1841	1901	ಪ್ಲವ	1763	1823	1016	1076	1250	1310	1257	1319
1842	1902	ಶುಭಕೃತು	1764	1824	1017	1077	1251	1311	1258	1320
1843	1903	ಶೋಭಕೃತು	1765	1825	1018	1078	1252	1312	1259	1321
1844	1904	ಕ್ರೋಧಿ	1766	1826	1019	1079	1253	1313	1260	1322
1845	1905	ವಿಶ್ವಾವಸು	1767	1827	1020	1080	1254	1314	1261-62	1323
1846	1906	ಪರಾಭವ	1768	1828	1021	1081	1255	1315	1263	1324
1847	1907	ಪ್ಲವಂಗ	1769	1829	1022	1082	1256	1316	1264	1325
1848	1908	ಕೀಲಕ	1770	1830	1023	1083	1257	1317	1265	1326
1849	1909	ಸೌಮ್ಯ	1771	1831	1024	1084	1258	1318	1266	1327-28
1850	1910	ಸಾಧಾರಣ	1772	1832	1025	1085	1259	1319	1267	1329
1851	1911	ವಿರೋಧಿಕೃತು	1773	1833	1026	1086	1260	1320	1268	1330
1852	1912	ಪರಿಧಾವಿ	1774	1834	1027	1087	1261	1321	1269	1331
1853	1913	ಪ್ರಮಾದೀಚ	1775	1835	1028	1088	1262	1322	1270	1332
1854	1914	ಆನಂದ	1776	1836	1029	1089	1263	1323	1271	1333
1855	1915	ರಾಕ್ಷಸ	1777	1837	1030	1090	1264	1324	1272	1334
1856	1916	ನಳ	1778	1838	1031	1091	1265	1325	1273	1335
1857	1917	ಪಿಂಗಳ	1779	1839	1032	1092	1266	1326	1274	1336
1858	1918	ಕಾಳಯುಕ್ತಿ	1780	1840	1033	1093	1267	1327	1275	1337
1859	1919	ಸಿದ್ಧಾರ್ಥಿ	1781	1841	1034	1094	1268	1328	1276	1338
1860	1920	ರೌದ್ರಿ	1782	1842	1035	1095	1269	1329	1277	1339
1861	1921	ದುರ್ಮತಿ	1783	1843	1036	1096	1270	1330	1278	1340
1862	1922	ದುಂದುಭಿ	1784	1844	1037	1097	1271	1331	1279	1341
1863	1923	ರುಧಿರೋದ್ಗಾರಿ	1785	1845	1038	1098	1272	1332	1280	1342
1864	1924	ರಕ್ತಾಕ್ಷಿ	1786	1846	1039	1099	1273	1333	1281	1343
1865	1925	ಕ್ರೋಧನ	1787	1847	1040	1100	1274	1334	1282	1344
1866	1926	ಕ್ಷಯ	1788	1848	1041	1101	1275	1335	1283	1345

ಸೂಚನೆ: 1. ಕ್ರಿಸ್ತಶಕವೆಂಬ ಇಸವಿ ಜನವರಿ 1ನೇ ತಾರೀಕಿಗೆ ಪ್ರಾರಂಭವಾಗುವದು.
2. ಸಂವತ್ಸರವೂ ಶಾಲಿವಾಹನ ಶಕವೂ (ಒಂದೇ ದಿವಸ) ಮಾರ್ಚ-ಎಪ್ರಿಲಲ್ಲಿ ಪ್ರಾರಂಭವಾಗುವದು.
3. ಮಲಯಾಳ ಕೊಲ್ಲಮ್ ಎಂಬ ಕೇರಳ ಶಕವು ಸಪಟಂಬರ ತಿಂಗಳಲ್ಲಿ "
4. ಫಸಲಿ ಜುಲಾಯಿ 1ನೇ ತಾರೀಕಿಗೆ "
5. ಮುಹಮ್ಮದಿ ಹಿಜರಿ ಸಾಮಾನ್ಯವಾಗಿ ವರ್ಷ ವರ್ಷ ೧೧. ದಿವಸಕ್ಕೆ ಮುಂದಾಗಿ "

ಠಸೇತೀಪೇ.

(೧೮೭೯ನೇ ಇಸವಿ Iನೇ ಆಕ್ಟಿನಲ್ಲಿರುವ ಪಟ್ಟಿಯಿಂದ ಸಂಕ್ಷೇಪಿಸಿದ್ದು.)

ದಸ್ತಾವೇಜನ ವಿವರಣೆ:	ಸ್ಟಾಂಪ್ ಹಾಸಲು:
1. (Acknowledgment) ಇಪ್ಪತ್ತು ರೂಪಾಯಿಗೆ ಮೀರಿರುವ ಸಾಲದ ಪಾವತೀ ಒಪ್ಪಿತ (ಯಾನೆ ರಶೀದಿ)	೧ ಆಣೆ
2. (Administration-bond) ಎಡ್ಮಿನಿಸ್ಟ್ರೇಶನ್ ಬೊಂಡ್ (ಅಂದರೆ ಸೊತ್ತಿನ ಮೇಲೆ ಅಧಿಕಾರ ನಡಿಸುವ ಬಗ್ಗೆ ಹುಟ್ಟುವ ಪತ್ರ)	14ನೇ ಅಂಕೆಯಲ್ಲಿ ಹೇಳಿರುವಷ್ಟೆ ಠಸೆ
3. (Affidavit) ಅಫಿದಾವಿತ್ (ಅಂದರೆ ಪ್ರಮಾಣ ಮಾಡಿಸಲಿಕ್ಕೆ ಅಧಿಕಾರವುಳ್ಳವನ ಮುಂದೆ ಪ್ರಮಾಣದ ಮೇಲಾಗಲೀ ಸತ್ಯದ ಮೇಲಾಗಲೀ ಬರಹಾಮೂಲಕವಾಗಿ ಕೊಡುವ ವಾಙ್ಮೂಲ ಇಲ್ಲವೆ "ಡಿಕ್ಲರೇಶನ್" ಯಾನೆ ಹೇಳಿಕೆ	೧ ರೂಪಾಯಿ
6. (Appointment) ನೇಮಕ (ಅಂದರೆ ಟ್ರಸ್ಟಿಗಳ ಇಲ್ಲವೆ ಸ್ಥಿರ ಯಾ ಚರಸೊತ್ತುಗಳ ಅಧಿಕಾರದ ಅಮಲಿನಲ್ಲಿ ಆದ ನೇಮುಕ) ಮರಣಶಾಸನವಲ್ಲದ ಯಾವ ಬರವಣಿಕೆಯಿಂದಾಗಲಿ ಮಾಡಲ್ಪಟ್ಟದ್ದರೆ	೧೫ ರೂಪಾಯಿ
7. (Appraisement) ಅಂದಾಜುಪಟ್ಟಿ (ಯಾ ಕಿಮ್ಮತು ಚೀಟು—ಒಂದು ವ್ಯಾಜ್ಯ ನಡಿಯುತ್ತಿರುವಾಗ ಕೋರ್ಟಿನವರ ಅಪ್ಪಣೇ ಮೇಲಲ್ಲದೆ ಅನ್ಯಥಾ ತಯಾರು ಮಾಡೋಣಾದರೆ)	10ನೇ ಅಂಕೆಯಲ್ಲಿ ಹೇಳಿರುವಷ್ಟೆ ಠಸೆ
8. ಯಾವದೊಂದು ಸಂಘದ (Articles) ನಿಬಂಧನೆಗಳು	೨೫ ರೂಪಾಯಿ
ಹವಾಲ್ತಿ	21ನೇ ಮತ್ತು 60ನೇ ಅಂಕೆಗಳನ್ನು ನೋಡು
10. ಪಂಚಾಯಿತರ ಇಲ್ಲವೆ ಮಧ್ಯಸ್ಥರ (Award) ಎವರ್ಡ್ ಯಾನೆ ಇತ್ಯರ್ಥ (ಅಂದರೆ ಒಂದು ವ್ಯಾಜ್ಯ ನಡಿಯುತ್ತಿರುವಾಗ ಕೋರ್ಟಿನವರ ಹುಕುಮಿನ ಮೇಲಲ್ಲದೆ ಅನ್ಯಥಾ ಒಬ್ಬ ಪಂಚಾಯಿತದಾರನಿಗೆ ರಿಫೆರ್ ಮಾಡಲಾಗಿ ಆತನಿಂದ ಬರಹಮೂಲಕವಾಗಿ ಕೊಡೋಣಾಗುವ ಫೈಸಲು):—	
a) ಸದರಿ ಇತ್ಯರ್ಥಕ್ಕೆ ಕಾರಣವಾದ ಸೊತ್ತಿನ ಮೊಬಲಗು ೧೦೦೦ ರೂಪಾಯಿಗೆ ಮೀರದಿದ್ದರೆ	13ನೇ ಅಂಕೆಯಲ್ಲಿ ಹೇಳಿರುವಷ್ಟೆ ಠಸೆ
b) ಇತರ ಸಂಗತಿಯಲ್ಲಿ	೫ ರೂಪಾಯಿ
11. (Bill of Exchange or Promissory Note) ಬಿಲ್ ಒಫ್ ಎಕ್ಸ್‌ಚೇಂಜ್ ಯಾ ಪ್ರೊಮಿಸರಿ ನೋಟು (ಅಂದರೆ ವಟಾಯಿಸ ತಕ್ಕ ಹುಂಡಿ ಯಾ ವಾಯಿದೇ ಚೀಟು. ಇದರಲ್ಲಿ ಚೆಕ್ಕು, ಪತ್ರ, ಬೇಂಕನೋಟು, ಇಲ್ಲವೆ ಕರೆನ್ಸಿ ನೋಟು ಸೇರುವದಿಲ್ಲ):—	
a) ಕೇಳಿದಾಗಲೇ ಪಾವತಿ ಆಗ ತಕ್ಕದ್ದಾಗಿ, ಅದರ ಮೌಲ್ಯ ೨೦ ರೂಪಾಯಿಗೆ ಮೀರಿದರೆ	೧ ಆಣೆ

b) ಕೇಳಿದಾಗಲೀ ಅಲ್ಲದೆ ಅನ್ಯಥಾ ಪಾವತಿಯಾಗ ತಕ್ಕದ್ದಾಗಿ, ಬರೆದ ಯಾ ಕಂಡ ತಾರೀಕಿನಿಂದ ಒಂದು ಸಂವತ್ಸರಕ್ಕೆ ಮೀರದ ವಾಯಿದೆ ಇದ್ದರೆ:

	ಒಂದಕ್ಕೆ		ದುಬಾರೆಪ್ರತಿಗೆ		ತಿಬಾರೆಪ್ರತಿಗೆ	
	ರೂ.	ಆ.	ರೂ.	ಆ.	ರೂ.	ಆ.
ನಮೂದಿಸಿದ ರೂಪಾಯಿ ೨೦೦ಕ್ಕೆ ಮೀರದಿದ್ದರೆ	೦	೨	೦	೧	೦	೧
ರೂಪಾಯಿ ೨೦೦ಕ್ಕೆ ಮೀರಿ ೪೦೦ ,, ,,	೦	೪	೦	೨	೦	೨
,, ೪೦೦ ,, ೬೦೦ ,, ,,	೦	೬	೦	೩	೦	೨
,, ೬೦೦ ,, ೧೦೦೦ ,, ,,	೦	೧೦	೦	೫	೦	೪
,, ೧೦೦೦ ,, ೧೨೦೦ ,, ,,	೦	೧೨	೦	೬	೦	೪
,, ೧೨೦೦ ,, ೧೬೦೦ ,, ,,	೧	೦	೦	೮	೦	೬
,, ೧೬೦೦ ,, ೨೫೦೦ ,, ,,	೧	೮	೦	೧೨	೦	೮
೨೫೦೦ ರೂಪಾಯಿ ಮೇಲೆ ೧೦೦೦೦ ರೂ. ವರೆಗೆ ಪ್ರತಿ ರೂ. ೨೫೦೦ಕ್ಕೆ ಯಾ ಅದರ ಅಂಶಕ್ಕೆ	೧	೮	೦	೧೨	೦	೮
೧೦೦೦೦ ರೂಪಾಯಿ ಮೇಲೆ ೩೦೦೦೦ ರೂಪಾಯಿ ವರೆಗೆ ಪ್ರತಿ ರೂಪಾಯಿ ೫೦೦೦ಕ್ಕೆ ಯಾ ಅದರ ಅಂಶಕ್ಕೆ . . .	೩	೦	೧	೮	೧	೦
೩೦೦೦೦ ರೂಪಾಯಿ ಮೇಲೆ ಪ್ರತಿ ರೂಪಾಯಿ ೧೦೦೦೦ಕ್ಕೆ ಯಾ ಅದರ ಅಂಶಕ್ಕೆ	೬	೦	೩	೦	೨	೦

c) ಬರೆದ ತಾರೀಕಿನಿಂದ ಇಲ್ಲವೆ ಕಂಡ ತಾರೀಕಿನಿಂದ ಒಂದು ಸಂವತ್ಸರದ ಮೇಲೆ ಪಾವತಿ ಆಗ ತಕ್ಕದ್ದಾದರೆ— ೧೩ನೇ ಅಂಕೆಯಲ್ಲಿ ಹೇಳಿರುವಷ್ಟೆ ಧಸೆ

12. (Bill of Lading) ಬಿಲ್ ಒಫ್ ಲೇಡಿಂಗ್ ಎಂಬ ಸಾಮಾನು (ಜಹಜಿನ ಮೇಲೆ) ಭರಾವಣಿಚೀಟು . . . . ೪ ಆಣೆ

13. ಪತ್ರ (ಈ ಆಕ್ಟಿನಿಂದ ಅನ್ಯಥಾ ನಿಬಂಧಿಸಲ್ಪಡದೆ ಇರುವಂಥಾದ್ದು):—

ಇದರ ಮೊಬಲಗು ೧೦ ರೂಪಾಯಿಗೆ ಮೀರದಿದ್ದರೆ . . . ೨ ಆಣೆ
೧೦ ರೂಪಾಯಿಗೆ ಮೀರಿ ೫೦ ,, ,, ... ೪ ಆಣೆ
೫೦ ,, ,, ೧೦೦ ,, ,, ... ೮ ಆಣೆ
೧೦೦ ರೂ. ಮೇಲೆ ೧೦೦೦ ರೂ. ವರೆಗೆ ಪ್ರತಿ ರೂ. ೧೦೦ಕ್ಕೆ ಯಾ ಅದರಂಶಕ್ಕೆ ೮ ಆಣೆ
೧೦೦೦ ,, ,, ಪ್ರತಿ ,, ೫೦೦ಕ್ಕೆ ಯಾ ಅದರ ಅಂಶಕ್ಕೆ . . . . ೨ ರೂಪಾಯಿ ೮ ಆಣೆ

14. (Bond or Mortgage-Deed) ಪತ್ರ ಅಥವಾ ಅಡಮಾನ ಪತ್ರ (ಒಂದು ಕೆಲಸವನ್ನು ಸರಿಯಾಗಿ ನೆರವೇರಿಸ ತಕ್ಕ ಬಗ್ಗೆ ಅಥವಾ ತದ್ವಾರಾ ವಸೂಲಾದ ಹಣಕ್ಕೆ ಸಬಬು ಕೊಡ ತಕ್ಕ ಬಗ್ಗೆ ಜಾಮೀನಾಗಿ ಬರಕೊಡುವಂಥಾದ್ದು):—

a) ಪತ್ರದ ಮೊಬಲಗು ೧೦೦೦ ರೂಪಾಯಿಗೆ ಮೀರದಿದ್ದರೆ— 13ನೇ ಅಂಕೆಯಲ್ಲಿ ಹೇಳಿರುವಷ್ಟೆ ಧಸೆ
b) ಇತರ ಸಂಗತಿಯಲ್ಲಿ . . . . ೫ ರೂಪಾಯಿ

15. (Bottomry-Bond) ಬೊಟ್ಟಮ್ರಿ ಬೊಂಡ್ (ಅಂದರೆ ಸಮುದ್ರ ಪ್ರಯಾಣ ಮಾಡುವ ಒಂದು ಜಹಜಿನ ಧನಿಯು ತನ್ನ ಜಹಜನ್ನು ಕಾಪಾಡುವ ಬಗ್ಗೆ ಇಲ್ಲವೆ ಅದರ ಪಯಣ ಸಾಗಿಸುವ ಬಗ್ಗೆ ಸದರಿ ಜಹಜಿನ ಈಡಿನ ಮೇಲೆ ಸಾಲ ತಕ್ಕೊಂಡು ಬರಕೊಡುವ ದಸ್ತಾವೇಜು)— 13ನೇ ಅಂಕೆಯಲ್ಲಿ ಹೇಳಿರುವಷ್ಟೆ ಧಸೆ

16. (Certificate of Sale) ವಿಕ್ರಯದ ಸರ್ಟಿಫಿಕೇಟು (ಅಂದರೆ ಸಿವಿಲ್ ಕೋರ್ಟಿನವರಿಂದಾಗಲೀ ರೆವಿನ್ಯೂ ಕೋರ್ಟಿನವರಿಂದಾಗಲೀ ಬಹಿರಂಗವಾದ ಲಿಲಾಮಿನ ಮೂಲಕ ವಿಕ್ರಯಿಸೋಣಾದ ಯಾವ ಸೊತ್ತನ್ನಾಗಲೀ ಕೊಂಡುಕೊಂಡವನಿಗೆ ಕೊಡುವಂಥಾದ್ದು)—ಕ್ರಯದ ಹಣವಿಗೆ 21ನೇ ಅಂಕೆಯಲ್ಲಿ ಹೇಳಿರುವಷ್ಟೆ ಧಸೆ

17. (Certificate or other Document) ಸರ್ಟಿಫಿಕೇಟು ಯಾ ಇತರ ದಸ್ತಾವೇಜು (ಅಂದರೆ ಯಾವದೊಂದು ಸಂಘದಲ್ಲಿ ಹಿಸೆಗಾಗಲೀ ಮೂಲಧನಕ್ಕಾಗಲೀ ಒಬ್ಬನಿಗಿರುವ ಹಕ್ಕು ಯಾ ಬಾಧ್ಯತೆಯನ್ನು ಸೂಚಿಸುವಂಥಾದ್ದು)	೧ ಆಣೆ
19. ಇಪ್ಪತ್ತು ರೂಪಾಯಿಗೆ ಮೀರಿದ ಹಣಕ್ಕೆ (Cheque) ಚೆಕ್ಕ ಯಾನೆ ಹುಂಡಿ	೧ ಆಣೆ
20. (Composition-Deed) ಕಂಪೊಜಿಶನ್ ಡೀಡ್ (ಅಂದರೆ ಒಬ್ಬ ದೇಣೇದಾರನು ತನ್ನ ಲೇಣೇದಾರರ ಪ್ರಯೋಜನಾರ್ಥವಾಗಿ ತನ್ನ ಸೊತ್ತನ್ನು ಪರಭಾರೆ ಮಾಡುವದಕ್ಕೆ, ಅಥವಾ ಲೇಣೇದಾರರಿಗೆ ಸಲ್ಲ ತಕ್ಕ ಸಾಲಗಳಿಗೆ ಸರಾಸರೀ ಮೇಲೆ ಬೀಳುವ ಭಾಜ್ಯದ ಸೊತ್ತನ್ನು ಪಾವತಿ ಮಾಡುವದಕ್ಕೆ, ಅಥವಾ ಲೇಣೇದಾರರ ಪ್ರಯೋಜನಕ್ಕಾಗಿ ಮೇಲ್ವಿಚಾರಕರ ಕೈಕೆಳಗೆ ಯಾ ಅನುಜ್ಞಾಪತ್ರಿಕೆಗಳಿಗನುಗುಣವಾಗಿ ದೇಣೇದಾರನ ಕೆಲಸವನ್ನು ನಡಿಸುವದಕ್ಕೋಸ್ಕರ ದೇಣೇದಾರನಿಂದ ಬರಕೊಡೋಣಾಗುವ ದಸ್ತಾವೇಜು)	೧೦ ರೂಪಾಯಿ
21. (Conveyance) ಕೊನ್ವೆಯನ್ಸ್ ಯಾನೆ ಕ್ರಯಪತ್ರ (60ನೇ ಅಂಕೆಯಲ್ಲಿ ನಮೂದಿಸಿದ ಪರಭಾರೆ ಸಾಧನ ಅಲ್ಲದಂಥಾದ್ದು):—	
ಅದರಲ್ಲಿ ನಮೂದಿಸಿರುವ ಪ್ರತಿಫಲದ ಮೊಬಲಗು	
ರೂ. ೫೦ಕ್ಕೆ ಮೀರದಿದ್ದರೆ	೮ ಆಣೆ
,, ೫೦ ,, ಮೀರಿ ರೂ. ೧೦೦ಕ್ಕೆ ಮೀರದಿದ್ದರೆ	೧ ರೂಪಾಯಿ
,, ೧೦೦ ,, ,, ,, ೧೦೦೦ ವರೆಗೆ ಪ್ರತಿ ರೂ. ೧೦೦ಕ್ಕೆ ಯಾ ಅದರಂಶಕ್ಕೆ	೧ ರೂಪಾಯಿ
,, ೧೦೦೦ ,, ,, ,, ಪ್ರತಿ ೫೦೦ ರೂಪಾಯಿಗೆ ಯಾ ಅದರ ಅಂಶಕ್ಕೆ	೫ ರೂಪಾಯಿ
ಫ್ರೆಂಚರು ಆಯಾ ಶೀಮೆಗಳನ್ನು ಕಟ್ಟಿಕೊಳ್ಳ ಬೇಕೆಂದು ಬಹಳ ಸಾಹಸ ಮಾಡುತ್ತಾರೆ. ಅವರು ಅಫ್ರಿಕದ ಉತ್ತರದಲ್ಲಿರುವ ಪ್ರದೇಶವನ್ನೂ, ತುನಿಸ್ ಎಂಬ ಪಟ್ಟವನ್ನೂ ಪಾರ್ಶ್ವಾಂತರದ ಶೀಮೆ ಸಮೇತವಾಗ ತಮ್ಮ ಸ್ವಾಧೀನ ಮಾಡಿಕೊಂಡರು. ಅದಾದ ಮೇಲೆ ಅಫ್ರಿಕದ ಮೂಡಲ ಕರಾವಳಿಯಲ್ಲಿರುವ ಮದಗಸ್ಕರ ಎಂಬ ದ್ವೀಪದ ಮೇಲೆ ದೃಷ್ಟಿ ಇಟ್ಟು ಅದರಲ್ಲಿ ಆಯಾ ಪಟ್ಟಗಳನ್ನು ವಶ ಮಾಡಿಕೊಳ್ಳ ಬೇಕೆಂದು ಯುದ್ಧ ಹಡಗಗಳನ್ನು ಅಲ್ಲಿಗೆ ಕಳುಹಿಸಿದರು. ಫ್ರೆಂಚ ದಳವಾಯಿಯು ಆ ದ್ವೀಪದ ಬಡಗಲ ತೀರದಲ್ಲಿರುವ ಮಾಜುಂಗಾ ಬಂದರವನ್ನು ಹಲ್ಲಾ ಮಾಡಿ ಕರೆಗಿಳಿದು, ದೇಶೀಯ ಸೈನ್ಯವನ್ನು ಹಿಮ್ಮೆಟ್ಟಿಸಿ, ಊರಿನ ಭದ್ರತೆಯ ಬಗ್ಯೆ ಬಲವಾದ ಸೈನ್ಯವನ್ನಿರಿಸಿದ್ದಾನೆ. ಇದಾಗಿ ಫ್ರೆಂಚ ಸೇನಾಧಿಪತಿಯು ಮದಗಸ್ಕರ ಸರಕಾರದವರ ಹತ್ತರ ಆಯಾ ಶರ್ತಗಳನ್ನು ಕೇಳಿದ್ದಲ್ಲಿ, ಆ ಸರಕಾರದವರು ಅವನ್ನು ಮಾನ್ಯ ಮಾಡದೆ ಹೋದ್ದರಿಂದ ಫ್ರೆಂಚ ಸೈನ್ಯಾಧಿಪತಿಯು ಆ ದ್ವೀಪದ ದೊಡ್ಡ ಬಂದರಾಗಿರುವ ತಮತೇವ ಪಟ್ಟವನ್ನು ಹಲ್ಲಾ ಮಾಡಿ ಕೈವಶ ಮಾಡಿಕೊಂಡು, ಅದರ ನೆರೆಯಲ್ಲಿರುವ ನಾಲ್ಕು ಚಿಕ್ಕ ಚಿಕ್ಕ ಬಂದರಗಳನ್ನು ಧ್ವಂಸ ಮಾಡಿದನು. ತಮತೇವ ಎಂಬಲ್ಲಿಯೂ ಫ್ರೆಂಚರು ಬಲವಾದ ಠಾಣ್ಯವಿಟ್ಟಿದ್ದಾರೆ. ಅಲ್ಲಿಯ ಸಂಗತಿ ಹಾಗೆ ಇರುವಾಗ ಫ್ರೆಂಚರು ಕೊಚ್ಚಿನ ಚೀನ

ದಲ್ಲಿ ತೊಂಕ್ವಿನ ಅಥವಾ ಅನ್ನಮವೆಂಬುವ ಶೀಮೆಯಲ್ಲಿಯೂ ತಮ್ಮ ಅಧಿಕಾರವನ್ನು ವಿಸ್ತರಿಸುವ ಕೆಲಸದಲ್ಲಿದ್ದಾರೆ. ಆ ಪ್ರಾಂತ್ಯದಲ್ಲಿ ಅವರು ಮೊದಲೇ ಕಟ್ಟಿಕೊಂಡ ಕೆಲವು ಶೀಮೆ ಅವರಿಗುಂಟು. ಅನ್ನಮದವರಿಗೂ ಫ್ರೆಂಚರಿಗೂ ಮೊದಲನೇ ಸಾರಿ ಯುದ್ಧವಾದಾಗ ಫ್ರೆಂಚ ಸೈನ್ಯವು ಹಿಮ್ಮೆಟ್ಟಿತಾದರೂ, ಅವರು ಶೀಮೆಯಿಂದ ಹಡಗಗಳನ್ನೂ ಹೆಚ್ಚಿಗೆ ಸೈನ್ಯವನ್ನೂ ತರಿಸಿಕೊಂಡು ಯುದ್ಧ ಮುಂದರಿಸುತ್ತಾರೆ.

ಉತ್ತರ ಅಮೇರಿಕದಲ್ಲಿ ಹೊಳೆಗಳಿಗೆ ಅತಿರೇಕ ನೆರೆ ಬಂದು ಅನೇಕ ಊರುಗಳಲ್ಲಿ ಬಹಳ ಕೇಡಾಯಿತು. ಒಹ್ಯೆಯೋ ಎಂಬುವ ಹೊಳೆ ಹರಿಯುವ ಪ್ರದೇಶದಲ್ಲಿ ಕಷ್ಟವು ಹೆಚ್ಚಾಯಿತು. ಸಿನ್ಸಿನಾತಿ ಎಂಬ ಪಟ್ಟಣದ ಮೂರನೇ ಭಾಗ ಜಲಮಯವಾಗಿ ಸಾವಿರಾರು ಜನರು ಆಸ್ತಿಪಾಸ್ತಿ ಎಲ್ಲಾ ಕಳಕೊಂಡು ಛಳಿಯಿಂದಲೂ ಹಶಿವೆಯಿಂದಲೂ ಕಂಗಾಲಾದದ್ದಲ್ಲದೆ ಹೇರಳ ಜನರು ನೀರಿನಲ್ಲಿ ಸತ್ತು ಹೋದರು. ಜನರು ಭಯದಿಂದ ಒಂದು ಹೊಗೇಭಂಡಿ ಠಾಣ್ಯದ ಮನೆಯನ್ನು ಹೊಗಲು, ಮನೆ ಕುಸಿದು ಬಿದ್ದು ಎಲ್ಲರೂ ಜೀವಂತರಾಗಿ ಭೂಗರ್ಭದೊಳಗೆ ಪ್ರವೇಶಿಸಿದರು. ಅರ್ಧ ಲಕ್ಷ ಜನರು ಬಹು ಕಾಲ ಮನೆಗಳ ಉಪ್ಪರಿಗೆಗಳಲ್ಲಿಯೇ ಶೆರೆ ಬಿದ್ದವರಂತಾದರು. ಸ್ವಲ್ಪ ಕಡಿಮೆ ಒಂದು ಲಕ್ಷ ಕೂಲಿಯಾಳುಗಳು ಕೆಲಸವಿಲ್ಲದೆ ಅಲೆದಾಡುವವರಾದರು. ಪಾರ್ಶ್ವಾಂತರದಲ್ಲಿರುವ ಊರುಗಳಲ್ಲಿಯೂ ಹೆಚ್ಚು ಕಡಿಮೆಯಾಗಿ ಇದೇ ಅವಸ್ಥೆಯಾಯಿತು. ಅಮೇರಿಕ ಖಂಡವು ಯುರೋಪೀಯರಿಗೆ ಹಸ್ತಗತವಾಗಿ ಈ ವರೆಗೆ ಕಳದ ಮುನ್ನೂರು ವರ್ಷಗಳಿಂದ ಇಂಥಾ ಹಾವಳಿ ಅಲ್ಲಿ ಸಂಭವಿಸಲಿಲ್ಲವಂತೆ. ಇದೇ ಅವಸ್ಥೆ ಜರ್ಮನಿಯಲ್ಲಿಯೂ ಸಂಭವಿಸಿತೆಂದು ಮೊದಲು ಹೇಳಿದೆವು.

ಫಿಲಿಪ್ಪೀನವೆಂಬುವ ದ್ವೀಪಸಮುದಾಯದ ಮುಖ್ಯ ಪಟ್ಟಣವಾದ ಮನಿಲ್ಲದಲ್ಲಿ ಭಯಂಕರ ತುಫಾನು ಬೀಸುವಂಥಾದ್ದಾಗಿ, ಪಟ್ಟಣವನ್ನು ತಕ್ಕಷ್ಟು ಹಾಳು ಮಾಡಿ ಬಿಟ್ಟಿತು. ಅದು ನಾಲ್ಕು ತಾಸು ಮಾತ್ರ ಬೀಸಿದರೂ, ಮನೆಯ ಮಾಡುಗಳೆಲ್ಲಾ ಬಿದ್ದು ಕೇರಿಕೇರಿಗಳೇ ಧ್ವಂಸವಾದವು. ಘಾಳಿಯ ಹಿಂದಿನಿಂದಲೇ ಮಳೆಯೂ ಬಂದು, ಮತ್ತೂ ನಷ್ಟಕ್ಕೆ ಕಾರಣವಾಯಿತು. ಎರಡು ಮೂರು ವರ್ಷಗಳ ಹಿಂದೆ ಅಲ್ಲಿ ಭೂಕಂಪವಾಗಿ ಉಂಟಾದ ನಾಶಕ್ಕಿಂತಲೂ ಈ ಸರ್ತಿಯದು ಹೆಚ್ಚಿನದೆಂದು ಹೇಳುತ್ತಾರೆ.

ಶಾಂತಸಾಗರದಲ್ಲಿ ಫೀಜಿ ದ್ವೀಪಗಳೆಂದು ಅನ್ನಿಸಿಕೊಳ್ಳುವ ದ್ವೀಪಸಮುದಾಯವು ಉಂಟು. ಆ ದ್ವೀಪಗಳ ಅರಸನು ಫೆಬ್ರುವರಿ ತಿಂಗಳಿನಲ್ಲಿ ಮರಣ ಪಟ್ಟನು. ಆ ದ್ವೀಪಗಳ ನಿವಾಸಿಗಳು ಮೊದಲು ನರಭಕ್ಷಣೆ ಮಾಡುವವರಾಗಿದ್ದರು. ಈ ಕ್ರೂರ ವಾಡಿಕೆಯನ್ನು ಆ ಅರಸನೇ ನಿಲ್ಲಿಸಿ ಬಿಟ್ಟಿದ್ದನು. ಆ ಮೇಲೆ ಅವನು ಕ್ರೈಸ್ತಧರ್ಮವನ್ನನುಸರಿಸಿದ್ದಲ್ಲಿ ಅವನ ಉದಾಹರಣೆಯನ್ನನುಸರಿಸಿ ರಾಜ್ಯದ ಪ್ರಜೆಗಳು ಸಹ ಕ್ರೈಸ್ತರಾದರು. ಈಗ ಅಲ್ಲಿ ಎಲ್ಲರೂ ಕ್ರೈಸ್ತರೇ. ಕಡೆಗೆ ಅರಸನು ತನ್ನ ಆತ್ಮಸಂತೋಷದಿಂದಲೇ ರಾಜ್ಯಭಾರವನ್ನು ಇಂಗ್ಲಿಷ ಸರಕಾರಕ್ಕೆ ಒಪ್ಪಿಸಿ ಕೊಟ್ಟಿದ್ದನು. ಕೇವಲ ನೀಚರೂ ಕಾಡು ಜನರೂ ಆಗಿರುವವರನ್ನು ಸನ್ಮಾರ್ಗಕ್ಕೆ ತರುವ ಬಲ ಕ್ರೈಸ್ತಧರ್ಮದಲ್ಲಿ ಅಲ್ಲದೆ ಇತರ ಧರ್ಮದಲ್ಲಿ ಉಂಟೇ?

ದಯಾಳು ಗೃಹಸ್ಥನು.

ಒಬ್ಬ ಗೃಹಸ್ಥನು ಮಾರ್ಗದಲ್ಲಿ ಹೋಗುತ್ತಿರುವಾಗ ದಾರಿಯ ಬದಿಯಲ್ಲಿ ಒಬ್ಬನು ನಾನಾ ಹಣ್ಣು ಹಂಪಲು ಮಾರುತ್ತಿದ್ದನು. ಅದೇ ಮಾರ್ಗವಾಗಿ ಮೂರು ನಾಲ್ಕು ಹುಡಿಗಿಯರು, ಬಡವರ ಮಕ್ಕಳಾಗಿದ್ದಾಗ್ಯೂ, ಮಡಿ ಬಟ್ಟೆಗಳನ್ನು ಉಟ್ಟುಕೊಂಡು ಹೋಗುತ್ತಿದ್ದು, ಅವರೊಳಗೆ ಒಬ್ಬಳು—ಈ ಹಣ್ಣು ಎಷ್ಟೋ ಸೊಗಸೂ ಶೀಯೂ ಆಗಿದ್ದಾವೆ! ಒಂದೆರಡಾದರೂ ಶಿಕ್ಕಿದರೆ, ನಮ್ಮ ತಾಯಿಗೆ ಬಹಳ ಸಂತೋಷವಾಗುತ್ತಿತ್ತು, ಆದರೇನು ಮಾಡುವಾ? ಕೈಯಲ್ಲಿ ದುಡ್ಡಿಲ್ಲ, ಅಂದಳು. ಈ ಮಾತು ಗೃಹಸ್ಥನ ಕಿವಿಗೆ ಬೀಳುತ್ತಲೇ ಅವನು ತಿರುಗಿಕೊಂಡು ಆ ಹುಡಿಗಿಯರ ಮೇಲೆ ದೃಷ್ಟಿ ಇಡಲಾಗಿ, ಅವರು ಬಡವರಾಗಿದ್ದರೂ ಒಳ್ಳೇ ಕುಲದಲ್ಲಿ ಹುಟ್ಟಿದವರಾಗಿರ ಬೇಕೆಂದು ಅವರ ವಸ್ತ್ರದಿಂದಲೂ ಚರ್ಯೆಯಿಂದಲೂ ಗ್ರಹಿಸಿ, ಅವರನ್ನು—ಹುಡಿಗಿಯರೇ, ನಿಮಗೇನು ಬೇಕು? ಎಂದು ಕೇಳಿದನು. ಅವರೊಳಗೆ ಒಬ್ಬಳು ಮೆಲ್ಲಗೆ—ನಮಗೇನೂ ಬೇಡಾ, ಎಂದು ಹೇಳಲು, ಗೃಹಸ್ಥನು—ಈಗಲೇ ನೀವು ನಿಮ್ಮನಿಮ್ಮೊಳಗೆ ಏನೋ ಮಾತಾಡಿಕೊಂಡಿರಲ್ಲಾ? ಎಂದು ಮತ್ತೂ ಕೇಳಿದಾಗ, ಹುಡಿಗಿಯರು ಒಬ್ಬರನ್ನೊಬ್ಬರು ನೋಡಿಕೊಂಡು, ಅವನಿಗೆ ಉತ್ತರ ಕೊಡದೆ ಹಾಗೆಯೇ ಮುಂದೆ ನಡೆದರು. ಗೃಹಸ್ಥನೂ ಮುಂದೆ ಹೋಗುತ್ತಿರುವಾಗ ಒಂದು ಮಿಠಾಯಿ ಅಂಗಡಿ ಬಂತು. ಅಲ್ಲಿ ಒಳ್ಳೇ ಮಿಠಾಯಿಯೂ ಹಣ್ಣೂ ಇದ್ದವು. ಆಗ ಗೃಹಸ್ಥನು—ಹುಡಿಗಿಯರೇ, ಇತ್ತ ಬನ್ನಿ, ನಿಮಗೆ ಬೇಕಾದಷ್ಟು ಹಣ್ಣೂ ಮಿಠಾಯಿಯೂ ತಕ್ಕೊಳ್ಳಿ; ನಿಮ್ಮ ತಾಯಿಗೂ ಕೊಡಿರಿ ಎಂದು ಹೇಳಿ, ಅಂಗಡಿಯವನಿಗೆ—ಅಪ್ಪಾ, ಈ ಹುಡಿಗಿಯರು ಎಷ್ಟು ಬೇಡುತ್ತಾರೋ ಅಷ್ಟು ಕೊಡು, ರೊಖ್ಖ ನಾನು ಕೊಡುತ್ತೇನೆ, ಅಂದನು. ಗೃಹಸ್ಥನು ಮನಃಪೂರ್ವಕವಾಗಿ ಈ ಪ್ರಕಾರ ಅಂಗಡಿಯವನಿಗೆ ಹೇಳಿದ್ದರಿಂದ ಆ ಹುಡಿಗಿಯರು ಬೇಕಾದಷ್ಟು ತಕ್ಕೊಂಡು, ಆ ದಯಾಳು ಗೃಹಸ್ಥನನ್ನು ನೋಡಿ—ಅಯ್ಯಾ, ನಿಮ್ಮ ಹೆಸರೇನು? ನಮಗೆ ಹೇಳಬೇಕು, ಅಂದರು. ಗೃಹಸ್ಥನು—ಯಾಕೆ? ನನ್ನ ಹೆಸರು ತಿಳಿದು ನೀವು ಮಾಡ ತಕ್ಕದ್ದೇನದೆ? ಎಂದು ಕೇಳಲು, ಹುಡಿಗಿಯರು—ನಾವು ದೇವರ ಹತ್ತರ ಪ್ರಾರ್ಥನೆ ಮಾಡುವಾಗ, ನಿಮ್ಮನ್ನು ನೆನಸಿ ನಿಮ್ಮ ಒಳ್ಳೇತನಕ್ಕೋಸ್ಕರವೂ ಬೇಡಿಕೊಳ್ಳುತ್ತೇವೆ, ಎಂತ ಹೇಳಿದರು. ಗೃಹಸ್ಥನು ಅವರ ಉಪಕಾರಸ್ಮರಣೆಯ ಭಾವವನ್ನೂ ಭಕ್ತಿಯನ್ನೂ ತಿಳಿದು ಸಂತೋಷ ಪಟ್ಟು—ತಂಗಿಗಳೇ, ನೀವು ಮನೆಗೆ ಹೋಗಿ, ನನ್ನ ಹೆಸರು ಏನೂ ಅವಶ್ಯವಿಲ್ಲಾ ಎಂದು ಹೇಳಿದನು. ಇದನ್ನು ಕೇಳಿ ದೊಡ್ಡ ಹುಡಿಗಿ—ಖರೆ, ಅಯ್ಯಾ, ಅವಶ್ಯವಿಲ್ಲಾ, ನಿಮ್ಮಂಥಾ ದಯಾಳುಗಳನ್ನು ದೇವರು, ಹೆಸರು ಹೇಳದಿದ್ದರೂ, ಚಂದಾಗಿ ಬಲ್ಲನು, ಅಂದಳು.

ಶರೀರ ಚಿಕಿತ್ಸೆ.

(೧೮೮೫ನೇ ಇಸವಿಯ ಪಂಚಾಂಗದಲ್ಲಿರುವ ವಿವರದಿಂದ ಮುಂದೆ.)

ರೋಗಾದಿಗಳೂ ಇವುಗಳಲ್ಲಿ ಪ್ರಯೋಗವಾಗುವ ಊಷಧಗಳೂ, ಇವುಗಳನ್ನು ಕುರಿತು ನಿಘಂಟುರೂಪವಾದ ಸೂಚನಾಸಾರವು.

ಗರ್ಭಶೂಲೆ Painful Affections of Uterus.

ಈ ರೋಗವು ಗರ್ಭಕೋಶದಲ್ಲಿ ಸೂತಕದೋಷದಿಂದಾಗಲೀ ಇತರ ಕಾರಣದಿಂದಾಗಲೀ ಉಂಟಾಗುವ ಅಕ್ರಮದ ದೆಶೆಯಿಂದ ಬರುತ್ತದೆ. ಇದಕ್ಕೆ ಕರ್ಪೂರ (೨೧೦[1]), ಅಫೀನಿ (೨೦೮[2]), ಉಮ್ಮತ್ತದ ಒತ್ತಡ (ಪೋಲ್ಟಿಸ್) (೨೧೧), ಬಿಸೀ ನೀರಿನ ಶೇಕ (೨೧೨), ಇವುಗಳಲ್ಲಿ ಒಂದಾಗಲೀ ಎರಡಾಗಲೀ ಮಾಡಿದರೆ ಉಪಶಮನವಾಗುವದು. ಗರ್ಭಕೋಶ ಇಳಿಯುವಂಥಾದ್ದಕ್ಕೆ ಮಾಚೀಕಾಯಿಯ ಕಷಾಯದಿಂದಾಗಲೀ (೩೧೫), ಕರಿಜಲೀ ಮರದ ಚೆಕ್ಕೆಯ ಕಷಾಯದಿಂದಾಗಲೀ (೫೦[3]), ಫಟಿಕಾರದ ನೀರಿನಿಂದಾಗಲೀ (೭೮[4])

☞ ಮೇಲಿನ ವಿವರದಲ್ಲಿ ಔಷಧಗಳ ತೂಕವಾಗಲೀ, ಅಳತೆಯಾಗಲೀ ಇಂಗ್ಲಿಷ ಹೆಸರಿನಲ್ಲಿ ಕೊಟ್ಟಿರುವಲ್ಲಿ ಅವುಗಳ ಒಂದೊಂದು ಈ ಊರಿನ ಯಾವ ತೂಕಕ್ಕೂ ಅಳತೆಗೂ ಸರಿ ಬೀಳುತ್ತದೆಂಬದು ಮುಂದಿನ ಪಟ್ಟಿಯಿಂದ ಗೊತ್ತು ಮಾಡಿಕೊಳ್ಳ ಬಹುದು. ಔಷಧಗಳನ್ನು ತಯಾರು ಮಾಡುವಾಗ ಇದನ್ನು ಸರಿ ನೋಡಿಕೊಳ್ಳ ಬೇಕು.

ತೂಕ:

೧ ಗ್ರೇನ್ = ೧ ಗುಲಗಂಜಿ = ೧/೪ ಮಂಜೂಟಿತೂಕ
೩೦ ,, = ೧/೨ ಡ್ರಮ್ = ೭ ೧/೨ ,,
೪೫ ,, = ೩/೪ ,, = ೧ ಪಾವಲಿತೂಕ
೬೦ ,, = ೧ ,, = ೧೫ ,,
೯೦ ,, = ೧ ೧/೨ ,, = ೧/೨ ರೂ. ತೂಕ (ತೊಲಿ)
೧೮೦ ,, = ೩ ,, = ೧ ,, ,,
೧ ಔನ್ಸ್ = ೮ ,, = ಸುಮಾರು ೨ ೧/೨ ,,
೨ ,, = ೧೬ ,, = ,, ೫ ,,

ಅಳತೆ:

೧ ಮಿನಿಮ್ = ೧ ಸಾಧಾರಣ ತಟುಕು*
೬೦ ,, = ೧ ಡ್ರಮ್ = ೧ ಚಾಸೌಟು
೪ ಡ್ರಮ್ = ೧/೨ ಔನ್ಸ್ = ೧ ಮೇಜನಸೌಟು
೮ ,, = ೧ ,, = ೨ ,,
೧ ಔನ್ಸ್ = ಸುಮಾರು ೧/೪ ಕುಡುತೆ
೪ ,, = ,, ೧ ,, = ೧/೨ ಸೇರು
೨೦ ,, = ೧ ಪ್ಯಾಂಟ್ = ೧/೨ ಶೀಸೆ
೪೦ ,, = ೨ ,, = ೧ ,,

* ತಟುಕು ವಿದ್ಯಮಾನಾನುಸಾರವಾಗಿ ಚಿಕ್ಕದು ದೊಡ್ಡದು ಆಗುವದುಂಟು.

[1] ೧೮೮೫ನೇ ಇಸವಿಯ ಪಂಚಾಂಗದ ೫೮ನೇ ಪಾನಿನಲ್ಲಿ ತೀರಿದ ೨೦೯ನೇ ಅಂಕೆಯಿಂದ ಮುಂದೆ.

[2] ಅದೇ ಪಂಚಾಂಗದ ೫೮ನೇ ಪಾನಿನಲ್ಲಿ ನೋಡು. ದಪ್ಪವಾದ ಅಂಕೆಗಳಿಂದ ಸೂಚಿಸಿರುವ ಔಷಧವು ವಿಶೇಷ ಗುಣವುಳ್ಳದ್ದೆಂದು ಎಣಿಸ ಬೇಕು.

[3] ೧೮೭೬ನೇ ಇಸವಿಯ ಪಂಚಾಂಗದ ೫೪ನೇ ಪಾನಿನಲ್ಲಿ ನೋಡು.

[4] ೧೮೭೯ನೇ ಇಸವಿಯ ಪಂಚಾಂಗದ ೪೦ನೇ ಪಾನಿನಲ್ಲಿ ನೋಡು.

ದಯಾಳು ಗೃಹಸ್ಥನು.

ಒಬ್ಬ ಗೃಹಸ್ಥನು ಮಾರ್ಗದಲ್ಲಿ ಹೋಗುತ್ತಿರುವಾಗ ದಾರಿಯ ಬದಿಯಲ್ಲಿ ಒಬ್ಬನು ನಾನಾ ಹಣ್ಣು ಹಂಪಲು ಮಾರುತ್ತಿದ್ದನು. ಅದೇ ಮಾರ್ಗವಾಗಿ ಮೂರು ನಾಲ್ಕು ಹುಡಿಗಿಯರು, ಬಡವರ ಮಕ್ಕಳಾಗಿದ್ದಾಗ್ಯೂ, ಮಡಿ ಬಟ್ಟೆಗಳನ್ನು ಉಟ್ಟುಕೊಂಡು ಹೋಗುತ್ತಿದ್ದು, ಅವರೊಳಗೆ ಒಬ್ಬಳು— ಈ ಹಣ್ಣು ಎಷ್ಟೋ ಸೊಗಸೂ ಶೀಯೂ ಆಗಿದ್ದಾವೆ! ಒಂದೆರಡಾದರೂ ಶಿಕ್ಕಿದರೆ, ನಮ್ಮ ತಾಯಿಗೆ ಬಹಳ ಸಂತೋಷವಾಗುತ್ತಿತ್ತು, ಆದರೇನು ಮಾಡುವಾ? ಕೈಯಲ್ಲಿ ದುಡ್ಡಿಲ್ಲ, ಅಂದಳು. ಈ ಮಾತು ಗೃಹಸ್ಥನ ಕಿವಿಗೆ ಬೀಳುತ್ತಲೇ ಅವನು ತಿರುಗಿಕೊಂಡು ಆ ಹುಡಿಗಿಯರ ಮೇಲೆ ದೃಷ್ಟಿ ಇಡಲಾಗಿ, ಅವರು ಬಡವರಾಗಿದ್ದರೂ ಒಳ್ಳೇ ಕುಲದಲ್ಲಿ ಹುಟ್ಟಿದವರಾಗಿರ ಬೇಕೆಂದು ಅವರ ವಸ್ತ್ರದಿಂದಲೂ ಚರ್ಯೆಯಿಂದಲೂ ಗ್ರಹಿಸಿ, ಅವರನ್ನು—ಹುಡಿಗಿಯರೇ, ನಿಮಗೇನು ಬೇಕು? ಎಂದು ಕೇಳಿದನು. ಅವರೊಳಗೆ ಒಬ್ಬಳು ಮೆಲ್ಲಗೆ—ನಮಗೇನೂ ಬೇಡಾ, ಎಂದು ಹೇಳಲು, ಗೃಹಸ್ಥನು— ಈಗಲೇ ನೀವು ನಿಮ್ಮನಿಮ್ಮೊಳಗೆ ಏನೋ ಮಾತಾಡಿಕೊಂಡಿರಲ್ಲಾ? ಎಂದು ಮತ್ತೂ ಕೇಳಿದಾಗ, ಹುಡಿಗಿಯರು ಒಬ್ಬರನ್ನೊಬ್ಬರು ನೋಡಿಕೊಂಡು, ಅವನಿಗೆ ಉತ್ತರ ಕೊಡದೆ ಹಾಗೆಯೇ ಮುಂದೆ ನಡೆದರು. ಗೃಹಸ್ಥನೂ ಮುಂದೆ ಹೋಗುತ್ತಿರುವಾಗ ಒಂದು ಮಿಠಾಯಿ ಅಂಗಡಿ ಬಂತು. ಅಲ್ಲಿ ಒಳ್ಳೇ ಮಿಠಾಯಿಯೂ ಹಣ್ಣೂ ಇದ್ದವು. ಆಗ ಗೃಹಸ್ಥನು— ಹುಡಿಗಿಯರೇ, ಇತ್ತ ಬನ್ನಿ, ನಿಮಗೆ ಬೇಕಾದಷ್ಟು ಹಣ್ಣೂ ಮಿಠಾಯಿಯೂ ತಕ್ಕೊಳ್ಳಿ; ನಿಮ್ಮ ತಾಯಿಗೂ ಕೊಡಿರಿ ಎಂದು ಹೇಳಿ, ಅಂಗಡಿಯವನಿಗೆ— ಅಪ್ಪಾ, ಈ ಹುಡಿಗಿಯರು ಎಷ್ಟು ಬೇಡುತ್ತಾರೋ ಅಷ್ಟು ಕೊಡು, ರೊಕ್ಕ ನಾನು ಕೊಡುತ್ತೇನೆ, ಅಂದನು. ಗೃಹಸ್ಥನು ಮನಃಪೂರ್ವಕವಾಗಿ ಈ ಪ್ರಕಾರ ಅಂಗಡಿಯವನಿಗೆ ಹೇಳಿದ್ದರಿಂದ ಆ ಹುಡಿಗಿಯರು ಬೇಕಾದಷ್ಟು ತಕ್ಕೊಂಡು, ಆ ದಯಾಳು ಗೃಹಸ್ಥನನ್ನು ನೋಡಿ—ಅಯ್ಯಾ, ನಿಮ್ಮ ಹೆಸರೇನು? ನಮಗೆ ಹೇಳಬೇಕು, ಅಂದರು. ಗೃಹಸ್ಥನು— ಯಾಕೆ? ನನ್ನ ಹೆಸರು ತಿಳಿದು ನೀವು ಮಾಡ ತಕ್ಕದ್ದೇನದೆ? ಎಂದು ಕೇಳಲು, ಹುಡಿಗಿಯರು— ನಾವು ದೇವರ ಹತ್ತರ ಪ್ರಾರ್ಥನೆ ಮಾಡುವಾಗ, ನಿಮ್ಮನ್ನು ನೆನಸಿ ನಿಮ್ಮ ಒಳ್ಳೇತನಕ್ಕೋಸ್ಕರವೂ ಬೇಡಿಕೊಳ್ಳುತ್ತೇವೆ, ಎಂತ ಹೇಳಿದರು. ಗೃಹಸ್ಥನು ಅವರ ಉಪಕಾರಸ್ಮರಣೆಯ ಭಾವವನ್ನೂ ಭಕ್ತಿಯನ್ನೂ ತಿಳಿದು ಸಂತೋಷ ಪಟ್ಟು— ತಂಗಿಗಳೇ, ನೀವು ಮನೆಗೆ ಹೋಗಿ, ನನ್ನ ಹೆಸರು ಏನೂ ಅವಶ್ಯವಿಲ್ಲಾ ಎಂದು ಹೇಳಿದನು. ಇದನ್ನು ಕೇಳಿ ದೊಡ್ಡ ಹುಡಿಗಿ—ಖರೆ, ಅಯ್ಯಾ, ಅವಶ್ಯವಿಲ್ಲಾ, ನಿಮ್ಮಂಥಾ ದಯಾಳುಗಳನ್ನು ದೇವರು, ಹೆಸರು ಹೇಳದಿದ್ದರೂ, ಚಂದಾಗಿ ಬಲ್ಲನು, ಅಂದಳು.

ಶರೀರಚಿಕಿತ್ಸೆ.

(೧೮೮೩ನೇ ಇಸವಿಯ ಪಂಚಾಂಗದಲ್ಲಿರುವ ವಿವರದಿಂದ ಮುಂದೆ.)

ರೋಗಾದಿಗಳೂ ಇವುಗಳಲ್ಲಿ ಪ್ರಯೋಗವಾಗುವ ಊರೌಷಧಗಳೂ, ಇವುಗಳನ್ನು ಕುರಿತು ನಿಘಂಟುರೂಪವಾದ ಸೂಚನಾಸಾರವು.

ಗರ್ಭಶೂಲೆ Painful Affections of Uterus.

ಈ ರೋಗವು ಗರ್ಭಕೋಶದಲ್ಲಿ ಸೂತಕದೋಷದಿಂದಾಗಲೀ ಇತರ ಕಾರಣದಿಂದಾಗಲೀ ಉಂಟಾಗುವ ಆಕ್ರಮದ ದೆಸೆಯಿಂದ ಬರುತ್ತದೆ. ಇದಕ್ಕೆ ಕರ್ಪೂರ (೨೧೦[1]), ಅಫೀನಿ (೨೦೮[2]), ಉಮ್ಮತ್ತದ ಒತ್ತಡ (ಪೋಲ್ಟಿಸ್) (೨೧೧), ಬಿಸೀ ನೀರಿನ ಶೇಕ (೨೧೨), ಇವುಗಳಲ್ಲಿ ಒಂದಾಗಲೀ ಎರಡಾಗಲೀ ಮಾಡಿದರೆ ಉಪಶಮನವಾಗುವದು. ಗರ್ಭಕೋಶ ಇಳಿಯುವಂಥಾದ್ದಕ್ಕೆ ಮಾಚೀಕಾಯಿಯ ಕಷಾಯದಿಂದಾಗಲೀ (೨೧೩), ಕರಿಜಲೀ ಮರದ ಚೆಕ್ಕೆಯ ಕಷಾಯದಿಂದಾಗಲೀ (೩೦[3]), ಘಟಿಕಾರದ ನೀರಿನಿಂದಾಗಲೀ (೭೮[4])

☞ ಮೇಲಿನ ವಿವರದಲ್ಲಿ ಔಷಧಗಳ ತೂಕವಾಗಲೀ, ಅಳತೆಯಾಗಲೀ ಇಂಗ್ಲಿಷ ಹೆಸರಿನಲ್ಲಿ ಕೊಟ್ಟಿರುವಲ್ಲಿ ಅವುಗಳ ಒಂದೊಂದು ಈ ಊರಿನ ಯಾವ ತೂಕಕ್ಕೂ ಅಳತೆಗೂ ಸರಿ ಬೀಳುತ್ತದೆಂಬದು ಮುಂದಿನ ಪಟ್ಟಿಯಿಂದ ಗೊತ್ತು ಮಾಡಿಕೊಳ್ಳ ಬಹುದು. ಔಷಧಗಳನ್ನು ತಯಾರು ಮಾಡುವಾಗ ಇದನ್ನು ಸರಿ ನೋಡಿಕೊಳ್ಳ ಬೇಕು.

ತೂಕ:

೧ಗ್ರೇನ್	=೧ಗುಲ್ಗುಂಜಿ	=¼ ಮಂಜೂಟಿತೂಕ
೩೦ ,,	=½ ಡ್ರಮ್	=೭½ ,,
೪೫ ,,	=¾ ,,	=೧ ಪಾವಲಿತೂಕ
೬೦ ,,	=೧ ,,	=೧೫ ,,
೯೦ ,,	=೧½ ,,	=½ ರೂ. ತೂಕ (ತೊಲೆ)
೧೮೦ ,,	=೩ ,,	=೧ ,, ,,
೧ಔನ್ಸ್	=೮ ,,	=ಸುಮಾರು೨⅔ ,,
೨ ,,	=೧೬ ,,	= ,, ೫ ,,

ಅಳತೆ:

೧ ಮಿನಿಮ್	=೧ ಸಾಧಾರಣ ತಟುಕು*	
೬೦ ,,	=೧ ಡ್ರಮ್	=೧ ಚಾಸೌಟು
೪ ಡ್ರಮ್	=½ ಔನ್ಸ್	=೧ ಮೇಜಸೌಟು
೮ ,,	=೧ ,,	=೨ ,,
೧ ಔನ್ಸ್	=ಸುಮಾರು ¼ ಕುಡುತೆ	
೪ ,,	= ,, ೧ ,,	=½ ಸೇರು
೨೦ ,,	=೧ಪ್ಯಾಂಟ್	=½ ಶೀಸೆ
೪೦ ,,	=೨ ,,	=೧ ,,

* ತಟುಕು ವಿದ್ಯಮಾನಾನುಸಾರವಾಗಿ ಚಿಕ್ಕದು ದೊಡ್ಡದು ಆಗುವದುಂಟು.

[1] ೧೮೮೩ನೇ ಇಸವಿಯ ಪಂಚಾಂಗದ ೫೮ನೇ ಪಾನಿನಲ್ಲಿ ತೀರಿದ ೨೦೯ನೇ ಅಂಕೆಯಿಂದ ಮುಂದೆ.

[2] ಅದೇ ಪಂಚಾಂಗದ ೫೮ನೇ ಪಾನಿನಲ್ಲಿ ನೋಡು. ದಪ್ಪವಾದ ಅಂಕೆಗಳಿಂದ ಸೂಚಿಸಿರುವ ಔಷಧವು ವಿಶೇಷ ಗುಣವುಳ್ಳದ್ದೆಂದು ಎಣಿಸ ಬೇಕು.

[3] ೧೮೭೬ನೇ ಇಸವಿಯ ಪಂಚಾಂಗದ ೩೪ನೇ ಪಾನಿನಲ್ಲಿ ನೋಡು.

[4] ೧೮೭೯ನೇ ಇಸವಿಯ ಪಂಚಾಂಗದ ೪೦ನೇ ಪಾನಿನಲ್ಲಿ ನೋಡು.

ಗರ್ಭಕೋಶಕ್ಕೆ ಪಿಚಕಾರಿ ಹೊಡಿಯುವದರಿಂದ ಪ್ರಯೋಜನವಾಗುವದು. ಗರ್ಭಕೋಶದಿಂದ ನೆತ್ತರ ಹರಿಯುವಂಥಾದ್ದಕ್ಕೆ ೧೮೭೭ನೇ ಇಸವಿಯ ಪಂಚಾಂಗದ ೨೦—೨೨ನೇ ಪಾನುಗಳಲ್ಲಿ ಹೇಳಿರುವ ಚಿಕಿತ್ಸೆ ಮಾಡ ತಕ್ಕದ್ದು. ಮತ್ತು ಗರ್ಭಕೋಶ ಸಂಬಂಧವಾದ ಸೂತಕದ ಅಕ್ರಮಕ್ಕೆ ೧೮೭೬ನೇ ಇಸವಿಯ ಪಂಚಾಂಗದ ೨೪ನೇ ಪಾನಿನಲ್ಲಿ ಸಹಾ ಓದಿಕೊಳ್ಳುವದು.

೨೧೦. ಗರ್ಭಕೋಶದ ವೇದನೆಗಳಲ್ಲಿ ೬—೮ ಗ್ರೇನ್ ಕರ್ಪೂರ ತೆಗದು ಗುಳಿಗೆ ಮಾಡಿ ಹೊಟ್ಟೆಗೆ ಕೊಟ್ಟಲ್ಲಿ ಬಹಳ ಪ್ರಯೋಜನವಾಗುವದು. ಅದಲ್ಲದೆ (೧೧೯ನೇ[1] ಅಂಕೆಯಲ್ಲಿ ಹೇಳಿದ) ಕರ್ಪೂರದ ತೈಲ ಸಹಾ ಕಿರಿಹೊಟ್ಟೆಗೆ ಹಾಕಿ ತಿಕ್ಕ ಬಹುದು.

೨೧೧. ಉಮ್ಮತ್ತದ ಲೇಪವಾಗಲೀ ಒತ್ತಡವಾಗಲೀ (೬ನೇ, ೧೨೭ನೇ[2] ಅಂಕೆಗಳಲ್ಲಿ ಹೇಳಿದಂತೆ) ಕಿರಿಹೊಟ್ಟೆಗೆ ಹಚ್ಚಿ ತಿಕ್ಕಿದ್ದಾದರೆ, ಗುಣಕರವಾಗುವದು.

೨೧೨. ಮೂತ್ರಾಶಯ, ಗರ್ಭಕೋಶ ಮುಂತಾದ್ದಕ್ಕೆ ಸಂಬಂಧವಾದ ವೇದನೆಗಳಲ್ಲಿಯೂ, ದುಂದುತನದ ದೆಶೆಯಿಂದ ಉಂಟಾಗುವ ಮೂತ್ರಗಟ್ಟಿನಲ್ಲಿಯೂ, ಕಿರಿಹೊಟ್ಟೆಗೆ ಬಿಸಿ ನೀರಿನ ಶೇಕ ಕೊಡುವದು ಗುಣಕರವೂ ಶಮನಕರವೂ ಆಗಿದೆ.

೨೧೩. ಗರ್ಭಕೋಶದ ಇಳಿಯೋಣಕ್ಕೆ ಮಾಚೀಕಾಯಿ ಕಷಾಯ(೭೬[4][3])ದಿಂದ ಗರ್ಭಕೋಶಕ್ಕೆ ಪಿಚಕಾರಿ ಹೊಡಿಯ ಬಹುದು, ಇಲ್ಲವೆ ಕಿರಿಹೊಟ್ಟೆಗೆ ಅದರ ಶೇಕ ಕೊಡ ಬಹುದು.

ಗರ್ಭಾತಿಸಾರ Vaginal Discharges.

ಗರ್ಭಕೋಶದಿಂದ ಮುಟ್ಟಾದ ಸಮಯದಲ್ಲಿ ಆಗಲೀ ಅಸ್ಥಿಸ್ರಾವದಿಂದಾಗಲೀ ಹೋಗುವದಲ್ಲದೆ ಬೇರೆ ವಿಧವಾಗಿ ಮೇಹ ಹೋಗುವದುಂಟು. ಈ ಪ್ರಕಾರ ಹೋಗುವದು ಹುಡಿಗಿಯರಿಗಾಗಲೀ, ಪ್ರಾಯ ಕಳದ ಸ್ತ್ರೀಯರಿಗಾಗಲೀ ಅಸಾಧಾರಣವಲ್ಲ. ಈ ಮೇಹವು ಜಿಗುಟುಳ್ಳ ಬರೇ ನೀರಿನಂತಾಗಲೀ ಬಿಳೀ ತರವಾಗಿ ಆಗಲೀ ಚಿಕ್ಕ ಪರಿಮಾಣದ ಅಣುಗಳಿಂದ ಮಿಶ್ರವಾಗಿ ಆಗಲೀ ಹೋಗುವದುಂಟು.

ಚಿಕಿತ್ಸೆ: (೧೮೭೯ನೇ ಇಸವಿಯ ಪಂಚಾಂಗದ ೪೩ನೇ, ೪೪ನೇ ಪಾನುಗಳಲ್ಲಿ ಅಸ್ಥಿಸ್ರಾವಕ್ಕೆ ಹೇಳಿರುವ ಚಿಕಿತ್ಸೆ ಸಹಾ ಸರಿ ನೋಡುವದು). ಗಂಧಮೋಣಸಿನ ಚೂರ್ಣ (೮೩[4]), ಗರ್ಜನ್ ತೈಲವೆಂಬ ಮರದ ಎಣ್ಣೆ (೮೫[4]) ಸಹಾ ಹೊಟ್ಟೆಯಲ್ಲಿ ಕೊಟ್ಟು, ಸುಣ್ಣದ ತಿಳೀ ನೀರು (೯೦[4]), ಘಟಿಕಾರದ ನೀರು (೮೮[4]), ಕರಿಜಲೀ ಇಲ್ಲವೆ ಶಮೀಮರದ ಚೆಕ್ಕೆಯ (೮೭[4]), ಇಲ್ಲವೆ ಮಾಚೀಕಾಯಿಯ (೮೯[4]), ಇಲ್ಲವೆ ದಾಳಿಂಬದ ಶಿಪ್ಪೆಯ ಕಷಾಯ(೨೧೪)ದಿಂದ

---

[1] ೧೮೮೦ನೇ ಇಸವಿಯ ಪಂಚಾಂಗದ ೪೬ನೇ ಪಾನಿನಲ್ಲಿ ನೋಡು.

[2] ೬ನೇ ಅಂಕೆಯನ್ನು ೧೮೭೬ನೇ ಇಸವಿಯ ಪಂಚಾಂಗದ ೨೫ನೇ ಪಾನಿನಲ್ಲಿಯೂ, ೧೨೭ನೇ ಅಂಕೆಯನ್ನು ೧೮೮೧ನೇ ಇಸವಿಯ ಪಂಚಾಂಗದ ೪೮ನೇ ಪಾನಿನಲ್ಲಿಯೂ ನೋಡು.

[3] ೧೮೭೯ನೇ ಇಸವಿಯ ಪಂಚಾಂಗದ ೬೯ನೇ ಪಾನಿನಲ್ಲಿ ನೋಡು; ಮತ್ತು ೧೮೭೬ನೇ ಇಸವಿಯ ಪಂಚಾಂಗದ ೬೫ನೇ ಪಾನಿನ ೨ನೇ ಟಿಪ್ಪಣಿಯನ್ನು ಸಹಾ ಸರಿ ನೋಡು.

[4] ೧೮೭೯ನೇ ಇಸವಿಯ ಪಂಚಾಂಗದ ೪೩, ೪೪ನೇ ಪಾನುಗಳಲ್ಲಿ ನೋಡು.

ಗರ್ಭಕೋಶದೊಳಗೆ ಪಿಚಕಾರಿ ಹೊಡಿಯುವದು. ಹೆಣ್ಣು ಮಕ್ಕಳಿಗೆ ಇಂಥಾ ಗರ್ಭಾತಿಸಾರ ಉಂಟಾದರೆ, ಮೇಲೆ ಹೇಳಿದ ಸುಣ್ಣದ ತಿಳೀನೀರು (೯೦) ಪ್ರಯೋಗಿಸಿ, ಹೊಟ್ಟೆಯೊಳಗೆ ವಿಶಾನಿನ ಎಣ್ಣೆ (೧೨೬[1]) ಕೊಡುವದರಿಂದ ಗುಣಾಂಶಕ್ಕೆ ಅನುಕೂಲವಾದೀತು.

೨೧೪. ಗರ್ಭಕೋಶದಿಂದ ಹರಿಯೋಣಕ್ಕೆ ತಕ್ಕಷ್ಟು ಒಗರುಳ್ಳ ದಾಳಿಂಬದ ಶಿಪ್ಪೆಯ ಕಷಾಯ (೩೫[2]) ೧ ಪ್ಯಾಂಟು ತೆಗದು, ಅದಕ್ಕೆ ೧ ಡ್ರಮ್ ಫಟಿಕಾರದ ಪುಡಿ ಹಾಕಿ, ಅದರಿಂದ ಗರ್ಭಕೋಶಕ್ಕೆ ಪಿಚಕಾರಿ ಹೊಡಿಯುವದು. ಗಂಟ್ಲುನೋವು ಇರುವಂಥವರು ಸಹ ಈ ಕಷಾಯದಿಂದ ಬಾಯಿ ಮುಕ್ಕಳಿಸ ಬಹುದು.

ಗರ್ಭಾಶಯವ್ಯಾಧಿ Affections of the Womb.

ಇದಕ್ಕೆ ಮೇಲೆ “ಗರ್ಭಶೂಲೆ”, “ಗರ್ಭಾತಿಸಾರ” ಇವುಗಳಿಗೆ ಹೇಳಿದ ಚಿಕಿತ್ಸೆಯನ್ನು ಓದಿ ನೋಡು.

ಗಿನೀಯ ಹುಳ (ನಾರುಹುಣ್ಣು) Guinea Worm.

ಇದು ಹಿಂದುಸ್ಥಾನ ಮುಂತಾದ ಉಷ್ಣವಲಯದಲ್ಲಿ ವಾಸಿಸುವ ಮನುಷ್ಯರ ದೇಹದಲ್ಲಿ ಹುಟ್ಟಿ ಬೆಳಿಯುವ ಹುಳವಾಗಿರುತ್ತದೆ. ಇದು ದೇಹದ ಬೇರೆ ಬೇರೆ ಭಾಗಗಳಲ್ಲಿ ಉಂಟಾಗುವದಾದಾಗ್ಯೂ, ದೇಹದೊಳಗಿನಿಂದ ಚರ್ಮದ ಕಡೆಗೆ ಬರುತ್ತಾ ಮೇಲ್ಗಡೆಯಿಂದ ಕೆಳಗಡೆಗೆ ದಾರಿ ಮಾಡಿ, ಬಹುಶಾ ಕಾಲುಗಳಲ್ಲಿ ಆಗಲೀ ಪಾದಗಳಲ್ಲಿ ಆಗಲೀ ಹೊರ ಬರುವದು. ಇದರ ಲಕ್ಷಣಗಳು ಯಾವವಂದರೆ: ಆ ಹುಳವಿರುವ ಜಾಗದಲ್ಲಿ ಚುಚ್ಚುವದು, ತುರಿಯುಳ್ಳ ಬಿಸುಪು ಕೆಲವು ವಾರಗಳ ವರೆಗೆ ತೋರುವದು. ಆ ಮೇಲೆ ಅಲ್ಲಿ ಒಂದು ಬೊಕ್ಕೆ ಉಂಟಾಗಿ, ಬೇಗನೇ ದೊಡ್ಡದಾಗಿ ಬರುವದು; ಅದನ್ನು ಒಡದರೆ, ಅದರೊಳಗಿಂದ ನೀರು ಬರುವದು; ಒಡಿಯದೆ ಬಿಟ್ಟರೆ, ಭಯಂಕರ ಹುಣ್ಣಾಗಿ, ಅದರಲ್ಲಿ ದಪ್ಪವಾದ ಕೆಟ್ಟ ರಕ್ತದ ಕೀವು ಉಂಟಾಗುವದು; ಇದಾದ ಕೆಲವು ವಾರಗಳ ತರುವಾಯ ಆ ಹುಳವು ಮೇಲೆ ತೋರುವದು. ಈ ಹುಳಕ್ಕೆ ನೀರು ಬಹಳ ಹಿತವಾಗಿರುವದರಿಂದ ಅಂಥಾ ಹುಣ್ಣಿನ ಮೇಲೆ ನೀರು ಬಿಡುತ್ತಾ ಇರಲಾಗಿ ಆ ಹುಳದ ಮರಿಗಳುಳ್ಳ ಚೀಲವು ಮೇಲೆ ಬಂದು ಹೇರಳ ಮರಿಗಳನ್ನು ಕಾರುವದು. ಮರಿಗಳೆಲ್ಲಾ ಹೊರಬೀಳಲಾಗಿ ಈ ಹುಳವು ತಲೆ ಎತ್ತಿ ಮೇಲೆ ತೋರುವದು. ಈ ಪ್ರಕಾರ ಅದರ ತಲೆ ಹಿಡಿಯಲಿಕ್ಕೆ ಶಿಕ್ಕುತ್ತಲೇ ಮೆಲ್ಲನೆ ಹೊರಗೆ ಎಳದು, ಒಂದು ಅರಿವೇ ಬತ್ತಿಗಾಗಲೀ, ಒಂದು ಕೋಲಿಗಾಗಲೀ ದಿನಾಲು ಸ್ವಲ್ಪ ಸ್ವಲ್ಪ ಸುತ್ತುತ್ತಾ ಕ್ರಮೇಣ ಹೊರಗೆ ತೆಗಿಯಬೇಕು. ಆ ಮೇಲೆ ಆ ಹುಣ್ಣಿಗೆ ಒದ್ದೆ ವಸ್ತ್ರ (೧೧೬[3]) ಕಟ್ಟುವದು. ಬಹಳ ನೋವು ಇದ್ದರೆ, ಉಮ್ಮತ್ತದ ಪೋಲ್ಟಿಸು (೬[4]) ಹಚ್ಚಿದ್ದಲ್ಲಿ ಬೇಗ ಹುಳ ಹೊರಡಿಸುವದಕ್ಕೂ ನೋವು

---

[1] ೧೮೮೧ನೇ ಇಸವಿಯ ಪಂಚಾಂಗದ ೪೩ನೇ ಪಾನಿನಲ್ಲಿ ನೋಡು.

[2] ೧೮೬೬ನೇ ಇಸವಿಯ ಪಂಚಾಂಗದ ೬೫ನೇ ಪಾನಿನಲ್ಲಿ ನೋಡು. ಪಿಚಕಾರಿ ಹೊಡಿಯುವದಕ್ಕೆ ಮಾಡುವಂಥಾ ದಾಳಿಂಬದ ಶಿಪ್ಪೇ ಕಷಾಯಕ್ಕೆ ಲವಂಗವಾಗಲೀ, ದಾಲ್ಚೀನಿಯಾಗಲೀ ಕೂಡಿಸ ಬಾರದು.

[3] ೧೮೮೦ನೇ ಇಸವಿಯ ಪಂಚಾಂಗದ ೪೪ನೇ ಪಾನಿನಲ್ಲಿ ನೋಡು.

[4] ೧೮೬೬ನೇ ಇಸವಿಯ ಪಂಚಾಂಗದ ೨೫ನೇ ಪಾನಿನಲ್ಲಿ ನೋಡು.

ಶಮಿಸುವದಕ್ಕೂ ಸಹಾಯವಾಗುತ್ತದೆ. ಪ್ರತಿ ದಿವಸವೂ ಆ ಹುಣ್ಣಾದ ಅಂಗವನ್ನು ನೀರಿನ ಪ್ರವಾಹದಲ್ಲಿ ಆಗಲೀ ನೀರು ತುಂಬಿದ ಒಂದು ಗಡಿಗೆಯಲ್ಲಿ ಆಗಲೀ ಇಟ್ಟದ್ದಾದರೆ, ಹುಳ ಹೊರಗೆಳಿಯುವದಕ್ಕೆ ಸುಲಭವಾಗುತ್ತದೆ. ಆದರೆ ಎಳಿಯುವಾಗ ಅದು ತುಂಡಾಗದಂತೆ ಬಹಳ ಜಾಗ್ರತೆ ಇರಬೇಕಷ್ಟೆ; ಯಾಕಂದರೆ ಅದು ತುಂಡಾಗಿ ಹೋದರೆ, ಬಹಳ ಉರಿತವೂ ಬೀಗೂ ಉಂಟಾಗಿ, ಹುಣ್ಣು ಇನ್ನೂ ಬೆಳದು, ಕಡೆಗೆ ವಾಸಿ ಆಗಲಿಕ್ಕೆ ಪ್ರಯಾಸವಾದೀತು. ಆದರೆ ಹುಳವು ಪೂರ್ಣವಾಗಿ ಹೊರ ತೆಗದ ಮೇಲೆ ಇರುವ ಹುಣ್ಣು, ಅದಕ್ಕೆ ಹೇಳಿದ ಸಾಧಾರಣ ಚಿಕಿತ್ಸೆಯಿಂದ ವಾಶಿಯಾದೀತು. (ಬಾವುಗಳಿಗೆ ಹೇಳಿದ ಚಿಕಿತ್ಸೆಯನ್ನು ಸಹ ಸರಿ ನೋಡು.)

ಗುಂಡಿಗೆ, ಅನ್ನಕೋಶಾದಿಗಳಿಂದ ನೆತ್ತರ ಹರಿಯೋಣ
Hœmorrhage from the Stomach, Lungs and other Internal Organs.

೧೮೭೭ನೇ ಇಸವಿಯ ಪಂಚಾಂಗದ ೨೦—೨೨ನೇ ಪಾನುಗಳಲ್ಲಿ ನೋಡು.

ಗುಲ್ಮವ್ಯಾಧಿ Enlargement of Spleen.

೧೮೮೦ನೇ ಇಸವಿಯ ಪಂಚಾಂಗದ ೩೭—೩೮ನೇ ಪಾನುಗಳಲ್ಲಿ ನೋಡು.

ಗೂರಲು (ನೇವಸ, ಉಬ್ಬಸ) Asthma.

೧೮೮೦ನೇ ಇಸವಿಯ ಪಂಚಾಂಗದ ೪೦—೪೩ನೇ ಪಾನುಗಳಲ್ಲಿ ನೋಡು.

ಘಾಯಗಳು Wounds.

ಘಾಯ ಕೆಲವು ದಿನಗಳ ತರುವಾಯ ಹುಣ್ಣಾದರೆ, ಅದಕ್ಕೆ ಹುಣ್ಣಿಗೆ ಹೇಳಿರುವ ಚಿಕಿತ್ಸೆಯನ್ನುಮಾಡ ಬೇಕು. ಘಾಯದಿಂದ ರಕ್ತ ಸೋರುವದಕ್ಕೆ ಮೇಲೆ ಹೇಳಿದ ೧೮೭೭ನೇ ಇಸವಿಯ ಪಂಚಾಂಗದ ೨೦ — ೨೨ನೇ ಪಾನುಗಳಲ್ಲಿ ನೋಡು.

ಚರ್ಮರೋಗಗಳು (ತ್ವಗ್ರೋಗಗಳು) Skin Diseases.

ಚರ್ಮವ್ಯಾಧಿಗಳು ರಕ್ತದ ದೋಷವಾಗಲೀ, ಕೊರತೆಯಾಗಲೀ ಸೂಚಿಸುತ್ತವೆ. ಇವು ರಕ್ತಶುದ್ಧಿಯಾದದರಿಂದಾಗಲೀ ರಕ್ತವೃದ್ಧಿಯಾದದರಿಂದಾಗಲೀ ವಾಶಿ ಆಗುತ್ತವೆ. ಸುಗಂಧಿ ಬೇರಿನ ಕಲ್ಕ (೨೧೫), ಚಾಲಮುಗ್ರ ಬೀಜದ ಚೂರ್ಣ (೧೮೧[1]), ಇಲ್ಲವೆ ಎಕ್ಕೆಗಿಡದ ಚೂರ್ಣ (೧೮೨[1]) ಕೊಡುವದು; ಅಥವಾ ಗಂಡಮಾಲೆ, ಕುಷ್ಠ ಮುಂತಾದ ನಂಜುಳ್ಳ ಅಶಕ್ತ ಶರೀರಿಗಳಿಗಾದರೆ, ಮೀನಿನ ಎಣ್ಣೆ (೧೮೩[1]) ಹೊಟ್ಟೆಗೆ ಕೊಡ ಬಹುದು. ಈ ಚಿಕಿತ್ಸೆ ನಡಿಯುತ್ತಿರುವಾಗ, ಬಾಹ್ಯಲೇಪನವಾಗಿ ಮುಂದೆ ಹೇಳಿರುವ ಔಷಧಗಳನ್ನು ಪ್ರಯೋಗಿಸ ಬಹುದು: ಶೀಮೆ ಅಗಸೆಯ ಲೇಪ (೨೧೬), ಚಾಲಮುಗ್ರದ ಎಣ್ಣೆ (೧೮೧[1]), ಸುಣ್ಣದ ಮುಲಾಮು (೨೦೬[2]), ಆಳಲೆಕಾಯಿಯ ಮುಲಾಮು (೧೬೮[3]), ಗಂಧಕದ

---

[1] ೧೮೮೩ನೇ ಇಸವಿಯ ಪಂಚಾಂಗದ ೪೨ನೇ, ೪೩ನೇ ಪಾನುಗಳಲ್ಲಿ ನೋಡು.

[2] ೧೮೮೩ನೇ ಇಸವಿಯ ಪಂಚಾಂಗದ ೫೫ನೇ ಪಾನಿನಲ್ಲಿ ನೋಡು.

[3] ೧೮೮೨ನೇ ಇಸವಿಯ ಪಂಚಾಂಗದ ೫೩ನೇ ಪಾನಿನಲ್ಲಿ ನೋಡು.

ಮುಲಾಮು (೨೦೫[1]), ಇಲ್ಲವೆ ಕೆಲೊಮೆಲ್ (**Calomel**) ಎಂಬ ರಸಕರ್ಪೂರದ ಧಾತುವಿನ ಮುಲಾಮು (೧೪೫[2]) ಸಹ ಗುಣಕರವಾಗಿ ಪ್ರಯೋಗಿಸ ಬಹುದು. ಚರ್ಮವು ಘಟ್ಟಿಯಾಗಿಯೂ ಒಣಗಲಾಗಿಯೂ ದೊರಗಾಗಿಯೂ ಇದ್ದರೆ, ಬಿಸಿ ನೀರಿನ “ಹಬೆಸ್ನಾನ” (ಮಜ್ಜನ) (೨೧೭) ಬಹಳ ಪ್ರಯೋಜನಕರವಾಗಿರುವದು. ಬಿಳಿಗಾರದ ನೀರಿನ ಲೇಪನದಿಂದ (೧೫೯[3]) ಅನೇಕ ಪಕ್ಷಗಳಲ್ಲಿ ಉರುತವು ಶಮನವಾಗುವದು; ಇದು ತುರಿದಡಿಕೆ, ಬೆವರುಸಾಲೆ ಮುಂತಾದ ಚರ್ಮವ್ಯಾಧಿಗಳಿಗೆ ಸಹ ಬಹಳ ಪ್ರಯೋಜನಕರವಾಗುವದು.

೨೧೫. ಸುಗಂಧಿ ಬೇರಿನ ಕಲ್ಕ ಮಾಡುವ ಕ್ರಮವು ೧೮೭೬ನೇ ಇಸವಿಯ ಪಂಚಾಂಗದ ೨೮ನೇ ಪಾನಿನಲ್ಲಿ ವಿವರಿಸಿಯದೆ. ಸುಗಂಧಿ ಬೇರಿನ ಔಷಧಗುಣವು ಅದರ ನಡುಚೆಕ್ಕೆಗೆ ಮಾತ್ರವಿರುವದರಿಂದ ಇದಕ್ಕಾಗಿ ಹಸಿ ಬೇರುಗಳನ್ನು[4] ತಂದು, ನೀರಿನಲ್ಲಿ ಸ್ವಲ್ಪ ಹೊತ್ತು ನೆನೆ ಹಾಕಿ, ಬಳಿಕ ಅದರ ಮೇಲಿನ ತೆಳ್ಳಗಾದ ಶಿಪ್ಪೆಯನ್ನು ತೆಗದು ಬಿಸಾಡಿ, ಅದಕ್ಕೂ ಕೊರಡಿಗೂ ನಡುವಿನ ಚೆಕ್ಕೆಯನ್ನು ತೆಗದು ಕಲ್ಕಕ್ಕೆ ಪ್ರಯೋಗಿಸ ಬೇಕು; ಈ ಕಲ್ಕವು ಅಶಕ್ತಿ, ದೀರ್ಘಕಾಲದ ವಾತರೋಗ, ಮೇಹ, ಮುಖ್ಯ ಮೇಹ ಸಂಬಂಧವಾದ ವ್ರಣ ಮುಂತಾದ ಚರ್ಮವ್ಯಾಧಿಗಳು, ಅಜೀರ್ಣ, ಅರುಚಿ, ಇಂಥಾದ್ದಕ್ಕೆ ಬಹಳ ಗುಣಕರವಾಗಿ ಕೊಡ ಬಹುದು. ವಿಲಾಯತಿಯಿಂದ ತರಿಸಲ್ಪಡುವ ಸರ್ಸಪರಿಲ್ಲ (**Sarsaparilla**) ಎಂಬ ಸುಗಂಧಿ ಬೇರಿನ ಸತ್ವವು ಬಹುಶಾ ಇದೇ ಗುಣವುಳ್ಳದ್ದು.

೨೧೬. ಶೀಮೆ ಅಗಸೆಯ[5] ಎಲೆಗಳು ದದ್ದು ಮುಂತಾದ ಚರ್ಮವ್ಯಾಧಿಗಳಲ್ಲಿ ವಿಶೇಷ ಪ್ರಶಸ್ತತೆ ಹೊಂದಿರುತ್ತವೆ; ಅವುಗಳನ್ನು ಪ್ರಯೋಗಿಸುವದು ಹ್ಯಾಗಂದರೆ — ಶೀಮೆ ಅಗಸೆಯ ಹಶಿಯಾದ ಎಲೆಗಳನ್ನು ತಂದು, ಚನ್ನಾಗಿ ಅರದು, ಆದಕ್ಕೆ ತೆಂಗಿನ ಎಣ್ಣೆ ಆಗಲೀ ಇತರ ಎಣ್ಣೆ ಆಗಲೀ ಬೆರಸಿ, ಮುಲಾಮು ಮಾಡಿ ಹಚ್ಚುವದು; ಇದು ಸಾಲದಿದ್ದರೆ, ಇನ್ನಷ್ಟು ಉತ್ತಮವಾದ ಕ್ರಮ ಹ್ಯಾಗಂದರೆಃ ಎಲೆಗಳನ್ನು ನಿಂಬೇ ರಸದಿಂದಾಗಲೀ ಸುಣ್ಣದ ತಿಳೀನೀರಿನಿಂದಾಗಲೀ ಚನ್ನಾಗಿ ಅರದು ಲೇಪಿಸುವದು. ಇವೆರಡರಲ್ಲಿ ಯಾವದಾದರೂ ಹಚ್ಚಿದರೆ ಮಾತ್ರ ಸಾಲದುಃ; ದದ್ದು ವಾಸಿಯಾಗುವ ತನಕ ದಿನಕ್ಕೆ ಎರಡಾವರ್ತಿ ಚನ್ನಾಗಿ ತಿಕ್ಕಬೇಕು. ದದ್ದು ಬಹಳ ಕಾಲದ್ದಾಗಿದ್ದರೆ, ಈ ಚಿಕಿತ್ಸೆ ಬಹುಶಾ ಅಷ್ಟು ಚನ್ನಾಗಿ ಹಿಡಿಯದು. ಏವಂಚ ಆ ಖಜ್ಜಿ ಎಷ್ಟು ಇತ್ತಲಾಗಿನದಾಗಿರುವದೋ ಅಷ್ಟು ಬೇಗ ಈ ಚಿಕಿತ್ಸೆಯಿಂದ ವಾಸಿ ಆಗುವ ಸಂಭವವಿರುವದು.

---

[1] ೧೮೭೬ನೇ ಇಸವಿಯ ಪಂಚಾಂಗದ ೫೬ನೇ ಪಾನಿನಲ್ಲಿ ನೋಡು. ಈ ದೇಶಸ್ಥರ ದೀರ್ಘಕಾಲದ ಚರ್ಮವ್ಯಾಧಿಯಲ್ಲಿ ಈ ಗಂಧಕದ ಮುಲಾಮು ವ್ರಣ ಮಾದು ಬರುವದಕ್ಕೆ ಬಹಳ ಒಳ್ಳೇದು.

[2] ೧೮೮೧ನೇ ಇಸವಿಯ ಪಂಚಾಂಗದ ೫೬ನೇ ಪಾನಿನಲ್ಲಿ ನೋಡು.

[3] ೧೮೮೩ನೇ ಇಸವಿಯ ಪಂಚಾಂಗದ ೪೬ನೇ ಪಾನಿನಲ್ಲಿ ನೋಡು.

[4] ಅಂಗಡಿಗಳಲ್ಲಿ ಶಿಕ್ಕುವ, ಒಣಗಿ ಹೋದ ನನ್ನಾರಿ ಬೇರು ಹಸಿ ಬೇರಿನಷ್ಟು ಪ್ರಯೋಜನದ್ದಲ್ಲವಾದಾಗ್ಯೂ, ಹಸಿ ಬೇರು ಶಿಕ್ಕದಿದ್ದರೆ, ಒಣ ಬೇರುಗಳನ್ನಾದರೂ ನೆನೆ ಹಾಕ ಪ್ರಯೋಗಿಸ ಬಹುದು.

[5] *Engl:* **Cassia alata, Ringworm shrub.** ಹಿಂದು: ದಾದುಮುರ್ದಾನ್, ದಾದುಕಾಪತ್ತಾ; ತಮು: ಸೀಮೈ ಅಗತಿ, ವಂಡುಕೊಲ್ಲಿ; ತೆಲು: ಸೀಮ ಅವಸಿಚೆಟ್ಟು; ಮಲ: ಸೀಮ ಅಗತ್ತಿ.—ಈ ಸುಂದರವಾದ ಗಿಡವು ಉದ್ದವಾದ ಎಲೆಗಳೂ ಅಗಲವಾದ ಹಳದಿ ವರ್ಣದ ಹೂವುಗಳೂ ಉಳ್ಳದ್ದಾಗಿ, ಹಿಂದುಸ್ಥಾನದ ತೋಟಗಳಲ್ಲಿಯೂ ಹುದಲು ಸ್ಥಳಗಳಲ್ಲಿಯೂ ಬೆಳೆಯುತ್ತದೆ.

೨೧೭. ಹಬೇಮಜ್ಜನವೆಂಬದು ದೀರ್ಘಕಾಲದ ವಾತರೋಗ, ಕಠಿಣ ಚರ್ಮವ್ಯಾಧಿ, ಜಲೋದರ ಸಂಬಂಧವಾದ ಉಪದ್ರವಗಳು, ಬಹುಮೂತ್ರದ ಪ್ರಥಮಾವಸ್ಥೆ ಮುಂತಾದವುಗಳಲ್ಲಿ, ಮೈಯು ಒಣಗಲಾಗಿಯೂ ದೊರಗಾಗಿಯೂ ಇದ್ದರೆ, ಅಂಥಾ ಮೈಭಾಗಕ್ಕೆ ಬಹಳ ಗುಣಕರವಾದದ್ದು. ಜ್ವರವಿದ್ದರೆ, ಅದು ಕೊಡ ತಕ್ಕದ್ದಲ್ಲಾ. ಮೈ ಚೆಂಡಿಯಾದದರಿಂದ ಶೀತವೂ ನೆಗಡಿಯೂ ಶುರು ಆದರೆ, ರಾತ್ರೆ ಮಲಗುವಾಗ ಹಬೇಮಜ್ಜನ ಮಾಡುವದರಿಂದ ನಿವಾರಿಸಲ್ಪಡುವದು. ಈ ಹಬೇಮಜ್ಜನಕ್ಕೆ ಬೇಕಾದ ಸಾಹಿತ್ಯವೇನಂದರೆ — ಬಿದುರಿನ ಸಲಿಕೆಗಳಿಂದ ಶಂಖಾಕಾರವುಳ್ಳ ಒಂದು ಪಂಜರ ಮಾಡಿ, ಮೇಣದ ವಸ್ತ್ರದಿಂದಾಗಲಿ ದಪ್ಪವಾದ ಬೇರೆ ಯಾವದರಿಂದಾಗಲಿ ಅದನ್ನು ಹೊದಗಿಸುವದು; ಈ ಪಂಜರವು ಕೂತುಕೊಂಡಿರುವ ಒಬ್ಬ ಮನುಷ್ಯನನ್ನು ಮುಚ್ಚುವಷ್ಟು ದೊಡ್ಡದಾಗಿಯೂ ಅದರ ಸಪೂರ ಕಡೆಯ ತುದಿಯಲ್ಲಿ ಸ್ವಲ್ಪ ಎಡೆ ಬಿಟ್ಟು ಅದಕ್ಕೆ ಸಡಿಲಾದ ಒಂದು ಪಟ್ಟೆಯನ್ನು ಕಟ್ಟಿ, ಮಜ್ಜನ ಮಾಡುವ ಮನುಷ್ಯನ ಕೊರಳಿಗೆ ಸುತ್ತುವ ಹಾಗೆ ಇಡ ಬೇಕು. ಸ್ನಾನ ಮಾಡ ತಕ್ಕವನು ಈ ಪಂಜರದೊಳಗೆ ಕೂತು, ಮೈಯ ಮೇಲಿನ ವಸ್ತ್ರವೆಲ್ಲಾ ತೆಗದು, ತನ್ನ ತಲೆಯನ್ನೂ ಮುಖವನ್ನೂ ಆ ಪಂಜರದ ಸಪೂರ ಕಡೆಯ ತುದಿಯೊಳಗಿಂದ ಮೇಲೆ ತೋರುವ ಹಾಗೆ ಇರಿಸ ಬೇಕು; ಮತ್ತು ಬಾಯಿ ಅಗಲವುಳ್ಳ ಒಂದು ಪಾತ್ರೆಯಲ್ಲಿ ಕುದಿಯುವ ನೀರು ಹಾಕಿ, ಕಾಲು ತಾಸು ಯಾ ಹೆಚ್ಚು ಸಮಯ ಅವನ ಕೆಳಗೆ ಇಡುತ್ತಲೇ ಬೆವರು ಬರಲಿಕ್ಕೆ ಹತ್ತುವದು. ಆ ಮೇಲೆ ರೋಗಿಯ ಮೈಯನ್ನು ಒಣ ಕೈವಸ್ತ್ರದಿಂದ ಚನ್ನಾಗಿ ಒರಸಿ, ಮಲಗಿಸ ಬೇಕು; ಇಲ್ಲವೆ ಶೀತ ಘಾಳಿಯಿಂದ ವಿರಹಿತವಾದ ಬೇರೆ ಯಾವದಾದರೂ ಸ್ಥಳದಲ್ಲಿ ಇರಿಸ ಬೇಕು.

ಚಳ್ಳೆಗಳು (ಬ್ಲಿಸ್ತರ್ ಎಂಬ ಬೊಕ್ಕೆ ಎಬ್ಬಿಸುವಿಕೆ) Blister.

ಇದನ್ನು ಮಾಡುವ ಕ್ರಮವು ೧೮೮೩ನೇ ಇಸವಿಯ ಪಂಚಾಂಗದ ೪೭ನೇ ೪೮ನೇ ಪಾನುಗಳಲ್ಲಿರುವ ೧೯೦ನೇ ಅಂಕೆಯಲ್ಲಿಯೂ ಅದರ ಟಿಪ್ಪಣಿಯಲ್ಲಿಯೂ ವಿವರಿಸಿರುತ್ತದೆ.

ಚಿಕ್ಕಮ್ಮ (ಕೋರ, ಕ್ಷುದ್ರಮಸೂರಿ) Measles.[1]

ಇದು ವಿಶೇಷವಾಗಿ ಮಕ್ಕಳಿಗೆ ಉಂಟಾಗುವ ಅಂಟು ರೋಗವಾಗಿರುತ್ತದೆ. ಇದಕ್ಕೆ ಪ್ರಥಮತಾ ಸಾಧಾರಣ ನೆಗಡಿಯೂ ಕೆಮ್ಮೂ, ಉಂಟಾಗಿ, ಕಣ್ಣುಗಳು ಕೆಂಪಾಗಿ, ಅವುಗಳಿಂದ ನೀರು ಸುರಿಯೋಣವೂ, ಆ ಮೇಲೆ ಜ್ವರ ಉಂಟಾಗಿ ಅದರ ಮೂರನೇ ದಿನದಾರಭ್ಯ ಐದನೇ ದಿವಸದ ವರೆಗೆ ಮುಖದಲ್ಲಿಯೂ, ಕೊರಳಿನಲ್ಲಿಯೂ, ತರುವಾಯ ಮೈಯಲ್ಲೆಲ್ಲಾ ಶಿಡುಬುಗಳೂ ತೋರುವವು; ಆರನೇ ಯಾ ಏಳನೇ ದಿನದಲ್ಲಿ ಆ ಬೊಕ್ಕೆಗಳು ಬಾಡಲಿಕ್ಕೆ ತೊಡಗಿ, ಒಂಭತ್ತನೇ ದಿನದಲ್ಲಿ ಕಾಣದೆ ಹೋಗಿ, ಮೈ ಮೇಲೆ ಅದರ ಕಲೆಗಳು ಮಾತ್ರ ಉಳಿಯುವವು.

ಚಿಕಿತ್ಸೆ: ಆಗ್ಯಾಗ್ಯೆ ಸಾಧಾರಣ ಮಲಶೋಧನೆ ಉಂಟಾಗುವ ಹಾಗೆ ಭೇದಿ ಔಷಧ ಕೊಟ್ಟು ಯಥೇಷ್ಟ ನಿಂಬೇಪಾನಕವಾಗಲೀ (೨೧೮) ಅಕ್ಕಿಗಂಜಿಯಾಗಲೀ (೧೧೮[2]), ಪಟ್ಲ

---

[1] ತುಳು: ಕೋರ; ಕೊಂಕಣ: ಉಬ್ತೆ.

[2] ೧೮೮೦ನೇ ಇಸವಿಯ ಪಂಚಾಂಗದ ೪೬ನೇ ಪಾನಿನಲ್ಲಿ ನೋಡು.

ಪ್ಪಿನ ಸಮೇತ (೨೧೯) ಅಥವಾ ಅದಿಲ್ಲದೆ ಕೊಡ ಬಹುದು; ಮತ್ತು ರೋಗಿಯು ಹೊರ ಹೋಗದೆ, ತಂಪಾಗಿ ಸರಾಗವಾದ ಘಾಳೀ ಚಲನೆಯುಳ್ಳ ಕೋಣೆಯಲ್ಲಿ ಮಲಗಿಕೊಂಡಿದ್ದು, ಕೆಲವು ದಿವಸಗಳ ತನಕ ಹಿಟ್ಟು ಮುಂತಾದರ ಆಹಾರ ತೆಗದುಕೊಳ್ಳುತ್ತಾ ಇದ್ದಲ್ಲಿ ಈ ರೋಗವು ಬೇರೆ ಯಾವ ರೋಗದಿಂದ ಕೂಡಿ ಇರದ ಪಕ್ಷದಲ್ಲಿ ಸಾಧಾರಣವಾಗಿ ಗುಣವಾಗಲಿಕ್ಕೆ ಸಾಕು. ಮೈಯುರಿಯನ್ನು ಶಮಿಸುವದಕ್ಕೆ ಸಿರ್ಕದ ನೀರಿನಿಂದ (೨೨೦), ಇಲ್ಲವೆ ಬರೇ ತಣ್ಣೀರಿನಿಂದ (೨೨೧) ತೊಳದು ಮೈ ಮೇಲಿಗೆ ಆಕ್ಕಿ ಹಿಟ್ಟು ಚೆಲ್ಲುವದು (೧೧೮^{a}[1]). ಕೆಮ್ಮು ಉಂಟಾದ ಪಕ್ಷಕ್ಕೆ, ಕೆಮ್ಮಿಗೆ ಹೇಳಿದ ಚಿಕಿತ್ಸೆ ಮಾಡುವದು[2]. ರೋಗವು ಏರಿ ಹೋಗಿ, ಬಹಳ ಬಳಲಿಕೆ ಇದ್ದರೆ, ಕರ್ಪೂರವನ್ನೂ (೨೨೨), ಬ್ರಾಂಡಿ ಮಿಶ್ರವನ್ನೂ[3] ಯಥೇಷ್ಟ ಆಹಾರವನ್ನೂ ಸಹಾ ಕೊಡುವದು.

೨೧೮. ಶಿಡುಬಿಂಬ ಮೈಲಿಬಜ್ಜಿ, ಕೋರ, ಕೆಂಜ್ವರ, ಮತ್ತು ಬೇರೆ ವಿಧದ ಜ್ವರಗಳಲ್ಲಿ ಮೈ ಬಿಸಿಯೂ ಒಣಗಲೂ ಇದ್ದು, ವಿಶೇಷ ದಾಹವಿದ್ದರೆ, ನಿಂಬೇಪಾನಕವು ಉಷ್ಣ[illegible]ಣಿಸುವ ಬಗ್ಯೆ ಬಹಳ ಪ್ರಯೋಜನಕರದ್ದಾಗಿರುತ್ತದೆ. ಇದನ್ನು ಮಾಡುವದು ಹ್ಯಾಗಂದರೆ: ಐದಾರು ನಿಂಬೆಹಣ್ಣುಗಳನ್ನು ಕೊಯಿದು ಒಂದು ಪಾತ್ರೆಯಲ್ಲಿ ಹಾಕಿ, ಅದರ ಮೇಲೆ ಒಂದು ಪ್ಯಾಂಟು ಕುದಿಯುವ ನೀರನ್ನು ಹೊಯಿದು, ಅದರ ಬಾಯಿ ಮುಚ್ಚಿ ಇಡುವದು; ಅದು ತಣ್ಣಗಾದ ಮೇಲೆ ಗಾಳಿಸಿ ತೆಗದು, ರುಚಿಗೆ ಬೇಕಾದಷ್ಟು ಶೀ ಮಾಡಿ, ರೋಗಿಯು ಯಥೇಷ್ಟ ಕುಡಿಯ ಬಹುದು. ಅದೇ ತರದ ಸಂಗತಿಗಳಲ್ಲಿ ಬಾಯಿ ಆರಿ ಜಿಗಟಾಗಿದ್ದರೆ, ನಿಂಬೆಹಣ್ಣು ಕೊಯಿದು, ಅದರದೊಂದು ಹೋಳನ್ನು ಬಾಯಿಯಲ್ಲಿ ಇಟ್ಟು ಚೀಪುಕೊಳ್ಳುವದು ಹಿತವೂ ಪ್ರಯೋಜನಕರವೂ ಆಗಿರುತ್ತದೆ. ಆದರೆ ಫರಂಗಿಹಲಸಿನ ಹಣ್ಣು (ಅನನಾಸು) ಕೈ ಹತ್ತರ ಇದ್ದ ಪಕ್ಷಕ್ಕೆ, ಅದರ ಒಂದು ತುಂಡು ಅದೇ ಪ್ರಕಾರ ಬಾಯಿಯಲ್ಲಿ ಇಟ್ಟುಕೊಳ್ಳುವದು ಇನ್ನಷ್ಟು ಪ್ರಯೋಜನಕರವಾದದ್ದಂತೆ; ಆದರೆ ಅದರ ಜಿಗಟನ್ನು ಮಾತ್ರ ನುಂಗ ಬಾರದು.

೨೧೯. ಜ್ವರದಲ್ಲಿ ಮೈ ಉಷ್ಣವಾಗಿ ತ್ಯಾವವಿಲ್ಲದೆ ಇದ್ದು, ನಾಲಿಗೆ ಒಣಗಿ ಬಹಳ ದಾಹವೂ, ಮೂತ್ರ ಸ್ವಲ್ಪವೂ ರಂಗು ಏರಿದ್ದಾಗಿಯೂ ಇದ್ದರೆ, ಎರಡು ದ್ರಮ್ ಪಟ್ಲುಪ್ಪನ್ನು ಒಂದು ಬಾಟ್ಲಿ ತೆಳು ಗಂಜೀನೀರಿನಲ್ಲಿ ಕಲಕಿಸಿ, ಅದಕ್ಕೆ ಜೇನುತುಪ್ಪವಾಗಲೀ ಕಲ್ಲುಸಕ್ಕರೆಯಾಗಲೀ ರುಚಿಗೆ ತಕ್ಕದಾಗಿ ಹಾಕಿ ಶೀ ಮಾಡಿ, ರೋಗಿಗೆ ಆಗ್ಯಾಗ್ಯೆ ಸ್ವಲ್ಪ ಸ್ವಲ್ಪವಾಗಿ ಕುಡಿಯ ಕೊಡುವದು ಬಹಳ ತಂಪಾದ ಪಾನವಾಗಿರುತ್ತದೆ; ಈ ನೀರಿಗೆ ಇನ್ನಷ್ಟು ರುಚಿ ಕೊಡುವ ಬಗ್ಯೆ ಹುಣಿಶೀ ಹುಳಿಯ ಇಲ್ಲವೆ ನಿಂಬೆಹಣ್ಣಿನ ರಸ ಒಂದಿಷ್ಟು ಕೂಡಿಸ ಬಹುದು; ಇದರಿಂದ ಜ್ವರವು ಶಮನವಾಗುವದಲ್ಲದೆ ಬೆವರು ಬರುವ ಹಾಗೂ ಮೂತ್ರದ ಪರಿಮಾಣ ಹೆಚ್ಚಿಸುವ ಹಾಗೂ ಮಾಡುವದು. ರೋಗಿ ಒಂದೆರಡು ಸಾರಿ ಬೇಡವೆಂತಾ ತಿರಸ್ಕರಿಸಿದಾಗ್ಯೂ, ಈ ನೀರನ್ನು (ಹ್ಯಾಗೂ ಹಿತವಾಗುವದಿಲ್ಲವೆಂತ ಕಂಡರೆ ಮಾತ್ರ ಹೊರ್ತು) ದೀರ್ಘ ಪ್ರಯತ್ನದಿಂದಾದರೂ ಕೊಡ ಬೇಕು. ಮೈಲಿಬಜ್ಜಿ, ಕೋರ, ಉರಿಶೀತ, ನೆಗಡಿಗಳಲ್ಲಿ ಸಹ

---

[1] ೧೮೮೦ನೇ ಇಸವಿಯ ಪಂಚಾಂಗದ ೪೭ನೇ ಪಾನಿನಲ್ಲಿ ನೋಡು.

[2] ಕೆಮ್ಮಿನ ಚಿಕಿತ್ಸೆ ೧೮೮೩ನೇ ಇಸವಿಯ ಪಂಚಾಂಗದ ೪೭–೫೦ನೇ ಪಾನುಗಳಲ್ಲಿ ಹೇಳಿರುತ್ತದೆ.

[3] ೧೮೭೭ನೇ ಇಸವಿಯ ಪಂಚಾಂಗದ ೧೭ನೇ ಪಾನಿನಲ್ಲಿ ನೋಡು.

ಮೇಲೆ ಹೇಳಿದ ಪಾನವು ಬಹಳ ಪ್ರಯೋಜನವುಳ್ಳದ್ದೆಂದು ಕಂಡು ಬಂದದೆ. ಮಕ್ಕಳಿಗಾದರೆ, ಮೇಲೆ ಹೇಳಿದ ಹಾಳಿತವನ್ನು ವಿದ್ಯಮಾನಾನುಸಾರವಾಗಿ ಕಡಿಮೆ ಮಾಡ ಬಹುದು.

೨೨೦. ಮೈಲಿಖಜ್ಜಿ, ಕೋರ, ಕೆಂಜ್ವರ ಮತ್ತು ಇತರ ತರದ ಜ್ವರದ ಉಪಹತಿಗಳಲ್ಲಿ ಒಂದು ಭಾಗ ಸಿರ್ಕಕ್ಕೆ ಮೂರು ಭಾಗ ನೀರು ಕೂಡಿಸಿ, ಅದರಿಂದ ದಿನಕ್ಕೆ ಎರಡು ಮೂರು ಸಾರಿ ಮೈ ತೊಳೆಯುವದು ಬಹಳ ಹಿತವೂ ಶಮನಕರವೂ ಆಗಿರುತ್ತದೆ. (ಈ ನೀರಿನ ಹಾಳಿತವನ್ನು ಮುಂದೆ ೨೨೨ನೇ ಅಂಕೆಯಲ್ಲಿ ಹೇಳಿದ ರೀತಿ ಮಾಡ ಬೇಕು.) ಈ ಸಂಗತಿಗಳಲ್ಲಿ ಆಗಲೀ ಇತರ ಸಂಗತಿಗಳಲ್ಲಿ ಆಗಲೀ ನೀರು ಬೆರಿಸದೆ ಇರುವ ಸಿರ್ಕವನ್ನು ರೋಗಿ ಇರುವ ಕೋಣೆಯಲ್ಲಿ ಚಿಮಿಕಿಸುವದರಿಂದ ರೋಗದ ಸೋಂಕು ತಕ್ಕ ಮಟ್ಟಿಗೆ ಹೋಗಲಾಡಿಸುವದಲ್ಲದೆ ಸಾಧಾರಣವಾಗಿ ರೋಗಿಗೆ ಬಹಳ ಹಿತಕರವಾಗುವದು.

ಚೇಳು ಕಚ್ಚಿದ್ದಕ್ಕೆ Stings of Scorpions.

ಇದಕ್ಕೆ ೧೮೮೧ನೇ ಇಸವಿಯ ಪಂಚಾಂಗದ ೫೦ನೇ ಪಾನಿನಲ್ಲಿ "ಕಣಜದ ಹುಳ ಚುಚ್ಚಿದ್ದಕ್ಕೆ" ಹೇಳಿದ ಚಿಕಿತ್ಸೆಯನ್ನು ಮಾಡುವದು.

ಛಳಿಜ್ವರ, ಶೀತಜ್ವರ (ವರಿಶೇಜ್ವರ) Ague.

ಛಳಿಜ್ವರವು ಸಾಧಾರಣ ಬಿಟ್ಟು ಬರುವಂಥಾ ಜ್ವರವಾಗಿರುತ್ತದೆ. ಇದಕ್ಕೆ ತಣಾವು, ಕಾವು, ಬೆವರು ಎಂಬ ಮೂರು ಅವಸ್ಥೆಗಳಿರುತ್ತವೆ. ಇವುಗಳಲ್ಲಿ ಮೂರೂ ಆಗಲೀ ಎರಡೂ ಆಗಲೀ ಕಾಣ ಬರುವದುಂಟು.

ಚಿಕಿತ್ಸೆ: ಪ್ರಥಮತಾ ಸಾಧಾರಣ ವಿರೇಚಕ ಔಷಧ ಕೊಡ ಬಹುದು. ಅನ್ನಕೋಶದಲ್ಲಿ ಅಕ್ರಮವಿರುತ್ತದೆ ಎಂತ ಕಂಡರೆ, ಕಿರುಮಂಜಿ[1] (೨೨೨) ಕೊಟ್ಟು ವಾಂತಿ ಮಾಡಿಸುವದು. ಮೈ ತಣಾವು ಇರುವ ಕಾಲದಲ್ಲಿ ಚನ್ನಾಗಿ ಮುಚ್ಚಿಕೊಂಡು ಶುಂಠಿ ಕಲ್ಕವನ್ನು (೨೨೩) ಕೊಟ್ಟು, ಹೊಯಿಗೆ ಇಲ್ಲವೆ ಉಪ್ಪು ಹಾಕಿದ ಚೀಲಗಳನ್ನು ಕಾಯಿಸಿ, ಅದರಿಂದ ಬೆನ್ನೆಲುಬಿಗೆ ಶೇಕ ಕೊಡುವದು. ಮೈ ಬಿಸಿ ಇರುವ ಕಾಲದಲ್ಲಿ ನಿಂಬೇಪಾನಕವನ್ನು (೨೧೮) ಆಗಲೀ, ಪಟ್ಲುಪ್ಪಿನ ನೀರಾಗಲೀ (೨೧೯) ಕೊಟ್ಟು, ಜ್ವರಕ್ಕೆ ಹೇಳಿರುವ ಬೇರೇನು ಪಾನಗಳನ್ನು ಮಾಡಿಸುವದು. ಬೆವರು ಬರುವ ಕಾಲದಲ್ಲಿ ಮೈಗೆ ಶೀತವಾದ ಇಲ್ಲವೆ ತ್ರಾವವಾದ ಘಾಳಿ ತಾಗದ ಹಾಗೆ ಮೈ ಮುಚ್ಚಿಕೊಂಡು ಇರುವದೇ ಹೊರ್ತು ಬೇರೇನಿಲ್ಲಾ. ಈ ಅವಸ್ಥೆಗಳ ನಡುವೆ ಅತಿವಿಟೆಯ ಚೂರ್ಣ (೨೨೪), ಗಜಿಗೆಕಾಯಿಯ ಚೂರ್ಣ (೨೨೫), ಚಿರೆತ್ತ ಎಂಬ ಕಿರಿಯಾತದ ಕಲ್ಕ (೧೦[2]), ಅನ್ನಭೇದೀ ಚೂರ್ಣ (೧೦೪[3]), ಬೇವಿನ

---

[1] ೧೮೭೭ನೇ ಇಸವಿಯ ಪಂಚಾಂಗದ ೭೭ನೇ ಪಾನಿನ ಮೊದಲನೇ ಟಿಪ್ಪಣಿಯನ್ನು ನೋಡು.

[2] ೧೮೭೭ನೇ ಇಸವಿಯ ಪಂಚಾಂಗದ ೨೮ನೇ ಪಾನಿನಲ್ಲಿ ನೋಡು; ಮತ್ತು ಚಿರೆತ್ತಾ ಎಂಬ ಕಿರಿಯಾತಿಗೂ ನೆಲಬೇರಿಗೂ ಇರುವ ಹೆಚ್ಚುಕಡಿಮೆಯನ್ನು ೧೮೭೯ನೇ ಇಸವಿಯ ಪಂಚಾಂಗದ ೪೮ನೇ ಪಾನಿನಲ್ಲಿರುವ ೩ನೇ ಟಿಪ್ಪಣಿಯಲ್ಲಿ ನೋಡು.

[3] ೧೮೮೦ನೇ ಇಸವಿಯ ಪಂಚಾಂಗದ ೭೮ನೇ ಪಾನಿನಲ್ಲಿ ನೋಡು.

ಚೆಕ್ಕೆಯ ಚೂರ್ಣ ಯಾ ಕಷಾಯ, ಅಥವಾ ಅಮೃತಬಳ್ಳಿಯ ಕಲ್ಕ (೫೦[1]) ಸಹ ಮೈ ತಣುಸಾಗಿದ್ದಾಗ ಬಹಳ ಗುಣಕರವಾಗಿ ಕೊಡ ಬಹುದು. ಇವುಗಳಲ್ಲಿ ಒಂದು ತಾಗದಿದ್ದರೆ, ಮತ್ತೊಂದು ಕೊಟ್ಟು ನೋಡ ಬಹುದು. ಒಂದೊಂದು ಪ್ರತ್ಯಪ್ರತ್ಯೇಕವಾಗಿ ಕೊಟ್ಟಲ್ಲಿ ಒಂದು ವೇಳೆ ಅಷ್ಟು ಗುಣ ಕಾಣದೆ ಇದ್ದ ಪಕ್ಷಕ್ಕೂ, ಅವುಗಳಲ್ಲಿ ಎರಡಾಗಲೀ ಮೂರಾಗಲೀ ಮಿಶ್ರ ಮಾಡಿ ಕೊಡುವದರಿಂದ ಬಹುಶಾ ವಿಶೇಷ ಗುಣಕರವಾದೀತು. ಏವಂಚ ಇವುಗಳು ಗುಣದಲ್ಲಿ “ಕೊಯನಾನು” (quinine) ಎಂಬ ಸಿಂಕೋನ (cinchona) ಗಿಡದ ಸತ್ವಕ್ಕೆ ಸರಿ ಬಾರವು (೨೨೭). ಈ ದೇಶಸ್ಥರಿಗೆ ಉಂಟಾಗುವ ಈ ತರದ ವರಿಶೇ ಛಳಿಜ್ವರಗಳಲ್ಲಿ ಮಾಚೀಕಾಯಿ ಸಂಗಡ ಕಿರಿಯಾತಿನ ಕಲ್ಕ (೨೨೮), ಬಜೇ ಕಲ್ಕ (೧೨[2]), (೨೨೯) ಗುಣಕರವಾಗಿ ಪ್ರವರ್ತಿಸುತ್ತವಂತೆ. ಈ ವರಿಶೇಜ್ವರದ ದೆಶೆಯಿಂದ ಉಂಟಾಗುವ ಉದರಗ್ರಂಥಿ ದಪ್ಪವಾಗಿ ಪ್ಲೀಹೋದರ(ಜರಗೆಂಡೆ) ಎಂಬ ರೋಗಕ್ಕೆ, ೧೮೮೦ನೇ ಇಸವಿಯ ಪಂಚಾಂಗದ ೩೭, ೩೮ನೇ ಪಾನುಗಳಲ್ಲಿ ಹೇಳಿರುವ ಚಿಕಿತ್ಸೆಯನ್ನು ಮಾಡು[illegible]ದು.

೨೨೩. ಈ ಊರಿನಲ್ಲಿ ಶಿಕ್ಕುವ ಕಿರಿಮುಂಜಿಯು (೧೮೭೬ನೇ ಇಸವಿ ಪಂಚಾಂಗದ ೪೩ನೇ ಪಾನಿನಲ್ಲಿ ಇರುವ ೨೫ನೇ ಅಂಕೆಯನ್ನೂ ಅದರ ಟಿಪ್ಪಣಿಯನ್ನೂ ಸರಿ ನೋಡು) ವಾಂತಿ ಮಾಡಿಸ ತಕ್ಕ ಔಷಧವಾಗಿ ಬಹಳ ಪ್ರಶಸ್ತತೆ ಹೊಂದಿರುತ್ತದೆ. ಇದರ ಎಲೆಗಳನ್ನು ಒಣಗಿಸಿ ಪುಡಿ ಮಾಡಿ, ೪ ಗ್ರೇನ್ ಹಿಡಿದು ೮ ಗ್ರೇನ್ ವರೆಗೆ ವಿದ್ಯಮಾನಾನುಸಾರವಾಗಿ ಕೊಟ್ಟಲ್ಲಿ, ಸಾಧಾರಣ ವಾಂತಿ ಮಾಡಿಸುತ್ತದೆ; ಆದರೆ ಜೋರಾಗ ಬೇಕೆಂದಿದ್ದರೆ, ಆ ಚೂರ್ಣ ೨೫ ಗ್ರೇನ್ ಹಿಡಿದು ೩೦ ಗ್ರೇನ್ ವರೆಗೆ ತೆಗದು, ಅದಕ್ಕೆ ೧/೨ ಯಾ ೧ ಗ್ರೇನ್ **(tartar emetic)** ಎಂಬ ಲವಣ ಬೆರಸಿ ಕೊಟ್ಟಲ್ಲಿ ಯಥೇಷ್ಟ ವಾಂತಿ ಮಾಡಿಸುವದು.

☞ ಇದೇ ಪಂಚಾಂಗದ ೪೬ನೇ ಪಾನಿನ ೬ನೇ/೮ನೇ ಗೆರೆಗಳಲ್ಲಿ ಕೊಟ್ಟ ೨೨೧ನೇ, ೨೨೨ನೇ ಅಂಕೆಗಳ ವಿವರವನ್ನು ೪೮ನೇ ಪಾನಿನಲ್ಲಿ ೨೨೦ನೇ ಅಂಕೆ ತೀರಿದ ಬಳಿಕ ಕೊಡುವರೆ ತಪ್ಪಿ ಹೋಗಿರುವವರಿಂದ ಇಲ್ಲಿ ಕೊಡುತ್ತೇವೆ:—

೨೨೧. ಕೋರ, ಮೈಲೆಬಜ್ಜ ಮುಂತಾದ ಜ್ವರಗಳಲ್ಲಿ ರೋಗಿಯ ದೇಹಸ್ಥಿತಿಗೆ ಸರಿಯಾಗಿ, ನೀರು ಹದ ಮಾಡಿ, ತಣ್ಣಗೆ, ಉಗುರುಬೆಚ್ಚಗೆ, ಇಲ್ಲವೆ ಬಿಸಿ ನೀರಿನಿಂದ ಮೈ ತೊಳೆಯ ಬಹುದು.

೨೨೨. ಕೋರ, ಮೈಲೆಬಜ್ಜ, ಜ್ವರ ಏರಿದ ಸ್ಥಿತಿಯಲ್ಲಿ ರೋಗಿಯು ಬೇಸತ್ತು ನಿಶ್ಚೇತನನಾಗಿ, ಅಡಲಭ್ರಮಣೆ, ಗುಣುಗುಣಿಸುವದು ಮುಂತಾದಿದ್ದರೆ, ೩ ಗ್ರೇನ್ ಕರ್ಪೂರ, ಅಷ್ಟೇ ಹಿಂಗು, ಇವೆರಡನ್ನು ಬೆರಸಿ, ೪ ತಾಸಿಗೊಮ್ಮೆ ಕೊಡುವದು; ಅದಲ್ಲದೆ ಕಾಲಿಗೂ ಗುಂಡಿಗೆಗೂ ಟರ್ಪೆಂಟೈನಿನ ಶೇಕ, ಸಾಸಿವೇ ಒತ್ತಡ ಸಹ ಕೊಡುವದು. ಆದರೆ ಅದರ ದೆಶೆಯಿಂದ ತಲೆಶಿಡತವೂ ಮಸ್ತಕದಲ್ಲಿ ಬಹು ಉರಿಯೂ ಉಂಟಾದರೆ, ಅದನ್ನು ಬಿಟ್ಟು ಬಿಡ ಬಹುದು.

೪೮ನೇ ಪಾನಿನ ೬ನೇ ಗೆರೆಯಲ್ಲಿರುವ ೨೨೨ ತಿದ್ದಿ ೨೨೧ ಎಂತಲೂ,
೧೫ „ ಗೆರೆಯಲ್ಲಿ ೨೨೨ ತಿದ್ದಿ ೨೨೩ ಎಂತಲೂ ಮಾಡಿಕೊಳ್ಳ ಬೇಕು.
೨೦ „ „ ೨೨೩ „ ೨೨೪ „ „ „
೨೫ „ „ ೨೨೪ „ ೨೨೫ „ „ „
೨೬ „ „ ೨೨೫ „ ೨೨೬ „ „ „

[1] ೧೮೭೭ನೇ ಇಸವಿಯ ಪಂಚಾಂಗದ ೧೯ನೇ ಪಾನಿನಲ್ಲಿ ನೋಡು.

[2] ೧೮೭೬ನೇ ಇಸವಿಯ ಪಂಚಾಂಗದ ೨೬ನೇ ಪಾನಿನಲ್ಲಿ ನೋಡು.

೫೦ ನಿರಂತರವಾದ ದ್ರವ್ಯವನ್ನು ಪರಲೋಕದಲ್ಲಿ ನಿಮಗೆ ಉಂಟು ಮಾಡಿಕೊಳ್ಳಿರಿ;

೨೨೪. ಶುಂಠೀ ಕಲ್ಕ[1] ಮಾಡುವದಕ್ಕೆ ೨ ದ್ರಮ್ ಶುಂಠಿ ೬ ಔನ್ಸ್ (=೧½ ಕುಡುತೆ) ಕುದಿಯುವ ನೀರಿನಲ್ಲಿ ಹಾಕಿ ಮುಚ್ಚಿಟ್ಟು, ಸ್ವಲ್ಪ ಹೊತ್ತಿನ ಮೇಲೆ ತೆಗದು, ರಾತ್ರಿ ಮಲಗುವಾಗ, ಬಿಸಿ ಇರುವಾಗಲೇ ಕುಡಿದು, ಕೂಡಲೇ ಮೈ ಎಲ್ಲಾ ಕಂಬಳಿಯಿಂದ ಮುಚ್ಚಿಕೊಂಡು ಮಲಗಿದ್ದಾದರೆ, ಸರಾಗವಾಗಿ ಬೆವರು ಹೊರಟು, ಶೀತವಾಗಲೀ ನೆಗಡಿಯಾಗಲೀ ಶಮನವಾಗುವದಕ್ಕೂ, ಪರಿಶೀಜ್ವರದಲ್ಲಿ ಮೈ ತಣುವು ಇರುವ ಕಾಲದಲ್ಲಿ ಕೊಟ್ಟದ್ದಾದರೆ, ಅಂಥಾ ಜ್ವರ ಬಿಟ್ಟು ಹೋಗುವದಕ್ಕೂ ಅನುಕೂಲಿಸುವದು.

೨೨೫. ಅತಿವಿಟಯ[2] ಎಂಬ ಬೇರು (ಪರಿಶೀಜ್ವರ ಇಲ್ಲವೆ) ಕಾಲಾವಧಿಯಾಗಿ ಬಿಟ್ಟು ಬರುವ ಜ್ವರಗಳಲ್ಲಿ ಬಹಳ ಗುಣಕರವಾದ ಔಷಧಿಯಾಗಿರುತ್ತದೆ; ಅದನ್ನು ಪುಡಿ ಮಾಡಿ, ಸಾರಿಗೆ ಅರ್ಧ ದ್ರಮ್ ತೆಗದು, ಸ್ವಲ್ಪ ನೀರಿನ ಸಂಗಡ ಕಲಸಿ, ಜ್ವರ ಇಲ್ಲದ ಸಮಯದಲ್ಲಿ (ಅಂದರೆ ಜ್ವರ ಬಿಡುವಾಗ, ಬೆವರು ಬರುವ ಹೊತ್ತಿನಲ್ಲಿ) ಶುರು ಮಾಡಿ ಆರು ತಾಸಿಗೆ ಒಮ್ಮೆ ಸೇವಿಸುವದು; ಮಕ್ಕಳಿಗಾದರೆ, ಪ್ರಾಯಕ್ಕನುಸಾರವಾಗಿ ಅದರ ಅರ್ಧ ಇಲ್ಲವೆ ಮುಕ್ಕಾಲು ಪಾಲು ಕೊಡಬಹುದು. ಅದಲ್ಲದೆ ಜ್ವರದ ಇಲ್ಲವೆ ಬೇರೆ ರೋಗದ ತರುವಾಯ ಉಂಟಾಗುವ ಅಶಕ್ತಿಯಲ್ಲಿ ಅತಿವಿಟಯವನ್ನು ೫ರಿಂದ ೧೦ ಗ್ರೇನ್ ವರೆಗೆ ದಿನಕ್ಕೆ ಮೂರು ಸಾರಿ ಒಳ್ಳೇ ತೇಜವರ್ಧಕ ಔಷಧವಾಗಿ ಕೊಡ ಬಹುದು.

೨೨೬. ಪರಿಶೀಜ್ವರದಲ್ಲಿ ಮುಖ್ಯವಾಗಿ ಈ ದೇಶಸ್ಥರಿಗೆ ಗಜಿಗೇ[3] ಔಷಧವು ಬಹಳ ಗುಣಕರವಾಗಿರುತ್ತದೆ. ಅದನ್ನು ಕೊಡುವದು ಹ್ಯಾಗಂದರೆ: ಗಜಿಗೆಕಾಯಿಗಳನ್ನು ತಂದು, ಜಜ್ಜಿ ಮೇಲಿನ ಶಿಪ್ಪೆ ಬಿಸಾಡಿ, ಒಳಗಿನ ಬೀಜಗಳನ್ನು ತೆಗದು ಚನ್ನಾಗಿ ಕುಟ್ಟಿ ಪುಡಿ ಮಾಡಿ, ಆ ಚೂರ್ಣದಿಂದ ೧ ಔನ್ಸ್, ಕರಿಮೆಣಸಿನ ಪುಡಿ ೧ ಔನ್ಸ್, ಇವೆರಡನ್ನು ಚನ್ನಾಗಿ ಬೆರಸಿ, ಈ ಮಿಶ್ರದಿಂದ ದೊಡ್ಡವರಿಗಾದರೆ ೧೫ರಿಂದ ೩೦ ಗ್ರೇನ್ ವರೆಗೆ ದಿನಕ್ಕೆ ಮೂರು ಸಾರಿ ಕೊಡಬಹುದು; ಇದೇ ಚೂರ್ಣವನ್ನು ಕಡಿಮೆ ಪರಿಮಾಣದಲ್ಲಿ ಕೊಟ್ಟಲ್ಲಿ, ಜ್ವರ ಮುಂತಾದ

---

[1] ೧೮೮೧ನೇ ಇಸವಿಯ ಪಂಚಾಂಗದ ೪೫ನೇ ಪಾನಿನಲ್ಲಿರುವ ೧೨೮ನೇ ಅಂಕೆಯನ್ನು ನೋಡು.

[2] *Engl:* Atis; ಹಿಂದು: ಅತೀಸ್; ತಮು: ಅತಿವಡಯಮ್; ತೆಲು: ಅತಿವಸ; ಮಲ: ಅತಿವಿಟಯಂ.—ಗಂಧಸರಕಿನ ಅಂಗಡಿಗಳಲ್ಲಿ ಸಿಗುವ ಅತಿವಿಟಯ ಎಂಬದು ಸಪುರವಾದ ತುದಿಯುಳ್ಳ ಒಂದು ಒಂದುವರೆ ಇಂಚ್ ಉದ್ದ, ೩/೪ ಇಂಚ್ ದಪ್ಪವುಳ್ಳ ನಳಿಗೆಗಳೋಪಾದಿ ಇರುವ ಬೇರುಗಳಾಗಿರುತ್ತವೆ. ಅದರ ಹೊರಗಡೆ ಬೂದಿ ಬಣ್ಣದ್ದಾಗಿ, ಉದ್ದಕ್ಕೆ ಸ್ವಲ್ಪ ನೆರಿಗೆಯುಳ್ಳದ್ದಾಗಿ, ಅಲ್ಲಲ್ಲಿ ಬೇರುಗಳ ಕಸರುಳ್ಳದ್ದಾಗಿರುತ್ತದೆ. ಅದರ ಒಳಗಡೆ ಹಿಟ್ಟಿನಂತೆ ಬಿಳಿದಾಗಿ, ನಿರ್ಗಂಧವುಳ್ಳದ್ದಾಗಿ ರುಚಿಗೆ ಹುಳಿಯಾಗಲೀ ಒಗರಾಗಲೀ ಇಲ್ಲದೆ ಕಹಿಯಾಗಿರುವದು. ಈ ಕಡೇ ಲಕ್ಷಣದ ಬೆಸೆಯಿಂದ ಅತಿವಿಟಯವನ್ನು ಅಂಗಡಿಯಲ್ಲಿ ಕೊಂಡುಕೊಳ್ಳುವಾಗ ತೋರಿಸಲ್ಪಡುವ ಬೇರನ್ನು ಅಡ್ಡವಾಗಿ ಮುರಿದರೆ, ಒಳಗೆ ಹಿಟ್ಟಿನಂಥಾ ಬಿಳೀ ತರದ್ದು ಇದ್ದು, ಕಹಿ ರುಚಿ ಉಂಟೋ ಇಲ್ಲವೋ ಎಂಬದನ್ನು ನೋಡಿಕೊಳ್ಳ ಬೇಕು. ಇದಲ್ಲದೆ ಅದನ್ನು ಬಾಯಿಯಲ್ಲಿ ಇಟ್ಟು ಜಗಿಯುಲಾಗಿ ನಾಲಿಗೆಗೆ ತೀವ್ರ ತರದ ಜೋಮಿನಂತೆ ಉಂಟಾದರೆ, ಅದನ್ನು ಪ್ರಯೋಗಿಸ ಬಾರದು.

[3] *Engl:* Bonduc Nut; ಹಿಂದು: ಕಟ್ಕಲಿಜಾ, ಕಟ್ಕರಂಜ; ದಖ: ಗಜಗಾ; ತಮು: ಕಜಿರ್ಚಿಕಾಯ್, ಕಲಿಚಿಕ್ಕಾಯ್; ತೆಲು: ಗಚ್ಚಕ್ಕಾಯ; ಮಲ: ಕಟಿಂಜಕ್ಕುರು; ಮರಾ: ಗಜಗಾ.—ಗಜಗೆ ಕಾಯಿ ಹಿಂದುಸ್ಥಾನದಲ್ಲಿ ಸಾಧಾರಣವಾಗಿ ಸಿಗುವದು; ಅದು ಉರುಟಾಗಿಯೂ, ಘಟ್ಟಿಯಾಗಿಯೂ, ನಯವುಳ್ಳ ಬೂದಿ ಬಣ್ಣದ ಶಿಪ್ಪೆ ಉಳ್ಳದ್ದಾಗಿಯೂ, ಅದರೊಳಗೆ ಬಿಳೀ ಬಣ್ಣದ ಮತ್ತು ಬಹಳ ಕಹಿಯಾದ ಬೀಜ ಉಳ್ಳದ್ದಾಗಿಯೂ ಇರುವದು.

ರೋಗಗಳು ವಾಶಿ ಆದ ತರುವಾಯ ಉಳಿಯುವ ಅಶಕ್ತಿಯಲ್ಲಿ ಒಳ್ಳೇ ತೇಜವರ್ಧಕವಾಗಿ ಪ್ರವರ್ತಿಸುವದು. ಈಗ ಹೇಳಿದ ಗಜಿಗೆ ಬೀಜದ ಪುಡಿಗಿಂತ ಅದರ ಬೇರಿನ ಚೆಕ್ಕೇ ಪುಡಿ ೧೦ ಗ್ರೇನ್ ಪರಿಮಾಣದಲ್ಲಿ ಅದಕ್ಕಿಂತ ಹೆಚ್ಚು ಗುಣವುಳ್ಳದ್ದೆಂದು ಹೇಳುತ್ತಾರೆ; ಇಂಥಾ ಚೂರ್ಣವನ್ನು ಸ್ವಚ್ಛವಿರುವ ಒಂದು ಬಾಟ್ಲಿಯಲ್ಲಿ ಹಾಕಿ, ಬಿಮ್ಮಗಾದ ಬಿರಿಡೆಯಿಂದ ಮುಚ್ಚಿ ಜೋಕೆ ಮಾಡಿ ಇಟ್ಟರೆ, ಆಗಾಗ್ಯೆ ಬಹಳ ಕೆಲಸಕ್ಕೆ ಬರುತ್ತದೆ.

೨೨೭. ವರಿಶೇಜ್ವರವು ಸಾಧಾರಣವಾಗಿ ಬೇರೆ ರೋಗದ ಸಂಗಡ ಕೂಡದೆ ಇದ್ದ ಪಕ್ಷಕ್ಕೆ, ಅದಕ್ಕೆ ಕೊಯನಾನು (quinine) ೩ ಗ್ರೇನ್‌ನಿಂದ ೫ ಗ್ರೇನ್ ವರೆಗೆ ಜ್ವರ ಬಿಟ್ಟ ಕಾಲದಲ್ಲಿ ಕೊಡುತ್ತಾ, ಒಟ್ಟಿಗೆ ೧೦—೧೨ ಗ್ರೇನ್ ಹಿಡಿಯುವ ತನಕ ಕೊಟ್ಟು, ಮಲಮೂತ್ರ ಸರಾಗವಾಗಿ ಇರುವಂತೆ ಜಾಗ್ರತೆ ತಕ್ಕೊಂಡರೆ ಮಾತ್ರ ಸಾಕಷ್ಟೆ. ಈ ಕೊಯನಾನನ್ನು ಆ ಪರಿಮಾಣದಲ್ಲಿ ಬರೇ ನೀರಿನಲ್ಲಾಗ್ಯಲೀ, ಕಾಫೀನೀರಿನಲ್ಲಾಗ್ಯಲೀ ಕಲಕಿಸಿ ಕೊಡುವದು ಉತ್ತಮ. ಮೆಕ್ಲೀನ್ ಎಂಬ ವೈದ್ಯಪಂಡಿತರು ಕಠಿಣ ಜ್ವರಗಳಲ್ಲಾಗ್ಯಲೀ, ಸಾಧಾರಣ ಜ್ವರಗಳಲ್ಲಾಗ್ಯಲೀ ಹೇಳುವ ಚಿಕಿತ್ಸಾಕ್ರಮವು ಬಹಳ ಸರಿಯಾದದ್ದೆಂದು ಕಾಣುತ್ತದೆ; ಮತ್ತು ಅದರ ಅನುಸರಣೆಯು ಅವರ ಕೈಯಲ್ಲಿ ಅನೇಕ ವರುಷಗಳಿಂದ ತಪ್ಪದೆ ಜಯಗೊಂಡದೆ. ಹ್ಯಾಗಂದರೆ: ೩೦ ಗ್ರೇನ್ ಕೊಯನಾನು ೩ ಸಮಪಾಲು ಮಾಡಿ, ಜ್ವರ ಇಲ್ಲದ ಕಾಲದಲ್ಲಿ ಕೊಡುವದು: ಮೊದಲನೇ ಪಾಲು ನೀರಿನಲ್ಲಿ ಕಲಕಿಸಿ, ಜ್ವರ ಬಿಟ್ಟು ಮೈ ಬೆವರುವ ಹೊತ್ತಿನಲ್ಲಿ ಕೊಡುವದು; ಎರಡನೇ ಪಾಲು ಪೂರ್ಣ ಜ್ವರ ಬಿಟ್ಟು ಪುನಹಾ ಜ್ವರದ ಆವರ್ತನೆಯು ಶುರು ಆಗುವ ಅವಧಿಯ ನಡುವೆ ಕೊಡುವದು; ಮೂರನೇ ಪಾಲು ಪುನಹಾ ಜ್ವರ ಬರುವ ಒಂದು ತಾಸಿಗೆ ಮುಂಚೆ ಕೊಡುವದು. ವಿಶೇಷ ಅನ್ನಕೋಶದ ಅಕ್ರಮವಿದ್ದರೆ, ಅದನ್ನು ೧೦ ಗ್ರೇನ್ ಬದಲಿಗೆ ೧೫ ಗ್ರೇನ್ ಪರಿಮಾಣದಲ್ಲಿ ನೀರಿನಲ್ಲಿ ಕಲಕಿಸಿ ಪಿಚಕಾರಿಯಾಗಿ ಗುದದ್ವಾರದಿಂದ ಹೊಡಿಯ ಬಹುದು. ಈ ವಿಧದಿಂದ ಜ್ವರದ ಆವರ್ತನೆಯು ನಿಂತು ಹೋದ ಬಳಿಕ ಸಾಧಾರಣ ತರದ ಕೊಯನಾನಿನ ಗುಣಾವಸ್ಥೆಯು (ಅಂದರೆ ಶಿರೋಭ್ರಮಣ, ಕಿವಿಗಳಲ್ಲಿ ಝೇಂಕರಿಸುವದು, ಕಣ್ಣಿಗೆ ಕಿಡಿಗಳಂತೆ ತೋರುವದು ಇತ್ಯಾದಿ) ಕಂಡರೆ, ೪ ತಾಸುಗಳಿಗೆ ಒಮ್ಮೆ ೩ ಅಥವಾ ೪ ಗ್ರೇನ್ ಕೊಯನಾನು ಕೊಟ್ಟು, ಕೆಲವು ದಿವಸಗಳ ವರೆಗೆ ಸಂಭಾಳಿಸುವದು. ಜ್ವರವು, ಕೆಲವು ಸಾರಿ ಆಗುವಂತೆ, ಹುಣ್ಣಿಮೆ ಅಮಾವಾಸೆಗೆ ಒಮ್ಮೆ ಬರುವಂಥಾ ಸಂಗತಿಗಳಲ್ಲಿ ಜ್ವರ ಬರುವ ಒಂದೆರಡು ದಿನಕ್ಕೆ ಮುಂಚೆ ಕೊಯನಾನು ಕೊಡುವದಕ್ಕೆ ತೊಡಗಿ, ಅದರ ಅವಧಿ ತೀರುವ ವರೆಗೆ ಕೊಡುತ್ತಾ ಇರ ಬೇಕು. ಇದರಿಂದ ಜ್ವರ ಹೋಗದ ಪಕ್ಷಕ್ಕೆ, ಕಲಿಜ ಮತ್ತು ಕರುಳುಗಳ ಅವಸ್ಥೆಯ ವಿಷಯದಲ್ಲಿ ಮನಸ್ಸು ಕೊಡಬೇಕು. ಕೊಯನಾನು ಯಾವ ಕಾರಣದಿಂದಾದರೂ ಹೊಟ್ಟೆಯೊಳಗೆ ಕೊಡಲಿಕ್ಕೆ ಸಂದರ್ಭವಿಲ್ಲದಿದ್ದರೆ, ಅದನ್ನು ಚರ್ಮದೊಳಗೆ ಘಾಯ ಮಾಡಿ ಹೊಗಿಸ ಬಹುದು. ಚನ್ನಾಗಿ ಬರುವ ಜ್ವರದಲ್ಲಿ ಚರ್ಮದ ದ್ವಾರಾ ಕೊಯನಾನು ದೇಹದೊಳಗೆ ಆವರಿಸುವ ಈ ಕ್ರಮವು ಅದನ್ನು ಹೊಟ್ಟೆಯೊಳಗೆ ಕೊಟ್ಟಷ್ಟೇ ಗುಣಕರವಾಗಿರುವದು; ಇದನ್ನು ಪರೀಕ್ಷಿಸಿದ ಗ್ವಾಸ್ಥಮಖಿಯಾ ಎಂಬ ವೈದ್ಯಪಂಡಿತರು ೮ ಗ್ರೇನ್ ಕೊಯನಾನು ಅರ್ಧ ಔನ್ಸ್ ದ್ರಾವಕ(spirit)ದಲ್ಲಿ ಕಲಕಿಸಿ, ಅರೆವಾಸಿಯನ್ನು ಬೆನ್ನೆಲುಬಿಗೆ ಚನ್ನಾಗಿ ತಿಕ್ಕಿ, ಕಾಲು ತಾಸಿನನಂತರ ಉಳಿದ ಅರೆವಾಸಿಯನ್ನು ಅದೇ ಮೇರೆಗೆ ತಿಕ್ಕುವರು. ಈ ಪ್ರಕಾರ ಮೈಛಳಿ ಇರುವ ಕಾಲದಲ್ಲಿ ತಿಕ್ಕಿದರಿಂದ,

ಪುನಹಾ ಜ್ವರದ ಆವರ್ತನೆ ಬರಲಿಲ್ಲಾ.—ಬಿಡದೆ ಬರುವ ಮಲೇ ಜ್ವರದಲ್ಲಿ ಕೊಯನಾನು ಅತಿ ವಿಶೇಷ ಗುಣವುಳ್ಳ ಔಷಧಿಯಾಗಿರುತ್ತದೆ. ಆದರೆ ಬಿಟ್ಟು ಬರುವ ಸಾಧಾರಣ ಜ್ವರದಲ್ಲಿ ಕೊಡುವದಕ್ಕಿಂತಲೂ ಅದರಲ್ಲಿ ಹೆಚ್ಚು ಜಾಗ್ರತೆಯಿಂದಲೂ ಶೋಧನೆಯಿಂದಲೂ ಕೊಡ ಬೇಕು. ಈ ವಿಷಯದಲ್ಲಿ ಮೆಕ್ಲೀನ್ ವೈದ್ಯಪಂಡಿತರು ಹೇಳುವ ಸೂಚನೆಯನ್ನು ಲಕ್ಷಿಸ ತಕ್ಕದ್ದು: ಅನೇಕ ಸಂಗತಿಗಳಲ್ಲಿ ಜ್ವರ ಬಿಡುವ ಕುರುಹುಗಳು ಕಾಣ ಬರುತ್ತಲೇ, ಪ್ರಥಮತಾ ಮಲಶೋಧಕ ಔಷಧ ಕೊಟ್ಟು, ಆ ಮೇಲೆ ಕೊಯನಾನು ಪೂರ್ಣ ಪರಿಮಾಣದಲ್ಲಿ (ಅಂದರೆ ೧೦ ಗ್ರೆನ್ ಬಹುಶಾ ೧೫ ಗ್ರೇನ್, ಕೆಲವು ಸಾರಿ ೨೦ ಗ್ರೇನ್ ವರೆಗೆ ಸಹ) ಕೊಡುವದು; ಆದರೆ ಕಡೇ ಪರಿಮಾಣಕ್ಕಿಂತ ಹೆಚ್ಚಿಸಲಿಲ್ಲಾ. ಮತ್ತು ಆದರಿಂದ ತಲೆಶಿಡತವಾಗಲೀ, ನಾಲಿಗೆಗೆ ಅಗ್ರವಾಗಲೀ ಇದ್ದ ದಶೆಯಿಂದಾದರೂ, ಜ್ವರ ಬಿಡುವ ಸಮಯವು ಬಹು ಸ್ವಲ್ಪವಾಗಿ ಅಥವಾ ಅಪೂರ್ಣವಾಗಿ ಇದ್ದದರಿಂದಾದರೂ ಹಿಂಜರಿಯಲಿಲ್ಲಾ; ಮತ್ತು ಮೇಲೆ ಹೇಳಿದ ಪರಿಮಾಣದಲ್ಲಿ ರೋಗಿಗೆ ಎರಡು ತಾಸಿಗೆ ಒಮ್ಮೆ ಕೊಟ್ಟು, ಒಟ್ಟಿಗೆ ಪುನಹಾ ಜ್ವರ ಬರುವಷ್ಟರೊಳಗೆ ೩೦ ಯಾ ೩೫ ಗ್ರೇನ್ ವರೆಗೆ ಸಹ ಕೊಟ್ಟದ್ದುಂಟು; ಅನ್ನಕೋಶವು ಅದನ್ನು ತಡಿಯಲಾರದಷ್ಟು ಕದಲಿದ್ದ ಪಕ್ಷಕ್ಕೆ, ಕೊಯನಾನು ಒಂದೊಂದು ಸಾರಿಗೆ ೨೦ ಗ್ರೇನ್ ಪರಿಮಾಣದಲ್ಲಿ ಪಿಚಕಾರಿಯಿಂದ ಗುದದ್ವಾರಾ ಕೊಡ ಬಹುದು. ಜ್ವರದ ಎರಡನೇ ಬಿಡುಗಡೆಯು ಕಾಣ ಬರುತ್ತಲೇ ಮೇಲೆ ಹೇಳಿದ ತರದಲ್ಲಿ ಕೊಯನಾನಿನ ಅವಸ್ಥೆ ಇಲ್ಲವೆ ಜ್ವರದ ಪೂರಾ ಇಳಿತ ಉಂಟಾಗುವ ತನಕ ಪುನಹ ಕೊಡುವದು; ಜ್ವರ ಬಿಟ್ಟ ಕಾಲದಲ್ಲಿ ರೋಗಿಗೆ ಸಾಧಾರಣವಾದ ಕೂವೆ ಹಿಟ್ಟು ಮುಂತಾದ ಸುಲಭ ಜೀರ್ಣಕರ ಆಹಾರ, ಹಾಲು ಇತ್ಯಾದಿ ಕೊಡ ಬೇಕು. ಹೊಟ್ಟೆಯ ಅಕ್ರಮ ಶಾಂತವಾಗುತ್ತಲೇ ಮಾಂಸಸಾರು ಕೊಡ ಬಹುದು. ಮತ್ತು ನಿಶ್ಚೇತನದ ಕುರುಹುಗಳು ಕಾಣ ಬರಲಾಗಿ ಪುಷ್ಟಿಕರ ಆಹಾರವನ್ನೂ ಉತ್ತೇಜಕ ಪಾನವನ್ನೂ ಆಗಾಗ್ಯೆ ಕೊಡ ಬೇಕು. ಜ್ವರದ ಉರುಬು ಇರುವ ಕಾಲದಲ್ಲಿ ಕೊಯನಾನು ಕೊಡುವ ವಿಷಯದಲ್ಲಿ ಮೆಕ್ಲೀನ ವೈದ್ಯಪಂಡಿತರು—ಹಿಂದುಸ್ಥಾನದ ಕೆಲವು ಭಾಗಗಳಲ್ಲಿ ಬರುವಂಥಾ ಲಘುತರದ ಜ್ವರಗಳಲ್ಲಿಯೂ, ಅಜಾಗ್ರತೆಯಿಂದಾಗಲೀ ಕ್ರಮ ತಪ್ಪಿಯಾಗಲೀ ಚಿಕಿತ್ಸಿಸಲ್ಪಟ್ಟ ಸಂಗತಿಗಳಲ್ಲಿಯೂ, ರಕ್ತ ತೆಗದದ್ದು ಬಹಳ ಅತಿರೇಕವಾಗಿ, ಜ್ವರವು ಮಂದ ತರದಾಗಿದ್ದರೆ, ಕೊಯನಾನು ಯಾವ ಹೊತ್ತಿನಲ್ಲ್ಯಾದರೂ, ಜ್ವರ ಬಿಡುವ ಕಾಲವನ್ನು ಲಕ್ಷಿಸದೆ, ಕೊಡ ಬಹುದೆಂದು ಆಲೋಚಿಸುತ್ತಾರೆ. ಈ ಸಂಗತಿಯಲ್ಲಿ ಆಹಾರವನ್ನೂ ಉತ್ತೇಜಕವನ್ನೂ ಆಗಾಗ್ಯೆ ಕೊಡುತ್ತಾ ಬರುವದು ಅಗತ್ಯವಾದೀತು.—ಮಲೇ ಜ್ವರವು ಬಾರದಂತೆ ಅಭ್ಯಂತರಿಸುವದಕ್ಕೆ ಸಹ ಕೊಯನಾನು ಬಹಳ ಪ್ರಯೋಜನವಾದದ್ದೆಂದು ಸಂದೇಹವಿಲ್ಲದೆ ಮಾನ್ಯ ಪಟ್ಟಿರುತ್ತದೆ. ಮಲೆಗಳಲ್ಲಿ ಆಗಲೀ ಹುದಲು ಸ್ಥಳಗಳಲ್ಲಿ ಆಗಲೀ ಕಾಡುಗಳಲ್ಲಿ ಆಗಲೀ ಕಾಲಕ್ಷೇಪ ಮಾಡುವಂಥವರು ಕೊಯನಾನು ಸಾಕಷ್ಟು ಒದಗಿಸಿ ಇಟ್ಟುಕೊಂಡು, ದಿನಾಲು ಹೊತ್ತಾರೆ ಒಂದು "ಕೋಪ್" ಬಿಶಿ ಕಾಫೀನೀರಿನಲ್ಲ್ಯಾಗಲೀ, ಇಲ್ಲವೆ ಮಧ್ಯಾನ್ಹದ ಮೇಲೆ ಒಂದು ಗ್ಲಾಸ್ (wine) ದ್ರಾಕ್ಷೇ ರಸದಲ್ಲಿ ಆಗಲೀ ೪ ಗ್ರೇನ್ ಕೊಯನಾನು ಹಾಕಿ ಬರೀ ಹೊಟ್ಟೆಗೆ ತಕ್ಕೊಳ್ಳ ತಕ್ಕದ್ದು. ಒಂದು ವೇಳೆ ಅಪರೂಪ ಸಂಗತಿಯಲ್ಲಿ ಅದು ಹಿಡಿಯದಿದ್ದಾಗ್ಯೂ, ಅದರ ಉಪಯೋಗದಿಂದ ಬಾಧಕವೇನೂ ಇಲ್ಲಾ; ಮತ್ತು ಮಲಪ್ರದೇಶವನ್ನು ಬಿಟ್ಟ ಮೇಲೆಯೂ ಕನಿಷ್ಟ ಪಕ್ಷಕ್ಕೆ ೧೪ ದಿವಸಗಳ ವರೆಗಾದರೂ ಅದನ್ನು ತಕ್ಕೊಳ್ಳ ಬೇಕು.

೨೨೮. ಈ ದೇಶಸ್ಥರ ವರಿಶೇಜ್ವರಗಳಲ್ಲಿ ಮಾಚೀಕಾಯಿ[1] ಪುಡಿ ೨೦ರಿಂದ ೩೦ಗ್ರೇನ್ ವರೆಗೆ ದಿನಕ್ಕೆ ೩-೪ ಸಾರಿ ಕೊಡುವದರಿಂದ ಬಹಳ ಗುಣ ಕಂಡಿರುತ್ತದೆ; ಅಥವಾ ಚಿಕ್ಕ ಪರಿಮಾಣವಾಗಿ, ಅಂದರೆ ೧೦ ಯಾ ೧೨ ಗ್ರೇನ್ ಮಾಚೀಕಾಯಿ ಚೂರ್ಣವನ್ನು ೧½ ಔನ್ಸ್ ಕಿರಿಯಾತು ಎಂಬ ನೆಲಬೇವಿನ ಕಲ್ಕ(೧೦[2])ದಲ್ಲಿ ಕಲಕಿಸಿ, ಜ್ವರ ಬರುವ ಮುಂಚೆ ತಾಸಿಗೆ ಒಂದು ಸಾರಿ ಮೇರೆಗೆ ನಾಲ್ಕೈದು ಸಾರಿ ಫಲಕರವಾಗಿ ಕೊಡ ಬಹುದು. ಪ್ರಾಯ ಪ್ರಬುದ್ಧರಿಗೆ ಮಾತ್ರ ತಕ್ಕಂಥಾ ಈ ಔಷಧವನ್ನು ಕೊಡುವದಕ್ಕೆ ಮುಂಚೆ ಪ್ರಥಮತಾ ಯಾವ ಸಂಗತಿಯಲ್ಲಿ ಆದರೂ ವಿರೇಚಕ ಔಷಧ ಕೊಡ ಬೇಕು.

೨೨೯. ಬಜೇ ಕಲ್ಕವನ್ನು (೧೨[3]) ಒಂದು ವೈನ್ ಗ್ಲಾಸಿನಷ್ಟು (ಅಂದರೆ ಶುಮಾರು ಕಾಲು ಕುಡುತೆಯನ್ನು) ತೆಗದು, ಅದಕ್ಕೆ ಅರೆವಾಶಿ ಕಿರಿಯಾತಿನ ಕಲ್ಕ ಕೂಡಿಸಿ, ದಿನಕ್ಕೆ ೨-೩ ಸಾರಿ ಕೊಡುವದರಿಂದ ಈ ದೇಶಸ್ಥರ ವರಿಶೇಜ್ವರಗಳಲ್ಲಿ ಬಹಳ ಫಲಕರವಾಗುವದು. ಇದರ ಗುಣವು ಸಾಧಾರಣ ಜ್ವರಗಳಲ್ಲಿ ಮಾತ್ರ ವಿಶೇಷವಾಗಿ ಹಿಡಿಯುವಂಥದ್ದಾದಾಗ್ಯೂ, ಜ್ವರದ ತರುವಾಯ ಉಂಟಾಗುವ ಅಶಕ್ತಿಯಲ್ಲಿ ಉತ್ತಮ ತೇಜವರ್ಧಕ ಔಷಧವಾಗಿ ಕೊಡ ತಕ್ಕದಾಗಿರುತ್ತದೆ.

ಛಳಿಜ್ವರದಿಂದ ಉಂಟಾಗುವ ಗುಲ್ಮವ್ಯಾಧಿ, ಜರಗಡ್ಡೆ (ಜರಗೆಂಡೆ)

Ague Cake.

ಇದರ ಚಿಕಿತ್ಸೆಯನ್ನು ೧೮೮೦ನೇ ಇಸವಿಯ ಪಂಚಾಂಗದ ೩೬, ೩೮ನೇ ಪಾನುಗಳಲ್ಲಿ ನೋಡು.

ಜಜ್ಜುವಿಕೆ (ಪೆಟ್ಟು ತಾಗಿ ರಕ್ತ ಹೆಪ್ಪುಗಟ್ಟುವದು) Bruises.

ಇದಕ್ಕೆ ೧೮೮೦ನೇ ಇಸವಿಯ ಪಂಚಾಂಗದ ೪೬-೪೮ನೇ ಪಾನುಗಳಲ್ಲಿ ಚಿಕಿತ್ಸೆಯನ್ನು ಹೇಳಿರುತ್ತದೆ. ಅದಲ್ಲದೆ ಪೆಟ್ಟು ತಾಗಿ ಜಜ್ಜಿ ಹೋಗಿ ರಕ್ತ ಹೆಪ್ಪುಗಟ್ಟಿದ ಮೈಭಾಗಕ್ಕೆ ಬಹಳ ನೋವಿದ್ದರೆ, ರಕ್ತಬೋಳವನ್ನು[4] ನೀರಿನಲ್ಲಿ ಅರದು, ಬಿಸಿ ಮಾಡಿ ಲೇಪಿಸುವದರಿಂದ ನೋವು ಕಳೆಯುವದು.

---

[1] ೧೮೭೬ನೇ ಇಸವಿಯ ಪಂಚಾಂಗದ ೩೫ನೇ ಪಾನಿನ ೨ನೇ ಟಿಪ್ಪಣಿಯನ್ನು ನೋಡು.—ಮಾಚೀಕಾಯಿ ಜಾಜೀಕಾಯಷ್ಟು ದೊಡ್ಡದಾಗಿ ಸ್ವಲ್ಪ ಅರಸಿನಬಿಳುಪು ವರ್ಣದ್ದಾಗಿರುವದು. ಔಷಧದಲ್ಲಿ ಇದನ್ನು ಎರಡು ವಿಧವಾಗಿ ಪ್ರಯೋಗಿಸ ಬಹುದು: ಮಾಚೀಕಾಯಿ ಒಣಗಿಸಿ ಚನ್ನಾಗಿ ಕುಟ್ಟಿ ಪುಡಿ ಮಾಡಿ ಇಡುವದು; ಇದರಿಂದ ೧೦-೨೦ಗ್ರೇನ್ ವರೆಗೆ ಕೊಡ ಬಹುದು. ಆದರೆ ಅದಕ್ಕಿಂತ ಒಳ್ಳೇದಾದ ಕಷಾಯ ಹ್ಯಾಗಂದರೆ: ೧½ಔನ್ಸ್(=೩½ತೊಲೆ) ಮಾಚೀಕಾಯಿಗಳನ್ನು ತಂದು ಜಜ್ಜಿ, ೧ಪ್ಯಾಂಟು (ಶುಮಾರು ೨ಶೇರು) ನೀರಿನಲ್ಲಿ ಕಷಾಯಕ್ಕೆ ಇಟ್ಟು ಚನ್ನಾಗಿ ಕುದಿಸಿ, ಆ ಮೇಲೆ ಕೆಳಗೆ ಇಳಿಸಿ, ತಣ್ಣಗಾದ ಮೇಲೆ ಗಾಳಿಸಿ ತೆಗಿಯುವದು ಇದರಿಂದ ೧-೨ ಔನ್ಸ್ ದಿನಕ್ಕೆ ಮೂರು ಸಾರಿ ಯಾ ಹೆಚ್ಚು ಸಾರಿ ಕೊಡ ಬಹುದು. ಈ ಕಷಾಯವು ಒಗರಾಗಿರುವದರಿಂದ ಹುಣ್ಣು ಮುಂತಾದ್ದನ್ನು ತೊಳಿಯುವದಕ್ಕೂ ಬಾಯಿಯಲ್ಲಿ ಮುಕ್ಕಳಿಸುವದಕ್ಕೂ ಪ್ರಯೋಜನವಾಗಿರುವದು.

[2] ೧೮೭೬ನೇ ಇಸವಿಯ ಪಂಚಾಂಗದ ೨೮ನೇ ಪಾನಿನಲ್ಲಿ ನೋಡು.

[3] ೧೮೭೬ನೇ ಇಸವಿಯ ಪಂಚಾಂಗದ ೨೮ನೇ ಪಾನಿನಲ್ಲಿ ನೋಡು.

[4] ೧೮೮೩ನೇ ಇಸವಿಯ ಪಂಚಾಂಗದ ೫೬ನೇ ಪಾನಿನಲ್ಲಿ ೫೯ನೇ ಅಂಕೆಯ ಟಿಪ್ಪಣಿ ನೋಡು.

ಜಲಮಸ್ತಕರೋಗ (ಮಸ್ತಿಷ್ಕವೆಂಬ ಮೆದುಳಿನಲ್ಲಿ ನೀರು ಉಂಟಾಗೋಣ)

Water on the Brain (Hydrocephalus).

ತಲೆಯಲ್ಲಿ ಬೀಗು ಉಂಟಾಗಿ ಬೆಳದು, ನೀರು ದೋರಿ, ಆದರ ಇತರ ಲಕ್ಷಣಗಳ ಸಮೇತ ಉಂಟಾಗುವ ಈ ರೋಗವು ನಂಜು ತರದ (scrofulous) ಶರೀರಪ್ರಕೃತಿಯುಳ್ಳ ಮಕ್ಕಳಿಗೆ ಉಂಟಾಗಿ ಅವು ಚೇತನವಿಲ್ಲದೆ ಸೊರಗಿ ಹೋಗಿದ್ದರೆ, ಅಂಥಾ ಮಕ್ಕಳಿಗೆ ಆಗಾಗ್ಯೆ ಮೀನಿನ ಎಣ್ಣೆ (೨೩೦) ಗುಣಕರವಾಗಿ ಕೊಡ ಬಹುದು.

೨೩೦. ನಂಜು ಶರೀರದ ಮಕ್ಕಳಿಗೆ (ಜಲಮಸ್ತಿಷ್ಕವೆಂಬ) ಮಸ್ತಕದಲ್ಲಿ ನೀರು ಉಂಟಾಗುವ ರೋಗದಲ್ಲಿಯೂ, ನಡುಕರುಳಿನ (mesenteric) ವ್ಯಾಧಿಯಲ್ಲಿಯೂ, ಮೀನಿನ ಎಣ್ಣೆಯನ್ನು (೧೮೭೬ನೇ ಇಸವಿಯ ಪಂಚಾಂಗದ ೨೬ನೇ ಪಾನಿನ ೭ನೇ ಅಂಕೆಯಲ್ಲಿಯೂ ಅದರ ಟಿಪ್ಪಣಿಯಲ್ಲಿಯೂ ವಿವರಿಸಿದಂತೆ) ಕೊಡುವದರಿಂದ ಉತ್ತಮ ಫಲ ಬರುವದು; ಹ್ಯಾಗಂದರೆ ಚಿಕ್ಕ ರೋಗಿಯು ಬಹು ಲಘುವಾಗಿ ಶಕ್ತಿಯೂ ಮಾಂಸವೃದ್ಧಿಯೂ ಹೊಂದುತ್ತಾ, ಉಬ್ಬಿದ ಹೊಟ್ಟೆ ಜೀರ್ಣವಾಗುತ್ತಾ, ಮಣ್ಣಿನ ವರ್ಣದ ಮಲವು ಮಾರ್ಪಟ್ಟು ಅರಸಿನದಾಗಿ ಆರೋಗ್ಯ ಸ್ಥಿತಿಗೆ ಬರುತ್ತಾ ಇರುವದು. ಈ ಮೀನಿನ ಎಣ್ಣೆಯನ್ನು ಹೊಟ್ಟೆಯೊಳಗೆ ಕೊಡುವದಲ್ಲದೆ, ಕಿರಿಹೊಟ್ಟೆಗೆ ಲೇಪನವಾಗಿಯೂ ಪ್ರಯೋಗಿಸ ಬಹುದು. ಮಕ್ಕಳಿಗೆ ಕಠಿಣ ತರದ ಮಲಬದ್ಧತೆ ಇದ್ದಾಗ್ಯೂ, ಈ ಎಣ್ಣೆಯ ದೆಶೆಯಿಂದ ನಿವಾರಣೆಯಾಗಿ, ಅದು ಕೊಡುತ್ತಾ ಇರುವಷ್ಟು ಕಾಲಕ್ಕೆ ಪುನಹಾ ಮಲಬದ್ಧತೆ ಬರಲಿಕ್ಕಿಲ್ಲಾ.

ಜಲೋದರ (ಶೋಫ ಯಾನೆ ಬೀಗು) Dropsy.

ಜಲೋದರವೆಂದರೆ: ಸರ್ವಾಂಗವಾಗಲೀ, ದೇಹದ ಒಂದು ಭಾಗದಲ್ಲಿ ಆಗಲೀ ನೀರು ಅಥವಾ ವಾಯು ತುಂಬಿ ಉಬ್ಬುವದು. ಶಕ್ತಿಯುಳ್ಳ ಯೌವನ ಪ್ರಾಯದವರಿಗೆ ಈ ರೋಗ ಉಂಟಾದರೆ, ಪ್ರಥಮತಾ ಜಾಫಲದ ಮಾತ್ರೆ (೫೯[1]) ಅಥವಾ ಎಣ್ಣೆ (೬೦[1]) ಆಗಲೀ ಕರಿಜೀರಿಗೆ ಆಗಲೀ ಕೊಟ್ಟು, ಚನ್ನಾಗಿ ಮಲಶೋಧನೆ ಮಾಡಿಸಿದ ಬಳಿಕ ಮೂತ್ರ ಹೆಚ್ಚಿಸುವಂಥ ಕೊಳವಳಿಕೇ ಬೇರಿನ ಕಷಾಯ (೨೩೧), ನುಗ್ಗೇಗಿಡದ ಕಲ್ಕ(೨೩೨), ಸಾಸಿವೆ ಮಜ್ಜಿಗೆ (೨೩೩), ಅಥವಾ ಆನೆನೆಗ್ಗಿಲು ಗಿಡದ ಕಲ್ಕ (೨೩೪) ಕೊಡುವದು. ಇದರಲ್ಲಿ ಯಾವದೊಂದರ ಸಂಗಡ ಪಟ್ಲುಪ್ಪಾಗಲೀ (೨೩೫), ನವಸಾಗರವಾಗಲೀ (೨೩೬), ಸಂಗತ್ಯಾನುಸಾರವಾಗಿ ಬೆರಸಿ ಕೊಡ ಬಹುದು. ರೋಗವು ಇತ್ತಲಾಗಿನದಾಗಿದ್ದರೆ, ಪಬೇಮಜ್ಜನ (೨೧೭) ಮಾಡುವಷ್ಟು ಶಕ್ತಿಯುಳ್ಳ ರೋಗಿಗೆ ವಾರಕ್ಕೆ ೨ ಸಾರಿ ಅದನ್ನು ಪ್ರಯೋಜನಕರವಾಗಿ ಕೊಡ ಬಹುದು. ರೋಗಿಯು ಅಶಕ್ತನಾಗಿದ್ದು, ರಕ್ತಛಾಯೆ ಇಲ್ಲದವನಾಗಿದ್ದರೆ, ಅನ್ನಭೇದಿ (೮೬[2]), (೨೩೭) ಸಹ ಕೊಟ್ಟು ನೋಡ ಬಹುದು.

---

[1] ಇವೆರಡು ಅಂಕೆಗಳನ್ನು ೧೮೭೭ನೇ ಇಸವಿಯ ಪಂಚಾಂಗದ ೨೪, ೨೫ನೇ ಪಾನುಗಳಲ್ಲಿಯೂ ೨೪ನೇ ಪಾನಿನ ಟಿಪ್ಪಣಿಯಲ್ಲಿಯೂ ನೋಡು.

[2] ೧೮೭೯ನೇ ಇಸವಿಯ ಪಂಚಾಂಗದ ೪೪ನೇ ಪಾನಿನಲ್ಲಿ ನೋಡು.

೨೩೧. ಅಂಗಡಿಯಲ್ಲಿ ಮಾರಲ್ಪಡುವ ಕೊಳವಳಿಕೆ[1] ಗಿಡದ ಬೇರು ಜಲೋದರ, ಮಹೋದರ ಮುಂತಾದ ಮೈಯಲ್ಲಿ ನೀರು ತುಂಬುವ ರೋಗಗಳಲ್ಲಿ ಒಳ್ಳೇ ಮೂತ್ರವರ್ಧಕ ಔಷಧಿ ಎಂದು ಈ ದೇಶಸ್ಥರೊಳಗೆ ಹೆಸರುಗೊಂಡಿರುತ್ತದೆ; ಈ ಪ್ರಶಸ್ತತೆಯು ವಿಲಾಯತಿಯವರ ಅನುಭವದಿಂದ ಬಹಳ ಮಟ್ಟಿಗೆ ಸ್ಥಾಪಿತವಾಗುವದಾಯಿತು. ಇದರ ಕಷಾಯ ಮಾಡಿ ಕೊಡುವದು ಹ್ಯಾಗಂದರೆ: ೧ ಔನ್ಸ್ (ಅಂದರೆ ೨½ ತೊಲೆ) ಕೊಳವಳಿಕೆ ಬೇರು ಜಜ್ಜಿ, ೧ ಪ್ಯಾಂಟು ನೀರಿನಲ್ಲಿ ಹಾಕಿ, ೧೦ ನಿಮಿಷಗಳ ವರೆಗೆ ಬೆಂಕೀ ಮೇಲಿಟ್ಟು ಕುದಿಸುವದು; ತರುವಾಯು ತೆಗದು ಗಾಳಿಸಿ, ಅಷ್ಟನ್ನೆಲ್ಲಾ ಆಗಾಗ್ಯೆ ಸ್ವಲ್ಪ ಸ್ವಲ್ಪ ಪರಿಮಾಣವಾಗಿ ಒಪ್ಪತ್ತು ತಕ್ಕೊಳ್ಳುವದು. ಈ ಕೆಳಗಿನ ಕ್ರಮವು ಕನೈಲಾಲ್‌ದೇ ಎಂಬ ವೈದ್ಯಪಂಡಿತರಿಂದ ಸೂಚಿಸೋಣಾಗಿರುತ್ತದೆ: ೨ ಔನ್ಸ್ (ಅಂದರೆ ೫ ತೊಲೆ) ಹಸಿಯಾದ ಕೊಳವಳಿಕೇ ಎಲೆಗಳನ್ನು ತಂದು, ೧೬ ಔನ್ಸ್ ಬಟ್ಟಿ ಹಾಕಿದ ಸಿರ್ಕ (vinegar) ಎಂಬ ಹುಳಿ ರಸದಲ್ಲಿ ಮೂರು ದಿವಸಗಳ ವರೆಗೆ ತೋಯಿಸ ಹಾಕಿ, ಆ ಮೇಲೆ ತೆಗದು ಚನ್ನಾಗಿ ಗಿವಚಿ ಗಾಳಿಸಿ ತೆಗಿಯುವದು. ಇದರಿಂದ ಒಂದು ಸಾರಿಗೆ ೧-೩ ಮೇಜಿನ ಸೌಟುಗಳ ವರೆಗಿನ ಪರಿಮಾಣದಲ್ಲಿ ನೀರಿನಲ್ಲಿ ಹಾಕಿ ದಿನಕ್ಕೆ ಮೂರು ಸಾರಿ ಕೊಡುವದು.

೨೩೨. ನುಗ್ಗೇಗಿಡದ[2] ಬೇರು ವೈದ್ಯದಲ್ಲಿ ಉತ್ತೇಜಕ ಮತ್ತು ಮೂತ್ರವರ್ಧಕ ಗುಣವುಳ್ಳದ್ದೆಂದು ನಿಶ್ಚೈಸುವದಕ್ಕೆ ಸಾಕಷ್ಟು ಕಾರಣಗಳು ಕಂಡು ಬಂದಿರುತ್ತವೆ. ಇಂಥಾ ಗುಣದ ದೆಶೆಯಿಂದ ಅದನ್ನು ಅಶಕ್ತಿ ಸಹಿತವಾದ ಜಲೋದರದ ರೋಗದಲ್ಲಿ ಕೊಟ್ಟು ನೋಡ ತಕ್ಕದ್ದು. ಹ್ಯಾಗಂದರೆ: ನುಗ್ಗೇ ಬೇರು ೧ ಔನ್ಸ್, ಸಾಸಿವೆ ೧ ಔನ್ಸ್, ಇವೆರಡನ್ನು ಜಜ್ಜಿ ೧ ಪ್ಯಾಂಟು ಕುದಿಯುವ ನೀರಿನಲ್ಲಿ ಹಾಕಿ ಎರಡು ತಾಸಿನ ವರೆಗೆ ಮುಚ್ಚಿಟ್ಟು, ಆ ಮೇಲೆ ತೆಗದು ಗಾಳಿಸುವದು. ಇದರಿಂದ ಒಂದು ಸಾರಿಗೆ ½ ಔನ್ಸ್ (ಅಂದರೆ ೧ ವ್ಯಾನ್ ಗ್ಲಾಸ್ ತುಂಬ) ದಿನಕ್ಕೆ ಮೂರು ಸಾರಿ ಕೊಡುವದು. ಈ ಕಲ್ಕವನ್ನು ಪಟ್ಲುಪ್ಪು ಮುಂತಾದ ಇತರ ಜೋರುಳ್ಳ ಔಷಧಗಳ ಸಂಗಡ ಸಹ ಕೊಡ ಬಹುದು.

೨೩೩. ಜಲೋದರದಲ್ಲಿ ಸಾಸಿವೆಯು ಬಹಳ ಪ್ರಯೋಜನವುಳ್ಳದ್ದು; ಅದನ್ನು ಉತ್ತಮ ವಿಧವಾಗಿ ಕೊಡುವದು ಹ್ಯಾಗಂದರೆ: ½ ಔನ್ಸ್ ಸಾಸಿವೆಯನ್ನು ೧ ಪ್ಯಾಂಟು ಹಾಲಿನಲ್ಲಿ ಅರದು ಬಿಸಿ ಮಾಡಿ ಗಾಳಿಸಿ ತೆಗಿಯುವದು; ಇದನ್ನು ದಿನಾಲು ಸ್ವಲ್ಪ ಸ್ವಲ್ಪ ಪರಿಮಾಣದಲ್ಲಿ ಹೊಟ್ಟೆಗೆ ಕೊಡುವದು.

---

[1] *Engl:* **Astoracantha (Barleria) longifolia;** ಹಿಂದು: ತಲ್ಮಖಾನಾ, ಗೋಕ್ಷುರಾ; ದಖ: ಕೋಲ್ಸೀ; ತಮ: ನಿರ್ಮುಳ್ಳಿ; ತೆಲು: ನಿರುಗೊಬ್ಬಿ; ಮಲ: ವಯಲಚುಳ್ಳಿ; ಮಹಾ: ತಲಮಖಾನಾ.—ಈ ಗಿಡವು ಹಿಂದುಸ್ಥಾನದಲ್ಲೆಲ್ಲಾ ನೀರಿನ ಪಸರಿರುವ ಗದ್ದೆಗಳ ಬದಿಯಲ್ಲಿ ಬೆಳೆಯುತ್ತದೆ.

[2] *Engl:* **Moringa, Horseradish Tree.** ಹಿಂದು: ಶಾಜ್ನಾ, ಶೇಗ್ವಾ; ದಖ: ಮುಂಗೇಕಾ ಝಾಡ್; ತಮ: ಮೊರುಂಗಾ, ಮುರಂಗೈ; ತೆಲು: ಮುನಗ; ಮಲ: ಮುರಿಂಞ; ಮಹಾ: ಮುನಗಾಚಾಝಾಡ.—ಈ ಮರದ ಹಸೀ ಬೇರು ರುಚಿಯಲ್ಲಿಯೂ ವಾಸನೆಯಲ್ಲಿಯೂ ತೋರಿಕೆಯಲ್ಲಿಯೂ ವಿಲಾಯತಿ (horseradish) ಎಂಬ ಗಿಡದಂತೆ ಇರುತ್ತದೆ. ಆದದರಿಂದ ಇದಕ್ಕೂ ಇಂಗ್ಲಿಷದಲ್ಲಿ ವಿಲಾಯತಿಯ ಹೆಸರು ಕೊಡೋಣಾಯಿತು.

೨೩೪. ಆನೆನೆಗ್ಗಿಲು[1] ಗಿಡದ ಹಸಿ ಎಲೆಗಳನ್ನು ತಂದು ತಣ್ಣೀರಿನಲ್ಲಿ ಚನ್ನಾಗಿ ಗಿವಚಿ ಕಲಕಿಸಲಾಗಿ, ಆ ನೀರು ಮಾರ್ಪಟ್ಟು ಕೋಳಿ ಮೊಟ್ಟೆಯ ಲೋಳೆಯಂತೆ ನಿರ್ಗಂಧವೂ ಅಸ್ವಾದವೂ ಆದ ಮಂದ ಗೋಂದಾಗುತ್ತದೆ. ಈ ಜಿಗಟು ನೀರು ದಕ್ಷಿಣ ಹಿಂದುಸ್ಥಾನದ ಜನರೊಳಗೆ ಪ್ರಮೇಹಕ್ಕೆ ಅತ್ಯುತ್ತಮ ಔಷಧವೆಂದು ಹೆಸರುಗೊಂಡಿರುತ್ತದೆ. ಈ ಉದ್ದಿಶ್ಯ ೧/೨ ಪ್ಯಾಂಟು ಅಂಥಾ ಜಿಗಟು ನೀರನ್ನು ದಿನಾಲು ಬೆಳಿಗ್ಯೆ ಬಿಡದೆ ಹತ್ತು ದಿವಸಗಳ ತನಕ ತಕ್ಕೊಳ್ಳುವದು. ಅದರ ಪ್ರಯೋಗದಿಂದ ಮೂತ್ರದ್ವಾರದಲ್ಲಿ ಇರುವ ಉರಿಯು ಶಮನವಾಗುವದಲ್ಲದೆ, ಅನೇಕ ಸಂಗತಿಗಳಲ್ಲಿ ಪೂರಾ ವಾಸಿಯಾದದ್ದು ಸಹ ಉಂಟು. ಈ ಔಷಧವನ್ನು ಮತ್ತೂ ಪರೀಕ್ಷಿಸಿ ನೋಡ ತಕ್ಕದ್ದಾಗಿರುತ್ತದೆ. ಅದರ ಗುಣಗಳೊಳಗೆ ಯಥೇಷ್ಟ ಮೂತ್ರ ಮಾಡಿಸುವಂಥಾ ಗುಣ ಮುಖ್ಯವಾಗಿರುತ್ತದೆ. ಆದದರಿಂದ ಜಲೋದರ ಮುಂತಾದ ರೋಗಗಳಲ್ಲಿ ಅದು ಪ್ರಯೋಜನಕರವಾಗುವದು. ಈ ಎಲೆಗಳನ್ನು ಗಿವಚಿ ಮಾಡಿದಂಥಾ ಜಿಗುಟು ನೀರು ಸ್ವಲ್ಪ ಹೊತ್ತು ಇಟ್ಟದ್ದಾದರೆ, ನೀರು ಪುನಹಾ ಪ್ರತ್ಯೇಕವಾಗುವದರಿಂದ ಅದನ್ನು ಬೇಕಾದಾಗ್ಯೆಲ್ಲಾ ಹೊಸತಾಗಿ ತಯಾರು ಮಾಡಿ ಕೊಡುವದು ಒಳ್ಳೇದು.

೨೩೫. ಪಟ್ಲುಪ್ಪು ೧೦ ಗ್ರೇನ್ ನುಗ್ಗೇಬೇರಿನ ಕಷಾಯದಲ್ಲಿ (೨೩೨) ಹಾಕಿ, ಜಲೋದರ ರೋಗದ ಪ್ರಥಮ ಸ್ಥಿತಿಯಲ್ಲಿ ಮೂತ್ರ ವರ್ಧಿಸುವದಕ್ಕೆ ಗುಣಕರವಾಗಿ ಪ್ರವರ್ತಿಸುವದು.

೨೩೬. ಜಲೋದರದಲ್ಲಿ ಮುಖ್ಯವಾಗಿ ಕಲಿಜದ (ಯಕೃತ್ತು liver) ರೋಗವು ಸಂಬಂಧ ಪಟ್ಟಿದ್ದರೆ, ಅಥವಾ ಜ್ವರದ ತರುವಾಯ ಉಂಟಾಗಿದ್ದರೆ, ೧೦-೧೫ ಗ್ರೇನ್ ನವಸಾಗರವನ್ನು ನುಗ್ಗೇ ಬೇರಿನ ಕಷಾಯದಲ್ಲಿ (೨೩೨) ಆಗಲೀ, ಕೊಳವಳಿಕೇ ಬೇರಿನ ಕಷಾಯದಲ್ಲಿ ಆಗಲೀ (೨೩೧) ಹಾಕಿ, ದಿನಕ್ಕೆ ಮೂರು ನಾಲ್ಕು ಸಾರಿಯಾಗಿ ಕೆಲವು ಕಾಲದ ವರೆಗೆ ಗುಣಕರವಾಗಿ ಕೊಡ ಬಹುದು.

೨೩೭. ಅಶಕ್ತಿಯೂ ರಕ್ತದ ಕೊರತೆಯೂ ಸಹಿತವಾದ ಜಲೋದರದಲ್ಲಿ ೨ ಗ್ರೇನ್ ಅನ್ನಭೇದಿಯನ್ನು ಒಂದು ಬಾಟ್ಲೆ ನೀರಿನಲ್ಲಿ ಹಾಕಿ, ರುಚಿಗೆ ತಕ್ಕದಾಗಿ ಶೀ ಮಾಡಿ, ಹಗಲು ಹೊತ್ತು ಸಾಧಾರಣ ದಾಹ ನಿವಾರಣಾರ್ಥವಾಗಿ ಆಗಾಗ್ಯೆ ಕುಡಿಯುತ್ತಿರುವದು ಬೇರೆ ಚಿಕಿತ್ಸೆಗೆ ಬಹಳ ಅನುಕೂಲವಾಗಿರುವದು. (ಶರೀರಪ್ರಕೃತಿಯ ದೆಶೆಯಿಂದ ಉಂಟಾದ ಅಶಕ್ತಿಯುಳ್ಳವರ ಮೈಯಲ್ಲಿ ರಕ್ತಛಾಯೆ ಇಲ್ಲದೆ ಇದ್ದದ್ದಕ್ಕೆ ಅನ್ನಭೇದಿಯ ಬೇರೆ ಚಿಕಿತ್ಸೆಯನ್ನು ಕುರಿತು ೧೮೭೯ನೇ ಇಸವಿಯ ೪೧ನೇ ಪಾನಿನಲ್ಲಿರುವ ೮೨ನೇ ಅಂಕೆಯಲ್ಲಿ ನೋಡು.)

* * *

---

[1] *Engl:* **Podalium Murex**; ಹಿಂದು: ಬಡಾಘೋಕ್ರು; ತಮು: ಆನೈನೆರುಂಜಿ, ಪೆರುನೆರಂಜಿ; ತೆಲು: ಏನುಗುಪಲ್ಲೇರುಮುಳ್ಳು, ಕಾಯ್ತುನೆರಿಂಞ್ಞಿಲ್; ಮಲ: ಆನನೆರಿಂಞ್ಞಿಲ್, ಕಾಟ್ಟುನೆರಿಞ್ಞಿಲ್; ಮಹಾ: ಹತ್ತೀಚರಾತೆ; ಕೊಂಕಣಿ: ಪಾಡಾವಳಿ(?).—ಅರಸಿನ ಹೂವುಳ್ಳ, ಬೀಜ ತುಂಬಿದ, ಸಪೂರ ಅಂಚಿನ ಕೋಡುಗಳು ಆಗುವ (ಈ ಕೋಡುಗಳನ್ನು ಜಜ್ಜಿದ್ದಾದರೆ, ಕಸ್ತೂರಿಯಂಥಾ ಪರಿಮಳ ಬರುವದು) ಈ ಚಿಕ್ಕ ಗಿಡವು ದಕ್ಷಿಣ ಹಿಂದುಸ್ಥಾನದ ತೀರಪ್ರದೇಶಗಳಲ್ಲಿ, ಮುಖ್ಯವಾಗಿ ಉಸುಬು ನೆಲದಲ್ಲಿ ಹುಟ್ಟಿ ಬೆಳೆಯುತ್ತದೆ.

ಮಾರ್ಟಿನ ಲುಥರನು.

ಪಂಚಾಂಗದ ಮೊದಲನೇ ಪಾನಿನಲ್ಲಿ ಒಬ್ಬ ಮನುಷ್ಯನ ಚಿತ್ರವದೆಯಲ್ಲವೋ? ಅದು ಮಾರ್ಟಿನ ಲುಥರನೆಂಬವನ ಚಿತ್ರವು. ಈ ಲುಥರನು ಯಾರು? ಅವನು ಮಾಡಿದ ವಿಶೇಷವೇನು? ಹ್ಯಾಗೆ ಅವನು ಪ್ರಸಿದ್ಧ ಪುರುಷನಾದನು ಎಂಬ ಸಂಗತಿಯನ್ನು ಸಂಕ್ಷಿಪ್ತವಾಗಿ ತಿಳಿಸುತ್ತೇವೆ. ಲುಥರನು ೧೪೮೩ನೇ ಇಸವಿಯಲ್ಲಿ ಜರ್ಮನ ದೇಶದಲ್ಲಿ ಹುಟ್ಟಿದನು. ತಂದೆ ಬಡವನಾಗಿದ್ದರೂ ಮಗನು ಚುರುಕು ಬುದ್ಧಿಯುಳ್ಳವನೆಂದು ನೋಡಿ ಬಾಲ್ಯದಲ್ಲೇ ಅವನನ್ನು ವಿದ್ಯಾಭ್ಯಾಸಕ್ಕೆ ಹಾಕಿದನು. ಲುಥರನು ಚಿಕ್ಕ ಶಾಲೆಯಲ್ಲಿ ಕಲಿತು ಆದ ಮೇಲೆ ಮಹಾ ವಿದ್ಯಾಲಯಕ್ಕೆ ಹೋಗಿ ತತ್ವದರ್ಶನವನ್ನೂ ಬೇರೆ ವಿದ್ಯಾಗ್ರಂಥಗಳನ್ನೂ ಅಭ್ಯಾಸ ಮಾಡಿ ಯಶೋವಂತನಾಗಿ, ತಾನು ಕಲಿತ ಶಾಲೆಯಲ್ಲಿಯೇ ಪಂಡಿತೋದ್ಯೋಗವನ್ನು ಪಡಕೊಂಡನು. ಆ ಕಾಲಕ್ಕಿಂತ ಅನೇಕ ನೂರು ವರ್ಷಗಳ ಮೊದಲೇ ಯುರೋಪಿನಲ್ಲಿ ಎಲ್ಲಿಯೂ ಕ್ರೈಸ್ತಧರ್ಮವೇ ರಾಜ್ಯಧರ್ಮವಾಗಿತ್ತು; ಮೂರ್ತಿಪೂಜಕ ಮತವು ಪೂರಾ ಇಲ್ಲದೆ ಹೋಗಿತ್ತು ಖರೆ; ಆದರೆ ಪೂರ್ವಿಕ ಕ್ರೈಸ್ತರಲ್ಲಿದ್ದ ಶುದ್ಧ ಭಕ್ತಿಯೂ ಪ್ರೀತಿಯೂ ಕಳೆಗುಂದಿ ದೇವರ ವಾಕ್ಯವಾಗಿರುವ ಸತ್ಯವೇದದ ಜ್ಞಾನವೂ ಕಾಣದೆ ಹೋಗಿ, ಕ್ರೈಸ್ತರನ್ನಿಸಿಕೊಳ್ಳುವವರೆಲ್ಲರೂ ಅಜ್ಞಾನಾಂಧಕಾರದಲ್ಲಿ ಮುಣುಗಿ ಹೋಗಿದ್ದರು. ಇತಲಿ ದೇಶದ ಮುಖ್ಯ ಪಟ್ಣವಾಗಿದ್ದ ರೋಮಾಪುರಿಯಲ್ಲಿದ್ದ ಪೋಪರೆಂಬ ಧರ್ಮಾಧ್ಯಕ್ಷರು ತಾವೇ ಶ್ರೇಷ್ಠ ಗುರುಗಳು, ಯೇಸು ಕ್ರಿಸ್ತನ ಪ್ರತಿನಿಧಿಗಳಾಗಿ ಸಭೆಯನ್ನು ಈ ಲೋಕದಲ್ಲಿ ನಡಿಸುವದಕ್ಕೆ ಅಧಿಕಾರ ಪಟ್ಟವರು ಎಂದನ್ನಿಸಿಕೊಂಡು ಅಹಂಕರಿಸಿ ರಾಜಠೀವಿಯಲ್ಲಿ ಬದುಕುತ್ತಿದ್ದರು. ಎಲ್ಲಾ ಅರಸರು ಅವರಿಗೆ ಹೆದರುತ್ತಿದ್ದರು. ಪೋಪರೂ ಅವರ ಕೈಕೆಳಗೆ ಇರುವ ಪ್ರೀಸ್ತರೆಂಬ ಗುರುಗಳೂ ದೇವರ ವಾಕ್ಯವು ಸಾಧಾರಣ ಜನರಿಗೆ ಶಿಕ್ಕದಂತೆ ಮಾಡಿ ನಾನಾ ವೃದ್ಧಾಚಾರಗಳನ್ನೂ ನಿಷ್ಠೆಗಳನ್ನೂ ಕೈಕೊಳ್ಳುವದೂ, ಸಾಂತರೆಂಬ ಭಕ್ತರ ಬೊಂಬೆಗಳಿಗೆ ಪ್ರಾರ್ಥನೆ ಮಾಡುವದೂ ಪೂಜಿಸುವದೂ ಭಕ್ತಿ ಎಂದು ಬೋಧಿಸುತ್ತಿದ್ದರು. ಆದ್ದರಿಂದ ಜನರಲ್ಲಿ ದೇವರ ವಾಕ್ಯದ ಜ್ಞಾನವು ಇಲ್ಲದೆ ಹೋದದ್ದು ಮಾತ್ರವಲ್ಲಾ, ಸತ್ಯವೇದ ಎಂಬ ಗ್ರಂಥ ಉಂಟೋ ಎಂಬದೂ ಗೊತ್ತಿರಲಿಲ್ಲಾ. ಗುರುಗಳ ಬಾಯಿಯಿಂದ ಬರುವ ಮಾತೇ ಜನರಿಗೆ ದೇವರ ವಾಕ್ಯವಾಗಿತ್ತು. ಲುಥರನು ಮಹಾ ವಿದ್ಯಾಲಯದಲ್ಲಿ ಕಲಿಯುತ್ತಿರುವಾಗ್ಯೆ ವಿದ್ಯಾಲಯದ ಒಂಮು ಕೊಠಡಿಯಲ್ಲಿ ಸತ್ಯವೇದದ ಒಂದು ಪ್ರತಿಯು ಅವನಿಗೆ ಶಿಕ್ಕಿತು. ಅದನ್ನು ಅವನು ತೆರದು ಓದಲಾರಂಭಿಸಿ ಬಹಳ ಸಂತೋಷ ಪಟ್ಟನು. ಅದನ್ನೇ ಓದ ಬೇಕೆಂಬ ಲವಲವಿಕೆ ಅವನಲ್ಲಿ ಹೆಚ್ಚಾದ್ದರಿಂದ ಓದುತ್ತಾ ಓದುತ್ತಾ ಕ್ರೈಸ್ತಧರ್ಮದ ಸತ್ಯಾರ್ಥವನ್ನು ಪರಿಪೂರ್ಣವಾಗಿ ತಿಳಿದುಕೊಂಡನು. ಇದರ ಮೂಲವಾಗಿ ಆ ಕಾಲದ ಗುರುಗಳ ನಡ

ತೆಯೂ ಸಾಧಾರಣ ಜನರ ನಡತೆಯೂ ದೇವರ ವಾಕ್ಯಕ್ಕೆ ಅನುಸಾರವಾದದ್ದಲ್ಲಾ, ಗುರುಗಳು ದೇವರ ವಾಕ್ಯದಲ್ಲಿರುವ ಉಪದೇಶವನ್ನಲ್ಲಾ, ಸ್ವಕಲ್ಪನೆಯ ಉಪದೇಶವನ್ನೇ ಮಾಡುತ್ತಾರೆಂದು ಅರಿತನು. ಶ್ರೇಷ್ಠ ಗುರುವಾದ ಪೋಪನು ವಾಸವಾಗಿರುವ ರೋಮಾಪುರಿಗೆ ಅವನೊಮ್ಮೆ ಯಾತ್ರೆ ಮಾಡಿದಾಗ, ಪ್ರಯಾಣದಲ್ಲಿ ಹಾದು ಹೋದ ಊರುಗಳಲ್ಲಿಯೂ ಆ ದೊಡ್ಡ ಪಟ್ಟಣದಲ್ಲಿಯೂ ಸಹಾ ಶುದ್ಧ ಭಕ್ತಿಯಲ್ಲಾ, ನಾನಾ ಅನಾಚಾರಗಳೂ ಭಕ್ತಿಹೀನತ್ವವೂ ಮಾತ್ರವೇ ಕಂಡು ಬಂದದರಿಂದ ಅವನ ಮನಸ್ಸಿಗೆ ಬಹಳ ವ್ಯಸನವಾಯಿತು. ಆದರೂ ಮುಂದಕ್ಕೆ ಬಂದು ಸತ್ಯಕ್ಕೆ ಸಾಕ್ಷಿ ಕೊಟ್ಟು ತಿದ್ದುಪಾಟು ಮಾಡುವದಕ್ಕೆ ಅವನಿಗೆ ಭಯವಾಯಿತು. ಕ್ರಿಸ್ತನ ಸಭೆಯು ತಲೆಯಿಂದ ಹಿಡಿದು ಅಂಗಾಲಿನ ವರೆಗೂ ಕೊಳತು ಹೋದದರಿಂದ ಅದನ್ನು ಶುದ್ಧೀಕರಿಸುವ ಕೆಲಸವು ಸುಲಭವಾಗಿರಲಿಲ್ಲಾ. ಅವನಿಗೆ ಮೊದಲು ಆಯಾ ಊರುಗಳಲ್ಲಿ ಸತ್ಯವಂತರಾದ ದೇವಭಕ್ತರು ಸರ್ವರಲ್ಲಿಯೂ ಕಂಡು ಬಂದ ಅನಾಚಾರ ದುರ್ಬೋಧನೆಗಳನ್ನು ಬಹಿರಂಗವಾಗಿ ಖಂಡಿಸಿದಾಗ ದೊಡ್ಡ ದೊಡ್ಡ ಗುರುಗಳು ಹೊಟ್ಟೆಕಿಚ್ಚು ತಾಳಿ ಸರಕಾರದವರನ್ನು ಪ್ರೇರೇಪಿಸಿ ಅವರನ್ನು ಕೊಲೆ ಮಾಡಿಸಿದ ಸಂಗತಿ ಲುಥರನಿಗೆ ಗೊತ್ತಿತ್ತು. ಆದರೂ ಅವನು ಧೈರ್ಯದಿಂದ ಮುಂದೆ ಬಂದು ಸತ್ಯಕ್ಕೆ ಸಾಕ್ಷಿ ಕೊಡ ತಕ್ಕ ವೇಳೆಯು ಬಂತು; ಮತ್ತು ದೇವರು ಅವನನ್ನು ಆ ಕೆಲಸಕ್ಕೆ ಬಲ ಪಡಿಸಿದನು. ಒಮ್ಮೆ ಪಾಪಕ್ಷಮೇ ಚೀಟು ಊರಲ್ಲೆಲ್ಲಾ ಮಾರಾಟಕ್ಕೆ ಬಂತು. ಆ ಚೀಟುಗಳ ಮೇಲೆ ಬೆಲೆಗನುಸಾರವಾಗಿ ಇಂತಿಷ್ಟು ವರುಷಗಳ ವರೆಗೆ ಮಾಡಿದ ಪಾಪಗಳಿಗೆ ಪರಿಹಾರ ಶಿಕ್ಕುವದೆಂಬ ಬರಹವೂ ಪೋಪನ ಒಪ್ಪಿತವೂ ಇರುವದು. ದುಡ್ಡು ಮಾಡುವದಕ್ಕಾಗಿ ಪೋಪರು ಇಂಥಾ ಚೀಟುಗಳನ್ನು ಬಹಳ ಸಾರಿ ಮಾರಾಟಕ್ಕೆ ಕಳುಹಿಸುವರು. ಪಾಪಗಳನ್ನು ಪರಿಹರಿಸುವದಕ್ಕೆ ದೇವರಿಗಲ್ಲದೆ ಮನುಷ್ಯನಿಗೆ ಅಧಿಕಾರವಿಲ್ಲಾ, ಮತ್ತು ಪಾಪಕ್ಷಮೇ ಚೀಟುಗಳನ್ನು ಮಾರುವದು ದೇವದೂಷಣೆಯೇ ಎಂದು ಲುಥರನು ತಿಳಿದು ಖಡಾಖಡಿಯಾಗಿ ಅದನ್ನು ವಿರೋಧಿಸಿದವನಾಗಿ ಗ್ರಂಥ ಬರದನು, ಪ್ರಸಂಗವೂ ಮಾಡಿದನು. ಹೀಗೆ ಧೈರ್ಯದಿಂದ ಮುಂದರಿಯುವಾಗ ಕ್ರೈಸ್ತಸಭೆಯಲ್ಲಿ ಹೊಕ್ಕ ಅನಾಚಾರಗಳನ್ನೂ ಅಬದ್ಧ ಬೋಧನೆಗಳನ್ನೂ ಹೊರಪಡಿಸುವವನಾದ್ದಲ್ಲಿ ಇದೇ ತರದ ತಿದ್ದುಪಾಟನ್ನು ಹಾರೈಸುತ್ತಿದ್ದ ಅನೇಕ ಭಕ್ತ ವಿದ್ವಾಂಸರೂ ಶ್ರೀಮಂತರೂ ಲುಥರನ ಪಕ್ಷವನ್ನು ಹಿಡಿದು ಸಹಾಯ ಮಾಡಿದರೂ ಸತ್ಯಕ್ಕೆ ಸಾಕ್ಷಿ ಕೊಟ್ಟದ್ದರಿಂದ "ಸತ್ಯಂ ಜನವಿರೋಧಂಚ" ಎಂಬುವ ಮಾತಿನ ಪ್ರಕಾರ ಲುಥರನು ಪೋಪನ ಪಕ್ಷದವರ ಮತ್ಸರಕ್ಕೆ ಗುರಿಯಾದನು. ತಮ್ಮ ಅಧಿಕಾರವೂ ಮಾನವೂ ಹೋಗುವ ಕಾಲ ಬಂತೆಂದು ತಿಳಿದು ಲುಥರನನ್ನು ಖಂಡಿಸಿ ಪಾಷಾಂಡಿ ಎಂದು ತೀರಿಸುವ ಬಗ್ಯೆ ಅರಸನನ್ನು ಪ್ರೇರೇಪಿಸಿ ದೊಡ್ಡ ಸಂಘವನ್ನು ಕೂಡಿಸಿದರು. ವಾದ ಪ್ರಾರಂಭವಾದಾಗ ಲುಥರನು ದೇವರ ವಾಕ್ಯದಿಂದ ಪ್ರಮಾಣವಾಕ್ಯಗಳನ್ನೆತ್ತಿ ತನ್ನ ಉಪದೇಶ ಖಂಡಿಸಿದರೆ ಒಪ್ಪಿ ಅಡಗಿರುತ್ತೇನೆಂದು ದೃಢವಾಗಿ ಹೇಳಿದ್ದಲ್ಲಿ ಪೋಪನ ಕಡೆಯ ವಿದ್ವಾಂಸರು ಆ ಪ್ರಕಾರ ಅವನನ್ನು ಖಂಡಿಸಲಾರದೆ ಹೋದರು. ಅಂದಿನಿಂದ ಕ್ರೈಸ್ತಸಭೆಯಲ್ಲಿ ಎರಡು ಪಕ್ಷಗಳಾದವು. ಶುದ್ಧ ದೇವರ ವಾಕ್ಯವನ್ನು ಬಿಟ್ಟು ಮನುಷ್ಯಕಲ್ಪಿತ ಆಚಾರಗಳನ್ನೂ ಸುಳ್ಳು

ಬೋಧನೆಗಳನ್ನೂ ಅನುಸರಿಸುವವರಿಗೆ ರೋಮನ ಕಥೋಲಿಕರೆಂದೂ, ಶುದ್ಧ ಸತ್ಯವೇದವನ್ನೇ ವಿಶ್ವಾಸಕ್ಕೂ ಕ್ರಿಯೆಗೂ ಆಧಾರವೆಂದು ಪ್ರಮಾಣಿಸುವವರಿಗೆ ಪ್ರೊತಸ್ತಂತರು ಅಂದರೆ ಪ್ರತಿಕಕ್ಷಿಗಳು ಎಂದೂ ಹೆಸರಾಯಿತು. ಈ ಮೇರೆಗೆ ಜರ್ಮನಿಯಲ್ಲಿ ಸಭೆಯ ಪುನಃಸ್ಥಾಪನೆಯು ಸರಾಗವಾಗಿ ಸಾಗುತ್ತಿರುವಾಗ ಪಾರ್ಶ್ವಾಂತರದಲ್ಲಿರುವ ಶೀಮೆಗಳಲ್ಲಿಯೂ ಬ್ರಿಟನ್ ರಾಜ್ಯದಲ್ಲಿಯೂ ಇದ್ದ ದೇವಭಕ್ತರು ಧೈರ್ಯಗೊಂಡು ಲುಥರನು ಪ್ರಮಾಣಿಸಿದ ಬೋಧನೆಯನ್ನು ಪ್ರತಿಪಾದಿಸಿ ಪ್ರಬಲ ಮಾಡಿದ್ದರಿಂದ ಆ ಶೀಮೆಗಳಲ್ಲಿಯೂ ಸಭೆಯು ಪುನರೂಪಿತವಾಯಿತು. ಲುಥರನು ಸತ್ಯವೇದವನ್ನು ದೇಶಭಾಷೆಯಾದ ಜರ್ಮನಿಗೆ ಭಾಷಾಂತರ ಮಾಡಿದ್ದಲ್ಲದೆ ಹೇರಳ ಗ್ರಂಥಗಳನ್ನೂ ಬರೆದನು. ಆ ಕಾಲದಲ್ಲಿ ಸಂಸಾರ ಮಾಡಿಕೊಳ್ಳದೆ ಮಠಗಳಲ್ಲಿ ಹೋಗಿ ವಾಸ ಮಾಡುವದೇ ಮಹಾ ಪುಣ್ಯವೆಂದು ನೆನಸುತ್ತಿದ್ದರು. ಆದರೆ ಗೃಹಸ್ಥಾಶ್ರಮವು ದೇವರು ಪರಿಶುದ್ಧ ಮಾಡಿದ ಧರ್ಮವೆಂದು ಲುಥರನು ತಿಳಿದು ವಿವಾಹ ಮಾಡಿಕೊಂಡು ಕುಟುಂಬಸ್ಥನಾದನು. ಮನೆತನ ಮಾಡಿಕೊಂಡ ಮೇಲೆ ಬಡತನವಿದ್ದಾಗ್ಯೂ ಬಹಳ ಸಂತುಷ್ಟನಾಗಿದ್ದು ತನಗಿದ್ದ ಅಲ್ಪವಾದ್ದರಲ್ಲಿಯೇ ದಾನಧರ್ಮವನ್ನು ಮಾಡುತ್ತಿರುವನು. ದೇವರು ತನಗೆ ಕೊಟ್ಟ ಹೆಂಡತಿಯನ್ನೂ ಐದಾರು ಮಕ್ಕಳನ್ನೂ ದೇವಭಕ್ತಿಯ ಮಾರ್ಗದಲ್ಲಿಯೇ ನಡಿಸುವನು. ಈ ಮೇರೆಗೆ ಗ್ರಂಥರಚನೆಯಿಂದಲೂ ಪ್ರಸಂಗಗಳಿಂದಲೂ ಬಹಳ ಧಾವತಿ ಮಾಡಿದ್ದರಿಂದ ಅವನ ತ್ರಾಣವು ಕುಂದುತ್ತಾ ಅರವತ್ತಮೂರು ಪ್ರಾಯದಲ್ಲೇ ಕೇವಲ ಬಲಹೀನನಾದನು. ಆದಾಗ್ಯೂ ಅವನು ಮರಣಕ್ಕೆ ಅಂಜಲಿಲ್ಲಾ. ತಾನು ಯಾರ ಸೇವೆ ಮಾಡಿದನೋ ಆ ಯೇಸು ಕ್ರಿಸ್ತನು ಸದಾ ತನ್ನ ಸಮೀಪದಲ್ಲಿದ್ದಾನೆಂದು ಅವನ ವಿಶ್ವಾಸವಾಗಿತ್ತು. ದೇಹಕ್ಷೇಮಕ್ಕೋಸ್ಕರವಾಗಿ ಅವನು ತಾನು ಹುಟ್ಟಿದ ಊರಿಗೆ ಹೋದಾಗ್ಯೆ ನೋಡಲಿಕ್ಕೆ ಬಂದ ಒಬ್ಬ ಸ್ನೇಹಿತನಿಗೆ ಹುಟ್ಟಿದ ಊರಿನಲ್ಲಿಯೇ ನಾನು ಈ ದೇಹವನ್ನು ಬಿಡುವೆನೆಂದು ತೋರುತ್ತದೆಂದು ಹೇಳಿದ ಮಾತು ಸತ್ಯವಾಯಿತು. ಆಪ್ತ ಸ್ನೇಹಿತರು ಬಹುಶಾ ಅನುಪಾನ ನಡಿಸಿ ಉಪಚಾರ ಮಾಡಿದರೂ ಅನುದಿನವೂ ನಿತ್ರಾಣವು ಹೆಚ್ಚಾಗಿ, ಪ್ರಾಣಾಂತಿಕ ಕಾಲದಲ್ಲಿ ಅವನು ಹತ್ತರ ನಿಂತಿದ್ದವರಿಗೆ, ನಾನಿಲ್ಲಿಯೇ ಸಾಯುತ್ತೇನೆ, ನಾನೀ ವರೆಗೆ ಪ್ರಸಂಗಿಸಿದ ಉಪದೇಶದ ವಿಶ್ವಾಸದಲ್ಲಿಯೇ ನಾನು ಸಾಯುತ್ತೇನೆ, ಇದಕ್ಕೆ ನೀವೆಲ್ಲರೂ ಸಾಕ್ಷಿಗಳಾಗಿದ್ದೀರಿ ಎಂದು ಹೇಳಿ ಪ್ರಾರ್ಥನೆ ಮಾಡುವವನಂತೆ ಕೈಗಳನ್ನು ಜೋಡಿಸಿಕೊಂಡಿರುವಲ್ಲಿಯೇ, ಶಾಂತವಾಗಿ ಆವನ ಆತ್ಮವು ಇಹವನ್ನು ಬಿಟ್ಟು ಪರಲೋಕವನ್ನೈದಿತು. ಸಭೆಯಲ್ಲಿ ಪುನಃಸ್ಥಾಪನೆಯನ್ನು ಪ್ರಾರಂಭಿಸಿ ನಡಿಸಿದವನಾದ್ದರಿಂದಲೇ ಲುಥರನು ಇಷ್ಟು ಪ್ರಖ್ಯಾತಿಗೆ ಬಂದಿದ್ದಾನೆ. ಅವನು ಹುಟ್ಟಿ ಇದೇ ಕಳೆಯುವ ೧೮೮೩ನೇ ಇಸವಿ ನವಂಬರು ತಿಂಗಳಿಗೆ ನಾನೂರು ವರ್ಷಗಳಾಗುವದರಿಂದ ಜರ್ಮನಿಯಲ್ಲೆಲ್ಲಿಯೂ ಅವನ ಸ್ಮರಣಾರ್ಥವಾಗಿಯೂ ಸನ್ಮಾನಾರ್ಥವಾಗಿಯೂ ಮಹಾ ಉತ್ಸವವು ಮಾಡಲಾಯಿತು.

೬೦ ಭೂಮಿಯ ಮೇಲೆ ನಮ್ಮ ದಿವಸಗಳು ನೆರಳಿನ ಹಾಗೆ ಅವೆ. ೧ ದಿನಚ. ೨೯, ೧೫.

ದಕ್ಷಿಣ ಹಿಂದುಸ್ಥಾನದಲ್ಲಿ ರೂಢಿಯಾಗಿ ಎಣಿಸುವ
ಶಕಗಳ ಮೊಕಾಬಿಲೆ ಪಟ್ಟಿ.

ಕ್ರಿಸ್ತಶಕ A. D.		ಹಿಂದು ಶಕಗಳು					ಫಸಲಿ		ಮಹಮ್ಮದಿ ಹಿಜರಿ	
		ಚಾಂದ್ರಮಾನ			ಸೌರಮಾನ					
		ಸಂವತ್ಸರಗಳು	ಶಾಲಿವಾಹನ ಶಕ		ಮಲಯಾಳ ಕೊಲ್ಲಮ್					
1807	1867	ಪ್ರಭವ	1729	1789	982	1042	1216	1276	1222	1284
1808	1868	ವಿಭವ	1730	1790	983	1043	1217	1277	1223	1285
1809	1869	ಶುಕ್ಲ	1731	1791	984	1044	1218	1278	1224	1286
1810	1870	ಪ್ರಮೋದೂತ	1732	1792	985	1045	1219	1279	1225	1287
1811	1871	ಪ್ರಜೋತ್ಪತ್ತಿ	1733	1793	986	1046	1220	1280	1226	1288
1812	1872	ಆಂಗೀರಸ	1734	1794	987	1047	1221	1281	1227	1289
1813	1873	ಶ್ರೀಮುಖ	1735	1795	988	1048	1222	1282	1228-29	1290
1814	1874	ಭಾವ	1736	1796	989	1049	1223	1283	1230	1291
1815	1875	ಯುವ	1737	1797	990	1050	1224	1284	1231	1292
1816	1876	ಧಾತು	1738	1798	991	1051	1225	1285	1232	1293
1817	1877	ಈಶ್ವರ	1739	1799	992	1052	1226	1286	1233	1294-95
1818	1878	ಬಹುಧಾನ್ಯ	1740	1800	993	1053	1227	1287	1234	1296
1819	1879	ಪ್ರಮಾಥಿ	1741	1801	994	1054	1228	1288	1235	1297
1820	1880	ವಿಕ್ರಮ	1742	1802	995	1055	1229	1289	1236	1298
1821	1881	ವಿಷು	1743	1803	996	1056	1230	1290	1237	1299
1822	1882	ಚಿತ್ರಭಾನು	1744	1804	997	1057	1231	1291	1238	1300
1823	1883	ಸ್ವಭಾನು	1745	1805	998	1058	1232	1292	1239	1301
1824	1884	ತಾರಣ	1746	1806	999	1059	1233	1293	1240	1302
1825	1885	ಪಾರ್ಥಿವ	1747	1807	1000	1060	1234	1294	1241	1303
1826	1886	ವ್ಯಯ	1748	1808	1001	1061	1235	1295	1242	1304
1827	1887	ಸರ್ವಜಿತು	1749	1809	1002	1062	1236	1296	1243	1305
1828	1888	ಸರ್ವಧಾರಿ	1750	1810	1003	1063	1237	1297	1244	1306
1829	1889	ವಿರೋಧಿ	1751	1811	1004	1064	1238	1298	1245	1307
1830	1890	ವಿಕೃತಿ	1752	1812	1005	1065	1239	1299	1246	1308
1831	1891	ಖರ	1753	1813	1006	1066	1240	1300	1247	1309
1832	1892	ನಂದನ	1754	1814	1007	1067	1241	1301	1248	1310
1833	1893	ವಿಜಯ	1755	1815	1008	1068	1242	1302	1249	1311
1834	1894	ಜಯ	1756	1816	1009	1069	1243	1303	1250	1312

ಮನುಷ್ಯನ ದಿವಸಗಳು ಕಳೆದು ಹೋಗುವ ನೆರಳಿನ ಹಾಗಿವೆ. ಕೀರ್ತ. ೧೪೪, ೪. ೬೧

ಕ್ರಿಸ್ತಶಕ		ಸಂವತ್ಸರಗಳು	ಶಾಲಿವಾಹನ ಶಕ		ಮಲಯಾಳ ಕೊಲ್ಲಮ್		ಫಸಲಿ		ಮಹಮ್ಮದಿ ಹಿಜರಿ	
1835	1895	ಮನ್ಮಥ	1757	1817	1010	1070	1244	1304	1251	1313
1836	1896	ದುರ್ಮುಖಿ	1758	1818	1011	1071	1245	1305	1252	1314
1837	1897	ಹೇವಿಳಂಬಿ	1759	1819	1012	1072	1246	1306	1253	1315
1838	1898	ವಿಳಂಬಿ	1760	1820	1013	1073	1247	1307	1254	1316
1839	1899	ವಿಕಾರಿ	1761	1821	1014	1074	1248	1308	1255	1317
1840	1900	ಶಾರ್ವರಿ	1762	1822	1015	1075	1249	1309	1256	1318
1841	1901	ಪ್ಲವ	1763	1823	1016	1076	1250	1310	1257	1319
1842	1902	ಶುಭಕೃತು	1764	1824	1017	1077	1251	1311	1258	1320
1843	1903	ಶೋಭಕೃತು	1765	1825	1018	1078	1252	1312	1259	1321
1844	1904	ಕ್ರೋಧಿ	1766	1826	1019	1079	1253	1313	126[illegible]	1322
1845	1905	ವಿಶ್ವಾವಸು	1767	1827	1020	1080	1254	1314	1261-62	1323
1846	1906	ಪರಾಭವ	1768	1828	1021	1081	1255	1315	1263	1324
1847	1907	ಪ್ಲವಂಗ	1769	1829	1022	1082	1256	1316	1264	1325
1848	1908	ಕೀಲಕ	1770	1830	1023	1083	1257	1317	1265	1326
1849	1909	ಸೌಮ್ಯ	1771	1831	1024	1084	1258	1318	1266	1327-28
1850	1910	ಸಾಧಾರಣ	1772	1832	1025	1085	1259	1319	1267	1329
1851	1911	ವಿರೋಧಿಕೃತು	1773	1833	1026	1086	1260	1320	1268	1330
1852	1912	ಪರಿಧಾವಿ	1774	1834	1027	1087	1261	1321	1269	1331
1853	1913	ಪ್ರಮಾದೀಚ	1775	1835	1028	1088	1262	1322	1270	1332
1854	1914	ಆನಂದ	1776	1836	1029	1089	1263	1323	1271	1333
1855	1915	ರಾಕ್ಷಸ	1777	1837	1030	1090	1264	1324	1272	1334
1856	1916	ನಳ	1778	1838	1031	1091	1265	1325	1273	1335
1857	1917	ಪಿಂಗಳ	1779	1839	1032	1092	1266	1326	1274	1336
1858	1918	ಕಾಳಯುಕ್ತಿ	1780	1840	1033	1093	1267	1327	1275	1337
1859	1919	ಸಿದ್ಧಾರ್ಥಿ	1781	1841	1034	1094	1268	1328	1276	1338
1860	1920	ರೌದ್ರಿ	1782	1842	1035	1095	1269	1329	1277	1339
1861	1921	ದುರ್ಮತಿ	1783	1843	1036	1096	1270	1330	1278	1340
1862	1922	ದುಂದುಭಿ	1784	1844	1037	1097	1271	1331	1279	1341
1863	1923	ರುಧಿರೋದ್ಗಾರಿ	1785	1845	1038	1098	1272	1332	1280	1342
1864	1924	ರಕ್ತಾಕ್ಷಿ	1786	1846	1039	1099	1273	1333	1281	1343
1865	1925	ಕ್ರೋಧನ	1787	1847	1040	1100	1274	1334	1282	1344
1866	1926	ಕ್ಷಯ	1788	1848	1041	1101	1275	1335	1283	1345

ಸೂಚನೆ: 1. ಕ್ರಿಸ್ತ ಶಕವೆಂಬ ಇಸವಿ ಜನವರಿ 1ನೇ ತಾರೀಕಿಗೆ ಪ್ರಾರಂಭವಾಗುವದು.
2. ಸಂವತ್ಸರವೂ ಶಾಲಿವಾಹನ ಶಕವೂ (ಒಂದೇ ದಿವಸ) ಮಾರ್ಚ-ಎಪ್ರಿಲಲ್ಲಿ ಪ್ರಾರಂಭವಾಗುವದು.
3. ಮಲಯಾಳ ಕೊಲ್ಲಮ್ ಎಂಬ ಕೇರಳ ಶಕವು ಸಪಟಂಬರ ತಿಂಗಳಲ್ಲಿ „
4. ಫಸಲಿ ಜುಲಾಯಿ 1ನೇ ತಾರೀಕಿಗೆ „
5. ಮಹಮ್ಮದಿ ಹಿಜರಿ ಸಾಮಾನ್ಯವಾಗಿ ವರ್ಷ ವರ್ಷ ೧೫ ದಿವಸಕ್ಕೆ ಮುಂದಾಗಿ „

ಹಾನ್ಸನೆಂಬ ಕುಂಟ ಹುಡುಗನು.

ಓಸ್ಟ್ರಿಯ ದೇಶದಲ್ಲಿರುವ ತಿರೋಲ್ ಪ್ರಾಂತದಲ್ಲಿ ಒಂದು ಹಳ್ಳಿಯದೆ; ಅದರಲ್ಲಿ ಒಬ್ಬ ವಿಧವೆಯು ಇದ್ದಳು, ಅವಳಿಗೆ ಒಬ್ಬನೇ ಮಗನು; ಅವನ ಹೆಸರು ಹಾನ್ಸ್ ಎಂತ; ಹುಡುಗನು ಬಹಳ ಒಳ್ಳೇ ಸ್ವಭಾವದವನೂ ತಾಯಿಯನ್ನು ಪ್ರೀತಿ ಮಾಡುವವನೂ ಆಗಿದ್ದು, ಅವಳಿಗಿದ್ದ ಸಂಕಷ್ಟದಲ್ಲಿ ಅವಳಿಗೇನಾದರೂ ಸಹಾಯ ಮಾಡ ಬೇಕೆಂದು ಬಹಳ ಮನಸ್ಸಾಗಿದ್ದನು. ಆದರೆ ಕಾಲು ಕುಂಟನಾಗಿದ್ದು ಊರಿನ ಹುಡುಗರ ಸಂಗಡ ಆಡುವದಕ್ಕಾದರೂ ಅವನಿಂದಾಗದಿದ್ದ ಮೇಲೆ ತಾಯಿಗೆ ಹ್ಯಾಗೆ ಸಹಾಯ ಮಾಡುವನು? ಅವನಿಗೆ ಹದಿನೈದು ವರ್ಷ ಪ್ರಾಯವಾದಾಗ ತಾನು ತಾಯಿಗೆ ದೊಡ್ಡ ಹೊರೆಯಾಗಿದ್ದೇನೆಂದು ಅವನು ತಿಳಿದುಕೊಂಡನು. ಆ ವೇಳೆಯಲ್ಲಿ ನಪೋಲಿಯನ್ ಬೊನಪಾರ್ಟ ಎಂಬ ಫ್ರೆಂಚ ಮಹಾರಾಜನು ಮಹಾ ಸೈನ್ಯದೊಡನೆ ತಿರೋಲ್ ಶೀಮೆಯ ಮೇಲೆ ದವಡು ಮಾಡ ಬೇಕೆಂದು ನಿಶ್ಚಯಿಸಿದ್ದನು; ತಿರೋಲಿನ ನಿವಾಸಿಗಳು ಶೂರರೂ ದೇಶಾಭಿಮಾನಿಗಳೂ ಆಗಿದ್ದು ತಮ್ಮ ಶೀಮೆಯನ್ನು ಕಾಪಾಡುವದಕ್ಕೆ ಕಡೇವರೆಗೆ ಯುದ್ಧ ಮಾಡ ಬೇಕು ಎಂದು ಅವರು ನಿಷ್ಕರ್ಷೆ ಮಾಡಿಕೊಂಡರು. ಶತ್ರು ಬರುವ ದಿವಸವು ಯಾವದೆಂಬದು ಅವರಿಗೆ ಮುಂದಾಗಿ ಗೊತ್ತಾಗಿದ್ದದ್ದಾದರೆ, ಕಾದುವದು ಅವರಿಗೆ ಸಸಾರವಾಗಿರುತ್ತಿತ್ತು. ಯಾಕಂದರೆ ಆ ಗುಡ್ಡಶೀಮೆಯಲ್ಲಿ ಬಿಕ್ಕಟ್ಟಾದ ದಾರಿಗಳು ಹಲವು ಇದ್ದವು. ಅಂಥಾ ಜಾಗದಲ್ಲಿ ನಿಂತರೆ, ಕೆಲವು ಜನರಾದರೂ ದೊಡ್ಡ ದಂಡನ್ನು ಹಿಮ್ಮೆಟ್ಟಿಸುವದಕ್ಕಾಗುತ್ತಿತ್ತು. ಆದರೆ ನಪೋಲಿಯನನು ಬರುವದು ಯಾವಾಗಲೆಂದು ಅವರಿಗೆ ಗೊತ್ತಿರಲಿಲ್ಲಾ. ಆದ್ದರಿಂದ ಅವರು ಒಂದು ವೈನ ಮಾಡಿದರು. ಗುಡ್ಡದ ಮೇಲೆ ಅಲ್ಲಲ್ಲಿ ಒಣಗಿದ ಎಲೆಗಳನ್ನು ಕೂಡಿಸಿ ರಾಶಿ ರಾಶಿ ಮಾಡಿ ಇಟ್ಟರು; ಇವುಗಳಿಗೆ ಬೆಂಕಿ ಹಚ್ಚಿದರೆ, ಶತ್ರುಗಳು ಬಂದರೆಂದು ಊರಿನವರೆಲ್ಲರಿಗೆ ತಿಳಿಯುವದು ಮಾತ್ರವಲ್ಲ, ಗುಡ್ಡವೂ ಊರೂ ಸುಡುತ್ತದೆಂದೂ ತೋರುವದು.

ನಪೋಲಿಯನನು ದಂಡುಸಮೇತವಾಗಿ ತಿರೋಲ್ ಶೀಮೆಯೊಳಗೆ ನುಗ್ಗುವದಕ್ಕೆ ಬರಲಿಕ್ಕಿದ್ದ ದಾರಿಯಲ್ಲಿಯೇ ಹಾನ್ಸನೂ ತಾಯಿಯೂ ವಾಸವಾಗಿದ್ದರು. ಒಂದು ದಿನ ಸಂಜೆಗೆ ತಾಯಿಯೂ ಮಗನೂ ಮಾತಾಡುತ್ತಿರುವಾಗ—ಹಾನ್ಸನೇ, ನೀನು ಕುಂಟನಾದದ್ದು ಒಳ್ಳೇದಾಯಿತು, ಇಲ್ಲದಿದ್ದರೆ ಸರಕಾರದವರು ನಿನ್ನನ್ನು ನನ್ನ ಬಳಿಯಿಂದ ಕಸಕೊಂಡು ಹೋಗಿ ಶಿಪಾಯಿ ಮಾಡುತ್ತಿದ್ದರು ಎಂದು ತಾಯಿ ಹೇಳಿದ ಮಾತು ಕೇಳಿ ಹಾನ್ಸನಿಗೆ ಬಹಳ ಕರಕರೆಯಾಗಿ ಅಳುತ್ತಾ ಹೇಳಿದ್ದು: ತಾಯಿಾ, ನಾನು ಯಾವ ಕೆಲಸಕ್ಕೂ ಬರುವವನಲ್ಲಾ; ನಮ್ಮ ಊರಿನಲ್ಲಿ ನೋಡು, ಒಬ್ಬೊಬ್ಬನು ಶೀಮೆಯನ್ನು ಕಾಪಾಡುವದಕ್ಕೆ ತನ್ನಿಂದಾಗುವಂಥಾದ್ದು ಮಾಡುತ್ತಾ ಇದ್ದಾನೆ.

ಆದರೆ ನಾನೇನೂ ಮಾಡಲಾರದವನು; ನಾನು ನಿಷ್ಪ್ರಯೋಜಕ ಪ್ರಾಣಿ. ತಾಯಿ ಅಂದದ್ದು: ನನ್ನ ಮಗನೇ, ನನಗೆ ನೀನು ನಿಷ್ಪ್ರಯೋಜಕ ಮಗನಲ್ಲವಷ್ಟೇ. ಅದಕ್ಕವನು ಅನ್ನುತ್ತಾನೆ: ಹೌಧೌದು, ನಿನಗೂ ನಾನು ನಿಷ್ಪ್ರಯೋಜಕನೇ ಸರಿ. ಅಮ್ಮಾ, ನಿನಗಾಗಿ ನಾನೇನೂ ಮಾಡಲಾರದಿದ್ಧೇನೆ; ನಿನ್ನ ವೃದ್ಧಾಪ್ಯದಲ್ಲಿ ನಿನ್ನ ಸಂರಕ್ಷಣೆಗಾಗಿ ನನ್ನಿಂದ ಏನೂ ಮಾಡಲಿಕ್ಕಾಗುವದಿಲ್ಲಾ. ಅಯ್ಯಯ್ಯೋ, ನಾನ್ಯಾಕೆ ಜನ್ಮಕ್ಕೆ ಬಂದೆ? ಮಗನ ಮಾತು ಕೇಳಿ ತಾಯಿಯು ಹೇಳುತ್ತಾಳೆ—ನನ್ನ ಮುದ್ದು ಮಗನೇ, ಸುಮ್ಮನಿರು, ಹಾಗೆ ಹೇಳ ಬೇಡ; ಒಬ್ಬೊಬ್ಬ ಮನುಷ್ಯನನ್ನು ಕುರಿತು ದೇವರು ಏನಾದರೋದು ಸಂಕೇತ ಮಾಡಿರುತ್ತಾನೆ; ನಿನ್ನ ವಿಷಯದಲ್ಲಿ ಹ್ಯಾಗೆಂದು ನಿನಗೆ ತಿಳಿದು ಬಾರದೆ ಇರದು.

ಹೀಗಿರುತ್ತಾ ಕೆಲವು ದಿವಸಗಳನಂತರ ಒಂದು ಹಬ್ಬ ಬಂತು; ಆವಾಗ್ಯೆ ಹಾನ್ಸನೊಬ್ಬನ ಹೊರ್ತು ಉಳಿದ ಅವನ ಪ್ರಾಯದವರೆಲ್ಲರೂ ಉಣ್ಣುವದು, ಆಡುವದು, ಕುಣಿಯುವದು ಮುಂತಾದ ವಿನೋದಗಳಲ್ಲಿ ಮಗ್ನರಾಗುವವರಾದರು. ಅಂದು ರಾತ್ರಿ ಹಾನ್ಸನು ವಾಡಿಕೆಯ ಮೇರೆಗೆ ಪ್ರಾರ್ಥನೆ ಮಾಡುವಾಗ, ಓ ದೇವರೇ, ಈ ಲೋಕದಲ್ಲಿ ನನ್ನನ್ನು ಯಾವದಕ್ಕಾದರೂ ಉಪಯೋಗಿಯಾಗಿ ಮಾಡು, ಎಂತ ದೇವರಿಗೆ ಅರಿಕೆ ಮಾಡಿ ಮಲಗಿಕೊಂಡನು. ಮಧ್ಯರಾತ್ರಿಯಲ್ಲಿ ಫ್ರೆಂಚರ ದಂಡು ಬರುತ್ತದೆ ಎಂತ ಒಮ್ಮಿಂದೊಮ್ಮೆ ಅವನೊಳಗೊಂದು ಆಲೋಚನೆ ಹುಟ್ಟಿತು. ಇದನ್ನು ತೆಗಧಾಕುವದಕ್ಕೆ ಅವನು ಎಷ್ಟೆಷ್ಟು ಪ್ರಯತ್ನ ಮಾಡಿದರೂ ಮತ್ತೂ ಮತ್ತೂ ಅದೇ ಅವನೊಳಗೆ ಬರುವದಾಯಿತು. ಆದ್ದರಿಂದ ಅವನೆದ್ದು ಬಟ್ಟೆ ಉಟ್ಟುಕೊಂಡು ಗುಡ್ಡದ ದಾರಿಯಾಗಿ ನಡೆಯುವವನಾದನು. ಹೋಗುತ್ತಾ ಹೋಗುತ್ತಾ ಅವನು ದರಗೆಲೆಯ ರಾಶಿಯ ಬಳಿಗೆ ಬಂದನು. ಅಲ್ಲಿದ್ದು ಕಾಯ ತಕ್ಕವರು ಜಂಬರ ಬಿಟ್ಟು ಉಂಡು ಕುಡಿದು ಖುಷಾಲು ಮಾಡುವದಕ್ಕೆ ಊರಿಗೆ ಹೋಗಿದ್ದರು. ಆಗಲವನಿಗೆ ಬಹಳ ಆಶ್ಚರ್ಯವಾಯಿತು; ಆ ದರಗೆಲೆಯ ರಾಶಿಯ ಹತ್ತರವಿದ್ದ ಒಂದು ಮರದ ಪಳ್ಳಿನೊಳಗೆ ಬೆಂಕಿಕಡ್ಡಿಗಳಿದ್ದವು. ಅವನಲ್ಲಿ ನಿಂತುಕೊಂಡಿರುವಾಗ ಅಪರೂಪ ಶಬ್ದ ಅವನ ಕಿವಿಗೆ ಬಿತ್ತು. ಚಿತ್ತವಿಟ್ಟು ಕೇಳುವಾಗ ಅದು ಜನರು ನಡಿಯುವಾಗ ಉಂಟಾಗುವ ಕಾಲಡಿಗಳ ಸಪ್ಪಳವಾಗಿತ್ತು. ಆ ಸಪ್ಪಳ ಕೇಳ ಬಂದ ದಿಕ್ಕಿಗೆ ನೋಡಲಾಗಿ ಶಿಪಾಯರು ಗುಡ್ಡದ ಮೇಲೆ ಏರಿ ಬರುವದು ಬೆಳದಿಂಗಳಲ್ಲಿ ಅವನ ದೃಷ್ಟಿಗೆ ಬಿತ್ತು. ಆವಾಗಲೇ ಫ್ರೆಂಚರ ದಂಡು ಬಂತು ಸೈ ಎಂದು ನಿಶ್ಚಯಿಸಿದನು. ಮತ್ತ ಜನರು ಎಚ್ಚರವಾಗದಂತೆ ದರಗೆಲೆಯ ರಾಶಿಯನ್ನು ಚದರಿಸುವ ಬಗ್ಗೆ ಈ ಶಿಪಾಯರು ಕಳುಹಿಸಲ್ಪಟ್ಟವರಾಗಿರ ಬಹುದೆಂದು ತಿಳಿದು ಬೆಂಕಿಕಡ್ಡಿಯನ್ನು ತಿಕ್ಕಿ ಆ ರಾಶಿಗೆ ಹಚ್ಚಿ ಬಿಟ್ಟನು. ಈ ಗುಡ್ಡದಲ್ಲಾದ ಬೆಂಕಿಯ ಗುರುತಿನಿಂದ ಬೇರೆ ಗುಡ್ಡಗಳಲ್ಲಿದ್ದ ರಾಶಿಗಳೂ ಉರಿಯುವವುಗಳಾದ್ದಲ್ಲಿ ಊರಿನವರೆಲ್ಲರೂ ಎದ್ದು ಫ್ರೆಂಚರ ಸಂಗಡ ಕದನ ಮಾಡಿ ಅವರ ದಂಡನ್ನು ಹಿಮ್ಮೆಟ್ಟಿಸಿ ಊರನ್ನು ರಕ್ಷಿಸಿದರು.

ಹಾನ್ಸನು ದರಗೆಲೆಯ ರಾಶಿಯ ಹತ್ತರ ನಿಂತಿದ್ದಾಗ್ಯೆ ಒಬ್ಬ ಫ್ರೆಂಚ ಶಿಪಾಯಿಯು ಗುಂಡು ಹೊಡದದ್ದು ಹಾನ್ಸನ ಹೆಗಲಿಗೆ ತಾಗಿತು. ಘಾಯವು ದೊಡ್ಡದಾಗಿ

ದ್ದರೂ ಹಾನ್ಸನು ಹಾಂಗೂ ಹಿಂಗೂ ಊರಿಗೆ ಬಂದು ಮುಟ್ಟಿದನು. ಆಗ ಬೆಂಕಿ ಮೊದಲು ಹಚ್ಚಿ ಎಚ್ಚರಿಕೆ ಮಾಡಿದವನು ಯಾರೆಂದು ಊರಿನವರೆಲ್ಲರಿಗೆ ತಿಳಿದು ಬರಲಾಗಿ ಅವರೆಲ್ಲರೂ ಅವನ ಬಳಿಗೆ ಕೂಡಿ ಬಂದು ಜಯ ಜಯಕಾರವನ್ನು ಮಾಡಿದರು. ಅವನನ್ನು ಕರಕೊಂಡು ಊರಿನಲ್ಲಿ ಮೆರವಣಿಗೆ ಮಾಡಿಸ ಬೇಕೆಂದು ಅವರು ಆಲೋಚಿಸಿದರು. ಆದರೆ ಹೆಗಲಿನಲ್ಲಾದ ಘಾಯ ನೋಡಿ ಅವರು ಬೆರಗಾಗಿ ಮೂಕರಂತೆ ಆದರು. ಸ್ವಲ್ಪ ಹೊತ್ತಿನ ಮೇಲೆ ನನ್ನನ್ನು ತಾಯಿಯ ಬಳಿಗೆ ವೈಯಿರೆಂದು ಅವನು ಅವರನ್ನು ಬೇಡಿಕೊಳ್ಳಲು, ತಾಯಿ ಆ ಘಾಯವನ್ನು ನೋಡಿ ಅಳುವವಳಾದಾಗ ಅವನು ಹೇಳಿದ್ದು: ತಾಯಿಯಾ, ಅಳ ಬೇಡ; ನಾನು ಸಂತೋಷದಿಂದ ಸಾಯುತ್ತೇನೆ; ಒಬ್ಬೊಬ್ಬ ಮನುಷ್ಯನನ್ನು ಕುರಿತು ದೇವರು ಏನಾದರೊಂದು ಸಂಕೇತ ಮಾಡಿರುತ್ತಾನೆಂದು ನೀನು ಹೇಳಿದ ಮಾತು ಖರೆಯೇ; ನಾನೀ ವರೆಗೆ ಅದನ್ನು ತಿಳಿಯಲಿಲ್ಲಾ. ಅದೇ ಘಾಯವು ಹಾನ್ಸನಿಗೆ ಪ್ರಾಣಾಂತಿಕವಾಯಿತು; ಈ ಹಾನ್ಸನು ನಂಬಿಕೆಯಿಂದ ಸ್ವದೇಶಕ್ಕೆ ಸೇವೆ ಮಾಡಿದನೆಂದು ಸರಕಾರದವರು ಅವನ ತಾಯಿಗೆ ಸಾಯುವ ವರೆಗೆ ಅಶನಾರ್ಥ ಶಿಕ್ಕ ಬೇಕೆಂದು ಅಪ್ಪಣೆ ಮಾಡಿದರು. ತನ್ನ ತಾಯಿಗೆ ಉಪಜೀವನಕ್ಕೆ ಮಾರ್ಗವಾದದ್ದನ್ನು ತಿಳಿದ ಮೇಲೆ ಹಾನ್ಸನು ನಿಶ್ಚಿಂತೆಯಿಂದಲೂ ಸಂತೋಷದಿಂದಲೂ ಸತ್ತು ಹೋದನು.

ಓದುವವನೇ, ನಿಷ್ಪ್ರಯೋಜಕ ಮನುಷ್ಯನಾಗಿರದೆ, ನಿನ್ನಿಂದಾಗುವ ಜಂಬರ ಮಾಡಿ ಪರಾರ್ಥವನ್ನು ಸಾಧಿಸ ಬೇಕೆಂಬದು ನಿನ್ನ ಸಂಕಲ್ಪವು ಆಗಿರುತ್ತದೋ?

ಪರಮ ಸಂತೋಷವು.

ಒಬ್ಬ ಶ್ರೀಮಂತನ ಮನೆಯಲ್ಲಿ ಚಾಕರಿಯವಳೊಬ್ಬಳಿದ್ದಳು. ಒಂದು ದಿನ ಅವಳು ಧನಿಗೆ ಹೇಳಿದ್ದು: ಅಯ್ಯಾ, ನಾನು ಎಷ್ಟೋ ಸ್ವಲ್ಪ ಹಣದಿಂದ ತೃಪ್ತಳಾಗಿರುವೆನು. ಅದಕ್ಕೆ ಧನಿ ಅಂದದ್ದು: ಸ್ವಲ್ಪ ಅಂದರೆ ಎಷ್ಟು ಹಣ? ಚಾಕರಳು: ಏನಯ್ಯಾ, ನೂರು ರೂಪಾಯಿ ಇದ್ದರೆ, ನಾನು ಪರಮ ಸಂತೋಷ ಪಟ್ಟೇನು ಅಂದಲ್ಲಿ, ಇಷ್ಟೆ ಸರಿಯೋ? ಹಾಗಾದರೆ ಇಗೋ, ತಕ್ಕೋ, ಎಂದು ಧನಿ ಅವಳಿಗೆ ನೂರು ರೂಪಾಯಿ ಕೊಟ್ಟವನಾದನು. ತತ್‌ಕ್ಷಣದಲ್ಲಿ ಅವಳಿಗೆ ಬಹಳ ಆನಂದವಾಯಿತು, ಖರೆ; ಆದರೆ ಬಹಳ ದೂರ ಹೋಗಲಿಲ್ಲಾ, ಅಷ್ಟರಲ್ಲಿ, ಓಹೋ, ನಾನು ಇನ್ನೂರು ಬೇಡಿದ್ದರೆ ಒಳ್ಳೇದಾಗಿತ್ತು, ಯಜಮಾನನು ಕೊಡುತ್ತಿದ್ದನು ಎಂದು ತನ್ನಲ್ಲಿಯೇ ಹೇಳಿದಳು.

ಮನುಷ್ಯನ ಸ್ಥಿತಿಯು ಹೀಗೆಯೇ; ಹಣದಿಂದ ತೃಪ್ತಿಯು ಬಾರದು; ಎಷ್ಟಿದ್ದರೂ ಮತ್ತೂ ಬೇಕು ಎಂಬ ಆಶೆ ಬಿಡದು. ಕೋಟಿದ್ರವ್ಯ ಘಳಿಸಿಟ್ಟವನಿಗಾದರೂ ಸಂತೋಷವೂ ಸಮಾಧಾನವೂ ಇಲ್ಲಾ. ಕೇವಲ ಬಡವನಾಗಿದ್ದರೂ ದೇವರ ರಾಜ್ಯವನ್ನೂ ನೀತಿಯನ್ನೂ ಹುಡುಕಿ, ದೇವರು ಕೊಡುವ ಸಮಾಧಾನವನ್ನೂ ಸಂತೋಷವನ್ನೂ ಪಡಕೊಂಡವನೇ ಪರಮ ಧನ್ಯನು.

ರಸೀತೀವೇಃ

(೧೮೭೯ನೇ ಇಸವಿ Iನೇ ಆಕ್ಟಿನಲ್ಲಿರುವ ಪಟ್ಟಿಯಿಂದ ಎತ್ತಿ ತೆಗದು ಸಂಕ್ಷೇಪಿಸಿದ್ದು.)

ದಸ್ತಾವೇಜಿನ ವಿವರಣೆ: **ಸ್ಟಾಂಪ್ ಹಾಸಲು:**

11. (**Bill of Exchange or Promissory Note**) ಬಿಲ್ ಒಫ್ ಎಕ್ಸ್‌ಚೇಂಜ್ ಯಾ ಪ್ರೊಮಿಸರಿ ನೋಟು (ಅಂದರೆ ವಟಾಯಿಸ ತಕ್ಕ ಹುಂಡಿ ಯಾ ವಾಯಿದೇ ಚೀಟು. ಇದರಲ್ಲಿ ಚಕ್ಕ್, ಪತ್ರ, ಬೇಂಕನೋಟು, ಇಲ್ಲವೆ ಕರೆನ್ಸಿನೋಟು ಸೇರುವದಿಲ್ಲ):—

a) ಕೇಳಿದಾಗಲೇ ಪಾವತಿ ಆಗ ತಕ್ಕದ್ದಾಗಿ, ಆದರ ಮೌಲ್ಯ ೨೦ ರೂಪಾಯಿಗೆ ಮೀರಿದರೆ . . . . ೧ ಆಣೆ

b) ಕೇಳಿದಾಗಲೇ ಅಲ್ಲದೆ ಅನ್ಯಥಾ ಪಾವತಿಯಾಗ ತಕ್ಕದ್ದಾಗಿ, ಬರದ ಯಾ ಕಂಡ ತಾರೀಕಿನಿಂದ ಒಂದು ಸಂವತ್ಸರಕ್ಕೆ ಮೀರದ ವಾಯಿದೆ ಇದ್ದರೆ:

	ಒಂದಕ್ಕೆ		ದುಬಾರೆಪ್ರತಿಗೆ		ತಿಬಾರೆಪ್ರತಿಗೆ	
	ರೂ.	ಆ.	ರೂ.	ಆ.	ರೂ.	ಆ.
ನಮೂದಿಸಿದ ರೂಪಾಯಿ ೨೦೦ಕ್ಕೆ ಮೀರದಿದ್ದರೆ	೦	೨	೦	೧	೦	೧
ರೂಪಾಯಿ ೨೦೦ಕ್ಕೆ ಮೀರಿ ೪೦೦ „ „	೦	೪	೦	೨	೦	೨
„ ೪೦೦ „ ೬೦೦ „ „	೦	೬	೦	೩	೦	೨
„ ೬೦೦ „ ೧೦೦೦ „ „	೦	೧೦	೦	೫	೦	೪
„ ೧೦೦೦ „ ೧೨೦೦ „ „	೦	೧೨	೦	೬	೦	೪
„ ೧೨೧೦ „ ೧೬೦೦ „ „	೧	೦	೦	೮	೦	೬
„ ೧೬೦೦ „ ೨೫೦೦ „ „	೧	೮	೦	೧೨	೦	೮
೨೫೦೦ ರೂಪಾಯಿ ಮೇಲೆ ೧೦೦೦೦ ರೂ. ವರೆಗೆ ಪ್ರತಿ ರೂ. ೨೫೦೦ಕ್ಕೆ ಯಾ ಆದರ ಅಂಶಕ್ಕೆ	೧	೮	೦	೧೨	೦	೮
೧೦೦೦೦ ರೂಪಾಯಿ ಮೇಲೆ ೩೦೦೦೦ ರೂಪಾಯಿ ವರೆಗೆ ಪ್ರತಿ ರೂಪಾಯಿ ೫೦೦೦ಕ್ಕೆ ಯಾ ಆದರ ಅಂಶಕ್ಕೆ	೩	೦	೧	೮	೧	೦
೩೦೦೦೦ ರೂಪಾಯಿ ಮೇಲೆ ಪ್ರತಿ ರೂಪಾಯಿ ೧೦೦೦೦ಕ್ಕೆ ಯಾ ಆದರ ಅಂಶಕ್ಕೆ	೬	೦	೩	೦	೨	೦

c) ಬರದ ತಾರೀಕಿನಿಂದ ಇಲ್ಲವೆ ಕಂಡ ತಾರೀಕಿನಿಂದ ಒಂದು ಸಂವತ್ಸರದ ಮೇಲೆ ಪಾವತಿ ಆಗ ತಕ್ಕದ್ದಾದರೆ— ೧೩ನೇ ಅಂಕೆಯಲ್ಲಿ ಹೇಳಿರುವಷ್ಟೇ ಹಸೆ

12. (**Bill of Lading**) ಬಿಲ್ ಒಫ್ ಲೇಡಿಂಗ್ ಎಂಬ ಸಾಮಾನು (ಜಹಜಿನ ಮೇಲೆ) ಭರಾವಣಿಚೀಟು . . . . ೪ ಆಣೆ

13. ಪತ್ರ (ಈ ಆಕ್ಟಿನಿಂದ ಅನ್ಯಥಾ ನಿಬಂಧಿಸಲ್ಪಡದೆ ಇರುವಂಥಾದ್ದು); (57.) (Settlement) ವ್ಯವಸ್ಥಾಪತ್ರ:—

ಇದರ ಮೊಬಲಗು ೧೦ ರೂಪಾಯಿಗೆ ಮೀರದಿದ್ದರೆ . . ೨ ಆಣೆ

೧೦ ರೂಪಾಯಿಗೆ ಮೀರಿ ೫೦ ರೂಪಾಯಿಗೆ ಮೀರದಿದ್ದರೆ	೪ ಆಣೆ
೫೦ „ „ ೧೦೦ „ „	೮ ಆಣೆ
೧೦೦ ರೂ. ಮೇಲೆ ೧೦೦೦ ರೂ. ವರೆಗೆ ಪ್ರತಿ ರೂ. ೧೦೦ಕ್ಕೆಯಾ ಅದರಂಶಕ್ಕೆ	೮ ಆಣೆ
೧೦೦೦ „ „ ಪ್ರತಿ „ ೫೦೦ಕ್ಕೆ ಯಾ ಅದರ ಅಂಶಕ್ಕೆ.	೨ ರೂಪಾಯಿ ೮ ಆಣೆ

14. (Bond or Mortgage-Deed) ಪತ್ರ ಅಥವಾ ಅಡಮಾನ ಪತ್ರ (ಒಂದು ಕೆಲಸವನ್ನು ಸರಿಯಾಗಿ ನೆರವೇರಿಸ ತಕ್ಕ ಬಗ್ಗೆ ಅಥವಾ ತದ್ವಾರಾ ವಸೂಲಾದ ಹಣಕ್ಕೆ ಸಬಬು ಕೊಡ ತಕ್ಕ ಬಗ್ಗೆ ಜಾಮೀನಾಗಿ ಬರಕೊಡುವಂಥಾದ್ದು):—

a) ಪತ್ರದ ಮೊಬಲಗು ೧೦೦೦ ರೂಪಾಯಿಗೆ ಮೀರದಿದ್ದರೆ—	13ನೇ ಅಂಕೆಯಲ್ಲಿ ಹೇಳಿರುವಷ್ಟೆ ರಸೆ
b) ಇತರ ಸಂಗತಿಯಲ್ಲಿ	೫ ರೂಪಾಯಿ

19. ಇಪ್ಪತ್ತು ರೂಪಾಯಿಗೆ ಮೀರಿದ ಹಣಕ್ಕೆ (Cheque) ಚೆಕ್ಕ್ ಯಾನೆ ಹುಂಡಿ	೧ ಆಣೆ

21. (Conveyance) ಕೊನ್ವೆಯನ್ಸ್ ಯಾನೆ ಕ್ರಯಪತ್ರ, ದಾನಪತ್ರ:—
ಪ್ರತಿಫಲದ ಮೊಬಲಗು

ರೂಪ್ಯಾ ೫೦ಕ್ಕೆ ಮೀರದಿದ್ದರೆ	೮ ಆಣೆ
„ ೫೦ „ ಮೀರಿ ರೂ. ೧೦೦ಕ್ಕೆ ಮೀರದಿದ್ದರೆ	೧ ರೂಪಾಯಿ
„ ೧೦೦ „ „ „ ೧೦೦೦ ವರೆಗೆ ಪ್ರತಿ ರೂ. ೧೦೦ಕ್ಕೆ ಯಾ ಅದರ ಅಂಶಕ್ಕೆ	೧ ರೂಪಾಯಿ
„ ೧೦೦೦ „ „ „ ಪ್ರತಿ ೫೦೦ ರೂಪಾಯಿಗೆ ಯಾ ಅದರ ಅಂಶಕ್ಕೆ	೫ ರೂಪಾಯಿ

29. ಸಾಲ ಕೊಟ್ಟ ಹಣದ ವಸೂಲಿಯ ಬಂದೋಬಸ್ತಿಗಾಗಿ ಮೂಲ ದಸ್ತಾವೇಜುಗಳನ್ನು ಇಲ್ಲವೆ ಬೇರೆ ಬೆಲೆಯುಳ್ಳ ಸಾಧನಗಳನ್ನು ಠೇವಣಿ ಇಟ್ಟು, ಅಥವಾ ಚರಸೊತ್ತಿನ ಈಡಿನ ಮೇಲೆ ಸಾಲ ತಕ್ಕೊಂಡದ್ದಕ್ಕೆ ಸಾಕ್ಷ್ಯವಾಗಿ ಉಂಟಾಗುವ ದಸ್ತಾವೇಜು:—

a) ಸಾಲದ ಹಣವು ಅಂಥಾ ದಸ್ತಾವೇಜನ ತಾರೀಕಿನಿಂದ ಮೂರು ತಿಂಗಳ ಮೇಲೆ ಒಂದು ವರ್ಷದೊಳಗೆ ಸಂದಾಯವಾಗ ತಕ್ಕಂಥಾದ್ದಾಗಿದ್ದರೆ	11ನೇ ಅಂಕೆಯ *b* ಯಲ್ಲಿ ಹೇಳಿರುವಷ್ಟೆ ರಸೆ
b) ಮೂರು ತಿಂಗಳ ಒಳಗಿನ ವಾಯಿದೆಯಿಂದ ಸಂದಾಯವಾಗ ತಕ್ಕಂಥಾದ್ದಾಗಿದ್ದರೆ	11ನೇ ಅಂಕೆಯ *b* ಯಲ್ಲಿ ಹೇಳಿರುವ ರಸೆಯ ಅರೆವಾಶಿ

30. ಅಡವಿನ ಸೊತ್ತಿನ ಮೇಲೆ ಇನ್ನೂ ಸಾಲವನ್ನು ಹೊರಿಸಿ ಉಂಟಾಗುವ ದಸ್ತಾವೇಜು:—

a) ಪ್ರಥಮತಾ ಆದ ಅಡವು 44ನೇ ಅಂಕೆಯ *a* ಯಲ್ಲಿ ಸೂಚಿಸಿರುವಂಥಾದ್ದಾಗಿದ್ದರೆ.	21ನೇ ಅಂಕೆಯಲ್ಲಿ ಹೇಳಿದ ಕ್ರಯಪತ್ರದಷ್ಟೆ ರಸೆ
b) ಅಂಥಾ ಅಡವು 44ನೇ ಅಂಕೆಯ *b* ಯಲ್ಲಿ ಹೇಳಿದಂಥಾದ್ದಾಗಿದ್ದರೆ,	13ನೇ ಅಂಕೆಯಲ್ಲಿರುವಷ್ಟೆ ರಸೆ

32. ಪಾಲುಗಾರಿಕೇ ದಸ್ತಾವೇಜು	೧೦ ರೂಪಾಯಿ
33. ಪಾಲುಗಾರಿಕೆ ಅಗಲಿಕೇ ದಸ್ತಾವೇಜು	೫ ರೂಪಾಯಿ
35. ಯಾವದೊಂದು ಸೊತ್ತಿನ ಬದಲಾವಣೆ ದಸ್ತಾವೇಜು—	ಅಂಥಾ ಸೊತ್ತಿನ ಹೆಚ್ಚಾದ ಕಿಮ್ಮತ್ತಿನ ಬಗ್ಗೆ 21ನೇ ಅಂಕೆಯಲ್ಲಿ ಕ್ರಯಪತ್ರಕ್ಕೆ ಹೇಳಿರುವಷ್ಟೆ ರಸೆ

39. ಗೇಣಿಚೀಟು (ಗೇಣೀ ಬಗ್ಗೆ ಮಾಡುವ ಕರಾರು ಸಹ):—

a) ಗೇಣೀ ಮೊಬಲಗು ನಿಶ್ಚಯವಿದ್ದು, ಪ್ರೀಮಿಯುಮ್ ಯಾನೆ ವಟ್ಟ ಇಲ್ಲದೆ, ಗೇಣಿ ವಾಯಿದೆ ಇಂಥಾದ್ದೆಂತ ನಮೂದಿಸಲ್ಪಟ್ಟು, ಸದರಿ ವಾಯಿದೆ ಒಂದು ವರುಷಕ್ಕೆ ಮೀರದಿದ್ದರೆ.	13ನೇ ಅಂಕೆಯಲ್ಲಿ ಹೇಳಿರುವಷ್ಟೆ ರಸೆ
ಒಂದು ವರುಷಕ್ಕೆ ಮೀರಿ ೩ ವರ್ಷಕ್ಕೆ ಮೀರದಿದ್ದರೆ—	ಸರಾಸರಿ ೧ ವರ್ಷದ ಗೇಣಿಗೆ 13ನೇ ಅಂಕೆಯಲ್ಲಿ ಹೇಳಿರುವಷ್ಟೆ ರಸೆ
ಮೂರು ವರ್ಷಕ್ಕೆ ಮೀರಿ ಇದ್ದರೆ—	ಸರಾಸರಿ ಒಂದು ವರ್ಷಕ್ಕೆ ಬೀಳುವ ಗೇಣಿಗೆ 21ನೇ ಅಂಕೆಯಲ್ಲಿ ಹೇಳಿರುವಷ್ಟೆ ರಸೆ

b) ಗೇಣಿ ಮೊಬಲಗು ನಿಶ್ಚಯವಿದ್ದು, ವಟ್ಟ ಕೊಡುವದಿಲ್ಲದೆ, ಗೇಣಿ ಚೀಟಿನ ಮಾಯಿದೆ ಇಂಥಾದ್ದೆಂದು ನಿರಖು ಇಲ್ಲದಿದ್ದರೆ—	೧೦. ವರ್ಷದಲ್ಲಿ ಸರಾಸರಿ ಒಂದು ವರ್ಷಕ್ಕೆ ಬೀಳುವ ಗೇಣಿಗೆ 21ನೇ ಅಂಕೆಯಲ್ಲಿ ಹೇಳಿರುವಷ್ಟೆ ಠಸೆ
c) ಒಂದು ದಂಡ ಅಥವಾ ಪ್ರೀಮಿಯಮ್ ಯಾನೆ ವಟ್ಟ ತಕ್ಕೊಳ್ಳುವ ಶರ್ತದ ಮೇಲೆ ಗೇಣಿಗೆ ಕೊಡೋಣಾಗಿ, ಗೇಣಿ ಏನಾದರೂ ಬರುವಂಥಾದ್ದು ಇಲ್ಲದಿದ್ದರೆ—	ಗೇಣಿಚೀಟಿನಲ್ಲಿ ನಮೂದಿಸಿದ ಸದರಿ ದಂಡ ಯಾ ವಟ್ಟದ ಮೊಬಲಗಿಗಾಗಿ 21ನೇ ಅಂಕೆಯಲ್ಲಿ ಹೇಳಿರುವಷ್ಟೆ ಠಸೆ
d) ಗೇಣಿ ಬರುವದರ ಹೊರ್ತು ದಂಡ ಯಾ ಪ್ರೀಮಿಯಮ್ ಯಾನೆ ವಟ್ಟ ಸಹ ತಕ್ಕೊಳ್ಳುವ ಶರ್ತದ ಮೇಲೆ ಗೇಣಿಚೀಟು ಉಂಟಾದರೆ—	ಆ ದಂಡ ಯಾ ವಟ್ಟ ಇಲ್ಲದಿದ್ದರೆ, ಸದರಿ ಗೇಣೀ ಬಗ್ಗೆ ಎಷ್ಟು ಠಸೆ ಬೇಕಾದೀತೋ ಅಷ್ಟು ಹಾಸಲು, ಮತ್ತು ಸದರಿ ದಂಡದ ಯಾ ವಟ್ಟದ ಮೊಬಲಗಿಗೆ 21ನೇ ಅಂಕೆಯಲ್ಲಿ ಹೇಳಿರುವಷ್ಟೆ ಠಸೆ
41. **(Letter of Credit)** ಲೆಟರ್ ಒಫ್ ಕ್ರೇಡಿಟ್ (ಅಂದರೆ ಇದು ಯಾರ ಹೆಸರಿನಲ್ಲಿ ಬರಿಯಲ್ಪಡುತ್ತದೋ ಆತನಿಗೆ ನಂಬಿಕೆಯ ಮೇಲೆ ಸಾಲ ಕೊಡುವಂತೆ ಮತ್ತೊಬ್ಬನಿಗೆ ಅಧಿಕಾರ ಕೊಡುವಂಥಾ ದಸ್ತಾವೇಜು)	೧ ಆಣೆ
43. ಒಂದು ಕಂಪೆನಿಯ ಸಂಘದ ಯಾದಾಸ್ತು	೧೫ ರೂಪಾಯಿ
44. ಅಡಮಾನಪತ್ರ (14, 15, 29, 55ನೇ ಅಂಕೆಗಳಲ್ಲಿ ಏರ್ಪಡಿಸದೆ ಇರುವಂಥಾ ತರದ್ದು):—	
a) ಪತ್ರ ಬರೆದು ಕೊಡುವ ಸಮಯದಲ್ಲಿ ಅದರಲ್ಲಿ ನಮೂದಿಸಿದ ಸೊತ್ತನ್ನು ಅಡವುದಾರಗೆ ಒಪ್ಪಿಸಿ ಕೊಟ್ಟರೆ, ಇಲ್ಲವೆ ಒಪ್ಪಿಸಿ ಕೊಡುವರೆ ಸಮ್ಮತಿಸಿದರೆ.	21ನೇ ಅಂಕೆಯಲ್ಲಿ ಹೇಳಿರುವಷ್ಟೆ ಠಸೆ
b) ಸದರಿ ಸೊತ್ತಿನ ಸ್ವಾಧೀನತೆ ಬಿಟ್ಟು ಕೊಡದೆ ಇದ್ದ ಪಕ್ಷಕ್ಕೆ—	13ನೇ ಅಂಕೆಯಲ್ಲಿ ಹೇಳಿರುವಷ್ಟೆ ಠಸೆ
48. ಯಾವದಾದರೂ ಒಂದು ಹೊಸ ನಿರ್ಮಾಣದ ತಪಶೀಲುಪಟ್ಟಿಯನ್ನು ದಾಖಲು ಮಾಡುವ ಬಗ್ಗೆ, ಅಥವಾ ಹಿಂದುಸ್ಥಾನದಲ್ಲಿ ಸದರಿ ನಿರ್ಮಿತವನ್ನು ತನ್ನ ಹೊರ್ತು ಬೇರೆ ಯಾರಾದರೂ ಮಾಡಿ ಉಪಯೋಗಿಸದಂತೆ ಅಪ್ಪಣೆ ಆಗ ಬೇಕಾಗಿ ಬರಕೊಳ್ಳುವ ಅರ್ಜಿ	೧೦೦ ರೂಪಾಯಿ
50. **(Power-of-Attorney)** ಪವರ್-ಒಫ್-ಎಟ್ಟರ್ನಿ (ಮೊಕ್ತ್ಯಾರನಾಮೆ):—	
a) ಒಂದೇ ಕಾರ್ಯಕ್ಕೆ ಸಂಬಂಧವಾದ ಒಂದು ಯಾ ಅನೇಕ ದಸ್ತಾವೇಜುಗಳನ್ನು ರಿಜಿಸ್ತ್ರೀ ಬಗ್ಗೆ ಹಾಜರು ಪಡಿಸುವದಕ್ಕೆ ಉಂಟಾದರೆ	೮ ಆಣೆ
b) ಬೇರೆ ಯಾವದಾದರೂ ಒಂದೇ ಕಾರ್ಯಕ್ಕಾಗಿ ಒಬ್ಬ ಯಾ ಅನೇಕರಿಗೆ ಅಧಿಕಾರ ಕೊಡುವದಾದರೆ	೧ ರೂಪಾಯಿ
c) ಸಮಷ್ಟಿಯಾಗಿ ಯಾ ಬೇರೆ ಬೇರೆಯಾಗಿ ಒಂದಕ್ಕಿಂತ ಅನೇಕ ಕಾರ್ಯಗಳಲ್ಲಿ ಆಗಲೀ ಸಾಧಾರಣವಾಗಿ ಆಗಲೀ ಪ್ರವರ್ತಿಸಲಿಕ್ಕೆ ೫ಕ್ಕೆ ಮೀರದಷ್ಟು ಮಂದಿಗೆ ಅಧಿಕಾರ ಕೊಡುವದಾದರೆ	೫ ರೂಪಾಯಿ
d) ಸಮಷ್ಟಿಯಾಗಿ ಯಾ ಬೇರೆ ಬೇರೆಯಾಗಿ ಅನೇಕ ಕಾರ್ಯಗಳಲ್ಲಿ ಆಗಲೀ ಸಾಧಾರಣವಾಗಿ ಆಗಲೀ ಪ್ರವರ್ತಿಸಲಿಕ್ಕೆ ೫ಕ್ಕೆ ಮೀರಿ ೧೦ಕ್ಕೆ ಮೀರದೆ ಇರುವ ಜನರಿಗೆ ಅಧಿಕಾರ ಕೊಡುವದಾದರೆ	೧೦ ರೂಪಾಯಿ
e) ಇತರ ಸಂಗತಿಯಲ್ಲಿ	ಅಧಿಕಾರ ಹೊಂದುವ ಪ್ರತಿ ಮನುಷ್ಯನಿಗಾಗಿ ೧ ರೂಪಾಯಿ
52. ಇಪ್ಪತ್ತು ರೂಪಾಯಿಗೆ ಮೀರಿದ ಯಾವ ಹಣವನ್ನಾಗಲೀ ಸೊತ್ತನ್ನಾಗಲೀ ಸಂದದ್ದಕ್ಕೆ ಕೊಡುವ ರಶೀದಿ	೧ ಆಣೆ
53. ಅಡವಿನ ಸೊತ್ತಿನ ಪರಭಾರೆ ದಸ್ತಾವೇಜು:—	
a) ಅಡವಿನ ಹಣ ೧೦೦ ರೂಪಾಯಿಗೆ ಮೀರದಿದ್ದರೆ . . .	21ನೇ ಅಂಕೆಯಲ್ಲಿ ಹೇಳಿರುವಷ್ಟೆ ಠಸೆ
b) ಇತರ ಸಂಗತಿಯಲ್ಲಿ	೧೦ ರೂಪಾಯಿ

54. (Release) ರಿಲೀಜ್ ಯಾನೆ ಖುಲಾಸೆಪತ್ರ (ಅಂದರೆ ಒಬ್ಬನು ಮತ್ತೊಬ್ಬನ ಮೇಲಾಗಲೀ ಯಾವದೊಂದು ಸೊತ್ತಿನ ಮೇಲಾಗಲೀ ತನಗಿರುವ ಬಾಧ್ಯತೆಯನ್ನು ಬಿಟ್ಟು ಬಿಡುವ ದಸ್ತಾವೇಜು):—

a) ಬಾಧ್ಯತೆಯ ಮೊಬಲಗು ೧೦೦೦ ರೂಪಾಯಿಗೆ ಮೀರದಿದ್ದರೆ—13ನೇ ಅಂಕೆಯಲ್ಲಿ ಹೇಳಿರುವಷ್ಟು ಠಸೆ
b) ಇತರ ಸಂಗತಿಯಲ್ಲಿ . . . . ೫ ರೂಪಾಯಿ

58. (Shipping Order) ಶಿಪ್ಪಿಂಗ್ ಒರ್ಡರ್ (ಅಂದರೆ ಜಹಜನ ಮೇಲೆ ಜೀನಸುಗಳನ್ನು ವೈಯುವದಕ್ಕೋಸ್ಕರ ಅನುಜ್ಞೆ ಕೊಡುವ ಪತ್ರ). ೧ ಆಣೆ

ಠಸೇ ಹಾಸಲು ಮಾಫಿ ಇರುವ ಕೆಲ ದಸ್ತಾವೇಜುಗಳು.

೧೪. ಗೇಣಿಚೀಟುಗಳೂ ಅವುಗಳ ಎದುರ್ನುಡಿಗಳೂ:—*b)* ಯಾವ ದಂಡವಾಗಲೀ ವಟ್ಟವಾಗಲೀ ಸಲ್ಲಿಸುವ ಶರ್ತ ಇಲ್ಲದೆ ಒಬ್ಬ ವ್ಯವಸಾಯಗಾರನು ಬರಕೊಡುವ ಗೇಣಿಚೀಟು; ಇದರಲ್ಲಿ ನಿರಖು ವಾಯಿದೆ ನಮೂದಿಸಿ, ಸದರಿ ವಾಯಿದೆ ಒಂದು ಸಂವತ್ಸರಕ್ಕೆ ಮೀರದೆ ಇದ್ದರೆ, ಅಥವಾ ಅದರ ವರ್ಷಾವಧಿ ಗೇಣಿ ೧೦೦ರೂಪಾಯಿಗೆ ಮೀರದಿದ್ದರೆ; *c)* ಒಬ್ಬ ವ್ಯವಸಾಯಗಾರನಿಗೆ ಕೊಡುವ ಗೇಣಿಚೀಟಿನ ಎದುರ್ನುಡಿ.

೧೫. ರಶೀದಿ:—*a)* ಕ್ರಮವಾಗಿ ಠಸೇ ಮೇಲೆ ಆದಂಥಾ ಯಾವ ದಸ್ತಾವೇಜಿನಲ್ಲಾಗಲೀ ನಮೂದಿಸಿರುವ ಕೃಷಿಫಲ ಬಂತೆಂದು ಅಥವಾ ಅದರಿಂದ ಭದ್ರ ಪಡಿಸಿರುವ ಅಸಲು ಆಗಲೀ ಬಡ್ಡಿ ಆಗಲೀ ವರ್ಷಾಸನವಾಗಲೀ ಕಾಲಾವಧಿ ಸಂದಾಯವಾಗ ತಕ್ಕ ಬೇರೆ ಹಣವಾಗಲೀ ಬಂತೆಂದು ಕೊಡುವ ರಶೀದಿ; *b)* ಪ್ರತಿಫಲವಿಲ್ಲದೆನೇ ಹಣ ಪಾವತಿ ಆದ್ದಕ್ಕೆ ರಶೀದಿ; *h)* ಒಬ್ಬ ಸಾವಕಾರನ ಕೈಯ ಠೇವಣಿ ಇಟ್ಟ ಹಣದ ಬಗ್ಗೆ ಯಾ ಹಣದ ಖಾತರೀ ಬಗ್ಗೆ ಕೊಡುವ ರಶೀದಿ. ಪರಂತು ಸದರಿ ಹಣಕ್ಕಾಗಿ ಯಾರಿಗೆ ಉತ್ತರ ಹೇಳ ತಕ್ಕದ್ದೋ ಅವನಿಗೆ ಹೊರ್ತು ಬೇರೆ ಯಾರಾದರೂ ಈಸಿಕೊಳ್ಳುವಂತೆ ನಮೂದಿಸಿರ ಬಾರದು. ಈ ಮಾಫಿಯು ಒಂದು ಸಂಘದ ಹಿಸೆಗೆ, ಅಥವಾ ಹಿಸೆಯ ನಿರ್ಣಯಪತ್ರದ ಪ್ರಕಾರ ಕೊಡೋಣಾಗುವ ಇಲ್ಲವೆ ಠೇವಣಿ ಇಡೋಣಾಗುವ ಹಣಕ್ಕಾಗಿ ಕೊಡುವ ರಶೀದಿಗೆ ಸಮ್ಮಂಧಿಸುವದಿಲ್ಲ.

೧೬. ಪೋಲ್‌ಚೀಟು ಯಾನೆ ಎಂಡಾರಸ್ ಮೂಲಕವಾಗಿ ವಟಾಯಿಸ ತಕ್ಕ ಹುಂಡಿ, ಚಕ್ಕ್, ಇಲ್ಲವೆ ಪ್ರೊಮಿಸರಿ ನೋಟನ್ನು ವರ್ಗ ಯಾನೆ ಪರಾಧೀನ ಮಾಡುವ ಪತ್ರ.

ಟಪ್ಪಾಲಿನ ವಿಷಯ ಮುಖ್ಯ ಕ್ರಮಗಳು.

ಮುಂದಿನ ಕ್ರಮಗಳು ಹಿಂದುಸ್ಥಾನದಲ್ಲಿಯೂ ಅದರ ಸೆರೆಶೀಮೆಗಳಲ್ಲಿಯೂ ನಡಿಯುವ ಟಪ್ಪಾಲ ಸಮ್ಮಂಧವಾಗಿರುತ್ತವೆ.

ಕೋವಿಮದ್ದು ಮುಂತಾದ ಜ್ವಲನಾಸ್ಪದವಾದ ಒಡವೆಗಳು, ಗಾಜಿನ ಸಾಮಾನು, ತೆಳುಜೀನಸು, ಇಂಥಾದ್ದನ್ನು ಟಪ್ಪಾಲಿನಲ್ಲಿ ರವಾನಿಸ ಬಾರದು; ಪರಂತು ಔಷಧ ಮುಂತಾದ್ದು ಗಾಜಿನ ಬಾಟ್ಲಿಯಲ್ಲಿ ಹಾಕಿದ್ದಾಗ್ಯೂ, ಅಲ್ಲಾಡದಂತೆ ಬಂದೋಬಸ್ತಾಗಿ ಕಟ್ಟಿದ್ದರೆ, ರವಾನಿಸುವದಕ್ಕೆ ಅಡ್ಡಿ ಇರುವದಿಲ್ಲ. ಅದಲ್ಲದೆ ಬಂಡು ತರದ ಬರಹ, ಛಾಪೆ, ಚಿತ್ರ, ನಕ್ಷೆ, ಇಂಥಾದ್ದನ್ನು ಟಪ್ಪಾಲಿನ ದ್ವಾರಾ ರವಾನಿಸಗೊಡುವದಿಲ್ಲ.

ಒಬ್ಬನು ತನ್ನ ಹೆಸರಿಗೆ ಬಂದ ಲಕೋಟೆ ಇಲ್ಲವೆ ಕಟ್ಟನ್ನು ತೆರಿಯದೆ ವಾಪಸು ಮಾಡ ಬಹುದು; ಹಾಗೆ ವಾಪಸು ಮಾಡಿದ ಪಕ್ಷಕ್ಕೆ, ಅವನು ಅದರ ದಸ್ತೂರಿ ತೆರಲಿಕ್ಕೆ ಬದ್ಧನಾಗುವದಿಲ್ಲ. ಒಂದು ಲಕೋಟೆ ಇಲ್ಲವೆ ಕಟ್ಟು ಹೊಂದಿದವನು ಒಂದು ವೇಳೆ ಅದನ್ನು ತೆರದಾಗ್ಯೂ, ಅವನ ಮೇಲೆ ದ್ವೇಷದಿಂದ ಯಾರಾದರೂ ಕಳುಹಿಸಿದ್ದೆಂತ ಅದು ತಲ್ಪಿದ ಪೋಸ್ಟ್‌ಮಾಸ್ಟರಿಗೆ ಕಂಡರೆ, ಆ ಆಫಿಸರು ಅದರ ದಸ್ತೂರಿಯನ್ನು ಮಾಫು ಮಾಡ ಬಹುದು.

ಟಪ್ಪಾಲಿಗೆ ಹಾಕಿದ ಯಾವ ಲಿಫಾಪೆಗೆ ಯಾ ಕಟ್ಟಿಗೆ ರಶೀದಿ ಶಿಕ್ಕುವದಿಲ್ಲವೋ, ಅಂಥಾದ್ದನ್ನು ಟಪ್ಪಾಲಿಗೆ ಹಾಕಿದ ಗುರುತಿಗಾಗಿ ಸರ್ಟಿಫಿಕೇಟನ್ನು ಪೋಸ್ಟ್ ಆಫಿಸಿನಿಂದ ಪಡಕೊಳ್ಳ ಬಹುದು. ಹ್ಯಾಗಂದರೆ, ರಶೀದಿಯನ್ನು ಅಪೇಕ್ಷಿಸುವವನು ತನ್ನ ಲಿಫಾಪೆಯ ಯಾ ಕಟ್ಟಿನ ಮೇಲೆ ಬರದ ಮೇಲುವಿಳಾಸದ ಯಥಾಪ್ರತಿ ನಕಲನ್ನು ಬೇರೊಂದು ಕಾಗದದ ಮೇಲೆ ಬರದು, ಅದಕ್ಕೆ ಅರ್ಧ ಆಣೆಯ ಒಂದು ಟಪ್ಪಾಲಚೀಟು ಹಚ್ಚಿ, ಅವೆರಡನ್ನು ಹಾಜರು ಮಾಡಿದ್ದಲ್ಲಿ ಪೋಸ್ಟ್ ಆಫಿಸಿನವರು ಅದರ ಚೀಟನ್ನು ರದ್ದು ಮಾಡಿ, ತಾರೀಕಿನ ಮುದ್ರೆಯನ್ನು ಸಹ ಅದಕ್ಕೆ ಒತ್ತಿ, ಅದನ್ನು ಹಾಜರು ಮಾಡಿದ ಮನುಷ್ಯನಿಗೆ ವಾಪಸು ಕೊಡುವರು. ಇದು ಸದರಿ ಲಿಫಾಪೆ ಇಲ್ಲವೆ ಕಟ್ಟು ಟಪ್ಪಾಲಿಗೆ ಹಾಕಿದ್ದಕ್ಕೆ ಕೊಡಲ್ಪಡುವ "ಸರ್ಟಿಫಿಕೇಟು" ಅನ್ನಿಸಿಕೊಳ್ಳುತ್ತದೆ.

ಲೋಕಕ್ಕೆ ಸ್ನೇಹಿತನಾಗ ಬೇಕೆಂಬವನು ದೇವರಿಗೆ ಶತ್ರುವಾಗಿದ್ದಾನೆ. ಯಾಕೊ. ೪, ೪. ೬೯

ಒಂದು ಲಿಫಾಪೆಗೆ ಇಲ್ಲವೆ ಮುಂದೆ ಹೇಳಿರುವ ಬುಕ್ ವ ಪಟರ್ನ್‌ಪಕೆಟ್ ಎಂಬ ಕಟ್ಟಿಗೆ ದಸ್ತೂರಿ ಮುಂದಾಗಿ ಹಚ್ಚದೆ ಇದ್ದರೆ, ಇಲ್ಲವೆ ಹಚ್ಚಿದ ದಸ್ತೂರಿ ನಿರಖಿಗೆ ಕಡಿಮೆಯಾದರೆ, ಆ ಲಿಫಾಪೆಯನ್ನು ಯಾ ಕಟ್ಟನ್ನು ಹೊಂದುವವನು ಆ ದಸ್ತೂರಿಯ ಇಲ್ಲವೆ ಕಡಿಮೆಯಾದದರ ಇಮ್ಮಡಿ ಹಾಸಲ ತೆರ ಬೇಕು. ಈ ಮೇರೆಗೆ ಚೀಟು ಹಚ್ಚದೆ ರವಾನಿಸುವದಕ್ಕೆ "ಬೇರಿಂಗ್" (Bearing) ಅನ್ನುತ್ತಾರೆ.

ಒಂದು ಲಿಫಾಪೆ ಇಲ್ಲವೆ ಕಟ್ಟನ್ನು ತೆರಿಯದೆ ಬೇರೊಂದು ಎಳಾಸಕ್ಕೆ ತಿರಿಗಿ ರವಾನಿಸ ಬಹುದು; ಆ ಪ್ರಕಾರ ರವಾನಿಸಿದ್ದಾದರೆ, ಅದಕ್ಕೆ ಪ್ರತ್ಯೇಕ ದಸ್ತೂರಿ ಕೊಡ ಬೇಕೆಂತಿಲ್ಲ.

(Letter Post) ಕಾಗದಟಪ್ಪಾಲು.

ಎಲ್ಲಾ ಲಖೋಟೆಗಳೂ, ಟಪ್ಪಾಲ ಕಾರ್ಡುಗಳೂ ೨೦ ತೊಲೆಗೆ ಮೀರದ ಪಕೆಟುಗಳೂ ಈ ಟಪ್ಪಾಲಿನ ದ್ವಾರಾ ಹೋಗುವವು.

	ಆ.	ಪೈ.
ಭಾರದಲ್ಲಿ ½ ತೊಲೆಗೆ ಮೀರದಿದ್ದರೆ	೦	೬
„ ೧ „ „	೧	೦
ಹೆಚ್ಚಿಗೆ ಪ್ರತಿ ೧ ತೊಲೆಗೆ ಯಾ ಅದರಂಶಕ್ಕೆ	೧	೦
ಟಪ್ಪಾಲ ಕಾರ್ಡು ಒಂದಕ್ಕೆ	೦	೩

ಕಾರ್ಡಿನ ಮುಂದಗಡೆ ಎಳಾಸ ಮಾತ್ರ ಹೊರ್ತು, ಹೆಚ್ಚಿಗೇನೂ ಬರಿಯ ಬಾರದು.

೩ ಪೈ ಕಾರ್ಡುಗಳೂ, ½, ೧, ೧½, ೨, ೩, ೪, ೬, ೮ ಆಣೆ, ೧ರೂಪಾಯಿ ಮೌಲ್ಯದ ಟಪ್ಪಾಲಚೀಟುಗಳೂ, ½ ಆಣೆ, ೧ ಆಣೆ ಇಲ್ಲವೆ [illegible] ಆಣೆಯ ಚೀಟುಳ್ಳ ಲಖೋಟೆಗಳೂ ಮಾರಾಟಕ್ಕೆ ಸಿಕ್ಕುತ್ತವೆ.

ಕಾಗದಟಪ್ಪಾಲಿನ ದ್ವಾರಾ ಕಳುಹಿಸುವ ಲಿಫಾಪೆ ೨೦ ತೊಲೆಗೆ ಮೀರ ಬಾರದು.

ಒಂದು ಲಿಫಾಪೆ, ಟಪ್ಪಾಲ ಕಾರ್ಡು, ಇಲ್ಲವೆ "ಪಕೆಟು" ಎಂಬ ಖುಲ್ಲಾ ಕಟ್ಟು ಹೆಚ್ಚು ಭದ್ರತೆಯಿಂದ ತಲಪ ಬೇಕೆಂಬವರು ಎರಡು (೨) ಆಣೆ ಕೊಟ್ಟು ಅದನ್ನು ರಿಜಿಸ್ತ್ರಿ ಮಾಡಿಸ ಬಹುದು, ಹ್ಯಾಗಂದರೆ: ರವಾನಿಸುವವನು ಅದಕ್ಕೆ ಮೇಲ್ವಿಳಾಸ ಬರದು, ಅದರ ಎಡಭಾಗದ ಕೆಳಗೆ ತನ್ನ ಹೆಸರು ಎಳಾಸ ಸಹ ಬರದು, ಅದಕ್ಕೆ ನಿರಖು ಇರುವ ಚೀಟು ಮತ್ತು ರಿಜಿಸ್ತ್ರಿ ಬಗ್ಯೆ ಎರಡು ಆಣೇ ಚೀಟು ಸಹ ಹಚ್ಚಿ, ಟಪ್ಪಾಲು ಕೈದು ಮಾಡುವ ಮುಂಚೆ ಟಪ್ಪಾಲುಕಟ್ಟೆಯಲ್ಲಿ ಒಪ್ಪಿಸ ಬೇಕು; ಅವರು ಅದನ್ನು ರಿಜಿಸ್ತ್ರಿ ಮಾಡಿ, ಛಾಪಾ ರಶೀದಿ ಕೊಡುವರು. ಮತ್ತು ಸದರಿ ಲಿಫಾಪೆ ಹೊಂದಿದವನಿಂದ ಪಾವತಿರಶೀದಿ ತರಿಸಿ ಕೊಡ ಬೇಕಾದರೆ, ಹೆಚ್ಚಿಗೆ ೧ ಆಣೆ ಚೀಟು, ಮತ್ತು ಸದರಿ ಪಕೆಟು ಹೊಂದಿದವನಿಂದ ಪಾವತಿರಶೀದಿ ತರಿಸಿ ಕೊಡ ಬೇಕಾದರೆ, ೧ ಆಣೆ ರೊಖ್ಖ ಸಹ ಹಾಜರು ಮಾಡ ಬೇಕು.

ಟಪ್ಪಾಲ ದಸ್ತೂರಿಯನ್ನು ತಪ್ಪಿಸಿಕೊಳ್ಳುವ ಬಗ್ಯೆ, ಬೇರೆ ಬೇರೆಯವರಿಗೆ ಪ್ರತ್ಯಪ್ರತ್ಯೇಕವಾಗಿ ಬರದ ಲೇಖನಗಳನ್ನು ಒಂದೇ ಲಿಫಾಪೆಯಲ್ಲಿ ಹಾಕಿ ಕಳುಹಿಸುವಂಥವರು ಶಿಕ್ಷೆಗೆ ಗುರಿಯಾಗುತ್ತಾರೆ.

(Baughy Post) ಬಂಗಿಟಪ್ಪಾಲು.

೨೦ ತೊಲೆಗೆ ಮೀರಿದ (Book Packet and Pattern Packet) "ಬುಕ್‌ಪಕೆಟ್" ಮತ್ತು "ಪಟರ್ನ್‌ಪಕೆಟ್" ಎಂತಲೂ, (Parcel) "ಪಾರ್ಸೆಲ್" ಎಂತಲೂ ಎರಡು ವಿಧದ ಕಟ್ಟುಗಳು ಈ ಟಪ್ಪಾಲ ದ್ವಾರಾ ರವಾನಿಸಲಾಗುತ್ತದೆ. ಇವುಗಳ ಟಪ್ಪಾಲು ಹಾಸಲಿನ ದರ ಹ್ಯಾಗಂದರೆ:—

ಬುಕ್‌ಪಕೆಟ ಮತ್ತು ಪಟರ್ನ್‌ಪಕೆಟ

	ಆ.	ಪೈ.
ಭಾರದಲ್ಲಿ ೧೦ ತೊಲೆಗೆ ಮೀರದಿದ್ದರೆ	೦	೬
ಹೆಚ್ಚಿಗೆ ಪ್ರತಿ ೧೦ „ ಯಾ ಅದರಂಶಕ್ಕೆ	೦	೬

ಒಂದು ಪಕೆಟು ೨ ಫೂಟ್ ಉದ್ದ ೧ ಫೂಟ್ ಅಗಲ ಅಥವಾ ದಪ್ಪಕ್ಕೆ ಮೀರ ಬಾರದು. ಬುಕ್ ಪಕೆಟಿನ ಭಾರದ ವಿಷಯದಲ್ಲಿ ಪ್ರತ್ಯೇಕ ನಿರಖು ಇಲ್ಲ; ಆದರೆ ಪಟರ್ನ್ ಪಕೆಟು ಭಾರದಲ್ಲಿ ೪೦ ತೊಲೆಗೆ ಮೀರ ಬಾರದು.

ಪಾರ್ಸೆಲ್

	ಆ.	ಪೈ.
ಭಾರದಲ್ಲಿ ೨೧ ತೊಲೆಗೆ ಮೀರದಿದ್ದರೆ	೪	೦
„ ೪೦ „ „	೮	೦
ಹೆಚ್ಚಿಗೆ ಪ್ರತಿ ೪೦ „ ಯಾ ಅದರಂಶಕ್ಕೆ	೪	೦

ಇದರ ಟಪ್ಪಾಲ ಹಾಸಲು ರೊಖ್ಖವಾಗಿ ತೆರ ಬೇಕು. ಪಾರ್ಸೆಲು ಭಾರದಲ್ಲಿ ೨೫ ಶೇರು (೨೦೦ ತೊಲೆ)ಗಳಿಗೆ ಮೀರ ಬಾರದು; ಮತ್ತು ಅದರ ಗಾತ್ರ, ಆಕಾರ, ಕಟ್ಟಿದ ರೀತಿ ಇವುಗಳ ದೆಸೆಯಿಂದ ವೈಯಲಿಕ್ಕೆ ತೊಂದರೆಯೂ ಜೋಕುಮೂ ಇರ ಬಾರದು.

"ಬುಕ್ ಪೆಕೆಟ್" ಮತ್ತು "ಪೆಟರ್ನ್ ಪೆಕೆಟ್":—(1) ಖಾಲಿ ಇಲ್ಲವೆ ಛಾಪೆಯಾದ ಪುಸ್ತಕ, ವರ್ತಮಾನಪತ್ರ, ಚಿತ್ರ, ನಕ್ಷೆ (ಇಂಥಾದ್ದಕ್ಕೆ ಸಮ್ಮಂಧವಾದ ಕೈಬರಹವಿದ್ದರೆ, ಅದರ ಸಮೇತ); ಬರದು ತಿಳಿಸುವ ಯಾ ಲೇಖನಸ್ವಭಾವದ್ದಾಗಿರದೆ, ಕಾರ್ಯಸಮ್ಮಂಧವಾಗಿ ಬರೆಯಲ್ಪಟ್ಟ ದಸ್ತಾವೇಜು, ಭರಾವಣಿಚೀಟು, ಸಾಮಾನುಪಟ್ಟಿ, ಲೆಖ್ಖದ ಪಟ್ಟಿ ಎಂಬೀ ತರದ ಕಾಗದಗಳು; ಯಾವದೊಂದು ವರ್ತಮಾನಪತ್ರದಲ್ಲಿ ಇಲ್ಲವೆ ಪುಸ್ತಕವಾಗಿ ಛಾಪಿಸುವದಕ್ಕಾಗಿ ಯಾದೊಂದು ಛಾಪಖಾನೆಗೆ ರವಾನಿಸಲ್ಪಡುವ ಕೈಬರಹದ ಕಾಗದಗಳು,—ಇಂಥಾದ್ದೆಲ್ಲ "ಬುಕ್‌ಪೆಕೆಟನಲ್ಲಿ" ಶೇರುತ್ತವೆ. ಆದರೆ ಮನಃಪೂರ್ವಕವಾಗಿ ವ್ಯಾಪಾರದ ನಮೂನೆ ಯಾ ಕೆಲಸದ ಮಾದರಿಯುಳ್ಳ ಯಾವದೊಂದು ಕಟ್ಟು, ಅದಕ್ಕೆ ಕ್ರಯ ಹಿಡಿಯದೆ ರವಾನಿಸಲ್ಪಟ್ಟ ಪಕ್ಷಕ್ಕೆ, ಅಂಥಾದ್ದು "ಪೆಟರ್ನ್‌ಪೆಕೆಟನಲ್ಲಿ" ಶೇರುತ್ತದೆ. (2) ಪೆಕೆಟು ಉಭಯ ಕಡೆಗಳಲ್ಲಿಯೂ ಖುಲ್ಲಾ ಬಿಟ್ಟು, ಅದರೊಳಗಿರುವದನ್ನು ಬಿಚ್ಚಿ ನೋಡುವ ಹಾಗೆ, ಕಟ್ಟಿ ತರ ಬೇಕು. (3) ಈ ಉಭಯ ತರದ ಪೆಕೆಟುಗಳಿಗೂ ನಿರಖಿರುವ ದಸ್ತೂರಿ ಮುಂದಾಗಿ ಹಚ್ಚ ಬೇಕು; ಹಚ್ಚದೆ ರವಾನಿಸಿದರೆ, ಆ ಪೆಕೆಟು ಹೊಂದುವವನು ಆ ದಸ್ತೂರಿಯ ದುಬಾರೆ, ಇಲ್ಲವೆ ಹಚ್ಚಿದ ದಸ್ತೂರಿ ಕಡಿಮೆಯಾಗಿ ಹೋದರೆ, ಆ ಬಾಕಿಯ ದುಬಾರೆ ಹಾಸಲು ರೊಖ್ಖವಾಗಿ ತರ ಬೇಕು. (4) ಪೆಕೆಟು ಟಪ್ಪಾಲಿಗೆ ಹಾಕಿದ್ದಕ್ಕೆ ರಶೀದಿ ಶಿಕ್ಕುವದಿಲ್ಲ; ಆದರೆ ಅದನ್ನು ರಿಜಿಸ್ತ್ರಿ ಮಾಡಿಸಿದ್ದಾದರೆ, ರಶೀದಿ ಕೊಡೋಣಾಗುತ್ತದೆ.

ಯಾವದೊಂದು ವರ್ತಮಾನಪತ್ರದ ಮಾಲಿಕನಾಗಲೀ ಪ್ರಸಿದ್ಧಕನಾಗಲೀ ತಾನು ಕಾಲಾವಧಿಯಾಗಿ ಟಪ್ಪಾಲಿಗೆ ಹಾಕುವ ತನ್ನ ಪತ್ರಕ್ಕಾಗಿ ಇಂತಿಷ್ಟು ಕಾಲಕ್ಕೆಂತ ಒಮ್ಮೆಯೇ ಹಾಸಲಿನ ಹಣ ನಗದಾಗಿ ಕೊಟ್ಟು ತೀರಿಸ ಬಹುದು. ಹಾಗೆ ಮಾಡಿದಂಥಾ ಪತ್ರವನ್ನು ಟಪ್ಪಾಲ ಚೀಟಲ್ಲದೆ, ಮತ್ತು ಪ್ರತ್ಯೇಕ ಹಾಸಲಿಗೆ ಗುರಿಯಾಗದೆ ರವಾನಿಸ ಬಹುದು. ಈ ಪ್ರಕಾರ ಮುಂಗಡವಾಗಿ ತೆರುವ ಹಾಸಲಿನ ಅವಧಿಯು ಸಾಮಾನ್ಯ ೩ ತಿಂಗಳಾಗಿರುವದು. ಮುಂಗಡ ದಸ್ತೂರಿಯನ್ನು ಎಣಿಸುವಲ್ಲಿ, ವರ್ತಮಾನಪತ್ರಕರ್ತರು ತಮ್ಮೊಳಗೆ ಉಚಿತಾರ್ಥವಾಗಿ ಬದಲಾಯಿಸಿಕೊಳ್ಳುವಂಥಾ ಪ್ರತಿಗಳಿಗೆ ಟಪ್ಪಾಲ ಹಾಸಲು ಪೂರಾ ಮಾಫಿಯಾಗಿಯೂ, ಮಾರಾಟದ ಬಗ್ಗೆ ಏಜೆಂಟರಿಗೆ ರವಾನಿಸುವ ಪತ್ರಿಕೆಪ್ರತಿಗಳ ಕಟ್ಟುಗಳು ಇಲ್ಲಿ ನಮೂದಿಸಿರುವ ಹಾಸಲಿನ ಅರೆವಾಸಿಗೂ, ಉಳಿದ ಪ್ರತಿಗಳು ಪೂರಾ ಹಾಸಲಿಗೂ ಗುರಿಯಾಗಿ ಇರುವವು.

ವರ್ತಮಾನಪತ್ರದ ಒಂದೊಂದು ಪ್ರತಿಯು		
೩ ತೊಲಿಗೆ ಮೀರದಿದ್ದರೆ	೧೦ ತೊಲಿಗೆ ಮೀರದಿದ್ದರೆ	ಪ್ರತಿ ಹೆಚ್ಚಿಗೆ ೧೦ ತೊಲಿಗೆ ಯಾ ಅದರ ಅಂಶಕ್ಕೆ
೩ ಪೈ	೬ ಪೈ	೬ ಪೈ

"ಪಾರ್ಸೆಲು:—(1) ಪೂರಾ ಬಂದು ಮಾಡಿ ಕಟ್ಟಿ ತರ ಬೇಕು. (2) (ಹಿಂದೆ ನಿಷೇಧಿಸಲ್ಪಟ್ಟ ಸಾಮಾನುಗಳ ವಿನಹ) ಬೇರೇನಾದರೂ ಇದರಲ್ಲಿ ಗರ್ಭಿಸ ಬಹುದು. (3) ಆದರೆ, ಇದರಲ್ಲಿ ಒಂದಕ್ಕಿಂತ ಹೆಚ್ಚಿಗೆ ಲೇಖನಪತ್ರದ ಸ್ವಭಾವದ್ದೇನಾದರೂ ಹಾಕ ಬಾರದು. (4) ಇದನ್ನು ರಿಜಿಸ್ತ್ರಿ ಮಾಡುವದು ಅವಶ್ಯವಿಲ್ಲ; ಯಾಕಂದರೆ ಇದನ್ನು ಟಪ್ಪಾಲಿಗೆ ಹಾಕಿದ್ದಕ್ಕೆ ರಶೀದಿ ಶಿಕ್ಕುತ್ತದೆ; ಮತ್ತು ಅದು ತಪ್ಪಿದ್ದಕ್ಕೆ ಪಾರ್ಸೆಲು ಹೊಂದಿದವನಿಂದ ಸಹ ರಶೀದಿ ಪಡಕೊಳ್ಳೋಣಾಗುತ್ತದೆ. (5) ಇದಕ್ಕೆ ದಸ್ತೂರಿ ಮುಂದಾಗಿ ಕೊಡಲೂ ಬಹುದು, ಕೊಡದೆ ಇರಲೂ ಬಹುದು; ಎರಡನೇ ಸಂಗತಿಯಲ್ಲಿ ಪಾರ್ಸೆಲು ಹೊಂದಿದವನು ಆ ದಸ್ತೂರಿಯ ಮೌಲ್ಯ ಮಾತ್ರ ಕೊಡ ಬೇಕು; ಆದರೆ ದಸ್ತೂರಿ ಮುಂದಾಗಿ ಸಲ್ಲಿಸಿದರೂ, ಅದು ನಿರಖಿಗೆ ಕಡಿಮೆಯಾದರೆ, ಅದನ್ನು ಮಂಜೂರು ಮಾಡೋಣಾಗಲಿಕ್ಕಿಲ್ಲ.

(Value Payable Article) "ವೇಲ್ಯು ಪೇಯಬಲ್ ಆರ್ಟಿಕಲ್" ಅಂದರೆ ಪೋಸ್ಟ್ ಆಫಿಸಿನವರು ತಮ್ಮ ವಶಕ್ಕೆ ಬಂದ ಕಟ್ಟನ್ನು ಅದರ ಮೇಲ್‌ವಿಳಾಸಕ್ಕೆ ಮುಟ್ಟಿಸಿ, ಅದರ ಮೇಲೆ ಶಾಗ್ರೂಪ ಪಡಿಸಿರುವ ಮೌಲ್ಯವನ್ನು ಆ ಕಟ್ಟು ಹೊಂದಿದವನಿಂದ ವಸೂಲು ಮಾಡಿ ಆ ಕಟ್ಟು ರವಾನಿಸಿದವನಿಗೆ ಕೊಡುತ್ತಾರೆ. ಈ ಪ್ರಕಾರ ಪಾರ್ಸೆಲುಗಳಾಗಲೀ ರಿಜಿಸ್ತ್ರಿ ಮಾಡಲ್ಪಟ್ಟ ಬುಕ್ ಪೆಕೆಟುಗಳಾಗಲೀ ಲಖೋಟೆಯಾಗಲೀ ಮನಿ ಆರ್ಡರ್ ಆಫಿಸುಳ್ಳ ಯಾವ ಪೋಸ್ಟ್ ಆಫಿಸಿನಲ್ಲಾದರೂ ಟಪ್ಪಾಲಿಗೆ ಹಾಕ ಬಹುದು. ಇವುಗಳ ಮೌಲ್ಯ ಮಾತ್ರ ೬೦೦ ರೂಪಾಯಿಗೆ ಮೀರ ಬಾರದು, ಮತ್ತು ಆ ಮೊಬಲಗಿನಲ್ಲಿ ಒಂದು ಆಣೆಯ ಅಂಶವೂ ಇರ ಬಾರದು. ಹೀಗೆ ರವಾನಿಸುವವನು ಟಪ್ಪಾಲುಕಟ್ಟೆಯಲ್ಲಿ ಮಾಫಿಯಾಗಿ ಶಿಕ್ಕುವ ಒಂದು ಛಾಪಾ ಕಾಗದದ ಮೇಲೆ ಅದರ ಮೌಲ್ಯವನ್ನು ಕುರಿತು ಬರದು ಅದರ ಸಂಗಡ ಕೊಡ ಬೇಕು. ಈ ಪ್ರಕಾರ ಮೌಲ್ಯ ವಸೂಲು ಮಾಡ ತಕ್ಕ ಕಟ್ಟು ಇಲ್ಲವೆ ಲಿಫಾಪೆ ಅದರ ಠಿಕಾಣೆಗೆ ಬಂದು ಮುಟ್ಟಲಾಗಿ ಆ ಪೋಸ್ಟ್ ಆಫಿಸಿನಿಂದ ಅದನ್ನು ಹೊಂದ ತಕ್ಕವನಿಗೆ ಛಾಪಾಕಾಗದದಲ್ಲಿ ಅದನ್ನು ಕುರಿತು ಬರದು ತಿಳಿಸಲಾಗಿ, ಅದರ ಮೇಲೆ ಆತನು ದಸ್ಕತು ಹಾಕಿ ಅದರ ಮೌಲ್ಯ ಸಮೇತ ಅದೇ ಪೋಸ್ಟ್ ಆಫಿಸಿಗೆ ರವಾನಿಸಲಾಗಿ ಆ ಕಟ್ಟು ಅವನಿಗೆ ಒಪ್ಪಿಸೋಣಾಗುವದು.

(Insurance) "ಇನ್ಸ್ಯೂರೆನ್ಸ್". ರಜಿಸ್ತ್ರಿ ಆಗ ತಕ್ಕ ಲಿಫಾಪೆಗಳಾಗಲೀ ಪಾರ್ಸೆಲುಗಳಾಗಲೀ ಭದ್ರತೆಯಿಂದ ತಲಪಿಸುವ ವಿಷಯದಲ್ಲಿ ಟಪ್ಪಾಲಿನವರು ಜವಾಬದಾರಿಯನ್ನು ವಹಿಸಿಕೊಳ್ಳುತ್ತಾರೆ. ಈ ಪ್ರಕಾರ

ಹೊಣೆಗಾರಿಕೆ ವಹಿಸಿ ಕೊಟ್ಟು ರವಾನಿಸುವ ಕಾಗದದ ಲಖೋಟೆಯು ಘಟ್ಟಿ ತರದ ಕಾಗದದ್ದಾಗಿದ್ದು ಭದ್ರವಾಗಿ ಬಂದು ಮಾಡಲ್ಪಟ್ಟು, ಅಂಚುಗಳಲ್ಲಿ ಎರಡೆರಡು ಇಂಚುಗಳಿಗೆ ಮೊಹರು ಮಾಡಿದ್ದಾಗಿ ಇರ ಬೇಕು; ಅದೇ ಪ್ರಕಾರ ಕಟ್ಟು ಸಹ ಅದರ ಹೊಲಿಗೆಯಲ್ಲಿ ಮೂರು ಮೂರು ಇಂಚುಗಳಿಗೆ ಮೊಹರು ಹಾಕಿದ್ದಾಗಿರ ಬೇಕು; ಮತ್ತು ಮೇಲ್ವಿಳಾಸ ಬರದು ಅದರ ಮೇಲ್ಗಡೆಯಲ್ಲಿ ಅಕ್ಷರದಿಂದಲೂ ಅಂಕೆಯಿಂದಲೂ ಅದರ ವಾಜಬಿ ಮೌಲ್ಯವನ್ನು ಬರಿಯ ಬೇಕು; ಬರಿಯುವಾಗ ಚಿತ್ತು ಮಾಡ ಬಾರದು. ಇದರ ಯಾವತ್ತು ದಸ್ತೂರಿ ಮುಂದಾಗಿ ತೆರಲೇ ಬೇಕು. ಈ ಪ್ರಕಾರ ಇನ್ಸ್ಯೂರೆನ್ಸ್ ಮಾಡ ತಕ್ಕ ಲಖೋಟೆಯಾಗಲೀ ಪಾರ್ಸಲಾಗಲೀ ಟಪ್ಪಾಲಕಟ್ಟೆಗೆ ಹಾಜರು ಮಾಡುವಾಗ ಅದರ ಸಂಗಡ ಅದರ ಮಲಪೂಪುಗಳನ್ನೂ ಮೌಲ್ಯವನ್ನೂ ಕುರಿತು (ಟಪ್ಪಾಲುಕಟ್ಟೆಯಿಂದ ಮಾಫಿಯಾಗಿ ಶಿಕ್ಕುವ ಛಾಪಾಕಾಗದದಲ್ಲಿ) ವಾಗ್ರೂಪ ಬರದು ತರ ಬೇಕು.

೫೦೦ ರೂಪಾಯಿ ಮೌಲ್ಯದೊಳಗಿನ ಕಟ್ಟು ತಲಪುತ್ತಲೇ ಅದು ಹೊಂದ ತಕ್ಕವನಿಗೆ ಸಾಧಾರಣ ರೀತಿಯಂತೆ ಒಪ್ಪಿಸೋಣಾಗುವದು; ಆದರೆ ೫೦೦ ರೂಪಾಯಿಗೆ ಮೀರಿದ ಮೌಲ್ಯವುಳ್ಳ ಕಟ್ಟು ಟಪ್ಪಾಲಕಟ್ಟೆಯಲ್ಲಿಯೇ ಒಪ್ಪಿಸಲಾಗುವದು. ಕಟ್ಟು ಹೊಂದಿದವನಿಂದ ಅದು ತಲಪಿದ್ದಕ್ಕೆ ರಶೀದಿ ಪಡಕೊಂಡು, ಕಟ್ಟು ರವಾನಿಸಿದವನಿಗೆ ಮುಟ್ಟಿಸೋಣಾಗುವದು.

(Value Payable Commission) ಮೌಲ್ಯವಸೂಲು ಮಾಡಿ ಕೊಡಿಸುವ ಬಗ್ಗೆ ವಟ್ಟ:

	ಆ.	ಪೈ.
ಕಟ್ಟಿನ ಮೌಲ್ಯ ೧೦ ರೂಪಾಯಿಗೆ ಮೀರದಿದ್ದರೆ	೨	೦
„ ೨೫ „ „	೪	೦
ಹೆಚ್ಚಿಗೆ ಪ್ರತಿ ೨೫ „ ಯಾ ಅದರಂಶಕ್ಕೆ	೪	೦

ಕಟ್ಟು ರವಾನಿಸಿದವನಿಗೆ ತರಿಸಿ ಕೊಡ ತಕ್ಕ ಹಣದಿಂದ ಈ ದರದಲ್ಲಿ ವಟ್ಟ ವಜಾ ಮಾಡಲಾದೀತು. ಆದರೆ ಕಟ್ಟು ಹೊಂದ ತಕ್ಕವನು ಅದು ತನಗೆ ಬೇಡವೆಂದು ವಾಪಸು ಮಾಡಿದರೆ, ಅದನ್ನು ರವಾನಿಸಿದವನೇ ಅದರ ಟಪ್ಪಾಲ ಹಾಸಲು ತೆರುವದಕ್ಕೆ ಬದ್ಧನಾಗುವನು.

(Insurance) ಲಿಫಾಪೆಗಳಾಗಲೀ ಕಟ್ಟುಗಳಾಗಲೀ ಸುರಕ್ಷಿತವಾಗಿ ಮುಟ್ಟಿಸಿ ಕೊಡುತ್ತೇವೆಂದು ಹೊಣೆ ಮಾಡೋಣಾಗುವದಕ್ಕೆ ವಟ್ಟ:

	ಆ.	ಪೈ.
ಸೊತ್ತಿನ ಕ್ರಯ ರೂ. ೫೦ಕ್ಕೆ ಮೀರದಿದ್ದರೆ	೨	೦
„ „ ೧೦೦ „	೪	೦
ಹೆಚ್ಚಿಗೆ ಪ್ರತಿ „ ೧೦೦ ಯಾ ಅದರಂಶಕ್ಕೆ	೪	೦

ಈ ವಟ್ಟದ ಮೌಲ್ಯದಷ್ಟು ಚೀಟು ಲಿಫಾಪೆಗಾಗಲೀ ಕಟ್ಟಿಗಾಗಲೀ ಹಚ್ಚುವದು.

(Inland Money Order) ಹಿಂದುಸ್ಥಾನದಲ್ಲಿ ಚಲಾವಣಿಯಾಗುವ "ಮನಿ ಆರ್ಡರ್" ಎಂಬ ಹುಂಡಿಚೀಟು.

ಪೋಸ್ಟ್ಮಾಸ್ತರು ಹಿಂದುಸ್ಥಾನದಲ್ಲಿ ಟಪ್ಪಾಲುಕಟ್ಟೆ ಇರುವ ಒಂದು ಊರಿನಿಂದ ಬೇರೆ ಯಾವ ಊರಿಗಾದರೂ 150 ರೂಪಾಯಿಗೆ ಮೀರದಷ್ಟು ಹಣಕ್ಕೆ ಹುಂಡಿ ಕೊಡ ಬಹುದು.—ಹುಂಡೀ ದ್ವಾರಾ ಹಣ ಯಾರು ಯಾರಿಗೆ ಮುಟ್ಟಿಸ ಬೇಕೋ, ಅವರಿಬ್ಬರ ಹೆಸರು, ವಿಳಾಸ, ಹಣದ ಸಂಖ್ಯೆ ಮುಂತಾದ್ದನ್ನು, ಟಪ್ಪಾಲಕಟ್ಟೆಯಿಂದ ಶಿಕ್ಕುವ ಛಾಪಾಕಾಗದದ ಮೇಲೆ ವಿವರವಾಗಿ ಬರದು, ಹಣ, ವಟ್ಟ ಸಮೇತಾ ಟಪ್ಪಾಲಕಟ್ಟೆಯಲ್ಲಿ ಕೊಟ್ಟಲ್ಲಿ, ಅದಕ್ಕಾಗಿ ಅವರು ರಶೀದಿ ಕೊಟ್ಟು, ಹಣವನ್ನು ಹೊಂದ ತಕ್ಕವನಿಗೆ ಅವರೇ ಹುಂಡೀಚೀಟು ಶೀದಾ ರವಾನಿಸಿ ಮುಟ್ಟಿಸುವರು; ಅಂದರೆ ಹಣ ಹೊಂದ ತಕ್ಕವನು ಟಪ್ಪಾಲ ದ್ವಾರಾ ಛಾಪಾ ಹುಂಡೀಚೀಟು ಹೊಂದುವನು. ಅದನ್ನು ಅವನು ಅದರಲ್ಲಿ ನಮೂದಿಸಿದ ಟಪ್ಪಾಲುಕಟ್ಟೆಯಲ್ಲಿ ಹಾಜರು ಮಾಡಿ, ಅದರ ಹಿಂಬದಿಯಲ್ಲಿ ರಶೀದಿ ಕೊಟ್ಟು ಹಣ ಪಡಕೊಳ್ಳುವನು. ಒಮ್ಮೆ ಕೊಟ್ಟ ಹುಂಡೀಚೀಟು, ಹಣ ಪಾವತಿಯಾಗುವದಕ್ಕೆ ಮುಂಚೆ ಕಳದು ಹೋದರೆ, ಪುನಹಾ ಮೇಲಿನ ದರದಲ್ಲಿ ವಟ್ಟಾ ಕೊಟ್ಟಲ್ಲಿ ಎರಡನೇ ಹುಂಡೀಚೀಟು ಶಿಕ್ಕುವದು. ಈ ತರದ ಹುಂಡಿಯನ್ನು ಒಬ್ಬನ ಹೆಸರಿನಿಂದ ಇನ್ನೊಬ್ಬನದಕ್ಕೆ ಬದಲಿಸ ಕೂಡದು. ಈ ಹುಂಡಿಯು ತಾರೀಕಿನಿಂದ ಒಂದು ತಿಂಗಳವರೆಗೆ ಹಣ ಪಡಕೊಳ್ಳದಿದ್ದರೆ, ಆ ಮೇಲೆ ಅದಕ್ಕೆ ಅವಧಿ ತಟ್ಟುತ್ತದೆ; ಆದರೆ ಪ್ರಥಮದಲ್ಲಿ ತೆತ್ತಷ್ಟೆ ವಟ್ಟ ಪುನಹ ಕೊಟ್ಟು, ಹುಂಡೀಚೀಟು ತಕ್ಕೊಂಡು ಹಾಜರು ಮಾಡಿದ್ದಲ್ಲಿ ಹಣ ಶಿಕ್ಕುವದು. ಪರಂತು ಎರಡು ತಿಂಗಳು ಕಳದು ಹೋದರೆ, ಆ ಚೀಟು ಪೂರಾ ರದ್ದಾಗುವದು, ಮತ್ತು ಅದರಲ್ಲಿ ನಮೂದಿಸಿದ ಹಣ ಶಿಕ್ಕಲಿಕ್ಕಿಲ್ಲ.— ಅದಲ್ಲದೆ ಚಿಲ್ಲರೆ ಹಣ ರವಾನಿಸುವ ಬಗ್ಗೆ ಮೂರು ತರದ (Postal Notes) ಅಂದರೆ ಟಪ್ಪಾಲ

ವಟ್ಟದ ದರ:	ಆ.	ಪೈ.
ಹುಂಡೀ ಹಣ ರೂ. ೧೦ಕ್ಕೆ ಮೀರದಿದ್ದರೆ,	೨	೦
„ „ „ ಮೀರಿ, ರೂ. ೨೫ಕ್ಕೆ ಮೀರದಿದ್ದರೆ	೪	೦
ಹೆಚ್ಚಿಗೆ ಪ್ರತಿ ೨೫ ರೂಪಾಯಿಗೆ ಯಾ ಅದರ ಅಂಶಕ್ಕೆ	೪	೦

(ಕಪ್ಪುಚೀಟು)	ರೂ. ೨	ಆ. ೮ಕ್ಕೆ	ವಟ್ಟ:	ಆ. ೧
(ಕೆಂಪುಚೀಟು)	„ ೧	„ ೦ „	„	ಪೈ ೬
(ನೀಲಚೀಟು)	„ ೦	„ ೮ „	„	ಪೈ ೩

ನೋಟುಗಳು ಚಲಾವಣಿಯಾಗುತ್ತವೆ. ಅಂಥಾದ್ದನ್ನು ಕೊಂಡುಕೊಂಡವನು ಅದರ ಹಿಂದಗಡೆಯಲ್ಲಿ ಆ ಹಣ ಯಾರಿಗೆ ಮುಟ್ಟಿಸ ಬೇಕೋ ಅವನ ಹೆಸರು ಬರದು, ಆತನಿಗೆ ರವಾನಿಸ ಬೇಕು. ತಲಪುತ್ತಲೇ ಹಣ ಹೊಂದ ತಕ್ಕವನು ಅದರ ಹಿಂಬದಿಯಲ್ಲಿ ಹಣ ತೆರ ತಕ್ಕ ಟಪ್ಪಾಲ ಕಟ್ಟೆಯ ಹೆಸರು ಬರದು, ತನ್ನ ದಸ್ಕತು ಮಾಡಿ, ಅದನ್ನು ಆ ಟಪ್ಪಾಲಕಟ್ಟೆಗೆ ಹಾಜರು ಮಾಡಲಾಗಿ ಹಣ ಕೊಡೋಣಾಗುವದು. ಇಂಥಾ ನೋಟು, ೩ ತಿಂಗಳೊಳಗೆ ಹಣ ಪಡಕೊಳ್ಳದಿದ್ದರೆ, ಅವಧಿಯಿಂದ ಆತಂಕಿಸಲ್ಪಡುವದು. ಆದರೆ, ಪುನಹಾ ವಟ್ಟಾ ಕೊಟ್ಟು ಅದು ಜಾರಿಗೆ ತರ ಬಹುದು; ಹ್ಯಾಗೂ ೬ ತಿಂಗಳ ವರೆಗೆ ಹಣ ಪಡಕೊಳ್ಳದಿದ್ದರೆ, ಅದು ಪೂರಾ ರದ್ದಾಗುವದು.

(India Stock Notes) ಇಂಡಿಯಾ ಸ್ಟೋಕ್ ನೋಟುಗಳು.

ಟಪ್ಪಾಲಕಟ್ಟೆಗಳಲ್ಲಿ ರೂಪಾಯಿ ೧೨½, ರೂಪಾಯಿ ೨೫, ಮತ್ತು ರೂಪಾಯಿ ೫೦ ಮೌಲ್ಯಗಳ ಸ್ಟೋಕ್‌ನೋಟುಗಳೆಂಬವು ಮಾರೋಣಾಗುತ್ತವೆ. ಇವುಗಳಿಗೆ ಶೇಕಡಾ ೪ರ ಮೇರೆಗೆ ಬಡ್ಡಿ ಎಣಿಸಲ್ಪಟ್ಟು, ಅಂಥಾ ನೋಟುಳ್ಳವನು ಬಡ್ಡಿಯನ್ನು ವರ್ಷಂಪ್ರತಿ ಖಜಾನೆಯಿಂದ ಪಡಕೊಳ್ಳ ಬಹುದು.

(Post Office Savings Bank) ಟಪ್ಪಾಲಕಟ್ಟೆಯಲ್ಲಿ ಹಣ ಠೇವಣಾತಿ ಇಡೋಣ.

ಈ ಬೇಂಕಿನಲ್ಲಿ ಯಾವ ಪುರುಷನಾಗಲೀ ಸ್ತ್ರೀಯಾಗಲೀ ಮಗುವಿಗೋಸ್ಕರವಾಗಲೀ ಹಣವನ್ನು ಠೇವಣಾತಿಯಾಗಿ ಇಡ ಬಹುದು. ನಾಲ್ಕು ಆಣೆಗಿಂತ ಕಡಿಮೆ ಮೊಬಲಗನ್ನಾಗಲೀ ನಾಲ್ಕು ಆಣೆಯ ಅಂಶವಿರುವ ಮೊಬಲಗನ್ನಾಗಲೀ ತೆಗದುಕೊಳ್ಳುವದಿಲ್ಲ; ಮತ್ತು ಒಂದು ನರ್ಷದೊಳಗೆ ಒಟ್ಟು ಕೂಡಿ ಐನೂರು ರೂಪಾಯಿಗಿಂತ ಜಾಸ್ತಿ ಮೊಬಲಗನ್ನು ಠೇವಣಾತಿಯಾಗಿ ಇಡ ಕೂಡದು.

ಈ ಪ್ರಕಾರ ಠೇವಣಾತಿ ಮಾಡಿದವನು ತನ್ನ ಹಣದಿಂದ ವಾರದಲ್ಲಿ ಒಂದಾವರ್ತಿ ವಾಪಸು ಪಡಕೊಳ್ಳ ಬಹುದು. ಆದರೆ ತನ್ನ ಪೂರಾ ಲೇವಾದೇವಿ ತೀರಿಸುವಾಗ ಅಲ್ಲದೆ, ಒಬ್ಬನು ಒಂದು ಸಾರಿಗೆ ನಾಲ್ಕು ಆಣೆಗಿಂತ ಕಡಿಮೆಯಾಗಲೀ ಅದರ ಅಂಶ ಕೂಡಿದ ಯಾವ ಮೊಬಲಗಾಗಲೀ ವಾಪಸು ಪಡಕೊಳ್ಳ ಕೂಡದು.

ಈ ವಿಷಯದಲ್ಲಿ ಇನ್ನೊಂದು ಹುಕುಂ ಕೊಡುವ ವರೆಗೆ, ಪೂರಾ ಐದೈದು ರೂಪಾಯಿಯ ಮೊಬಲಗಿನ ಮೇಲೆ ತಿಂಗಳು ಒಂದಕ್ಕೆ ಮೂರು ಪೈ ಮೇರೆಗೆ (ಅಂದರೆ ವರ್ಷಕ್ಕೆ ಶೇಕಡಾ ೩ ರೂಪಾಯಿ ೧೨ ಆಣೆ ಮೇರೆಗೆ) ಬಡ್ಡಿ ಕೊಡೋಣಾಗುತ್ತದೆ. ಮತ್ತು ವರ್ಷಂಪ್ರತಿ ಬಡ್ಡಿಯನ್ನು ಅಸಲಿಗೆ ಕೂಡಿಸೋಣಾಗುವದು.

(Telegraph) ತಂತಿಟಪ್ಪಾಲು.

ತಂತಿಟಪ್ಪಾಲಿನ ದ್ವಾರಾ ವರ್ತಮಾನವನ್ನು ಕಳುಹಿಸುವದಕ್ಕೆ ಮುಖ್ಯ ಮೂರು ವಿಧದ ದರ ಉಂಟು:

	ಮೊದಲನೆ ೮ ಶಬ್ದಗಳಿಗೆ	ಹೆಚ್ಚಿಗೆ ಪ್ರತಿ ೧ ಶಬ್ದಕ್ಕೆ
	ಯಾ ೩ ಅಂಕೆಗಳುಳ್ಳ ಸಂಖ್ಯೆಗೆ	
(Deferred Message) "ಅವಕಾಶ ವರದಿ" ಅಂದರೆ ಆಫಿಸಿನ ಕೆಲಸದ ಹೊತ್ತಿನಲ್ಲಿ ಕೊಡಲ್ಪಟ್ಟು, ತಂತಿಟಪ್ಪಾಲಿನವರ ಸಂದರ್ಭದಲ್ಲಿ ರವಾನಿಸಿ, ಮರುದಿನ ಬೆಳಿಗ್ಯೆ ಅದರ ವಿಳಾಸಕ್ಕೆ ಮುಟ್ಟಿಸುವಂಥಾದ್ದಾಗಿದ್ದರೆ.	ರೂ. ೦ ಆ. ೮	ರೂ. ೦ ಆ. ೧
(Ordinary Message) "ಸಾಧಾರಣ ವರದಿ" ಅಂದರೆ ಆಫಿಸಿನ ಕೆಲಸದ ಹೊತ್ತಿನಲ್ಲಿ ಒಪ್ಪಿಸಲ್ಪಟ್ಟು, ಚಾಲತಿ ಕ್ರಮದಲ್ಲಿ ರವಾನಿಸಿ ಮುಟ್ಟಿಸುವಂಥಾದ್ದಾಗಿದ್ದರೆ.	ರೂ. ೧ ಆ. ೦	ರೂ. ೦ ಆ. ೨
(Urgent Message) "ಜರೂರು ವರದಿ" ಅಂದರೆ ಆಫಿಸಿನ ಕೆಲಸದ ಹೊತ್ತಿನಲ್ಲಿ ಕೊಡಲ್ಪಟ್ಟು, ಕೂಡಲೇ ರವಾನಿಸಿ ಸಾಧಾರಣ ವರದಿಗಿಂತ ಮುಂದಾಗಿ ಮುಟ್ಟಿಸ ತಕ್ಕದ್ದಾಗಿದ್ದರೆ . .	ರೂ. ೨ ಆ. ೦	ರೂ. ೦ ಆ. ೪

ವರದಿ ಹೊರಡುವ ಮತ್ತು ತಲಪುವ ಠಾಣೆಗಳ ಹೆಸರುಗಳು, ವರದಿ ರವಾನಿಸುವವನ ಮತ್ತು ಹೊಂದುವವನ ಹೆಸರು ವಿಳಾಸಗಳು ಲೆಖ್ಖಕ್ಕೆ ಹಿಡಿಯುವದಿಲ್ಲ.

"ಛಾಪಖಾನೇ ವರದಿಗಳು" (ಅಂದರೆ ವರ್ತಮಾನಪತ್ರಗಳಿಗೆ ಬರಿಯಲ್ಪಡುವ ವರದಿಗಳು) ರವಾನಿಸುವದಕ್ಕೆ ಮೇಲಿನ ದರದಲ್ಲಿ ೪ ಪಾಲು ಶಬ್ದಗಳು ಎಣಿಸೋಣಾದಾವು.

ದಕ್ಷಿಣ ಕನ್ನಡ ಜಿಲ್ಲೆಯ ಸರಕಾರ ಉದ್ಯೋಗಸ್ಥರು.

I. District Officials ಜಿಲ್ಲಾ ಉದ್ಯೋಗಸ್ಥರು.

Civil ಶಿವಿಲ್.

1. District Court ಡಿಸ್ಟ್ರಿಕ್ಟ ಕೋರ್ಟ.

J. W. Best Esq. ಜೆ. ವ. ಬೆಸ್ಟ್ ಧೊರೆಗಳು—ಡಿಸ್ಟ್ರಿಕ್ಟ ವ ಶೆಸ್ಸನ್ ಜಡ್ಜರು.

ಮಿಸ್ತರ್ ಜು. ಸ. ಸಾಲ್ಡಾಞ್ಯ—ಶಿರಸ್ತೇದಾರ್.

ಪ. ರಾಮರಾವ್—ನಾಜರ್ ವ ಹೆಡ್ ಕ್ಲರ್ಕ.

ಜೆ. ಬಿ. ಫೆರ್ನಂಡೆಸ್—ಟ್ರನ್ಸ್ಲೇಟರ್.

ಎ. ಬಿ. ಗೊನ್ಸಾಲ್ವೆಸ್—ರಿಕಾರ್ಡಕೀಪರ್.

ಉ. ರಾಘವೇಂದ್ರರಾವ್—2ನೇ ಕ್ಲರ್ಕ.

2. Subordinate Judge's Court ಸಬೋರ್ಡಿನೇಟ ಜಡ್ಜರ ಕೋರ್ಟ.

M. R. Ry. K. R. Krishna Menon Avargal ಮ. ರಾ. ರಾ. ಕೆ. ರಾ. ಕೃಷ್ಣ ಮೇನವನವರು—ಸಬೋರ್ಡಿನೇಟ್ ಜಡ್ಜರು.

ಮಿಸ್ತರ್ ಕಾಮಿಲ ಕೊಯಿಲೊ—ಶಿರಸ್ತೇದಾರ್ ವ ನಾಜರ್.

ತೋ. ನೊರೋಞ—ಹೆಡ್ ಕ್ಲರ್ಕ.

ಬ್ಯೆ. ಮಂಗೇಶರಾವ್—ರಿಕಾರ್ಡಕೀಪರ್.

Pleaders ಡಿಸ್ಟ್ರಿಕ್ಟ ಕೋರ್ಟಿನಲ್ಲಿ ವ್ಯವಹರಿಸುವ ವಕೀಲರು.

ಅ. ಸುಬ್ಬರಾವ್, ಬಿ. ಎ., ಬಿ. ಎಲ್.
ಅ. ರಾಮಯ್ಯಪೂಂಜ, ,, ,,
ಮ. ಮುಂಡಪ್ಪ ಬಂಗೆರಾ, ,, ,,
ಮದ್ರಾಸ ಹೈ ಕೋರ್ಟಿ ವಕೀಲರು.

ಕ. ಮಂಜುನಾಥಯ್ಯ.
ಬ. ಲಕ್ಷ್ಮಯ್ಯ.
ನ. ಶಿವರಾವ್.
ಗೊ. ವೆಂಕಟರಾವ್.
ಕಾ. ಭಾ. ರಾಮರಾವ್.
ಮ. ರಾಮಪ್ಪಾ.
ಕ. ರಾಮರಾವ್.
ಪ. ಪರಮೇಶ್ವರಯ್ಯ.
ಹ. ಕೃಷ್ಣರಾವ್.
ಮ. ತೇ. ರಾಮರಾವ್.
ಮ. ರಾಮಚಂದ್ರಯ್ಯ.
ಕಾ. ಸಾಂತಯ್ಯ.
ಕೋ. ರಾಮಪ್ಪಾ.
ಮ. ಸುಬ್ಬರಾವ್.
ಸಾ. ಫೆ. ಬ್ರಿತೊ.
ಲಿ. ಲೋಬೊ.
ಬ. ರಾಮಪ್ಪಾ.
ತ. ಭವಾನಿರಾವ್.
ಸು. ರಾಮರಾವ್.
ಮು. ಶಿವರಾವ್.
ನ. ಮಂಜುನಾಥಯ್ಯ.
ಜೆ. ಎಫ್. ಡಿಸೋಜಾ.

District Registrar ಡಿಸ್ಟ್ರಿಕ್ಟ ರಿಜಿಸ್ಟ್ರಾರ್.

M. R. Ry. L. Rama Rao Avargal ಮ. ರಾ. ರಾ. ಲಾ. ರಾಮರಾಯರು—ಡಿಸ್ಟ್ರಿಕ್ಟ ರಿಜಿಸ್ತ್ರಾರ್.

Revenue and Magisterial ರೆವೆನ್ಯು ಮತ್ತು ಮೆಜಿಸ್ಟ್ರೇಟ್.

1. Huzur Office ಹಜೂರು.

C. W. W. Martin, B. A., LL. D. ಶಿ. ವ್ವಿ. ವ್ವಿ. ಮಾರ್ಟಿನ್ ಧೊರೆಗಳು—ಕಲ್ಲೆಕ್ಟರ್ ವ ಡಿಸ್ಟ್ರಿಕ್ಟ ಮೆಜಿಸ್ಟ್ರೇಟರು (ಬೇರೆ ಕೆಲಸದಲ್ಲಿರುತ್ತಾರೆ).

J. Sturrock Esq. ಜೆ. ಸ್ಟರ್ರಕ್ ಧೊರೆಗಳು—ಆಕ್ಟಿಂಗ್ ಕಲ್ಲೆಕ್ಟರ್ ವ ಮೆಜಿಸ್ಟ್ರೇಟರು.

P. F. Fernandez Esq. ಪಿ. ಫ. ಫೆರ್ನಂಡೆಸ್ ರವರು—ಖಜಾನಾ ಡಿಪ್ಯುಟಿ ಕಲ್ಲೆಕ್ಟರ್.

ಮಾ. ರಾ. ಅ. ವೆಂಕಪ್ಪಪೂಂಜರು—ಶಿರಸ್ತೇದಾರ್.

ಜೊ. ಲು. ಫೆರ್ನಂಡೆಸರು—ಹೆಡ್ ಕ್ಲರ್ಕ.

ಮತುರ ಭಂಡಾರಿಗಳು—ಇಂಗ್ಲಿಷ ಹೆಡ್ ಎಕೌಂಟಾಂಟ್.

ಉ. ರಘುನಾಥಯ್ಯ—ಟ್ರನ್ಸ್ಲೇಟರ್.

ಬೊ. ಬಾಬುರಾವ್—ದೇಶಭಾಷಾ ಹೆಡ್ ಕ್ಲರ್ಕ.

ರ. ರಾಮರಾವ್—ಮೆಜಿಸ್ಟ್ರೇಟ್ ಕ್ಲರ್ಕ.

ಬೊ. ಶೀವಯ್ಯ— ಇಂಗ್ಲಿಷ ರಿಕಾರ್ಡಕೀಪರ್.

ಜಾ. ಮಿ. ಗೊನ್ಸಾಲ್ವೆಸ್—ದೇಶಭಾಷಾ ”

ಜೋ. ಮೇ ಸಾಹೇಬರು—ಟ್ರೆಜರರ್ (ಖಜಾನಜ).

2. Head Assistant and Assistant Collectors ಹೆಡ್ ಅಸಿಸ್ಟಾಂಟ ವ ಅಸಿಸ್ಟಾಂಟ ಕಲ್ಲೆಕ್ಟರರು.

H. Bradley Esq. ಹ. ಬ್ರೇಡ್ಲಿ ಧೊರೆಗಳು—ಆ. ಹೆಡ್ ಅಸಿಸ್ಟಾಂಟ್ ಕಲ್ಲೆಕ್ಟರ್ ಮತ್ತು 1ನೇ ಕ್ಲಾಸ ಮೆಜಿಸ್ಟ್ರೇಟರು.

ಪಿ. ಸಿ. ಕಾಸ್ತೆಲನೊ—ಹೆಡ್ ಕ್ಲರ್ಕ.

M. D. Bell Esq. ಮ. ಡಿ. ಬೆಲ್ ಧೊರೆಗಳು—ಅಸಿಸ್ಟಾಂಟ್ ಕಲ್ಲೆಕ್ಟರ್ ವ ಮೆಜಿಸ್ಟ್ರೇಟರು.

ಮ. ಪಾಂಡುರಂಗ—ಕ್ಲರ್ಕ.

M. R. Ry. K. Rama Rao Avargal ಮ. ರಾ. ರಾ. ಕಬಾಡ ರಾಮರಾಯರವರು—ಜನರಲ್ ಡ್ಯೂಟಿ ಡೆಪ್ಯುಟಿ ಕಲ್ಲೆಕ್ಟರ್ ಮತ್ತು 1ನೇ ಕ್ಲಾಸ ಮೇಜಿಸ್ಟ್ರೇಟರು.

ರ. ಮಂಜುನಾಥಯ್ಯ—ಹೆಡ್ ಕ್ಲರ್ಕ.

3. Bench Magistrates ಮಂಗಳೂರ ಶಹರಿನ ಬೆಂಚು ಮೆಜಿಸ್ಟ್ರೇಟರು.

ಮಂಗಳೂರ ಟೌನ್ ಮೆಜಿಸ್ಟ್ರೇಟರು—ಪ್ರೆಸಿಡೆಂಟ್.

ಬೆನಿಡಿಕ್ಟ ವಿಕ್ಟರ್ ಡಿ. ರುಜಾರಿಯೊ ಸಾಹೇಬರು.

ಮಹಾರಾಜಶ್ರೀ ಉಳ್ಳಾಲ ಮಂಗೇಶಯ್ಯನವರು.

” ನೆಲ್ಲಿಕಾಯಿ ಗುಂಡುರಾಯರು.

” ಮಂಗಳೂರ ರಾಮಚಂದ್ರಯ್ಯನವರು.

” ಚಿಲ್ಮಿ ಅಮಿರುದ್ದೀನ್ ಸಾಹೇಬರು.

” ನವರೋಜಿ ಜಿಮುಶಟ್‌ಜಿ ಶೇಟರು.

Police Department
ಪೊಲೀಸ್ ಇಲಾಖೆ.

J. E. E. A. Boyd Esq. ಜೆ. ಇ. ಇ. ಎ. ಬೋಯ್ಡ್ ಧೊರೆಗಳು—ಪೊಲೀಸ್ ಸುಪರಿಂಟೆಂಡೆಂಟರು.

ಮಿಸರ್ ಡಿ. ರಸ್ಕಿಞ್ಯಾ—ಹೆಡ್‌ಕ್ವಾರ್ಟರ್ ಇನ್ಸ್ಪೆಕ್ಟರರು, 3ನೇ ಕ್ಲಾಸ್.

„ ಜೇಮ್ಸ್ ಮೋರ್ಗನ್ ಸಾಹೇಬರು—ರಿಜರ್ವ್ ಇನ್ಸ್ಪೆಕ್ಟರ್, 3ನೇ ಕ್ಲಾಸ್.

ಕೋ. ರಾಮರಾವ್—ಸ್ಕೂಲ ವ ಕೋರ್ಟ ಇನ್ಸ್ಪೆಕ್ಟರ್, 5ನೇ ಕ್ಲಾಸ್.

Salt Revenue Department
ಸಾಲ್ಟ ರೆವೆನ್ಯು ಇಲಾಖೆ.

C. Powell Esq. ತಿ. ಪೊವೆಲ್ ಧೊರೆಗಳು—ಇನ್ಸ್ಪೆಕ್ಟರರು, ಮಂಗಳೂರು ಸರ್ಕಲ್.

ಕಾ. ಆನಂದರಾವ್—ಹೆಡ್ ಕ್ಲರ್ಕ.

A. J. Mitchell Esq. ಎ. ಜೆ. ಮಿಚ್ಚೆಲ್ ಧೊರೆಗಳು—ಆಸಿಸ್ಟಾಂಟ ಇನ್ಸ್ಪೆಕ್ಟರ್ ಕುಂದಾಪುರ ಸರ್ಕಲ್.

ಕ. ರಾಮರಾವ್—ಹೆಡ್ ಕ್ಲರ್ಕ.

Public Works Department
ಇಂಜಿನಿಯರ ಇಲಾಖೆ.

Imperial ಇಂಪೀರಿಯಲ್.

Lieut. W. C. S. West ಲೆಫ್ಟಿನೆಂಟ್ ವ್ಹಿ. ತಿ. ಸ. ವೆಸ್ಟ್ ಧೊರೆಗಳು—ಅಸಿಸ್ಟಾಂಟ್ ಇಂಜನಿಯರ್.

Local Fund ಲೋಕೆಲ ಫಂಡ.

Capt. T. Smither ಕೆಪ್ಟನ್ ಟಿ. ಸ್ಮಿದರ್ ಧೊರೆಗಳು—ಇಂಜನಿಯರ್.

Forest Department ಜಂಗ್ಲಿ ಇಲಾಖೆ.

Mr. W. Carroll ವಿ. ಕೆರ್ರೊಲ್ ಸಾಹೇಬರು—ಸಬ್ ಅಸಿಸ್ಟಾಂಟ್ ಕನ್ಸರ್ವೇಟರ್.

Marine Department ನೌಕಾ ಇಲಾಖೆ.

G. W. Wicks Esq. ಜ. ವ್ಹಿ. ವಿಕ್ಸ್ ಧೊರೆಗಳು—ಪೋರ್ಟ ಆಫಿಸರ್ ವ ಮಂಗಳೂರ ಅಳವೆ ಸಾಯುರ ಸುಪರಿಂಟೆಂಡೆಂಟ್.

Postal Department ಟಪ್ಪಾಲಇಲಾಖೆ.

B. A. Boosch Esq. ಬಿ. ಎ. ಬೂಸ್ಚ್ ಧೊರೆಗಳು—ಪೋಸ್ಟ್ ಆಫಿಸ್ ಸುಪರಿಂಟೆಂಡೆಂಟ್, ಕಲಿಕೋಟೆ ಡಿವಿಜನ್.

ತಿ. ಅಪ್ಪಾಸಾಮಿಪಿಳ್ಳೆ—ದಕ್ಷಿಣ ಕನ್ನಡ ಪೋಸ್ಟ್ ಆಫಿಸ್ ಇನ್ಸ್ಪೆಕ್ಟರ್.

Mr. W. G. Samuel ಮಿಸ್ತರ್ ವಿ. ಜ. ಸಾಮುವೇಲ್—ಪೋಸ್ಟ್‌ಮಾಸ್ಟರ್, ಮಂಗಳೂರು.

Telegraph ತಂತಿಟಪ್ಪಾಲ್.

Mr. F. S. D'Souza ಮಿಸ್ತರ್ ಎಫ್. ಎಸ್. ಡಿಸೌಜಾ—ಟೆಲಿಗ್ರಾಫ್ ಮಾಸ್ತರ್, ಮಂಗಳೂರು.

Educational Department
ವಿದ್ಯಾ ಇಲಾಖೆ.

E. Marsdon Esq. ಇ. ಮಾರ್ಸ್ಡನ್ ಧೊರೆಗಳು—7ನೇ ಡಿವಿಜನ್ ಕೊಡಗು ಮತ್ತು ದಕ್ಷಿಣ ಕನ್ನಡ ಶಾಲಾ ಇನ್ಸ್ಪೆಕ್ಟರ್.

ಕ. ಶಾಂತಪ್ಪಾ-ಶಾಲಾ ಡಿ. ಇನ್ಸ್ಪೆಕ್ಟರ್ ಉತ್ತರತುಕಡಿ.

ಮಿಸ್ತರ್ ರಾ. ಸ. ಸೊರೋಞಾ— ,, ದಕ್ಷಿಣ ,,

C. W. Burroughs Esq. LL. D., Barrister-at-Law ಶಿ. ವ್ಹಿ. ಬರ್ರೊಸ್ ಧೊರೆಗಳು-ಮಂಗಳೂರು ಗವರ್ನಮೆಂಟ ಪ್ರೊವಿನ್ಶಲ್ ಕೊಲಿಜ್ ಆಕ್ಟಿಂಗ್ ಹೆಡ್‌ಮಾಸ್ತರ್.

ಉ. ಕೃಷ್ಣಯ್ಯ ಬಿ. ಎ.—ಆಕ್ಟಿಂಗ್ ಫರ್ಸ್ಟ ಆಸಿಸ್ಟಾಂಟ ಮಾಸ್ತರ್.

ಬಿ. ರಾಘವೇಂದ್ರರಾವ್— ಮಂಗಳೂರ ನೋರ್ಮಲ್ ಶಾಲೆಯ ಹೆಡ್‌ಮಾಸ್ತರ್.

Medical Department
ವೈದ್ಯ ಇಲಾಖೆ.

Surgeon W. A. Lee ವ್ಹಿ. ಎ. ಲೀ ಧೊರೆಗಳು—ಅ. ಜಿಲ್ಲಾ ಸರ್ಜನ್ ವ ಜೈಲಸುಪರಿಂಟೆಂಡೆಂಟ್.

ಸಿವಿಲ ಆಸ್ಪತ್ರಿಯಲ್ಲಿ: ಟಿ. ಎ. ಸೊಲೊಮೊನ್—3ನೇ ದರ್ಜೆ (ಶಿವಿಲ್) ವೈದ್ಯಸಹಾಯಕ.

ಅ. ರಾಮುಂಣಿ— ಸದರ್

ಕಲ್ಲೆಕ್ಟರ ತಿಬಂದಿಗೆ: ಎ. ಕೆ. ಪಂಗುಂಣಿ ನಾಯರ್—3ನೇ ದರ್ಜೆ (ಶಿವಿಲ್) ವೈದ್ಯಸಹಾಯಕ.

ಹೆಡ್ ಅ. ಕಲ್ಲೆಕ್ಟರ ತಿಬಂದಿಗೆ: ತಿ. ಪಿ. ವರ್ಗೀಸ್—3ನೇ ದರ್ಜೆ (ಶಿವಿಲ್) ವೈದ್ಯಸಹಾಯಕ.

ಜೈಲ ಆಸ್ಪತ್ರಿಯಲ್ಲಿ: ಪಿ. ಎ. ನಾಗಪ್ಪಪಿಳ್ಳೆ—2ನೇ ದರ್ಜೆ (ಶಿವಿಲ್) ವೈದ್ಯಸಹಾಯಕ.

ಪೊಲೀಸ್ ಆಸ್ಪತ್ರಿಯಲ್ಲಿ: ಇ. ಜ. ಡಿಕ್ರೂಜ್—3ನೇ ದರ್ಜೆ (ಶಿವಿಲ್) ವೈದ್ಯಸಹಾಯಕ.

Vaccination ದಾಕು ಹಾಕುವ ಇಲಾಖೆ.

ಮಿಸ್ತರ್ ಚಂಡು-ಉ. ಡಿ. 1ನೇ ಡಿಪ್ಯುಟಿ ಇನ್ಸ್ಪೆಕ್ಟರ್.

ಮಿಸ್ತರ್ ಕಣ್ಣನ್-ದ. ಡಿ. 2ನೇ ಡಿಪ್ಯುಟ ಇನ್ಸ್ಪೆಕ್ಟರ್.

Agricultural ವ್ಯವಸಾಯ ಇಲಾಖೆ.

ಮಿಸ್ತರ್ ಮು. ನಾರಾಯಣರಾವ್ — ಜಾನವಾರ ರೋಗಗಳ ಲೋಕೆಲ್ ಇನ್ಸ್ಪೆಕ್ಟರ್.

Madras Bank ಮದ್ರಾಸ್ ಬೇಂಕ್.

E. B. Palmor Esq. ಇ. ಬಿ. ಪಾಮರ್ ಧೊರೆಗಳು—ಏಜೆಂಟ್, ಮದ್ರಾಸ ಬ್ರೇಂಚ ಬೇಂಕ್, ಮಂಗಳೂರು.
ನಾರಾಯಣ ಭಂಡಾರಿಗಳು—ಕೆಷಿಯರ್ (ಸರಾಫ).

Members of the Local Fund Board ಲೋಕೆಲ್ ಫಂಡ್ ಬೋರ್ಡ ಮೆಂಬರರು.

ಡಿಸ್ಟ್ರಿಕ್ಟ್ ಕಲ್ಲಿಕ್ಟರರು—ಪ್ರೆಸಿಡೆಂಟರು.
ಹೆಡ್ ಅಸಿಸ್ಟಾಂಟ್ ಕಲ್ಲಿಕ್ಟರರು—ವ್ಯಾಸ್‌ಪ್ರೆಸಿಡೆಂಟರು.
ಅಸಿಸ್ಟಾಂಟ್ ಕಲ್ಲಿಕ್ಟರರು.
ವ್ಹಿ. ಎ. ಲೀ ಧೊರೆಗಳು—ಶಿವಿಲ್ ಸರ್ಜನ್.
ಪಿ. ಎಫ್. ಫೆರ್ನಾಂಡೆಸರವರು—ಡಿ. ಕಲ್ಲಿಕ್ಟರರು.
ಕಬಾಡ ರಾಮರಾಯರು—ಡಿಪ್ಯುಟಿ ಕಲ್ಲಿಕ್ಟರರು.
ಜೆ. ಫ. ಡೇವಿಡ್ಸನ್ ಧೊರೆಗಳು—ಎಕ್ಸಿಕ್ಯುಟಿವ್ ಇಂಜಿನಿಯರರು.
ವ್ಹಿ. ಶಿ. ಸ. ವೆಸ್ಟ್ ಧೊರೆಗಳು—ಅಸಿಸ್ಟಾಂಟ್ ,,
ಇ. ಮಾರ್ಸ್ಡನ್ ಧೊರೆಗಳು—ಶಾಲಾ ಇನ್‌ಸ್ಪೆಕ್ಟರ್ರು
ಕ. ಸಾಂತಪ್ಪಯ್ಯನವರು—ಶಾಲಾ ಡಿ. ಇ. ಉತ್ತರ ಡಿ.
ರಾ. ಸ. ನೊರೋಞಾರು— ,, ದಕ್ಷಿಣ ,,
ಸಿ. ಬ್ರಿತೊರವರು—ಮಂಗಳೂರ ತಾಲೂಕ ತಹಶಿಲ್‌ದಾರರು.
ಶಿ. ಫ್ಲೈದರರ್ ಧೊರೆಗಳು.
ವಿ. ಮ. ಫೆರ್ನಾಂಡೆಸರು.
ತೊಂಭತ್ತ ಸುಬ್ಬರಾಯರು.
ನೆಲ್ಲಿಕಾಯಿ ಗುಂಡುರಾಯರು.
ಮಂಗಳೂರು ರಾಮಚಂದ್ರಯ್ಯನವರು.
ವಿ. ಪೆ. ಕುವೇಲರು.
ಪದ್ಮರಾಜ ಬಲ್ಲಾಳ ಯಾನೆ ಚನ್ನರಾಯ ಸಾವಂತರು.
ಚಂದಾರೆ ಕಂಮೂರನವರು.
ಮಂಜೇಶ್ವರ ಶಿವರಾಯರು.
ಉಪ್ಪಿನಂಗಡಿ ಮಾಧವಭಟ್ಟರು.
ಹಾಜಿ ಹಾರುನ್ ಶೇಟರು.
ಹಂದಾಡಿ ಮೋನಪ್ಪ ಶೆಟ್ರು.
ವಡೇರಹೋಬಳಿ ನಾಗಪ್ಪ ಕಾರಾಂತರು.
ಬಸರೂರು ಮಂಜು ಶೆಟ್ರು.
ಕುಂಞಾಮಾಯಿ ಕುಟ್ಟೀಬ್ಯಾರಿಗಳು.
ಕೆಂ. ಬೆಳ್ಳಿಪಾಡಿ ನರಶಿಂಗರೈಗಳು.
ಕೆ. ರಾಮರಾವ್—ಹೆಡ್ ಕ್ಲರ್ಕ.

Municipal Commissioners ಮಂಗಳೂರ ಶಹರಿನ ಮ್ಯುನಿಶಿಪಲ್ ಕಮ್ಮಿಶನರುಗಳು.

ಡಿಸ್ಟ್ರಿಕ್ಟ್ ಕಲ್ಲಿಕ್ಟರರು—ಪ್ರೆಸಿಡೆಂಟರು.
ಎ. ಮ. ಫೆರ್ನಾಂಡೆಸ್ ಸಾಹೇಬರು-ವೈಸ್‌ಪ್ರಸಿಡೆಂಟ್.
ವ್ಹಿ. ಎ. ಲೀ ಧೊರೆಗಳು—ಶಿವಿಲ್ ಸರ್ಜನ್.
ಕರ್ನೆಲ್ ವಿ. ರೋಲೆಂಡ್‌ಸನ್ ಧೊರೆಗಳು—ಕಮ್ಮಾಂಡಿಂಗ್ ಆಫಿಸರ್.
ಜೊ. ಇ. ಇ. ಎ. ಬೋಯ್ಡ್ ಧೊರೆಗಳು—ಪೋಲೀಸ್ ಸುಪರಿಂಟೆಂಡೆಂಟ್.
ಇ. ಮಾರ್ಸ್ಡನ್ ಧೊರೆಗಳು-ಶಾಲಾ ಇನ್‌ಸ್ಪೆಕ್ಟರ್.
ಕ. ಸಾಂತಪಯ್ಯನವರು—ಶಾಲಾ ಡಿಪ್ಯುಟಿ ,,
ಸಿ. ಬ್ರಿತೊರವರು—ಮ ತಾ. ತಹಶಿಲದಾರರು.
ಶಿ. ಫ್ಲೈದರರ್ ಧೊರೆಗಳು.
ಪಾದ್ರಿ ವಿ. ಮುತ್ತಿ ಗುರುಗಳು, ಸ. ಜೆ.
ಜೋನ್ ಬೋಲ್ ಸಾಹೇಬರು.
ವಿ. ಪೆ. ಕುವೇಲರು.
ಜೆ. ಇ. ಸಾಲ್ಡಾಞ್ಯಾರು.
ನೆಲ್ಲಿಕಾಯಿ ಗುಂಡುರಾಯರು.
ವಲ್ಲಿ ಅಬ್ಬು ಬ್ಯಾರಿಗಳು.
ಅಯುಬ್ ನೂರ್‌ಮುಹಮ್ಮದ ಶೇಟ್ರು.
ಮ. ತೇಜಪಾಲ್ ರಾಮರಾಯರು.
ಹಾಜಿ ಅಬ್ಬುಬಕರ್ ಬ್ಯಾರಿಗಳು.
ಅಮ್ಮೆಂಬಳ ಸುಬ್ಬರಾಯರು.
ಹುಂಡಿ ಮಂಜುನಾಥ ಕಮ್ತಿಗಳು.
ತೊಂಭತ್ತ ಸುಬ್ಬರಾಯರು.
ಸು. ಆನಂದರಾವ್—ಮೆನೇಜರ್.
ಮಿಸ್ತರ್ ಎ. ಇ. ಆರೋಸ್ಸ್—ಇನ್‌ಸ್ಪೆಕ್ಟರ್.

II. Taluk Officials ತಾಲೂಕು ಉದ್ಯೋಗಸ್ಥರು.

1. Mangalore Taluk
ಮಂಗಳೂರ ತಾಲೂಕು.

Civil ಶಿವಿಲ್.

ಅ. ವೆಂಕಟರಮಣಪೈಗಳು-ಮಂಗಳೂರ ಮುನಸಿಫ್ (3ನೇ ದರ್ಜೆ).
ಉ. ನಾರ್ಣಪ್ಪಾ—ಅ. ಹೆಡ್ ಕ್ಲರ್ಕ.
ಉ. ಸುಬ್ಬರಾಯರು—ಬಂಟವಾಳ ಮುನಸಿಫ್ (3ನೇ)
ಕಾ. ಸಲ್ಡಾಞ್ಯಾ—ಅ. ಹೆಡ್ ಕ್ಲರ್ಕ.
ಸು. ರಘುನಾಥಯ್ಯನವರು, ಬಿ. ಎ., ಬಿ. ಎಲ್.—ಮುಲ್ಕಿ ಮುನಸಿಫ್ (3ನೇ ದರ್ಜೆ).
ಬೆ. ಸುಬ್ರಾವ್—ಹೆಡ್ ಕ್ಲರ್ಕ.

Registration ರಿಜಿಸ್ಟ್ರಿ.

ಜೆ. ಬಿ. ಪಿಂತೊ—ಸಬ್ ರಿಜಿಸ್ತ್ರಾರ್, ಬಂಟವಾಳ,

Revenue and Magisterial
ರೆವೆನ್ಯೂ ಮತ್ತು ಮೆಜಿಸ್ಟ್ರೇಟ್.

ಮಿಸ್ತರ್ ಸಿ. ಬ್ರಿತೊರವರು—ಮಂಗಳೂರ ತಾಲೂಕು ತಹಶಿಲ್‌ದಾರ್ ವ 2ನೇ ಕ್ಲಾಸ ಮೆಜಿಸ್ಟ್ರೇಟ್.

ತ್ರಿ. ಗೋಪಾಲಕೃಷ್ಣಯ್ಯರು—ಶಿರಸ್ತೇದಾರ್ ವ 3ನೇ ಕ್ಲಾಸ ಮೆಜಿಸ್ಟ್ರೇಟ್.

ಮೂಎಲ ರಾಮಯ್ಯನವರು—ಮಂಗಳೂರ ಶಹರ 2ನೇ ಕ್ಲಾಸ ಮೆಜಿಸ್ಟ್ರೇಟ್.

ಮಿಸ್ತರ್ ಕಾ. ಸ. ಮ. ಅಬ್ರೆವ್ರೊನವರು—ಬಂಟವಾಳ ಡಿಪ್ಯುಟಿ ತಹಶಿಲ್‌ದಾರ್ ವ 2ನೇ ಕ್ಲಾಸ ಮೆಜಿಸ್ಟ್ರೇಟ್.

Police ಪೊಲೀಸ್.

ಟಿ. ಸೋಮಪ್ಪಾ—3ನೇ ಕ್ಲಾಸ ಇನ್‌ಸ್ಪೆಕ್ಟರ್, ಮಂಗಳೂರ ಶಹರ.

ಲಾ. ನರಶಿಂಗರಾವ್—2ನೇ ಕ್ಲಾಸ್ ಇನ್‌ಸ್ಪೆಕ್ಟರ್, ಮಂಗಳೂರ ತಾಲೂಕ.

ಮ. ಬ್ರಿತೊ—ಸಬ್‌ಇನ್‌ಸ್ಪೆಕ್ಟರ್.

ಮ. ಶಂಕರನಾರ್ಣಪ್ಪ — 4ನೇ ಕ್ಲಾಸ ಇನ್‌ಸ್ಪೆಕ್ಟರ್, ಬಂಟವಾಳ ಡಿವಿಜನ್.

Sea-Customs ಅಳವೆಸಾಯರ.

ಮಂಗಳೂರು: ಜಿ. ಪ್ವಿ. ಎಕ್ಸ್ ಫೊರೆಗಳು—ಸುಪರಿಂಟೆಂಡೆಂಟ್.

ಮಹಮ್ಮದ ಅಕ್ಬರ್-ಅಸಿಸ್ಟಾಂಟ ಸುಪರಿಂಟೆಂಡೆಂಟ್.

ಉ. ಅಣ್ಣಪ್ಪಾ—ಹೆಡ್ ಕ್ಲರ್ಕ.

ಮುಲ್ಕಿ: ಮೂ. ಸಲ್ಡಾಞಾ—ಸುಪರಿಂಟೆಂಡೆಂಟ್.

Dispensary ಆಸ್ಪತ್ರಿಯಲ್ಲಿ:

ಬಂಟವಾಳ: Mr. C. F. Francis ಮಿಸ್ತರ್ ಸಿ. ಫ. ಫ್ರಾನ್ಸಿಸ್—ಶಿವಿಲ್ ಎಪೊತ್‌ಕೆರಿ.

Postal ಟಪ್ಪಾಲ್.

ಎ. ಲೋಬೊ—ಸಬ್‌ಪೋಸ್ಟಮಾಸ್ಟರ್, ಬಂಟವಾಳ.

ಬಿ. ಶ್ರೀನಿವಾಸರಾವ್ ,, ಮುಲ್ಕಿ.

2. Kasaragod Taluk
ಕಾಸರಗೋಡ ತಾಲೂಕು.

Civil ಶಿವಿಲ್.

ಮಿಸ್ತರ್ ಇ. ಪೆ. ಫೆರ್ನಾಂಡೆಸರವರು—ಬೇಕಲ (ಕಾಸರಗೋಡ) ಮುನಸಿಫ್ (3ನೇ ದರ್ಜೆ).

ಬ. ಗಣಪಯ್ಯ—ಹೆಡ್ ಕ್ಲರ್ಕ.

Registration ರಿಜಿಸ್ತ್ರಿ.

ಕ. ರಾಮರಾವ್—ಸಬ್‌ರಿಜಿಸ್ತ್ರಾರ್, ಕಾಸರಗೋಡ.

ಹ. ನಾರಾಯಣರಾವ್—ಸಬ್‌ರಿಜಿಸ್ತ್ರಾರ್, ಹೊಸದುರ್ಗ.

Revenue and Magisterial
ರೆವೆನ್ಯೂ ಮತ್ತು ಮೆಜಿಸ್ಟ್ರೇಟ.

ಕು. ಗಣಪಯ್ಯನವರು—ತಾಲೂಕು ತಹಶಿಲ್‌ದಾರ್ ವ 2ನೇ ಕ್ಲಾಸ ಮೆಜಿಸ್ಟ್ರೇಟ್.

ಮ. ವೆಂಕಟರಾಯರು-ಶಿರಸ್ತೇದಾರ್ ವ 2ನೇ ಕ್ಲಾಸ ಮೆಜಿಸ್ಟ್ರೇಟ್.

ಹ. ಕೊರಗಪ್ಪನವರು—ನೀಲೇಶ್ವರ ಡಿಪ್ಯುಟ ತಹಶಿಲ್‌ದಾರ್ ವ 2ನೇ ಕ್ಲಾಸ ಮೆಜಿಸ್ಟ್ರೇಟ್.

Police ಪೊಲೀಸ್.

ಸಿ. ರಾಮಪ್ಪಾ—6ನೇ ಕ್ಲಾಸ ಇನ್‌ಸ್ಪೆಕ್ಟರ್, ಕಾಸರಗೋಡ ಡಿವಿಜನ್.

Sea-Customs ಅಳವೆಸಾಯರ.

ಕಾಸರಗೋಡ: ಎ. ಜೆ. ಫೆರ್ನಂಡೆಸ್—ಸುಪರಿಂಟೆಂಡೆಂಟ್.

ಮಂಜೇಶ್ವರ: ಜೆ. ಫ. ಡಿ. ರುಜಾರಿಯೊ ,,

ಕುಂಬ್ಳೆ: ತೆವತೊನ್ ಸಾಲ್ಡಾಞಾ— ,,

Dispensary ಆಸ್ಪತ್ರಿಯಲ್ಲಿ:

ಕಾಸರಗೋಡ: Mr. T. Korah ಮಿಸ್ತರ್ ಟಿ. ಕೊರಾ—ಶಿವಿಲ್ ಎಪೊತ್‌ಕೆರಿ.

Postal ಟಪ್ಪಾಲ್.

ಕೊ. ನಾಗಪ್ಪಾ—ಸಬ್ ಪೋಸ್ಟಮಾಸ್ಟರ್, ಕಾಸರಗೋಡ.

ಬಿ. ಮಂಗೇಶರಾವ್— ,, ಹೊಸದುರ್ಗ.

ಮ. ಉಪೇಂದ್ರನಾಯ್ಕ— ,, ಮಂಜೇಶ್ವರ.

3. Puttoor Taluk
ಪುತ್ತೂರು ತಾಲೂಕು.

Civil ಶಿವಿಲ್.

ಮಿಸ್ತರ್ ಜೆ. ಲೋಬೊನವರು—ಪುತ್ತೂರ ಮುನ (3ನೇ ದರ್ಜೆ).

ಹ. ರಾಮಪ್ಪಾ—ಹೆಡ್ ಕ್ಲರ್ಕ.

Registration ರಿಜಿಸ್ತ್ರಿ.

ಮ. ಮುಕುಂದರಾವ್—ಸಬ್‌ರಿಜಿಸ್ತ್ರಾರ್, ಪುತ್ತೂರು.

ಕಾ. ನಾರಾಯಣರಾವ್ ,, ವಿಟ್ಲ.

ಕೊ. ನಾರಾಯಣರಾವ್ ,, ಬೆಳತಂಗಡಿ.

Revenue and Magisterial
ರೆವೆನ್ಯೂ ಮತ್ತು ಮೆಜಿಸ್ಟ್ರೇಟ.

ಮಿಸ್ತರ್ ಜೊ. ಉ. ಸಲ್ಡಾಞಾರವರು—ತಾಲೂಕು ತಹಶಿಲ್‌ದಾರ್ ವ 2ನೇ ಕ್ಲಾಸ ಮೆಜಿಸ್ಟ್ರೇಟ್.

ಪೊ. ರಾಮರಾಯರು—ಶಿರಸ್ತೇದಾರ್ ವ 2ನೇ ಕ್ಲಾಸ ಮೆಜಿಸ್ಟ್ರೇಟ್.

ವ. ರಾಮರಾಯರು—ಬೆಳತಂಗಡಿ ಡಿಪ್ಯುಟಿ ತಹಶಿಲ್‌ದಾರ್ ವ 2ನೇ ಕ್ಲಾಸ ಮೆಜಿಸ್ಟ್ರೇಟ್.

Police ಪೊಲೀಸ್.

ಗು. ವೆಂಕಟರಾವ್—5ನೇ ಕ್ಲಾಸ ಇನ್ಸ್ಪೆಕ್ಟರ್, ಪುತ್ತೂರ ಡಿವಿಜನ್.

ಬಿ. ಶ್ರೀನಿವಾಸ — 5ನೇ ಕ್ಲಾಸ ಇನ್ಸ್ಪೆಕ್ಟರ್, ಉಪ್ಪಿನಂಗಡಿ ಡಿವಿಜನ್.

Dispensary ಆಸ್ಪತ್ರಿಯಲ್ಲಿ:

ಪುತ್ತೂರು: Mr. A. G. Fernandez ಮಿಸ್ತರ್ ಎ. ಜಿ. ಫೆರ್ನಂದೆಸ್—ಶಿವಿಲ ಎಪೊತ್ಕೆರಿ.

Postal ಟಪ್ಪಾಲ್.

ಟಿ. ಬಾಲಪ್ರಸಾದ್-ಸಬ್‌ಪೋಸ್ಟಮಾಸ್ಟರ್, ಪುತ್ತೂರ
ಜಿ. ಮಾಧವರಾವ್—" " ಉಪ್ಪಿನಂಗಡಿ.
ಹ. ಅಣ್ಣಪ್ಪಾ— " " ಬೆಳತಂಗಡಿ.

4. Udipi Taluk ಉಡಿಪಿ ತಾಲೂಕು.

Civil ಶಿವಿಲ್.

ಕು. ಕೃಷ್ಣರಾಯರು, ಬಿ. ಎ.—ಉಡಪಿ ಮುನಸಿಫ್ (3ನೇ ದರ್ಜೆ).

ನ. ಶಾಂತಪ್ಪಾ—ಹೆಡ್ ಕ್ಲರ್ಕ.

ಕ. ಸುಬ್ಬರಾಯರು-ಬಾರಕೂರ (ಬ್ರಹ್ಮಾವರ) ಮುನಸಿಫ್ (2ನೇ ದರ್ಜೆ).

ಪು. ರಂಗಪ್ಪಾ—ಹೆಡ್ ಕ್ಲರ್ಕ.

Registration ರಿಜಿಸ್ತ್ರಿ.

ಗೊ. ವೆಂಕಟರಾವ್—ಸಬ್‌ರಿಜಸ್ತ್ರಾರ್, ಉಡಪಿ.
ಪ. ಕೃಷ್ಣರಾವ್ " ಕಾರ್ಕಳ.

Revenue and Magisterial ರೆವೆನ್ಯು ಮತ್ತು ಮೆಜಿಸ್ಟ್ರೇಟ್.

ಮಿಸ್ತರ್ ಇ. ಮಾ. ಕೊಯಿಲೊನವರು—ಉಡಪಿ ತಾ. ತಹಶಿಲ್‌ದಾರ್ ವ 2ನೇ ಕ್ಲಾಸ ಮೆಜಿಸ್ಟ್ರೇಟ್.

ಫ್ರಾಂ. ಪಿಂತೊನವರು—ಶಿರಸ್ತೇದಾರ್ ವ 3ನೇ ಕ್ಲಾಸ ಮೆಜಿಸ್ಟ್ರೇಟ್.

ಗು. ಸುಬ್ರಾವಯರು—ಕಾರ್ಕಳ ಡಿಪ್ಯುಟಿ ತಹಶಿಲ್‌ದಾರ್ ವ 2ನೇ ಕ್ಲಾಸ ಮೆಜಿಸ್ಟ್ರೇಟ್.

Police ಪೊಲೀಸ್.

ಟಿ. ಬಾಬು—2ನೇ ಕ್ಲಾಸ ಇನ್ಸ್ಪೆಕ್ಟರ್, ಉಡಪಿ ಡಿವಿಜನ್.

ಪೌಲ್ ನೊರೋಞಾ—ಸಬ್ ಇನ್ಸ್ಪೆಕ್ಟರ್.

Sea-Customs ಅಳವೆಸಾಯರ.

ಮಲ್ಪೆ (ಉಡಪಿ): ತೊ. ಡೀಲಂಗ್-ಸುಪರಿಂಟೆಂಡೆಂಟ್.
ಹಂಗಾರಕಟ್ಟಾ: ಮು. ಅನಂತರಾವ್— "

Dispensary ಆಸ್ಪತ್ರಿಯಲ್ಲಿ:

ಉಡಪಿ: Mr. G. Narainasawmi Naidu ಮಿಸ್ತರ್ ಜಿ. ನಾರಾಯಣಸಾಮಿ ನಾಯಿಡು—2ನೇ ಕ್ಲಾಸ (ಶಿವಿಲ್) ವೈದ್ಯಸಹಾಯಕ.

ಕಾರ್ಕಳ: Mr. K. Govindan Nair ಮಿಸ್ತರ್ ಕೆ. ಗೋವಿಂದನ್ ನಾಯರ್—3ನೇ ಕ್ಲಾಸ (ಶಿವಿಲ್) ವೈದ್ಯಸಹಾಯಕ.

Postal ಟಪ್ಪಾಲ್.

ಫ. ಸ. ಡಿಸೋಜಾ—ಸಬ್‌ಪೋಸ್ಟಮಾಸ್ಟರ್, ಉಡಪಿ.
ಸೀಮೋನ ಪ್ಯಾಸ್— " " ಬಾರಕೂರ.
ಕೆ. ಶೇಷಶೆಟ್ಟಿ— " " ಕಾರ್ಕಳ.

5. Kundapur Taluk
ಕುಂದಾಪುರ ತಾಲೂಕು.

Civil ಶಿವಿಲ್.

ಉ. ಬಾಬುರಾಯರು, ಬಿ. ಎಲ್.—ಕುಂದಾಪುರ ಮುನಸಿಫ್ (3ನೇ ದರ್ಜೆ).

ಅನಂತಯ್ಯ—ಹೆಡ್ ಕ್ಲರ್ಕ.

Registration ರಿಜಿಸ್ತ್ರಿ.

ತ. ಮಂಗೇಶರಾವ್, ಬಿ. ಎ.—ಸಬ್ ರಿಜಸ್ತ್ರಾರ್.

Revenue and Magisterial ರೆವೆನ್ಯು ಮತ್ತು ಮೆಜಿಸ್ಟ್ರೇಟ್.

ಮಿಸ್ತರ್ ಮು. ಲ. ಶಿಕೇರನವರು—ಕುಂದಾಪುರ ತಾಲೂಕು ತಹಶಿಲ್‌ದಾರ್ ವ 2ನೇ ಕ್ಲಾಸ ಮೆಜಿಸ್ಟ್ರೇಟ್.

ಸ. ಬಾಲಕೃಷ್ಣಪ್ಪ—ಶಿರಸ್ತೇದಾರ್ ವ 3ನೇ ಕ್ಲಾಸ ಮೆಜಿಸ್ಟ್ರೇಟ್.

Police ಪೊಲೀಸ್.

ಕಮಾಲಹಮ್ಮದ್—4ನೇ ಕ್ಲಾಸ ಇನ್ಸ್ಪೆಕ್ಟರ್, ಕುಂದಾಪುರ ಡಿವಿಜನ್.

Sea-Customs ಅಳವೆಸಾಯರ.

ಗಂಗೊಳ್ಳಿ (ಕುಂದಾಪುರ):
ಮಿಸ್ತರ್ ಪೀಟರ್ ಫೆರ್ನಾಂದೆಸ್-ಸುಪರಿಂಟೆಂಡೆಂಟ್.
ಬೈಂದೂರ: ಹೊನ್ನಾವರ ಶಿವಪ್ಪಾ— "
ನಾಯ್ಕನಕಟ್ಟಿ: ಶೇಕ ಆದಮ್— "

Dispensary ಅಸ್ಪತ್ರಿಯಲ್ಲಿ:

ಕುಂದಾಪುರ: Mr. G. Gascoine ಮಿಸ್ತರ್ ಜಿ. ಗೆಸ್ಕೊಯಿನ್—ಶಿವಿಲ ಎಪೊತ್ಕೆರಿ.

Postal ಟಪ್ಪಾಲ್.

ಬಿ. ಎ. ಕೊಯಿಲೊ — ಸಬ್ ಪೋಸ್ಟಮಾಸ್ಟರ್, ಕುಂದಾಪುರ.
ಹ. ಸುಬ್ಬರಾವ್ " " ಗಂಗೊಳ್ಳಿ.
ಚ. ವೆಂಕಟರಾವ್ " " ಬೈಂದೂರು.
ಬಿ. ಕೃಷ್ಣಯ್ಯ " " ಕೊಲ್ಲೂರು.

೧೮೮೪ನೇ ವರ್ಷದ ಹಬ್ಬಗಳು.

* ಈ ಗುರುತು ಸುವಾರ್ತಾಪಕ್ಷದವರಿಗೂ ರೋಮನ್ ಕಥೋಲಿಕರಿಗೂ ಕೂಡ ಇರುವ ಹಬ್ಬಗಳನ್ನೂ,
† ಈ ಗುರುತು ರೋಮನ್ ಕಥೋಲಿಕರಿಗೆ ಮಾತ್ರ ಇರುವ ಹಬ್ಬಗಳನ್ನೂ,
§ ಈ ಗುರುತು ಸರಕಾರ ರಜಾ ಇರುವ ದಿನಗಳನ್ನೂ ಸೂಚಿಸುತ್ತವೆ.

ಕ್ರೈಸ್ತ ಹಬ್ಬಗಳು.

CHRISTIAN FESTIVALS.

ಜನವರಿ	೧	*ನವಸಂವತ್ಸರದ ಹಬ್ಬ (New Year's Day) §.
,,	೬	*ಪ್ರತ್ಯಕ್ಷತೆಯ ಹಬ್ಬ (Epiphany).
ಫೆಬ್ರುವರಿ	೨	†ಮರಿಯಳ ಶುದ್ಧೀಕರಣ.
,,	೨೭	†ಉಪ್ಪೋಸ್ಯದ ಮೊದಲನೇ ದಿನ §.
ಮಾರ್ಚ	೨೫	†ಮರಿಯಳಿಗಾದ ಶುಭವಾರ್ತೆ.
ಎಪ್ರಿಲ್	೪	†ಮರಿಯಳ ಸಪ್ತವ್ಯಥೆಗಳ ಹಬ್ಬ.
,,	೬	*ಪಾಮ್‌ಸಂಡೆ (Palm Sunday).
,,	೧೦	†ಮೊಂಡಿ ಥರ್ಸ್ಡೆ ಹಬ್ಬ.
,,	೧೧	*ಕ್ರಿಸ್ತನ ಮರಣದಿನ (Good Friday) §.
,,	೧೨	†ಪರಿಶುದ್ಧ ಶನಿವಾರ §.
,,	೧೩	*ಪಸ್ಕ ಹಬ್ಬ (Easter Sunday).
,,	೧೪	†ಪಸ್ಕದ ಮೇಲಿನ ಸೋಮವಾರ.
,,	೧೫	†ಪಸ್ಕದ ಮೇಲಿನ ಮಂಗಳವಾರ.
ಮೇ	೨೨	*ದಿವಾರೋಹಣದ ಹಬ್ಬ (Ascension Day) §.
ಜೂನ್	೧	*ಪಂಚಾಶತ್ತಿನ ಹಬ್ಬ (Pentecost).
,,	೮	*ತ್ರಿಯೇಕತ್ವದ ಹಬ್ಬ (Trinity).
,,	೧೨	†ಕೊರ್ಪುಸ್ ಕ್ರಿಸ್ತೀ ಹಬ್ಬ §.
,,	೨೪	†ಸ್ನಾನಿಕ ಯೋಹಾನನ ಜನ್ಮದಿನ.
,,	೨೯	†ಪೇತ್ರನ ಮತ್ತು ಪೌಲನ ದಿನ.
ಜುಲಾಯಿ	೧೬	†ಕಾರ್ಮೆಲ ಬೆಟ್ಟದ ಮರಿಯಳ ದಿನ.
,,	೩೧	†ಇಗ್ನಾಸಿಯುಸ್ ಲೊಯೋಲನ ದಿನ.
ಆಗೊಸ್ತು	೨	†ಪೊರ್ಸಿಯುಂಕುಲ ಹಬ್ಬ.
,,	೧೦	†ರಕ್ತಸಾಕ್ಷಿಯಾದ ಲಾರೆನ್ಸನ ದಿನ.
,,	೧೫	†ಮರಿಯಳ ಸ್ವರ್ಗಾರೋಹಣ §.
ಸಪ್ಟಂಬರ	೮	†ಮರಿಯಳ ಜನ್ಮದಿನ.
ಒಕ್ಟೋಬರ	೪	†ಅಸ್ಸೀಸದ ಸೆಂಶ್ ಫ್ರಾನ್ಸಿಸನ ದಿನ.
ನವಂಬರ	೧	†ಸಮಸ್ತ ಪರಿಶುದ್ಧರ ದಿನ.
,,	೨	†ಸಮಸ್ತ ಪ್ರಾಣಗಳ ದಿನ.
,,	೩೦	*ಕ್ರಿಸ್ತನ ಆಗಮನ (Advent).
ದಶಂಬರ	೩	†ಸೆಂತ್ ಫ್ರಾನ್ಸಿಸ್ ಕ್ಸವೇರನ ದಿನ.
,,	೮	†ಮರಿಯಳ ಶುದ್ಧೋತ್ಪತ್ತಿ.
,,	೨೧	†ಅಪೊಸ್ತಲ ತೋಮನ ದಿನ.
,,	೨೫	*ಕ್ರಿಸ್ತನ ಜನನದ ಹಬ್ಬ (Nativity of our Lord Jesus Christ) §.
,,	೨೬	†ರಕ್ತಸಾಕ್ಷಿ ಸ್ತೆಫನನ ದಿನ.

ಮಹಮ್ಮದೀ ಹಬ್ಬಗಳು.

MAHOMMEDAN FESTIVALS.

ಜನವರಿ	೧	ರಬಿಲಾವಲ್ ತಿಂಗಳ ಆರಂಭ.
,,	೩೦	ರಬಿಲಾಖರ್ ,, ,,
ಫೆಬ್ರುವರಿ	೨೯	ಜಮಾದಿಲಾವಲ್ ,, ,,
ಮಾರ್ಚ	೨೯	ಜಮಾದಿಲಾಖರ್ ,, ,,
ಎಪ್ರಿಲ್	೨೭	ರಜಬ್ ,, ,,
ಮೇ	೨೭	ಶಾಬಾನ್ ,, ,,
ಜೂನ್	೯	ಶಬೀಬರಾತ್ ಹಬ್ಬ §.
,,	೨೫	ರಮ್‌ಜಾನ್ (ಉಪವಾಸ) §.
ಜುಲಾಯಿ	೨೩	,, ,, ಕಡೇ ದಿನ §.
,,	೨೪	ಶವ್ವಾಲ್ ಹಬ್ಬ (ಪೆರುನಾಳ್) §.
ಆಗೊಸ್ತು	೨೩	ಜಲ್ಕಾಯದ್ ತಿಂಗಳ ಆರಂಭ.
ಸಪ್ಟಂಬರ	೨೧	ಜಲ್‌ಹಜ್ ,, ,,
,,	೩೦	ಬಕ್ರೀದ್ ಹಬ್ಬ (ಪೆರುನಾಳ್) §.
ಒಕ್ಟೋಬರ	೨೧	ಮೊಹರಮ್ ಹಬ್ಬದ ಆರಂಭ §.
,,	೩೦	,, ,, ಕಡೇ ದಿನ §.
ನವಂಬರ	೨೦	ಸಫರ್ ತಿಂಗಳ ಆರಂಭ.
ದಶಂಬರ	೧೭	ಆಖಿರ್‌ಚಾರ್‌ಶುಂಬ.
,,	೨೦	ರಬಿಲಾವಲ್ ತಿಂಗಳ ಆರಂಭ.

ಹಿಂದು ಹಬ್ಬಗಳು.

HINDOO FESTIVALS.

ಜನವರಿ	೧೨	ಮಕರಸಂಕ್ರಮಣ (ಮುಹೂರ್ತ).
,,	೨೮	ಸೋಮವತೀ ಅಮಾವಾಸ್ಯಾ.
ಫೆಬ್ರವರಿ	೩	ರಥಸಪ್ತಮೀ §.
,,	೪	ಭೀಷ್ಮಾಷ್ಟಮೀ.
,,	೫	ಮಧ್ವನವಮೀ.
,,	೨೫	ಮಹಾಶಿವರಾತ್ರಿ (ಮರುದಿನ ರಜೆ§).
ಮಾರ್ಚ	೧೧	ಹೋಳೀಹಬ್ಬ (ಕಾಮದಹನ).
,,	೧೨	ಹೋಳೀ ಹಬ್ಬದ ಕಡೇ ದಿನ §.
,,	೨೮	ಚಾಂದ್ರಮಾನ ಯುಗಾದಿ §.
ಏಪ್ರಿಲ್	೪	ರಾಮನವಮೀ §.
,,	೧೨	ಸೌರಮಾನ ಯುಗಾದಿ §.
,,	೨೮	ಅಕ್ಷತೃತೀಯಾ, ಪರಶುರಾಮ ಜಯಂತೀ.
ಮೇ	೮	ನರಸಿಂಹಜಯಂತೀ.
ಜುಲಾಯಿ	೪	ಪ್ರಥಮೈಕಾದಶೀ.
,,	೫	ಪ್ರಥಮದ್ವಾದಶೀ §.
,,	೧೪	ಕರ್ಕಾಟಕ ಸಂಕ್ರಮಣ §.
,,	೨೭	ನಾಗರಪಂಚಮೀ §.
,,	೨೮	ಸಾಮೋಪಾಕರ್ಮ.
ಅಗೋಸ್ತು	೧	ವರಮಹಾಲಕ್ಷ್ಮೀವ್ರತ §.
,,	೬	ಋಗ್ಗುಪಾಕರ್ಮ (ಸಮುದ್ರ ಪೂಜೆ) §.
,,	೧೩	ಕೃಷ್ಣಾಷ್ಟಮೀ (ಮರುದಿನ ರಜೆ §).
,,	೨೩	ಗೌರೀ ತೃತೀಯಾ §.
,,	೨೪	ವಿನಾಯಕ ಚತುರ್ಥೀ §.
,,	೨೫	ಋಷಿಪಂಚಮೀ.
ಅಗೋಸ್ತು	೨೯	ಎಳೇ ಅಷ್ಟಮೀ.
ಸಪ್ತಂಬರ	೪	ಅನಂತಚತುರ್ದಶೀ §.
,,	೬	ಮಹಾಲಯಪಕ್ಷಾರಂಭ.
,,	೧೮	ಮಹಾಲಯ ಅಮಾವಾಸ್ಯೆ §.
,,	೧೯	,, ಸ್ನಾನ (ಆಶ್ವಲಾಯನ).
,,	೨೦	ನವರಾತ್ರಿ ಆರಂಭ.
,,	೨೪	ಲಲಿತಾಪಂಚಮೀ.
,,	೨೬	ಮೂಲನಕ್ಷತ್ರ (ಶಾರದಾಪೂಜೆ).
,,	೨೮	ಮಹಾನವಮೀ.
,,	೨೯	ವಿಜಯದಶಮೀ (ಶಮೀಪೂಜೆ)§.
,,	೩೦	ವಿದ್ಯಾದಶಮೀ.
ಒಕ್ಟೋಬರ	೧೫	ಕಾವೇರಿಸಂಕ್ರಮಣ (ದಂಪತೀ ಪೂಜೆ) §.
,,	೧೭	ನರಕಚತುರ್ದಶೀ (ದೀಪಾವಳಿ) §.
,,	೧೯	ಬಲಿಪಾಡ್ಯ (ಗೋಪೂಜೆ) §.
,,	೩೦	ಕಾರ್ತಿಕ ಏಕಾದಶೀ.
,,	೩೧	ಉತ್ಥಾನದ್ವಾದಶೀ (ತುಲಸೀಪೂಜೆ) §.
ನವಂಬರ	೩	ಕಾರ್ತಿಕ ಪೂರ್ಣಿಮೆ, ದೀಪೋತ್ಸವ.
,,	೨೪	ಸುಬ್ರಹ್ಮಣ್ಯಷಷ್ಠಿ.
,,	೨೯	ವೈಕುಂಠ ಏಕಾದಶೀ.
,,	೩೦	ಮುಕುಟದ್ವಾದಶೀ.

ಇತರ ರಜಾ ದಿನಗಳು.

OTHER HOLIDAYS.

ಮೇ	೨೪	ಶ್ರೀಮತ್ ವಿಕ್ಟೋರಿಯ ಚಕ್ರವರ್ತಿನಿಯವರ ಜನ್ಮದಿನ §.
ನವಂಬರ	೯	ಪ್ರಿನ್ಸ್ ಒಫ್ ವೇಲ್ಸ್ ಎಂಬ ಯುವಮಹಾರಾಜರ ಜನ್ಮದಿನ §.

೧೮೮೪ನೇ ವರುಷದಲ್ಲಿ ಆರಂಭಿಸುವ ವಿವಿಧ ಶಕಾಬ್ದಗಳು.

HINDOO AND MAHOMMEDAN ERAS.

ಮಾರ್ಚ	೨೮	ಶಾಲಿವಾಹನಶಕ ೧೮೦೬ನೇ ತಾರಣ ಸಂವತ್ಸರ ಆರಂಭ.
ಜುಲಾಯಿ	೧	ಸನ್ ೧೨೯೪ನೇ ಫಸಲಿ ಆರಂಭ.
ಸಪ್ತಂಬರ	೧೫	ಮಲಯಾಳ ೧೦೬೦ನೇ ಕೊಲ್ಲಮ್ ಆರಂಭ.
ಒಕ್ಟೋಬರ	೧೯	ವಿಕ್ರಮಾದಿತ್ಯ ೧೯೪೧ನೇ ಶಕ ಆರಂಭ.
,,	೨೧	ಮಹಮ್ಮದೀ ೧೩೦೨ನೇ ಹಿಜರಿ ಆರಂಭ.

೨೮, ೨೯, ೩೦, ೩೧ ದಿವಸಗಳಿರುವ ಪ್ರತಿ ತಿಂಗಳಿಗೆ ೧ ರೂಪಾಯಿಯಿಂದ ೫೦೦ ರೂಪಾಯಿ ವರೆಗೆ ಸಂಬಳ ಇರುವವರಿಗೆ ಪ್ರತಿ ಒಂದು ದಿವಸಕ್ಕೆ ಏನು ಬೀಳುತ್ತದೆಂಬದನ್ನು ತೋರಿಸುವ ಪಟ್ಟಿ

ತಿಂಗಳ ಸಂಬಳ.	೨೮ ದಿವಸಗಳ ತಿಂಗಳು.			೨೯ ದಿವಸಗಳ ತಿಂಗಳು.			೩೦ ದಿವಸಗಳ ತಿಂಗಳು.			೩೧ ದಿವಸಗಳ ತಿಂಗಳು.		
ರೂ.	ರೂ.	ಆ.	ಪೈ.	ರೂ.	ಆ.	ಪೈ.	ರೂ.	ಆ.	ಪೈ.	ರೂ.	ಆ.	ಪೈ.
೧	೦	೦	೭	೦	೦	೭	೦	೦	೬	೦	೦	೬
೨	೦	೧	೨	೦	೧	೧	೦	೧	೧	೦	೧	೦
೩	೦	೧	೯	೦	೧	೮	೦	೧	೭	೦	೧	೭
೪	೦	೨	೩	೦	೨	೨	೦	೨	೨	೦	೨	೧
೫	೦	೨	೧೦	೦	೨	೯	೦	೨	೮	೦	೨	೭
೬	೦	೩	೫	೦	೩	೪	೦	೩	೨	೦	೩	೧
೭	೦	೪	೦	೦	೩	೧೦	೦	೩	೯	೦	೩	೭
೮	೦	೪	೭	೦	೪	೫	೦	೪	೩	೦	೪	೨
೯	೦	೫	೨	೦	೫	೦	೦	೪	೧೦	೦	೪	೮
೧೦	೦	೫	೯	೦	೫	೬	೦	೫	೪	೦	೫	೨
೧೧	೦	೬	೩	೦	೬	೧	೦	೫	೧೦	೦	೫	೮
೧೨	೦	೬	೧೦	೦	೬	೭	೦	೬	೫	೦	೬	೨
೧೩	೦	೭	೫	೦	೭	೨	೦	೬	೧೧	೦	೬	೯
೧೪	೦	೮	೦	೦	೭	೯	೦	೭	೬	೦	೭	೩
೧೫	೦	೮	೭	೦	೮	೩	೦	೮	೦	೦	೭	೯
೧೬	೦	೯	೨	೦	೮	೧೦	೦	೮	೬	೦	೮	೩
೧೭	೦	೯	೯	೦	೯	೫	೦	೯	೧	೦	೮	೯
೧೮	೦	೧೦	೩	೦	೯	೧೧	೦	೯	೭	೦	೯	೩
೧೯	೦	೧೦	೧೦	೦	೧೦	೬	೦	೧೦	೨	೦	೯	೧೦
೨೦	೦	೧೧	೫	೦	೧೧	೦	೦	೧೦	೮	೦	೧೦	೪
೨೧	೦	೧೨	೦	೦	೧೧	೭	೦	೧೧	೨	೦	೧೦	೧೦
೨೨	೦	೧೨	೭	೦	೧೨	೨	೦	೧೧	೯	೦	೧೧	೪
೨೩	೦	೧೩	೨	೦	೧೨	೮	೦	೧೨	೩	೦	೧೧	೧೦
೨೪	೦	೧೩	೯	೦	೧೩	೩	೦	೧೨	೧೦	೦	೧೨	೫
೨೫	೦	೧೪	೩	೦	೧೩	೧೦	೦	೧೩	೪	೦	೧೨	೧೧
೨೬	೦	೧೪	೧೦	೦	೧೪	೪	೦	೧೩	೧೦	೦	೧೩	೫
೨೭	೦	೧೫	೫	೦	೧೪	೧೧	೦	೧೪	೫	೦	೧೩	೧೧
೨೮	೧	೦	೦	೦	೧೫	೫	೦	೧೪	೧೧	೦	೧೪	೫
೨೯	೧	೦	೭	೧	೦	೦	೦	೧೫	೬	೦	೧೫	೦
೩೦	೧	೧	೨	೧	೦	೭	೧	೦	೦	೦	೧೫	೬
೩೧	೧	೧	೯	೧	೧	೧	೧	೦	೬	೧	೦	೦
೩೨	೧	೨	೩	೧	೧	೮	೧	೧	೧	೧	೦	೬
೩೩	೧	೨	೧೦	೧	೨	೨	೧	೧	೭	೧	೧	೦
೩೪	೧	೩	೫	೧	೨	೯	೧	೨	೨	೧	೧	೭
೩೫	೧	೪	೦	೧	೩	೪	೧	೨	೮	೧	೨	೧
೩೬	೧	೪	೭	೧	೩	೧೦	೧	೩	೨	೧	೨	೭
೩೭	೧	೫	೨	೧	೪	೫	೧	೩	೯	೧	೩	೧
೩೮	೧	೫	೯	೧	೫	೦	೧	೪	೩	೧	೩	೭
೩೯	೧	೬	೩	೧	೫	೬	೧	೪	೧೦	೧	೪	೧
೪೦	೧	೬	೧೦	೧	೬	೧	೧	೫	೪	೧	೪	೭
೪೧	೧	೭	೫	೧	೬	೭	೧	೫	೧೦	೧	೫	೨
೪೨	೧	೮	೦	೧	೭	೨	೧	೬	೫	೧	೫	೮
೪೩	೧	೮	೭	೧	೭	೯	೧	೬	೧೧	೧	೬	೨
೪೪	೧	೯	೨	೧	೮	೩	೧	೭	೬	೧	೬	೯
೪೫	೧	೯	೯	೧	೮	೧೦	೧	೮	೦	೧	೭	೩
೪೬	೧	೧೦	೩	೧	೯	೫	೧	೮	೬	೧	೭	೯
೪೭	೧	೧೦	೧೦	೧	೯	೧೧	೧	೯	೧	೧	೮	೩
೪೮	೧	೧೧	೫	೧	೧೦	೬	೧	೯	೭	೧	೮	೯
೪೯	೧	೧೨	೦	೧	೧೧	೦	೧	೧೦	೨	೧	೯	೩
೫೦	೧	೧೨	೭	೧	೧೧	೭	೧	೧೦	೮	೧	೯	೧೦
೧೦೦	೩	೯	೨	೩	೭	೨	೩	೫	೪	೩	೩	೭
೨೦೦	೭	೨	೩	೬	೧೪	೪	೬	೧೦	೮	೬	೭	೩
೩೦೦	೧೦	೧೧	೫	೧೦	೫	೬	೧೦	೦	೦	೯	೧೦	೧೦
೪೦೦	೧೪	೪	೭	೧೩	೧೨	೮	೧೩	೫	೪	೧೨	೧೪	೫
೫೦೦	೧೭	೧೩	೯	೧೭	೩	೧೦	೧೬	೧೦	೩	೧೬	೨	೧

	ರೂ.	ಆ.	ಪೈ.
ದೇವರ ವಾಕ್ಯವು ೨ ಭಾಗಗಳಲ್ಲಿ	೦	೧೨	೦
ಅದೇ—ಸಣ್ಣ ಅಕ್ಷರ, ಹೊಸ ಛಾಪೆ	೧	೦	೦
ದೇವರ ವಾಕ್ಯ, ಸಂಸ್ಕೃತದಲ್ಲಿ, ೫ ಭಾಗಗಳು, ಭಾಗ ಒಂದಕ್ಕೆ	೨	೦	೦
ಸುವಾರ್ತೆಯ ಸಾರ-ಮೊದಲನೇ ಭಾಗ ಪಾಪ ವಿಮೋಚನೆಯನ್ನು ಕುರಿತು	೦	೧	೦

III. ಶಾಲಾಪುಸ್ತಕಗಳು.

ಇವುಗಳು ಏಳು ವಿಧವಂದರೆ:

೧. ಕನ್ನಡ ಪಾಠಪುಸ್ತಕಗಳು.
೨. ಕನ್ನಡ ವ್ಯಾಕರಣ.
೩. ಕವಿತಾಪುಸ್ತಕಗಳು.
೪. ನಿಘಂಟುಗಳು.
೫. ಭೂಗೋಳಶಾಸ್ತ್ರ.
೬. ಚರಿತ್ರ.
೭. ಗಣಿತವಿದ್ಯೆ.

ಜ್ಯೋರ್ಜ್ ಡಂಕನ್ ಧೊರೆ ರಚಿಸಿದ ಭೂಗೋಳಶಾಸ್ತ್ರ ಪ್ರವೇಶಕವು — ಆಸ್ಯಖಂಡ	೦	೩	೦

IV. ಬೇರೆ ಪುಸ್ತಕಗಳು.

ಇಸೋಪನ ನೀತಿಕಥೆಗಳು	೦	೪	೦
ದೃಷ್ಟಾಂತಮಂಜರಿ	೦	೪	೦
ಯಮುನಾಬಾಯಿಯ ಸಂಚಾರ	೦	೧	೦
ಗೋಸಿಡುಬೆಂಬ ದಾಕು ಹಾಕುವದನ್ನು ಕುರಿತು ಪ್ರಶ್ನೋತ್ತರವು	೦	೨	೦
ವಿದ್ಯಾಸಾಫಲ್ಯಸೂಚಕವಾದ ಉಪದೇಶಸಾರವು	೦	೦	೨
ಪತ್ರಿಕಾವ್ಯಮಾಲಿಕೆ	೨	೮	೦

	ರೂ.	ಆ.	ಪೈ.
ಇಂಗ್ಲಿಷ್ ಕನ್ನಡ ಸಂಭಾಷಣವಾಕ್ಯಗಳು	೦	೧೦	೦
ಸಂಸ್ಕೃತ ಸಣ್ಣ ವ್ಯಾಕರಣ, ಕನ್ನಡ ಅಕ್ಷರದಲ್ಲಿ ರಚಿಸಿದ್ದು	೧	೦	೦
ಅದೇ—ಪೂರ ವಸ್ತ್ರದಿಂದ ಕಟ್ಟಿದ್ದು	೧	೪	೦
ಹೊಸಗನ್ನಡ ನುಡಿಗನ್ನಡಿ ಎಂಬ ಹೊಸಗನ್ನಡ ವ್ಯಾಕರಣವು	೧	೮	೦
ಮದ್ರಾಸ್ ಸಂಸ್ಥಾನದ ಪಟ: ಬಣ್ಣ ಹಾಕಿದ್ದು, ಗೋಡೆಗೆ ತೂಗ ಹಾಕಲಿಕ್ಕಾಗುವಂತೆ ವಸ್ತ್ರಮಡಾಯಿಸಿ, ರೋಲರುಗಳುಳ್ಳದ್ದು	೨	೦	೦
ಅದೇ—ಹೆಸರಿಲ್ಲದ್ದು	೧	೮	೦
ಆವೆರಡಕ್ಕೂ (ಹೆಸರುಳ್ಳದ್ದಕ್ಕೂ ಇಲ್ಲದ್ದಕ್ಕೂ) ಕೂಡ	೩	೦	೦
ದಕ್ಷಿಣ ಕನ್ನಡ ಜಿಲ್ಲೆಯ ಪಟವು—ಬಣ್ಣ ಹಾಕಿದ್ದು	೦	೧೨	೦
ಅದೇ ಇಂಗ್ಲಿಷ್ ಹೆಸರುಳ್ಳದ್ದು	೧	೦	೦

V. ಮಾಸ ಮಾಸಕ್ಕೆ ಪ್ರಕಟಿಸುವಂಥಾದ್ದು.

ಕ್ರೈಸ್ತಸಭಾಪತ್ರವು. ಒಂದು ಇಡೀ ವರ್ಷದ [೧೨] ಅಂಕೆಗಳ ಕ್ರಯ ೮ ಆಣೆ. ಟಪ್ಪಾಲದಸ್ತೂರಿ ೬ ಆಣೆ. ಭಕ್ತಿಭಾವಕವೂ ಜ್ಞಾನವರ್ಧಕವೂ ಆಗಿರುವ ಪ್ರಬಂಧಗಳೂ ಕಥಾಪ್ರಸಂಗಾದಿಗಳೂ ವಿವಿಧ ವರ್ತಮಾನಗಳೂ [ಅಂದರೆ ತಿಂಗಳು ತಿಂಗಳಿಗೆ ಲೋಕದಲ್ಲಿ ನಡಿಯುವ ಮುಖ್ಯ ಸಂಗತಿವಿಶೇಷಗಳ ವಿವರಸಂಗ್ರಹವು] ಅದರಲ್ಲಿ ಛಾಪೆಯಾಗುತ್ತವೆ.

ಮೇಲಿನ ಪುಸ್ತಕಗಳ ಸವಿಸ್ತಾರವಾದ ಪಟ್ಟಿಯನ್ನು ಅಪೇಕ್ಷಿಸುವವರು ಪುಸ್ತಕಖಾನೆಗೆ ಬರಕೊಂಡಲ್ಲಿ ಅವರಿಗೆ ರವಾನಿಸಲಾದೀತು.

ಯಾದಿ.

☞ ಮೇಲೆ ಕಾಣಿಸಿರುವ ಪುಸ್ತಕಾದಿಗಳಲ್ಲಿ ಯಾವದಾದರೂ ಪರವೂರಲ್ಲಿರುವ ಯಾರಿಗಾದರೂ ಬೇಕಾದ ಪಕ್ಷಕ್ಕೆ, ಮಂಗಳೂರ ಮಿಶ್ಯನ್ ಪುಸ್ತಕಖಾನೆಗೆ (**Basel Mission Book & Tract Depository**) ಬರದು, ಟಪ್ಪಾಲ ಚೀಟುಗಳ ಯಾ ಮನಿ ಆರ್ಡರ್ ಮೂಲವಾಗಿ ಹಣ ರವಾನೆ ಮಾಡಿದರೆ, ಹೆಚ್ಚಿನ ತಪವೇನೂ ಆಗದೆ ಬೇಕಾದಷ್ಟು ಈಸಿಕೊಳ್ಳ ಬಹುದು. ಬೂಕ್ ಟಪ್ಪಾಲಿನಲ್ಲಿ ½ ಆಣೆ ದಸ್ತೂರಿಗೆ ೧೦ ತೊಲೆ ಮೇರೆಗೆ ರವಾನಿಸ ಬಹುದು. ಕಟ್ಟುವಾಸದ ಖರ್ಚಿನ ಬಗ್ಗೆ ½ ಇಲ್ಲವೆ ೧ ಆಣೆಯನ್ನೂ, ಟಪ್ಪಾಲ ಚೀಟುಗಳ ಮೂಲವಾಗಿ ಹಣ ರವಾನೆ ಮಾಡಿದ್ದಾದರೆ, ರೂಪಾಯಿ ೧ಕ್ಕೆ ½ ಆಣೆಯ ಪ್ರಕಾರ ವಟ್ಟವನ್ನೂ ಕೂಡಿಸಿ ಕಳುಹಿಸಿದರೆ ಸೈ. ನಮಗೆ ರವಾನೆಯಾದ ಹಣ ಜಾಸ್ತಿಯಾಗಿದ್ದು, ಬಾಕಿ ಉಳಿಯುವ ಪಕ್ಷದಲ್ಲಿ, ನಾವು ಆ ಬಾಕಿಗೆ ಸರಿಯಾದ ಕ್ರಯದ ಬೇರೆ ಪುಸ್ತಕ ಕೂಡಿಸಿ ಕಳುಹಿಸುತ್ತೇವೆ; ರವಾನೆಯಾದ ಹಣವು ಸಾಲದ ಪಕ್ಷದಲ್ಲಿ, ನಾವು ಹಣದ ಕಡಿಮೆಯಷ್ಟು ಪುಸ್ತಕ ಕಡಿಮೆ ಮಾಡಿ ಕಳುಹಿಸ್ಯೇವು. ಹ್ಯಾಗಾದರೂ ಪುಸ್ತಕಾಪೇಕ್ಷಕರಿಗೆ ಸಂತೋಷವಾಗುವಂತೆ ನೋಡಿ ಹಂಚಿಕೆ ಮಾಡ್ಯೇವು.